ಶುಕ್ರವಾರ, ಜೂನ್ 19, 2026| ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಚಿನ್ನದ 'ಮೀನು'
ಕರ್ನಾಟಕದ ಈಜುತಾರೆ ದಿನಿಧಿ ದೇಸಿಂಗು ಅವರು ಅಹಮದಾಬಾದ್‌ನಲ್ಲಿ ನಡೆದ ಸೀನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನ 100 ಮೀ ಫ್ರೀಸ್ಟೈಲ್‌ನಲ್ಲಿ ರಾಷ್ಟ್ರೀಯ ದಾಖಲೆ ನಿರ್ಮಿಸಿದರು

ಯೋಗಾಭ್ಯಾಸ...
ಜಮ್ಮುವಿನ ಶಾಲೆಯೊಂದರಲ್ಲಿ ಅಂತರರಾಷ್ಟ್ರೀಯ ಯೋಗ ದಿನದ ಅಂಗವಾಗಿ ವಿದ್ಯಾರ್ಥಿನಿಯೊಬ್ಬರು ಯೋಗ ಅಭ್ಯಾಸ ಮಾಡಿದರು

ವಿಧಾನ ಪರಿಷತ್: 39ಕ್ಕೇರಿದ ಕಾಂಗ್ರೆಸ್ ಬಲ

ಹೊಸ ಸದಸ್ಯರ ನಾಮನಿರ್ದೇಶನ ಪ್ರಕ್ರಿಯೆ ಪೂರ್ಣಗೊಂಡರೆ 'ಕೈ' ಬಲ 44ಕ್ಕೆ ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುರುವಾರ ನಡೆದ ಚುನಾವಣೆಯ ಫಲಿತಾಂಶದ ಬಳಿಕ ವಿಧಾನ ಪರಿಷತ್‌ನಲ್ಲಿ ಕಾಂಗ್ರೆಸ್ ಬಲ 39ಕ್ಕೆ ಏರಿಕೆಯಾಗಲಿದೆ. ಬಿಜೆಪಿ ಬಲ 28ಕ್ಕೆ ಹಾಗೂ ಜೆಡಿಎಸ್ ಬಲ 6ಕ್ಕೆ ಕುಸಿಯಲಿದೆ.

ಪ್ರಸ್ತುತ ಕಾಂಗ್ರೆಸ್ 37, ಬಿಜೆಪಿ 29 ಹಾಗೂ ಜೆಡಿಎಸ್ 7 ಸ್ಥಾನಗಳನ್ನು ಹೊಂದಿವೆ. ಕಾಂಗ್ರೆಸ್, ಬಿಜೆಪಿಯ ತಲಾ ಮೂವರು, ಜೆಡಿಎಸ್‌ನ ಒಬ್ಬರ ಅವಧಿ ಇದೇ ಜೂನ್ 30ಕ್ಕೆ ಕೊನೆಯಾಗಲಿದೆ. ಜುಲೈ 1ರಿಂದ ಹೊಸ ಸದಸ್ಯರ ಅವಧಿ ಆರಂಭವಾಗಲಿದೆ. ಪರಿಷತ್‌ನಲ್ಲಿ ಕಾಂಗ್ರೆಸ್ ಬಹುಮತ ಪಡೆಯಲಿದೆ.

ಜುಲೈ 21ಕ್ಕೆ ಐವರು ನಾಮನಿರ್ದೇಶಿತ ಸದಸ್ಯರ ಸ್ಥಾನಗಳು ಖಾಲಿಯಾಗಲಿವೆ. ಬಿಜೆಪಿಯ ಎಚ್. ವಿಶ್ವನಾಥ್, ಶಾಂತಾರಾಮ್ ಸಿದ್ದಿ, ತಳವಾರ್ ಸಾಬಣ್ಣ, ಭಾರತಿ ಶೆಟ್ಟಿ ಹಾಗೂ ಕಾಂಗ್ರೆಸ್‌ನ ರಮೇಶ್ ಬಾಬು ಅವರ ಅವಧಿ ಮುಗಿಯಲಿದೆ. ನಾಮನಿರ್ದೇಶನವು ಆಡಳಿತಾರೂಢ ಸರ್ಕಾರದ ವಿವೇಚನೆ ಹಾಗೂ ರಾಜ್ಯಪಾಲರ ಅನುಮೋದನೆಯನ್ನು ಅವಲಂಬಿಸಿದೆ. ಹೀಗಾಗಿ, ಬಿಜೆಪಿಯ ನಾಲ್ಕು ಹೆಚ್ಚುವರಿ ಸ್ಥಾನಗಳು ಕಾಂಗ್ರೆಸ್‌ಗೆ ಸಿಗಲಿವೆ. ಹೊಸ ಸದಸ್ಯರ ನಾಮನಿರ್ದೇಶನ ಪ್ರಕ್ರಿಯೆ ಪೂರ್ಣಗೊಂಡರೆ ಕಾಂಗ್ರೆಸ್ ಬಲ 44ಕ್ಕೆ ಏರಿಕೆಯಾಗಲಿದೆ.

ವಿಧಾನ ಪರಿಷತ್ತಿನ ಏಳು ಸ್ಥಾನಗಳಿಗೆ ನಡೆದ ಚುನಾವಣೆಗೆ ಮತದಾನ ಮಾಡಲು ಕಾಂಗ್ರೆಸ್ ಶಾಸಕರು ಬಸ್‌ನಲ್ಲಿ ಬಂದಿಳಿದರು –ಪ್ರಜಾವಾಣಿ ಚಿತ್ರ

ಪಕ್ಷಬಲಾಬಲ	ಫಲಿತಾಂಶಕ್ಕೂ ಮೊದಲು	ನಂತರ
ಕಾಂಗ್ರೆಸ್	37	39
ಬಿಜೆಪಿ	29	28
ಜೆಡಿಎಸ್	7	6
ಪಕ್ಷೇತರ	1	1
ಸಭಾಪತಿ	1	1
ಒಟ್ಟು	75	75

ನಿವೃತ್ತಿ ಆಗಲಿರುವ ಸದಸ್ಯರು

ಸದಸ್ಯ	ಪಕ್ಷ
ಗೋವಿಂದರಾಜ್	ಜೆಡಿಎಸ್
ನಸೀರ್ ಅಹಮದ್	ಕಾಂಗ್ರೆಸ್
ಎನ್.ನಾಗರಾಜು (ಎಂಟಿಬಿ)	ಬಿಜೆಪಿ
ಪ್ರತಾಪ ಸಿಂಹ ನಾಯಕ್ ಕೆ.	ಬಿಜೆಪಿ
ತಿಪ್ಪಣ್ಣಪ್ಪ ಕಮಕನೂರ	ಕಾಂಗ್ರೆಸ್
ಸುನಿಲ್ ವಲ್ಯಾಪುರೆ	ಬಿಜೆಪಿ
ಬಿ.ಕೆ.ಹರಿಪ್ರಸಾದ್	ಕಾಂಗ್ರೆಸ್

ಸೋಮಶೇಖರ್, ಹೆಬ್ಬಾರ್ ಆತ್ಮಸಾಕ್ಷಿಯ ಮತ

ಬೆಂಗಳೂರು: ತಾವಿಬ್ಬರೂ ಆತ್ಮಸಾಕ್ಷಿಯ ಮತ ಹಾಕಿದ್ದೇವೆ ಎಂದು ಬಿಜೆಪಿಯ ಉಚ್ಚಾಟಿತ ಶಾಸಕರಾದ ಎಸ್‌.ಟಿ. ಸೋಮಶೇಖರ್ ಮತ್ತು ಶಿವರಾಂ ಹೆಬ್ಬಾರ್ ಹೇಳಿದರು.

ವಿಧಾನ ಪರಿಷತ್ತಿನ ಏಳು ಸ್ಥಾನಗಳಿಗೆ ನಡೆದ ಚುನಾವಣೆಯಲ್ಲಿ ಗುರುವಾರ ಮತಹಾಕಿ ಹೊರಬಂದ ಅವರು ಸುದ್ದಿಗಾರರ ಜತೆ ಮಾತನಾಡಿದರು.

'ತಮ್ಮ ಅಭ್ಯರ್ಥಿಗಳಿಗೆ ಮತ ನೀಡಿ ಎಂದು ಬಿಜೆಪಿಯವರು ಸೌಜನ್ಯಕ್ಕಾದರೂ ನಮ್ಮನ್ನು ಕೇಳಲಿಲ್ಲ. ಜೆಡಿಎಸ್ ಸಹ ನಮ್ಮನ್ನು ಸಂಪರ್ಕಿಸಿಲ್ಲ. ಕಾಂಗ್ರೆಸ್‌ನವರು ತಮ್ಮ ಅಭ್ಯರ್ಥಿಗೆ ಮತ ನೀಡಿ ಎಂದು ಕೇಳಿದರು. ನಮ್ಮ ಆತ್ಮಸಾಕ್ಷಿಗನುಗುಣವಾಗಿ ಮತ ಹಾಕಿದ್ದೇವೆ' ಎಂದು ಶಿವರಾಮ್ ಹೆಬ್ಬಾರ್ ಹೇಳಿದರು.

ಸೋಮಶೇಖರ್, 'ನನ್ನ ಕ್ಷೇತ್ರದಲ್ಲಿ 10–12 ಕಾಮಗಾರಿಗಳು ಬಾಕಿಯಾಗಿವೆ. ಡಿ.ಕೆ.ಶಿವಕುಮಾರ್ ಅವರು ನಮಗೆ ಕರೆ ಮಾಡಿದ್ದರು. ಹೀಗಾಗಿ ರೆಸಾರ್ಟ್‌ಗೆ ಹೋಗಿದ್ದೆವು. ಕಾಮಗಾರಿಗಳ ವಿಚಾರದಲ್ಲಿ ಅವರು ನಮಗೆ ಭರವಸೆ ನೀಡಿದರು. ಜತೆಗೆ, ಇಂದು ಬೆಳಿಗ್ಗೆ ಸಹ ತಮ್ಮ ಅಭ್ಯರ್ಥಿಗೆ ಮತಹಾಕಿ ಎಂದು ಕೇಳಿಕೊಂಡರು. ಹೀಗಾಗಿ ನಾವಿಬ್ಬರೂ ಆತ್ಮಸಾಕ್ಷಿಯ ಮತ ಹಾಕಿದ್ದೇವೆ' ಎಂದರು.

'ಜೆಡಿಎಸ್ ಅಭ್ಯರ್ಥಿ ಸೋಲಲಿ ಎಂಬುದೇ ಬಿಜೆಪಿ ನಾಯಕರ ಉದ್ದೇಶ. ಬಿಜೆಪಿಯ ಇಬ್ಬರು ಅಭ್ಯರ್ಥಿಗಳೂ ಸುಲಭವಾಗಿ ಗೆಲ್ಲುತ್ತಾರೆ. ಮಿತ್ರಪಕ್ಷಕ್ಕೆ ನೆರವು ನೀಡುವ ಉದ್ದೇಶ ಇದ್ದಿದ್ದರೆ, ಬಿಜೆಪಿ ನಾಯಕರು ನಮ್ಮನ್ನು ಸಂಪರ್ಕಿಸುತ್ತಿದ್ದರು. ಆದರೆ, ಅವರು ಆ ಕೆಲಸ ಮಾಡಲಿಲ್ಲ. ಈ ಎಲ್ಲ ವಿಷಯಗಳಿಗಿಂತ ನಮ್ಮಿಬ್ಬರಿಗೂ ನಮ್ಮ ಕ್ಷೇತ್ರಗಳ ಅಭಿವೃದ್ಧಿ ಮುಖ್ಯ' ಎಂದು ಶಿವರಾಂ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಮತದಾನಕ್ಕೂ ಮುನ್ನ ಎಸ್‌.ಟಿ.ಸೋಮಶೇಖರ್ ಮತ್ತು ಶಿವರಾಮ್ ಹೆಬ್ಬಾರ್ ಅವರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರನ್ನು ಭೇಟಿ ಮಾಡಿದ್ದರು

ಜಿ.ಟಿ.ದೇವೇಗೌಡ ಒಬ್ಬಂಟಿ ಮತ

ಬೆಳಿಗ್ಗೆ ಮತದಾನ ಆರಂಭವಾಗುತ್ತಿದ್ದಂತೆಯೇ ಜೆಡಿಎಸ್ ಶಾಸಕ ಜಿ.ಟಿ. ದೇವೇಗೌಡ ಅವರು ಒಬ್ಬರೇ ಬಂದು ಮತಹಾಕಿದರು. ಮತಕೇಂದ್ರದಿಂದ ಹೊರಬಂದ ನಂತರ, 'ಆತ್ಮಸಾಕ್ಷಿಯ ಮತ ಹಾಕಿದ್ದೇನೆ' ಎಂದು ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿದರು.

18 ಶಾಸಕರ ಬಲ ಹೊಂದಿರುವ ಜೆಡಿಎಸ್ ತಮ್ಮ ಅಭ್ಯರ್ಥಿಯಾಗಿ ಗೋವಿಂದರಾಜ್ ಅವರನ್ನು ಕಣಕ್ಕೆ ಇಳಿಸಿತ್ತು. ತಮ್ಮ 18 ಮತ, ಮಿತ್ರಪಕ್ಷ ಬಿಜೆಪಿಯ 4 ಹೆಚ್ಚುವರಿ ಮತ ಹಾಗೂ ಪಕ್ಷೇತರರ ಮತ ತಮ್ಮ ಅಭ್ಯರ್ಥಿಗೆ ಬೀಳಲಿದೆ ಎಂಬುದು ಜೆಡಿಎಸ್ ಲೆಕ್ಕಾಚಾರವಾಗಿತ್ತು.

ಮತದಾನದ ಬಗ್ಗೆ ಚರ್ಚಿಸಲೆಂದೇ ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಎಚ್‌.ಡಿ.ಕುಮಾರಸ್ವಾಮಿ ಅವರ ಮನೆಯಲ್ಲಿ ಸಭೆ ನಡೆಸಲಾಗಿತ್ತು. ಆ ಸಭೆಯಲ್ಲಿ ಜಿ.ಟಿ.ದೇವೇಗೌಡ ಭಾಗಿಯಾಗಿರಲಿಲ್ಲ.

ಗೊಂದಲಕ್ಕೆ ಆಸ್ಪದವಿಲ್ಲದೆ ನಡೆದ ಮತದಾನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್ತಿನ ಏಳು ಸ್ಥಾನಗಳ ಆಯ್ಕೆಗೆ ಯಾವುದೇ ಗೊಂದಲಗಳಿಲ್ಲದೆ ಮತದಾನ ಪೂರ್ಣಗೊಂಡಿತು.

ಬೆಳಿಗ್ಗೆ 9 ಗಂಟೆಗೆ ಮತದಾನ ಆರಂಭಕ್ಕೆ ವೇಳಾಪಟ್ಟಿ ನಿಗದಿ ಮಾಡಲಾಗಿದ್ದರೂ, ಬಿಜೆಪಿಯ ಹಲವು ಶಾಸಕರು ಬೆಳಿಗ್ಗೆ 8.30ರ ವೇಳೆಗೇ ವಿಧಾನಸೌಧಕ್ಕೆ ಬಂದಿದ್ದರು.

ಕಾಂಗ್ರೆಸ್‌ನ ಏಜೆಂಟರಾದ ವಿ.ಎಸ್.ಉಗ್ರಪ್ಪ, ಬಿಜೆಪಿ ಏಜೆಂಟರಾದ ಕೆ.ಎಸ್.ನವೀನ್ ಅವರು ಮತಕೇಂದ್ರದಲ್ಲಿನ ಸಿದ್ಧತೆಗಳನ್ನು ಪರಿಶೀಲಿಸಿದರು. ಮೂರು ಪಕ್ಷಗಳ ಅಭ್ಯರ್ಥಿಗಳು ಮತಕೇಂದ್ರ ಮತ್ತು ವಿಧಾನಸೌಧದ ಪಡಸಾಲೆಯಲ್ಲಿ ಓಡಾಡುತ್ತಾ, ಚುನಾವಣೆಯ ರಂಗನ್ನು ಹೆಚ್ಚಿಸಿದ್ದರು.

ಮತದಾನ ಆರಂಭವಾಗುವ ಹೊತ್ತಿಗೆ ಬಿಜೆಪಿಯ ಎಸ್‌.ಆರ್.ವಿಶ್ವನಾಥ್ ಸೇರಿ ಹಲವು ಶಾಸಕರು ಮತ ಕೇಂದ್ರದತ್ತ ಹೆಜ್ಜೆಹಾಕಿದರು. ಅದಾಗಲೇ ಮತಕೇಂದ್ರದ ಬಾಗಿಲಿನಲ್ಲಿ ನಿಂತಿದ್ದ ಜೆಡಿಎಸ್ ಶಾಸಕ ಜಿ.ಟಿ.ದೇವೇಗೌಡ ಅವರು ಮೊದಲ ಮತ ಚಲಾಯಿಸಿದರು. ಸುದ್ದಿಗಾರರು ಎಡತಾಕುವ ಮುನ್ನವೇ ವಿಧಾನಸೌಧದಿಂದ ತೆರಳಿದರು.

ನಂತರ ಬಿಜೆಪಿ ಶಾಸಕರು ಸಾಲು–ಸಾಲಾಗಿ ಬಂದು ಮತಚಲಾಯಿಸಿದರು. ಈ ಮಧ್ಯೆ ಕಾಂಗ್ರೆಸ್ ಶಾಸಕರಾದ ಬಸವರಾಜ ರಾಯರಡ್ಡಿ, ಕೆ.ವೆಂಕಟೇಶ್ ಅವರು ಮತಕೇಂದ್ರಕ್ಕೆ ಬಂದು ಪರಿಶೀಲನೆ ನಡೆಸಿ ತೆರಳಿದರು. 10 ಗಂಟೆಯ ಹೊತ್ತಿಗೆ 42 ಶಾಸಕರ ಮತದಾನ ಪೂರ್ಣಗೊಂಡಿತ್ತು.

ಈ ವೇಳೆಗೆ ರಾಯರಡ್ಡಿ ಅವರು ಬಿಜೆಪಿಯ ಉಚ್ಚಾಟಿತ ಶಾಸಕರಾದ ಶಿವರಾಮ್ ಹೆಬ್ಬಾರ್ ಮತ್ತು ಎಸ್‌.ಟಿ.ಸೋಮಶೇಖರ್ ಅವರ ಕೈಹಿಡಿದು ಮತಕೇಂದ್ರದತ್ತ ಕರೆದೊಯ್ದರು. ಬೆಳಿಗ್ಗೆ 11ರ ಹೊತ್ತಿಗೆ 77 ಶಾಸಕರು ಮತದಾನ ಪೂರ್ಣಗೊಳಿಸಿದ್ದರು.

11.30ರ ವೇಳೆಗೆ ಬಿಜೆಪಿಯ ಎಲ್ಲ ಶಾಸಕರ ಮತದಾನ ಮುಗಿದಿತ್ತು. ಮಧ್ಯಾಹ್ನ 2.30ರ ವೇಳೆಗೆ 221 ಶಾಸಕರ ಮತದಾನ ಪೂರ್ಣಗೊಂಡಿತ್ತು. ಕಾಂಗ್ರೆಸ್‌ನ ಬಸವರಾಜ ರಾಯರಡ್ಡಿ ಕೊನೆಯ ಮತವನ್ನು ಹಾಕಿದರು. 3ರ ವೇಳೆಗೆ ಮತದಾನ ಪೂರ್ಣಗೊಂಡಿತ್ತು.

ಯತ್ನಾಳ ಮತದಾನಕ್ಕೆ ಉಗ್ರಪ್ಪ ಆಕ್ಷೇಪ

'ಬಿಜೆಪಿಯ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಅವರು ತಾನು ಯಾರಿಗೆ ಮತ ಹಾಕುತ್ತೇನೆ ಎಂದು ಬಹಿರಂಗಪಡಿಸಿದ್ದಾರೆ. ಹೀಗಾಗಿ, ಮತದಾನ ಮಾಡಲು ಅವರಿಗೆ ಅವಕಾಶ ನೀಡಬಾರದು' ಎಂದು ಕಾಂಗ್ರೆಸ್‌ನ ಏಜೆಂಟ್ ವಿ.ಎಸ್.ಉಗ್ರಪ್ಪ ಅವರು ಆಕ್ಷೇಪ ಸಲ್ಲಿಸಿದರು.

ಮಧ್ಯಾಹ್ನ 12.40ರ ವೇಳೆಗೆ ಯತ್ನಾಳ ಅವರು ಮತಕೇಂದ್ರದತ್ತ ಬಂದರು. ಹೊರಗೆ ನಿಂತಿದ್ದ ಸುದ್ದಿಗಾರರು, 'ಸರ್, ಬಿಜೆಪಿಗೆ ಮತ ಹಾಕುತ್ತೀರಾ' ಎಂದು ಪ್ರಶ್ನಿಸಿದರು. ಅದಕ್ಕೆ ಯತ್ನಾಳ ಅವರು, 'ಹೌದು' ಎಂದು ಉತ್ತರಿಸಿ ಮತಕೇಂದ್ರದೊಳಗೆ ಹೋದರು.

ಆಗ ಉಗ್ರಪ್ಪ ಅವರು, 'ಯತ್ನಾಳ ಅವರು ಮತದಾನದ ಗೋಪ್ಯತೆಯನ್ನು ಉಲ್ಲಂಘಿಸಿದ್ದಾರೆ. ಬಿಜೆಪಿ ಅಭ್ಯರ್ಥಿಗೇ ಮತ ಹಾಕುತ್ತೇನೆ ಎಂದು ತಾವು ಬರೆದ ಪತ್ರವನ್ನು ಬಹಿರಂಗವಾಗಿ ತೋರಿಸಿದ್ದಾರೆ. ಮತದಾನ ಮಾಡಲು ಅವರಿಗೆ ಅವಕಾಶ ನೀಡಬಾರದು' ಎಂದು ಚುನಾವಣಾಧಿಕಾರಿ ಎಂ.ಕೆ. ವಿಶಾಲಾಕ್ಷಿ ಅವರಿಗೆ ಆಕ್ಷೇಪ ಸಲ್ಲಿಸಿದರು.

ಈ ಬಗ್ಗೆ ಪರಿಶೀಲನೆ ನಡೆಸಿದ ಚುನಾವಣಾಧಿಕಾರಿಯು, 'ಅವರು ಮತಕೇಂದ್ರದ ವ್ಯಾಪ್ತಿಯಲ್ಲಿ ನಿಯಮ ಉಲ್ಲಂಘನೆ ಮಾಡಿಲ್ಲ. ಹೀಗಾಗಿ ಮತದಾನದ ಹಕ್ಕನ್ನು ನಿರಾಕರಿಸಲು ಸಾಧ್ಯವಿಲ್ಲ' ಎಂದು ಆಕ್ಷೇಪವನ್ನು ವಿಲೇವಾರಿ ಮಾಡಿ, ಯತ್ನಾಳ ಅವರ ಮತದಾನಕ್ಕೆ ಅವಕಾಶ ಮಾಡಿಕೊಟ್ಟರು.

ಸಿದ್ದರಾಮಯ್ಯ ಬೆಂಗಾವಲು ವಾಹನ: ಪೊಲೀಸರ ತಡೆ

ಮತದಾನ ಮಾಡಲು ವಿಧಾನಸೌಧಕ್ಕೆ ಬಂದ ನಿಕಟಪೂರ್ವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆಂಗಾವಲು ವಾಹನವನ್ನು ಪಶ್ಚಿಮ ಗೇಟ್ ಬಳಿ ಪೊಲೀಸರು ತಡೆದರು.

ಮತದಾನ ಮಾಡುವ ಸಚಿವರು, ಶಾಸಕರ ಹೊರತಾಗಿ ಉಳಿದ ಎಲ್ಲ ವಾಹನಗಳನ್ನು ಹೊರಗೆ ನಿಲ್ಲಿಸುವ ಸೂಚನೆ ಬಂದಿದೆ ಎಂದು ಭದ್ರತಾ ಕಾರ್ಯಕ್ಕೆ ನಿಯೋಜಿತರಾಗಿದ್ದ ಪೊಲೀಸರು ಹೇಳಿದರು. ಆಗ ಬೆಂಗಾವಲು ವಾಹನ ಸಿಬ್ಬಂದಿ, ಪೊಲೀಸರ ನಡುವೆ ಮಾತಿನ ಚಕಮಕಿ ನಡೆದ ನಂತರ ವಾಹನ ಸಾಗಲು ಅವಕಾಶ ಮಾಡಿಕೊಟ್ಟರು.

'ಯಾರು ಯಾರಿಗೆ ಮತ ಹಾಕಿದ್ದಾರೊ ಗೊತ್ತಿಲ್ಲ'

ಬೆಂಗಳೂರು: 'ಯಾರು ಅಡ್ಡಮತ ಹಾಕಿದ್ದಾರೆ ಎಂಬುದು ನನಗೆ ಗೊತ್ತಿಲ್ಲ. ಇಲ್ಲಿ ನಡೆದಿರುವುದು ಗುಪ್ತ ಮತದಾನ. ಯಾರು ಮತ ಹಾಕಿದ್ದಾರೆ ಎಂದು ಯಾರಿಗೆ ಗೊತ್ತು' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಪಕ್ಷದ ಅಭ್ಯರ್ಥಿಗಳ ಜೊತೆ ವಿಧಾನಸೌಧದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಶಾಸಕರು ಆತ್ಮವಿಶ್ವಾಸದ ಮತ ಹಾಕಿದ್ದಾರೆ. ನಾನು ಯಾರ ಬಳಿಯೂ ಮಾತನಾಡಲು ಹೋಗಿಲ್ಲ, ಮತ ಕೇಳಲೂ ಹೋಗಿಲ್ಲ. ನಮ್ಮ ಪಕ್ಷದಿಂದ ಐದು ಅಭ್ಯರ್ಥಿಗಳು ನಿಂತಿದ್ದರು. ಎಲ್ಲರೂ ಗೆಲ್ಲುತ್ತಾರೆ ಎನ್ನುವ ವಿಶ್ವಾಸವಿತ್ತು, ಗೆದ್ದಿದ್ದಾರೆ' ಎಂದರು.

'ಜೆಡಿಎಸ್, ಬಿಜೆಪಿ ಸೇರಿದಂತೆ ಯಾವ ಪಕ್ಷದ ಆಂತರಿಕ ವಿಚಾರ ಏನಿದೆಯೊ ಎಂಬುದು ನನಗೆ ಏನೂ ಗೊತ್ತಿಲ್ಲ' ಎಂದರು.

'ನಮ್ಮ ಪಕ್ಷದ ಶಾಸಕರ ಒಂದು ಮತವೂ ತಿರಸ್ಕೃತವಾಗಬಾರದು ಎಂದು ತರಬೇತಿ ನೀಡಲಾಗಿತ್ತು. ಇದಕ್ಕೆ ಪಕ್ಷದ ಎಲ್ಲ ಶಾಸಕರು, ನಾಯಕರು, ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸುರ್ಜೇವಾಲಾ ಸಹಕಾರ ನೀಡಿದರು' ಎಂದರು.

'ಅಡ್ಡ ಮತದಾನಕ್ಕಾಗಿ ಕುದುರೆ ವ್ಯಾಪಾರ ನಡೆದಿದೆಯೇ' ಎಂಬ ಪ್ರಶ್ನೆಗೆ, 'ಆ ಬಗ್ಗೆ ನನಗೆ ಗೊತ್ತಿಲ್ಲ' ಎಂದರು.

'ನೀವು ಸಹಕಾರ ಕೋರಿದ್ದೀರಿ' ಎಂದು ಬಿಜೆಪಿಯಿಂದ ಉಚ್ಚಾಟಿತ ಶಾಸಕ ಎಸ್‌.ಟಿ. ಸೋಮಶೇಖರ್ ಹೇಳಿದ್ದಾರೆ ಎಂದಾಗ, 'ಅವರನ್ನು ಉಚ್ಚಾಟನೆ ಮಾಡಿ ಕಳುಹಿಸಿದ್ದಾರಲ್ಲವೇ? ನಮ್ಮ ಹತ್ತಿರ ಇರಬೇಡಿ ಎಂದು ಕಳುಹಿಸಿದ್ದರು. ಹೀಗೆ ಕಳುಹಿಸಿದವರನ್ನು ದಾರಿಯಲ್ಲಿಯೇ ಬಿಡಲು ಆಗುತ್ತದೆಯೇ? ನಾವು ದಾರಿ ಇಲ್ಲದವರಿಗೆ ದಾರಿ ತೋರಿಸುವ ಕೆಲಸ ಮಾಡಿದ್ದೇವೆ' ಎಂದರು. ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಇದ್ದರು.

ಜೆಡಿಎಸ್ ಶಾಸಕರಲ್ಲಿ ನಿರುತ್ಸಾಹ

ಬೆಂಗಳೂರು: ವಿಧಾನ ಪರಿಷತ್ ಚುನಾವಣೆಯಲ್ಲಿ ತಮ್ಮ ಅಭ್ಯರ್ಥಿ ಗೋವಿಂದರಾಜ್ ಅವರಿಗೆ ನಿಗದಿಪಡಿಸಿದ್ದ ಮತಗಳು, ಅಡ್ಡ ಮತದಾನವಾಗಿರುವ ಬಗ್ಗೆ ಜೆಡಿಎಸ್‌ನಿಂದ ಯಾವುದೇ ಪ್ರತಿಕ್ರಿಯೆ ಬಂದಿಲ್ಲ. ಆದರೆ, ಮತದಾನದ ಅವಧಿಯಲ್ಲೇ ಅವರು ನಿರುತ್ಸಾಹದಿಂದ ಇದ್ದರು.

18 ಶಾಸಕರ ಬಲವಿದ್ದ ಜೆಡಿಎಸ್, ಬಿಜೆಪಿಯ ಹೆಚ್ಚುವರಿ 4 ಮತ್ತು ಪಕ್ಷೇತರ ಶಾಸಕರ ಮತಗಳು ತಮ್ಮ ಅಭ್ಯರ್ಥಿಗೆ ಬೀಳಬಹುದು ಎಂದು ನಿರೀಕ್ಷಿಸಿತ್ತು. ಆದರೆ ಫಲಿತಾಂಶ ಪ್ರಕಟವಾದಾಗ ಜೆಡಿಎಸ್ ಅಭ್ಯರ್ಥಿಗೆ 14 ಮತಗಳಷ್ಟೇ ಬಿದ್ದಿದ್ದವು.

ದೇವನಹಳ್ಳಿಯ ರೆಸಾರ್ಟ್ ಒಂದರಲ್ಲಿ ತಂಗಿದ್ದ ಜೆಡಿಎಸ್ ಶಾಸಕರು ಬೆಳಿಗ್ಗೆ 9.30ಕ್ಕೆ ಅಲ್ಲಿಂದ ಹೊರಡಲು ಸಿದ್ಧತೆ ಮಾಡಿಕೊಂಡಿದ್ದರು. ಆದರೆ ಪಕ್ಷದ ಶಾಸಕ ಜಿ.ಟಿ.ದೇವೇಗೌಡ ಅವರು ಒಬ್ಬಂಟಿಯಾಗಿ ಬಂದು ಮತದಾನ ಮಾಡಿದ ಸುದ್ದಿ ಬಿತ್ತರವಾದ ಬೆನ್ನಲ್ಲೇ, ರೆಸಾರ್ಟ್‌ನಿಂದ ಹೊರಡುವ ಸಮಯವನ್ನು ಕೆಲಕಾಲ ಮುಂದೂಡಿದರು.

ನಂತರ 10.30ಕ್ಕೆ ಹೊರಡಲು ಸಮಯ ನಿಗದಿ ಮಾಡಿಕೊಂಡಿದ್ದರು. ಬಿಜೆಪಿಯ ಉಚ್ಚಾಟಿತ ಶಾಸಕರಾದ ಶಿವರಾಂ ಹೆಬ್ಬಾರ್, ಎಸ್‌.ಟಿ. ಸೋಮಶೇಖರ್ ಅವರು ಕಾಂಗ್ರೆಸ್ ಶಾಸಕರ ಜತೆಗೆ ಹೋಗಿ ಮತ ಹಾಕಿ ಬಂದ ಸುದ್ದಿ ಬಂದ ಕಾರಣಕ್ಕೆ, ಜೆಡಿಎಸ್ ಶಾಸಕರು ರೆಸಾರ್ಟ್‌ನಿಂದ ಹೊರಡುವುದನ್ನು ಇನ್ನಷ್ಟು ಮುಂದೂಡಿದರು. ನಂತರ ಒಬ್ಬೊಬ್ಬರೇ ಬಂದು ಮತ ಹಾಕಿದರು. ಜೆಡಿಎಸ್ ಅಭ್ಯರ್ಥಿ ಗೋವಿಂದರಾಜ್ ನಿರುತ್ಸಾಹದಿಂದ ಓಡಾಡುತ್ತಿದ್ದರು.

'ದ್ರೋಹಿಗಳ ವಿರುದ್ಧ ಕ್ರಮ'

ಬೆಂಗಳೂರು: 'ವಿಧಾನ ಪರಿಷತ್ತಿನ ಚುನಾವಣೆಯಲ್ಲಿ ಬಿಜೆಪಿಯ ಮೂರು ಮತಗಳ ಅಡ್ಡ ಮತದಾನವಾಗಿವೆ. ಒಂದು ಮತ ಅಸಿಂಧುವಾಗಿದೆ. ಪಕ್ಷಕ್ಕೆ ಈ ರೀತಿ ದ್ರೋಹ ಬಗೆದವರು ಶೀಘ್ರವೇ ಸಿಕ್ಕಿಕೊಳ್ಳಲಿದ್ದಾರೆ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಹೇಳಿದರು.

ಚುನಾವಣಾ ಫಲಿತಾಂಶದ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಅಡ್ಡಮತದಾನ ಯಾರು ಮಾಡಿದ್ದಾರೆ ಮತ್ತು ಏಕೆ ಮಾಡಿದ್ದಾರೆ ಎಂಬುದನ್ನು ಪರಿಶೀಲಿಸುತ್ತೇವೆ. ಪಕ್ಷದ ವೇದಿಕೆಯಲ್ಲಿ ಚರ್ಚಿಸಿ, ಕ್ರಮ ತೆಗೆದುಕೊಳ್ಳುತ್ತೇವೆ' ಎಂದರು.

ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ. ವಿಜಯೇಂದ್ರ, 'ಪಕ್ಷದ ಅಭ್ಯರ್ಥಿ ಲಿಂಗರಾಜ ಪಾಟೀಲ ಅವರಿಗೆ ನಿಗದಿಪಡಿಸಿದ್ದ 30 ಮತಗಳ ಪೈಕಿ ಮೂರು ಅಡ್ಡ ಮತದಾನವಾಗಿವೆ. ಅಡ್ಡ ಮತದಾನ ಮಾಡಿದವರನ್ನು ಪತ್ತೆ ಮಾಡಿ, ಸೂಕ್ತ ಕ್ರಮ ತೆಗೆದುಕೊಳ್ಳಲಾಗುವುದು' ಎಂದರು.

'ಮೇಕೆದಾಟು: ತಮಿಳುನಾಡು ಜೊತೆ ಚರ್ಚೆಗೆ ಸಿದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮೇಕೆದಾಟು ಯೋಜನೆ ದಕ್ಷಿಣ ಭಾರತದ ಹೃದಯದಂತಹ ಯೋಜನೆ. ಈ ಯೋಜನೆಯಿಂದ ಕರ್ನಾಟಕ ರಾಜ್ಯಕ್ಕಿಂತ ತಮಿಳುನಾಡಿಗೆ ಹೆಚ್ಚು ಅನುಕೂಲ ಆಗಲಿದೆ' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಸುದ್ದಿಗಾರರ ಜೊತೆ ಗುರುವಾರ ಮಾತನಾಡಿದ ಅವರು, 'ಈ ಯೋಜನೆಯ ವಿಚಾರವಾಗಿ ತಮಿಳುನಾಡು ಜೊತೆ ಚರ್ಚೆಗೆ ಸಿದ್ಧ' ಎಂದರು.

'ನಿಮ್ಮ ಹೃದಯಕ್ಕೆ ಹತ್ತಿರವಾದ ಮೇಕೆದಾಟು ಯೋಜನೆ ತಡೆಯಲು ತಮಿಳುನಾಡು ಸರ್ಕಾರ ಕಾನೂನು ಅವಕಾಶಗಳನ್ನು ಹುಡುಕುತ್ತಿದೆ' ಎಂದಾಗ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, 'ಮೇಕೆದಾಟು ನನ್ನ ಹೃದಯಕ್ಕೆ ಮಾತ್ರ ಹತ್ತಿರವಾಗಿಲ್ಲ. ಈ ಯೋಜನೆಯಲ್ಲಿ ಕರ್ನಾಟಕ ಮತ್ತು ತಮಿಳುನಾಡಿನ ಹಿತ ಅಡಗಿದೆ' ಎಂದರು.

'ಸುಪ್ರೀಂ ಕೋರ್ಟ್‌ನ ಆದೇಶದಂತೆ ತಮಿಳುನಾಡಿನ ಪಾಲಿನ 177 ಟಿ.ಎಂ.ಸಿ ಅಡಿ ನೀರು ಬಿಡಲು ನಾವು ಸಿದ್ಧರಾಗಿದ್ದೇವೆ. ಮೇಕೆದಾಟು ಯೋಜನೆಯ ತೀರ್ಮಾನವನ್ನು ಕೇಂದ್ರ ಜಲ ಆಯೋಗ ಮಾಡಬೇಕೆಂದು ಕೋರ್ಟ್ ಹೇಳಿದೆ' ಎಂದರು.

ಮೇಕೆದಾಟು ಯೋಜನೆ ರದ್ದುಗೊಳಿಸುವಂತೆ ಪ್ರಧಾನಿ ಮೋದಿಗೆ ತಮಿಳುನಾಡು ಮಾಡಿರುವ ಮನವಿ ಬಗ್ಗೆ ಕೇಳಿದಾಗ, 'ತಮಿಳುನಾಡಿನವರು ಕಳೆದ 40 ವರ್ಷಗಳಿಂದ ರಾಜಕೀಯ ಕಾರ್ಯಸೂಚಿ ಇಟ್ಟುಕೊಂಡಿದ್ದಾರೆ. ಅವರ ರಾಜಕೀಯದಲ್ಲಿ ನಾನು ಹಸ್ತಕ್ಷೇಪ ಮಾಡುವುದಿಲ್ಲ. ಈ ವಿಚಾರದ ಬಗ್ಗೆ ನ್ಯಾಯಾಲಯ ನಿರ್ದೇಶನ ನೀಡಿದೆ' ಎಂದರು.

'ಕಳೆದ ವರ್ಷ 400 ಟಿ.ಎಂ.ಸಿ ಅಡಿಗೂ ಹೆಚ್ಚು ನೀರು ಸಮುದ್ರ ಸೇರಿದೆ. ಕೆಳಭಾಗದಲ್ಲಿ ತಮಿಳುನಾಡಿನವರು ಸಾಕಷ್ಟು ಅಣೆಕಟ್ಟುಗಳನ್ನು ನಿರ್ಮಿಸುತ್ತಿದ್ದು, ನಾವು ಯಾವುದಕ್ಕೂ ಆಕ್ಷೇಪ ವ್ಯಕ್ತಪಡಿಸಿಲ್ಲ. ಅವರ ನೆಲದಲ್ಲಿ ಅವರು ನಿರ್ಮಿಸಿಕೊಳ್ಳುತ್ತಿದ್ದಾರೆ. ಇದೇ ವಿಚಾರ ಸುಪ್ರೀಂ ಕೋರ್ಟಿನಲ್ಲೂ ಚರ್ಚೆಯಾಗಿದೆ. ಈ ಯೋಜನೆಗೆ ನಾವು ಯಾವುದೇ ಆರ್ಥಿಕ ನೆರವು ಕೇಳುವುದಿಲ್ಲ. ಈ ಯೋಜನೆಯಿಂದ 400 ಮೆ.ವ್ಯಾಟ್ ವಿದ್ಯುತ್ ಉತ್ಪಾದಿಸುವ ಉದ್ದೇಶವಿದೆ' ಎಂದರು.

'ಮೇಕೆದಾಟು ಯೋಜನೆ ವಿಚಾರವಾಗಿ ತಮಿಳುನಾಡು ಜೊತೆ ಚರ್ಚೆ ಮಾಡುತ್ತೀರಾ' ಎಂಬ ಪ್ರಶ್ನೆಗೆ, 'ಯಾವಾಗ ಬೇಕಾದರೂ ಅವರ ಜೊತೆ ಮಾತನಾಡಲು ಸಿದ್ಧನಿದ್ದೇನೆ. ತಮಿಳುನಾಡಿನಿಂದ ಬಂದು ವೃತ್ತಿ ಮಾಡುತ್ತಿರುವ ಅನೇಕ ಜನರಿದ್ದಾರೆ. ಇಲ್ಲಿಂದ ಹೋಗಿ ಅಲ್ಲಿ ಕೆಲಸ ಮಾಡುತ್ತಿರುವವರೂ ಇದ್ದಾರೆ. ನಾವು ಅವರನ್ನು ಪ್ರತ್ಯೇಕಿಸುವುದಿಲ್ಲ. ಸಮತೋಲಿತ ಜಲಾನಯನ ನಿರ್ಮಾಣದಿಂದ ಕಷ್ಟ ಕಾಲದಲ್ಲಿ ತಮಿಳುನಾಡಿನ ಪಾಲಿನ ನೀರು ಹರಿಸಲು ನೆರವಾಗಲಿದೆ. ಅತಿ ಕಡಿಮೆ ವೆಚ್ಚದಲ್ಲಿ ಯೋಜನೆ ಪೂರ್ಣಗೊಳ್ಳುವ ವಿಶ್ವಾಸವಿದೆ' ಎಂದು ತಿಳಿಸಿದರು.

'ತಮಿಳುನಾಡು ಅನಗತ್ಯ ಖ್ಯಾತೆ ತೆಗೆಯುತ್ತಿಲ್ಲವೇ' ಎಂದು ಕೇಳಿದಾಗ, 'ಅವರು ರಾಜಕೀಯ ಉಳಿವಿಗಾಗಿ ಧ್ವನಿ ಎತ್ತುತ್ತಿದ್ದಾರೆ. ಸುಪ್ರೀಂ ಕೋರ್ಟ್ ತ್ರಿಸದಸ್ಯ ಪೀಠ ತೀರ್ಪು ಬಂದ ಬಳಿಕ ಮತ್ತೇನಿದೆ' ಎಂದರು.

'ರಾಜ್ಯದ ಬಿಜೆಪಿ ಸಂಸದರೂ ಹೋರಾಟ ಮಾಡಬೇಕಲ್ಲವೇ' ಎಂದಾಗ, 'ರಾಜ್ಯದಿಂದ ಆಯ್ಕೆಯಾಗಿರುವ ಕಾಂಗ್ರೆಸ್, ಬಿಜೆಪಿ, ಜೆಡಿಎಸ್ ಸೇರಿದಂತೆ ಎಲ್ಲ ಸಂಸದರು ಒಗ್ಗಟ್ಟಾಗಿ ನಮ್ಮ ರಾಜ್ಯದ ಹಿತ ಕಾಪಾಡುತ್ತಾರೆ ಎಂಬ ವಿಶ್ವಾಸವಿದೆ' ಎಂದು ತಿಳಿಸಿದರು.

'ತಮಿಳುನಾಡಿನಲ್ಲಿ ನಿಮ್ಮ ಮೈತ್ರಿ ಸರ್ಕಾರ ಇದೆಯಲ್ಲ' ಎಂದಾಗ, 'ನಾವು ಅವರಿಗೆ ಏನು ಮನವಿ ಮಾಡಬೇಕೊ ಮಾಡುತ್ತೇವೆ. ಇಲ್ಲಿ ರಾಜಕಾರಣ ಏನಿಲ್ಲ' ಎಂದರು.

'ನೀರಾವರಿಗೆ ಬಳಸುವುದಿಲ್ಲ'

'ಮೇಕೆದಾಟು ಯೋಜನೆ ಸಮತೋಲಿತ ಅಣೆಕಟ್ಟು. ತಮಿಳುನಾಡಿನ ರೈತರ ಹಿತವನ್ನೂ ಕಾಪಾಡಬೇಕು. ಹೀಗಾಗಿ, ಈ ಯೋಜನೆಯಿಂದ ಲಭ್ಯವಾಗುವ ಒಂದೇ ಒಂದು ಬಕೆಟ್ ನೀರನ್ನೂ ನೀರಾವರಿಗೆ ಬಳಸುವುದಿಲ್ಲ. ಬೆಂಗಳೂರು ನಗರದ ಕುಡಿಯುವ ನೀರು ಪೂರೈಕೆಗೆ ಮಾತ್ರ ಬಳಸಲಾಗುವುದು. ಬೆಂಗಳೂರಿನಲ್ಲಿ ಜನಸಂಖ್ಯೆ ಹೆಚ್ಚಾಗುತ್ತಿದ್ದು, ನಾವು ಕೃಷ್ಣಾದಿಂದ ನೀರನ್ನು ತರಲು ಸಾಧ್ಯವಿಲ್ಲ. ಹೀಗಾಗಿ, ಕಾವೇರಿ ನಮ್ಮ ಮುಂದಿರುವ ಏಕೈಕ ಆಯ್ಕೆ' ಎಂದು ಮುಖ್ಯಮಂತ್ರಿ ಹೇಳಿದರು.

ಕಾವೇರಿ ನೀರು: ತಮಿಳುನಾಡು ರಗಳೆ

ನವದೆಹಲಿ: ಕರ್ನಾಟಕದಲ್ಲಿ ಮುಂಗಾರು ಋತುವಿನಲ್ಲಿ ಶೇ 23ರಷ್ಟು ಮಳೆ ಕೊರತೆಯಾಗಿರುವ ಬೆನ್ನಲ್ಲೇ, ಕಾವೇರಿ ನೀರಿನ ಬಗ್ಗೆ ತಮಿಳುನಾಡು ಸರ್ಕಾರ ತಗಾದೆ ಎತ್ತಿದೆ.

ತಮಿಳುನಾಡು ವಿಧಾನಸಭೆ ಉದ್ದೇಶಿಸಿ ಗುರುವಾರ ಭಾಷಣ ಮಾಡಿದ ರಾಜ್ಯಪಾಲ ವಿ.ಆರ್.ಅರ್ಲೇಕರ್ ಅವರು ಕಾವೇರಿ ಜಲವಿವಾದ ಹಾಗೂ ಪ್ರಸ್ತಾವಿತ ಮೇಕೆದಾಟು ಯೋಜನೆಯ ಬಗ್ಗೆ ಮಾತನಾಡಿದ್ದಾರೆ. ಮೇಕೆದಾಟು ಯೋಜನೆ ತಡೆಯಲು ಹಾಗೂ ಸಕಾಲದಲ್ಲಿ ಕಾವೇರಿ ನೀರು ಪಡೆಯಲು ಸರ್ಕಾರವು ಕಾನೂನು ಹೋರಾಟ ಮಾಡಲಿದೆ ಎಂದು ಸ್ಪಷ್ಟಪಡಿಸಿದರು.

'ತಮಿಳುನಾಡಿನ ಹಕ್ಕನ್ನು ಸುಪ್ರೀಂ ಕೋರ್ಟ್ ಎತ್ತಿ ಹಿಡಿದ ಬಳಿಕವೂ, ಪ್ರತಿವರ್ಷ ಕಾವೇರಿ ನೀರನ್ನು ಪಡೆಯಲು ನಾವು ಹೋರಾಟ ಮಾಡಬೇಕಾಗಿದೆ. ನಮ್ಮ ಪಾಲಿನ ನೀರನ್ನು ನೀಡುವ ಬದಲು, ಕರ್ನಾಟಕ ಸರ್ಕಾರವು ತಮಿಳುನಾಡಿಗೆ ಹೆಚ್ಚುವರಿ ನೀರನ್ನು ಮಾತ್ರ ಹರಿಸುತ್ತಿದೆ' ಎಂದು ದೂರಿದರು.

'ಇಂತಹ ಪರಿಸ್ಥಿತಿಯಲ್ಲಿ, ಕರ್ನಾಟಕ ಸರ್ಕಾರವು ಮೇಕೆದಾಟು ಯೋಜನೆಯನ್ನು ಕಾರ್ಯಗತಗೊಳಿಸಲು ಪ್ರಯತ್ನಿಸುತ್ತಿದೆ. ಈ ಯೋಜನೆ ಜಾರಿಗೆ ಬಂದರೆ, ಕೃಷಿ ಉತ್ಪಾದನೆ ಹಾಗೂ ರೈತರ ಜೀವನೋಪಾಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಇದನ್ನು ನಿಲ್ಲಿಸಲು ಹೋರಾಟ ಮಾಡಲಾಗುವುದು ಎಂದು ತಿಳಿಸಿದರು.

ನನ್ನ ಉಚ್ಚಾಟಿಸಿದ್ದು ಸರಿಯೇ: ಯತ್ನಾಳ ಪ್ರಶ್ನೆ

ವಿಜಯಪುರ: 'ಪಕ್ಷ ವಿರೋಧಿ ಚಟುವಟಿಕೆಯಲ್ಲಿ ಭಾಗಿ ಆಗದಿದ್ದರೂ ಮತ್ತು ಯಾವುದೇ ರೀತಿ ಅಪಚಾರ ಮಾಡದಿದ್ದರೂ ನನ್ನನ್ನು ಬಿಜೆಪಿಯಿಂದ ಉಚ್ಚಾಟಿಸಲಾಗಿದೆ. ಪಕ್ಷದ ಮೇಲೆ ಹಿಡಿತ ಸಾಧಿಸಿರುವ ಏಕಮಾತ್ರ ಕುಟುಂಬದ ರಾಜಕಾರಣವನ್ನು ಪ್ರಶ್ನಿಸಿರುವುದಕ್ಕೆ ನನ್ನ ವಿರುದ್ಧ ಕ್ರಮ ಕೈಗೊಂಡಿರುವುದು ಎಷ್ಟು ಸರಿ' ಎಂದು ಬಿಜೆಪಿಯಿಂದ ಉಚ್ಚಾಟಿತ ಶಾಸಕ ಬಸನಗೌಡ ಪಾಟೀಲ ಯತ್ನಾಳ ಬೇಸರ ವ್ಯಕ್ತಪಡಿಸಿದ್ದಾರೆ.

ಬಿಜೆಪಿ ರಾಷ್ಟ್ರೀಯ ಘಟಕದ ಅಧ್ಯಕ್ಷ ನಿತಿನ್ ನವೀನ್ ಅವರಿಗೆ ಬುಧವಾರ ಪತ್ರ ಬರೆದಿರುವ ಅವರು, 'ನಾನು ಈಗಲೂ ಪಕ್ಷದ ತತ್ವ ಮತ್ತು ಸಿದ್ಧಾಂತ ಪರ ಇದ್ದೇನೆ. ಅದಕ್ಕೆ ಯಾವುದೇ ದ್ವೇಷ ಮತ್ತು ಬೇಸರವಿಲ್ಲದೇ, ವಿಧಾನ ಪರಿಷತ್ತು ಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿ ಲಿಂಗರಾಜ ಪಾಟೀಲರಿಗೆ ಮತ ಹಾಕುತ್ತೇನೆ' ಎಂದು ದೃಢಪಡಿಸಿದ್ದಾರೆ.

'ಪಕ್ಷದ ಹಿತದೃಷ್ಟಿಯಿಂದ ಮತ್ತು ಸಾವಿರಾರು ಕಾರ್ಯಕರ್ತರ ತ್ಯಾಗ ಮತ್ತು ಪರಿಶ್ರಮವನ್ನು ಎತ್ತಿ ಹಿಡಿಯಲು ಪ್ರಶ್ನಿಸಿದ್ದೇನೆ ಹೊರತು ಬೇರೆ ಉದ್ದೇಶಗಳಿಲ್ಲ. 1980ರ ದಶಕದಿಂದಲೂ ರಾಜ್ಯವ್ಯಾಪಿ ಓಡಾಡಿ, ಮುಖಂಡರು ಮತ್ತು ಕಾರ್ಯಕರ್ತರ ಜೊತೆಗೆ ಸೇರಿ ಪಕ್ಷದ ಸಂಘಟನೆಗೆ ಶ್ರಮಿಸಿದ್ದೇನೆ. ನಾನು ಯಾವತ್ತೂ ಭಿನ್ನಮತೀಯ ಚಟುವಟಿಕೆಯಲ್ಲಿ ಭಾಗಿಯಾಗಿಲ್ಲ. ಬಂಡಾಯವೂ ಎದ್ದಿಲ್ಲ' ಎಂದಿದ್ದಾರೆ.


ಬಸನಗೌಡ ಪಾಟೀಲ ಯತ್ನಾಳ

'ನನ್ನ ಹೋರಾಟ ಕುಟುಂಬ ರಾಜಕೀಯ, ಹೊಂದಾಣಿಕೆ ರಾಜಕಾರಣದ ವಿರುದ್ಧವಿದೆಯೇ ಹೊರತು ಪಕ್ಷದ ವಿರುದ್ಧವಲ್ಲ. ಬಿಜೆಪಿ ತತ್ವ, ಸಿದ್ಧಾಂತ, ರಾಷ್ಟ್ರೀಯತೆ, ಹಿಂದುತ್ವದಲ್ಲಿ ನಂಬಿಕೆಯಿದೆ. ಪ್ರಧಾನಿ ನರೇಂದ್ರ ಮೋದಿ ನಾಯಕತ್ವ ಮೆಚ್ಚಿಕೊಂಡಿದ್ದೇನೆ' ಎಂದಿದ್ದಾರೆ.

'ಕರ್ನಾಟಕದಲ್ಲಿ ಕಾಂಗ್ರೆಸ್ ಆಡಳಿತದಿಂದ ಭ್ರಷ್ಟಾಚಾರ ಮಿತಿ ಮೀರಿದೆ. ಆಡಳಿತ ವೈಫಲ್ಯವಾಗಿದ್ದು, ಓಲೈಕೆ ರಾಜಕಾರಣ ನಡೆದಿದೆ. ಈ ಸಂದರ್ಭ ದಲ್ಲಿ ರಾಜ್ಯದ ಜನರ ವಿಶ್ವಾಸ ಗಳಿಸಲು ರಾಜ್ಯ ಬಿಜೆಪಿಗೆ ಸಮರ್ಥ ನಾಯಕತ್ವದ ಅಗತ್ಯವಿದೆ. ಈ ನಿಟ್ಟಿನಲ್ಲಿ ಬಿಜೆಪಿ ವರಿಷ್ಠರು ರಾಜ್ಯದತ್ತ ಗಮನ ಹರಿಸಬೇಕು. ಬಿಜೆಪಿಯ ನಿಷ್ಠಾವಂತ ಕಾರ್ಯಕರ್ತರ ಅಹವಾಲು ಆಲಿಸಬೇಕು ಮತ್ತು ರಾಜ್ಯ ಬಿಜೆಪಿ ನಾಯಕತ್ವ ಬದಲಾವಣೆಗೆ ಸೂಕ್ತ ನಿರ್ಧಾರ ಕೈಗೊಳ್ಳಬೇಕು' ಎಂದು ಪತ್ರದಲ್ಲಿ ಕೋರಿದ್ದಾರೆ.

ರಾಜ್ಯದ ಮತದಾರರಿಗಷ್ಟೇ 'ಗ್ಯಾರಂಟಿ': ಸಿ.ಎಂ

ಬೆಂಗಳೂರು: 'ರಾಜ್ಯದ ಮತದಾರರಿಗೆ ಮಾತ್ರ ಗ್ಯಾರಂಟಿ ಯೋಜನೆಗಳನ್ನು ಕೊಡುತ್ತೇವೆ' ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಪುನರುಚ್ಚರಿಸಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, 'ಮತದಾನ ಹಕ್ಕು ಇಲ್ಲವೆಂದ ಮೇಲೆ ನಾವು ಯಾಕೆ ಗ್ಯಾರಂಟಿ ಯೋಜನೆಗಳನ್ನು ಕೊಡಬೇಕು? ಹೊರ ರಾಜ್ಯಗಳಲ್ಲಿ ಮತದಾನದ ಹಕ್ಕು ಇಲ್ಲದವರಿಗೆ ಅಲ್ಲಿನ ಸರ್ಕಾರದ ಯೋಜನೆ ತೆಗೆಯಲು ಹೊರಟಿದೆ. ಮತದಾನ ಹಕ್ಕು ಇಲ್ಲದಿದ್ದರೆ ಕೇಂದ್ರದಿಂದಲೂ ಮುಂದೆ ಯಾವುದೇ ಯೋಜನೆ ಸಿಗುವುದಿಲ್ಲ' ಎಂದರು.

'ವೃದ್ಧಾಪ್ಯ ವೇತನ, ವಿಧವಾ ವೇತನ, ಅನ್ನಭಾಗ್ಯ, ಗೃಹಲಕ್ಷ್ಮಿ, ಗೃಹಜ್ಯೋತಿ ಯೋಜನೆ ಕಿತ್ತು ಹಾಕುವುದು ನಮ್ಮ ಉದ್ದೇಶವಲ್ಲ. ನೈಜ ಫಲಾನುಭವಿಗಳಿಗೆ ನಮ್ಮ ಯೋಜನೆಗಳು ತಲುಪುತ್ತಿದೆಯೇ ಎಂದು ಖಚಿತಪಡಿಸಿಕೊಳ್ಳಲು ಮುಂದಾಗಿದ್ದೇವೆ' ಎಂದರು.

'ನಮ್ಮ ರಾಜ್ಯದಲ್ಲಿ 20 ಲಕ್ಷ ಜನರು ಹೊರ ರಾಜ್ಯಗಳಿಂದ ಬಂದು ಕೆಲಸ ಮಾಡುತ್ತಿದ್ದಾರೆ. ಅವರ ಮತ ಇಲ್ಲಿದೆಯೇ, ಇಲ್ಲವೇ ಎಂದು ಪರಿಶೀಲನೆ ಮಾಡಬೇಕಲ್ಲವೇ' ಎಂದು ಪ್ರಶ್ನಿಸಿದರು.

ಲಂಚ: ಕಂದಾಯ ನಿರೀಕ್ಷಕ ಬಂಧನ

ಹಾವೇರಿ: ಜಮೀನು ಉತಾರ ತಿದ್ದುಪಡಿ ಮಾಡಿಕೊಡಲು ಲಂಚ ಪಡೆದ ಆರೋಪದ ಮೇಲೆ ಕಂದಾಯ ನಿರೀಕ್ಷಕ, ಬ್ಯಾಡಗಿ ತಾಲ್ಲೂಕಿನ ಕಾಗಿನೆಲೆಯ ರಾಮನಗೌಡ ಚನ್ನಬಸನಗೌಡ ದ್ಯಾಮನಗೌಡ್ರ ಅವರನ್ನು ಲೋಕಾಯುಕ್ತ ಪೊಲೀಸರು ಗುರುವಾರ ಬಂಧಿಸಿದ್ದಾರೆ.

'ಕಾಶಂಬಿ ಗ್ರಾಮದ ರೈತ ನಾಗರಾಜ ಓಲೇಕಾರ ಅವರು ಜಮೀನಿಗೆ ಸಂಬಂಧಿಸಿದಂತೆ ಉತಾರ ತಿದ್ದುಪಡಿ ಮಾಡಲು ಅರ್ಜಿ ಸಲ್ಲಿಸಿದ್ದರು. ಅದಕ್ಕೆ ₹12 ಸಾವಿರ ಲಂಚಕ್ಕೆ ಬೇಡಿಕೆ ಇಟ್ಟಿದ್ದ ಆರೋಪಿ ರಾಮನಗೌಡ, ಕುಮ್ಮೂರು ಕ್ರಾಸ್ ಬಳಿ ಮುಂಗಡವಾಗಿ ₹5 ಸಾವಿರ ಪಡೆದುಕೊಳ್ಳುತ್ತಿದ್ದ ವೇಳೆ ಬಂಧಿಸಲಾಯಿತು' ಎಂದು ಲೋಕಾಯುಕ್ತ ಪೊಲೀಸ್ ಡಿವೈಎಸ್ಪಿ ಸಿ. ಮಧುಸೂದನ್ ತಿಳಿಸಿದ್ದಾರೆ.

ಮಾವು ಬೆಳೆಗಾರರಿಗೆ ನೆರವು ಕಲ್ಪಿಸಿ: ಕೇಂದ್ರ ಕೃಷಿ ಸಚಿವರಿಗೆ ಜೋಶಿ ಪತ್ರ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದ ಮಾವು ಬೆಳೆಗಾರರ ಹಿತರಕ್ಷಣೆಗಾಗಿ ಈ ವರ್ಷವೂ ಬೆಲೆ ಕೊರತೆ ಪಾವತಿ ಯೋಜನೆ (ಪಿಡಿಪಿಎಸ್) ಮೂಲಕ ನೆರವಾಗುವಂತೆ ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಅವರು ಕೇಂದ್ರ ಕೃಷಿ ಸಚಿವರನ್ನು ಒತ್ತಾಯಿಸಿದ್ದಾರೆ.

ರಾಜ್ಯದ ಮಾವು ಬೆಳೆಗಾರರ ಬವಣೆ, ಸಂಕಷ್ಟ ಕುರಿತು ಕೇಂದ್ರ ಕೃಷಿ ಸಚಿವ ಶಿವರಾಜ್ ಸಿಂಗ್ ಚೌಹಾಣ್ ಅವರಿಗೆ ಗುರುವಾರ ಪತ್ರ ಬರೆದಿರುವ ಸಚಿವ ಜೋಶಿ ಅವರು, ರಾಜ್ಯದ ಮಾವು ಬೆಳೆಗಾರರ ಸಮಸ್ಯೆಗಳಿಗೆ ಶೀಘ್ರವೇ ಸ್ಪಂದಿಸುವಂತೆ ಮನವಿ ಮಾಡಿದ್ದಾರೆ.

ಪಿಡಿಪಿಎಸ್ ಅಡಿ ನೆರವು ನೀಡಿ: ಕರ್ನಾಟಕದಲ್ಲಿ ಹವಾಮಾನ ವೈಪರೀತ್ಯ ಮತ್ತು ಮಾರುಕಟ್ಟೆಯಲ್ಲಿ ಬೆಲೆ ಕುಸಿತದಿಂದ ಮಾವು ಬೆಳೆಗಾರರು ತೀವ್ರ ಸಂಕಷ್ಟ ಎದುರಿಸುತ್ತಿದ್ದಾರೆ. ಹಾಗಾಗಿ ಕೂಡಲೇ ಪಿಡಿಪಿಎಸ್ ಅಡಿ ನೆರವಾಗುವಂತೆ ಕೃಷಿ ಸಚಿವರನ್ನು ಒತ್ತಾಯಿಸಿದ್ದಾರೆ.

ಕರ್ನಾಟಕ ಮಾವು ಬೆಳೆಯುವ ಉತ್ತಮ ಪರಿಸರ ವ್ಯವಸ್ಥೆ ಹೊಂದಿದೆ. ರಾಜ್ಯದ ಅನೇಕ ಜಿಲ್ಲೆಗಳಲ್ಲಿ ಹೆಚ್ಚಿನ ಸಂಖ್ಯೆಯ ರೈತರು ಆದಾಯ ಮತ್ತು ಜೀವನೋಪಾಯಕ್ಕಾಗಿ ಈ ಬೆಳೆಯನ್ನು ಅವಲಂಬಿಸಿದ್ದಾರೆ. ಆದರೆ, ಮಾರುಕಟ್ಟೆಯಲ್ಲಿ ದರ ಕುಸಿತದಿಂದಾಗಿ ವ್ಯತಿರಿಕ್ತ ಪರಿಣಾಮ ಎದುರಿಸುತ್ತಿದ್ದಾರೆ ಎಂದು ಸಚಿವರು ಹೇಳಿದ್ದಾರೆ.

ಕೋಲಾರ, ಚಿಕ್ಕಬಳ್ಳಾಪುರ, ರಾಮನಗರ, ಧಾರವಾಡ, ಬೆಳಗಾವಿ ಹೀಗೆ ರಾಜ್ಯದ ವಿವಿಧ ಕಡೆ ಇರುವ ಪ್ರಮುಖ ಮಾರುಕಟ್ಟೆಗಳಲ್ಲಿ ತೋತಾಪುರಿ ಮಾವಿನ ಬೆಲೆ ಲಾಭದಾಯಕವಾಗಿಲ್ಲ. ಮಾದರಿ ದರಕ್ಕಿಂತ ಗಮನಾರ್ಹವಾಗಿ ಕನಿಷ್ಠ ಮಟ್ಟಕ್ಕೆ ಕುಸಿದಿದೆ. ಇದರಿಂದ ಬೆಳೆಗಾರರು ತೀವ್ರ ಸಂಕಷ್ಟಕ್ಕೀಡಾಗಿದ್ದಾರೆ. ಇದಲ್ಲದೆ, ಪ್ರತಿಕೂಲ ಹವಾಮಾನ ಪರಿಸ್ಥಿತಿಗಳಿಂದಾಗಿ ಈ ಬಾರಿ ಮಾವಿನ ಉತ್ಪಾದನೆ ಸಹ ಕಡಿಮೆಯಾಗಿದೆ. ಇದೆಲ್ಲದರ ಪರಿಣಾಮ ರೈತರಿಗೆ ತೀವ್ರ ಆರ್ಥಿಕ ನಷ್ಟ ಉಂಟಾಗುತ್ತಿದೆ ಎಂದು ಅವರು ಹೇಳಿದ್ದಾರೆ.

ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲ್ಲೂಕಿನ ಕುಟ್ಟಾ ಗ್ರಾಮದ ಪಿ.ಎ.ಪೊನ್ನಪ್ಪ ಸಲ್ಲಿಸಿದ್ದ ಅರ್ಜಿ ವಿಚಾರಣೆ

ಹೋಂ ಸ್ಟೇ ನಿಯಂತ್ರಣಕ್ಕೆ ನೀತಿ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜ್ಯದಲ್ಲಿ ಹೋಂ ಸ್ಟೇಗಳ ಸ್ಥಾಪನೆ, ನಿರ್ವಹಣೆ ಹಾಗೂ ಮೇಲ್ವಿಚಾರಣೆಯನ್ನು ನಿಯಂತ್ರಿಸುವ ನಿಟ್ಟಿನಲ್ಲಿ ಸಮಗ್ರ ನೀತಿ ಮತ್ತು ಶಾಸನಬದ್ಧ ಚೌಕಟ್ಟೊಂದನ್ನು ರೂಪಿಸುವ ಬಗ್ಗೆ ಕೂಲಂಕಶ ಪರಿಶೀಲನೆ ನಡೆಸಿ' ಎಂದು ಹೈಕೋರ್ಟ್, ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಿದೆ.

'ನನ್ನ ಮಾಲೀಕತ್ವದ ಹೋಂ ಸ್ಟೇ ನೋಂದಣಿ ರದ್ದುಪಡಿಸಲಾಗಿದೆ' ಎಂದು ಆಕ್ಷೇಪಿಸಿ ಕೊಡಗು ಜಿಲ್ಲೆಯ ಪೊನ್ನಂಪೇಟೆ ತಾಲ್ಲೂಕಿನ ಕುಟ್ಟಾ ಗ್ರಾಮದ ಪಿ.ಎ.ಪೊನ್ನಪ್ಪ ಸಲ್ಲಿಸಿದ್ದ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದರಾಜ್ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಈ ಕುರಿತಂತೆ ಸೂಕ್ತ ಮಾರ್ಗಸೂಚಿಯ ಅಗತ್ಯವಿದೆ' ಎಂದು ಅವಲೋಕಿಸಿದೆ.

'ರಾಜ್ಯದಲ್ಲಿ ಹೋಂ ಸ್ಟೇ ಕ್ಷೇತ್ರದ ಪ್ರಾಮುಖ್ಯತೆ ಹೆಚ್ಚುತ್ತಿರುವ ಬೆನ್ನಲ್ಲೇ ಅವುಗಳ ವಿರುದ್ಧದ ಪ್ರಕರಣಗಳೂ ಅಧಿಕವಾಗುತ್ತಿವೆ. ಆದ್ದರಿಂದ, ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆ ಪ್ರಧಾನ ಕಾರ್ಯದರ್ಶಿ ಸಂಬಂಧಿಪಟ್ಟ ಇಲಾಖೆಗಳ ಮುಖ್ಯಸ್ಥರ ಜತೆ ಈ ಬಗ್ಗೆ ಸಮಾಲೋಚಿಸಬೇಕು' ಎಂದು ನ್ಯಾಯಪೀಠ ಹೇಳಿದೆ.

ಪ್ರಕರಣ: ಅರ್ಜಿದಾರರ ಮಾಲೀಕತ್ವದ ಹೋಂ ಸ್ಟೇನಲ್ಲಿ ಕಳೆದ ಏಪ್ರಿಲ್‌ನಲ್ಲಿ ಅಮೆರಿಕದ ಪ್ರಜೆಯೊಬ್ಬರ ಮೇಲೆ ಲೈಂಗಿಕ ದೌರ್ಜನ್ಯ ನಡೆದ ಆರೋಪ ಕೇಳಿ ಬಂದಿತ್ತು. ಈ ಸಂಬಂಧ ಜಿಲ್ಲಾಡಳಿತ ಹೋಂ ಸ್ಟೇ ನೋಂದಣಿ ರದ್ದುಗೊಳಿಸಿ ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಹೋಂ ಸ್ಟೇ ಮಾಲೀಕರು ಹೈಕೋರ್ಟ್ ಮೆಟ್ಟಿಲೇರಿದ್ದರು.

ಪ್ರಮುಖ ಸೂಚನೆಗಳು

- ಹೋಂ ಸ್ಟೇಗಳು ಹೆಚ್ಚಾಗಿ ವಸತಿ, ಅರೆ-ನಗರ, ಗ್ರಾಮೀಣ, ಕರಾವಳಿ, ಪರಿಸರ-ಸೂಕ್ಷ್ಮ ಅಥವಾ ಬೆಟ್ಟದ ಪ್ರದೇಶಗಳಲ್ಲಿ ಕಾರ್ಯ ನಿರ್ವಹಿಸುತ್ತವೆ. ಆದ್ದರಿಂದ, ಇಲ್ಲಿಗೆ ಬರುವ ಪ್ರವಾಸಿಗರು, ಕಟ್ಟಡ ನಿಯಮಗಳು ಹಾಗೂ ವಸತಿ-ವಲಯ ನಿಯಮಗಳ ಪ್ರಕಾರ ಎಲ್ಲ ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.
- ಸಾರ್ವಜನಿಕ ಸುರಕ್ಷತೆ, ಅಪರಾಧ ಚಟುವಟಿಕೆಗಳು, ಕಳ್ಳಸಾಗಣೆ, ಸೈಬರ್ ಅಪರಾಧಗಳನ್ನು ನಿಯಂತ್ರಿಸುವುದು ಮತ್ತು ತನಿಖಾ ಸಂಸ್ಥೆಗಳೊಂದಿಗೆ ಹೋಂ ಸ್ಟೇ ಮಾಲೀಕರು ಸಹಕರಿಸಬೇಕು. ಎಲ್ಲ ಅತಿಥಿಗಳ ಗುರುತಿನ ಚೀಟಿಗಳ ಪರಿಶೀಲನೆ ಮಾಡಬೇಕು.
- ಹೋಂ ಸ್ಟೇಗಳ ನಿಯಂತ್ರಣದಲ್ಲಿ ತೊಡಗಿರುವ ವಿವಿಧ ಇಲಾಖೆಗಳ ಅಧಿಕಾರಿಗಳ ಜವಾಬ್ದಾರಿಗಳನ್ನು ಸ್ಪಷ್ಟವಾಗಿ ವಿವರಿಸಿ, ವಿಭಜನೆ ಮಾಡಬೇಕಿದೆ.
- ಇಷ್ಟಾನುಸಾರ ತಪಾಸಣೆ ನಡೆಸದಂತೆ ವ್ಯವಸ್ಥಿತ ಮತ್ತು ಪಾರದರ್ಶಕ ತಪಾಸಣಾ ಕಾರ್ಯವಿಧಾನ ಅಳವಡಿಸಬೇಕು.
- ಸಣ್ಣ ಮತ್ತು ದೊಡ್ಡ ವಾಣಿಜ್ಯ ಹೋಂ ಸ್ಟೇಗಳ ನಡುವಿನ ವರ್ಗೀಕರಣವನ್ನು ಕಡ್ಡಾಯವಾಗಿ ಮಾಡಬೇಕು.
- ಪಾರದರ್ಶಕತೆ ಮತ್ತು ಗ್ರಾಹಕ ರಕ್ಷಣೆಯ ಅಗತ್ಯವಿದ್ದು, ಬೆಲೆ ನಿಗದಿಯಲ್ಲಿ ಪಾರದರ್ಶಕತೆ ಕಾಯ್ದುಕೊಳ್ಳಬೇಕು.

'ಸಣ್ಣ ಉದ್ದಿಮೆದಾರರಿಗೆ ಹೊರೆಯಾಗದಿರಲಿ'



'ಸಣ್ಣ ಕುಟುಂಬ ಚಾಲಿತ ಹೋಂ ಸ್ಟೇಗಳು ಮತ್ತು ವಾಣಿಜ್ಯ ಉದ್ದೇಶದ ದೊಡ್ಡ ರೆಸಾರ್ಟ್ ಮಾದರಿಯ ಹೋಂ ಸ್ಟೇಗಳ ನಡುವೆ ಸ್ಪಷ್ಟ ವ್ಯತ್ಯಾಸವಿರಬೇಕು. ನಿಯಮಗಳು ಸಣ್ಣ ಮಾಲೀಕರಿಗೆ ಹೊರೆಯಾಗಬಾರದು. ಆದರೆ, ದೊಡ್ಡ ಸಂಸ್ಥೆಗಳ ಮೇಲೆ ಕಟ್ಟುನಿಟ್ಟಿನ ನಿಗಾ ಇರಿಸಬೇಕು' ಎಂದು ನ್ಯಾಯಪೀಠ ಸ್ಪಷ್ಟಪಡಿಸಿದೆ.

'ಈ ಪ್ರಕರಣದಲ್ಲಿ ಹೋಂ ಸ್ಟೇ ಪರವಾನಿಗೆ ರದ್ದುಗೊಳಿಸುವುದಕ್ಕೂ ಮುನ್ನ ಅರ್ಜಿದಾರರಿಗೆ ಯಾವುದೇ ನೋಟಿಸ್ ನೀಡಿಲ್ಲ. ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ ಸುಗಮಗೊಳಿಸುವಿಕೆ ಮತ್ತು ನಿಯಂತ್ರಣ ಕಾಯ್ದೆ-2015ರ ನಿಬಂಧನೆಗಳನ್ನು ಪಾಲಿಸದೆ ಜಿಲ್ಲಾಡಳಿತ ಈ ಕ್ರಮ ಕೈಗೊಂಡಿದೆ. ಹೀಗಾಗಿ, ಪರವಾನಿಗೆ ರದ್ದು ಮಾಡಿರುವ ಆದೇಶವನ್ನು ಷೋಕಾಸ್ ನೋಟಿಸ್ ಆಗಿ ಪರಿವರ್ತಿಸಲಾಗಿದ್ದು, ಇದಕ್ಕೆ ಉತ್ತರಿಸಲು ಮಾಲೀಕರಿಗೆ ಅವಕಾಶ ನೀಡಲಾಗಿದೆ' ಎಂದು ನ್ಯಾಯಪೀಠ ತಿಳಿಸಿದೆ.

prajavani.net prajavani | ಶುಕ್ರವಾರ, ಜೂನ್ 19, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 169 | ಪುಟ 18 | www.prajavani.net

ಕ್ಷಣ ಕ್ಷಣದ ಅಪ್‌ಡೇಟ್‌ಗಳಿಗಾಗಿ
ಸ್ಕ್ಯಾನ್ ಮಾಡಿ

‘ಸಿನಿ ಸಮ್ಮಾನ’ ಇಂದು ಪ್ರದಾನ

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಸೆನ್ಸೆಕ್ಸ್ 77,409 | ನಿಫ್ಟಿ 24,168 | $/₹ 94.40 | ಚಿನ್ನ (Std. 10g) ₹1,55,600 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹2,60,600 (ಬೆಂಗಳೂರು)

ಚಂದನವನದ ಪ್ರತಿಭೆಗಳನ್ನು ಗುರುತಿಸಲು ‘ಕಾಸಾಗ್ರ್ಯಾಂಡ್’ ಪ್ರಸ್ತುತಪಡಿಸುವ ‘ಪ್ರಜಾವಾಣಿ ಕನ್ನಡ ಸಿನಿ ಸಮ್ಮಾನ’ದ 4ನೇ ಆವೃತ್ತಿ ಶುಕ್ರವಾರ (ಜೂನ್ 19) ನಡೆಯಲಿದೆ.

ಈ ವರ್ಣರಂಜಿತ, ಅರ್ಥಗರ್ಭಿತ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹಾಗೂ ಕನ್ನಡ ಚಿತ್ರರಂಗದ ಹಲವು ತಾರೆಯರು–ತಂತ್ರಜ್ಞರು, ರಾಜಕೀಯ, ಸಾಹಿತ್ಯ ವಲಯದ ಗಣ್ಯರು ಭಾಗಿಯಾಗಲಿದ್ದಾರೆ. ‘ಪ್ರಜಾವಾಣಿ’ಯು ತನ್ನ 75ನೇ ವರ್ಷದ ಸಂದರ್ಭದಲ್ಲಿ ಪ್ರಾರಂಭಿಸಿದ್ದ ಈ ಪ್ರಶಸ್ತಿಯು ನಾಲ್ಕರ ಹರೆಯದಲ್ಲೇ ಕನ್ನಡ ಚಿತ್ರರಂಗದ ವಿಶ್ವಾಸಾರ್ಹ ಪ್ರಶಸ್ತಿಯಾಗಿ ಗುರುತಿಸಿಕೊಂಡಿದೆ.

ಈ ಕಾರ್ಯಕ್ರಮವು ಕರ್ನಾಟಕದ ಶ್ರೀಮಂತ ಸಿನಿಮಾ ಪರಂಪರೆಯನ್ನು ಆಚರಿಸುವ, ಸಂಭ್ರಮಿಸುವ, ಬೆಸೆಯುವ ವೇದಿಕೆಯಾಗಿದೆ. 2025ರಲ್ಲಿ ತೆರೆಕಂಡ ಸಿನಿಮಾಗಳನ್ನು ನಾಲ್ಕನೇ ಆವೃತ್ತಿಗೆ ಪರಿಗಣಿಸಲಾಗಿದ್ದು, ಒಟ್ಟು 27 ವಿಭಾಗಗಳಲ್ಲಿ 150ಕ್ಕೂ ಅಧಿಕ ಜನರು ನಾಮನಿರ್ದೇಶನ ಗೊಂಡಿದ್ದಾರೆ. ಈ ಪೈಕಿ ಪ್ರಶಸ್ತಿ ಯಾರ ಮುಡಿಗೆ ಎನ್ನುವ ಕುತೂಹಲಕ್ಕೆ ಇಂದು ತೆರೆಬೀಳಲಿದೆ.

ಚಿನಕುರುಳಿ

ಪ್ರಕಾಶ್ ಶೆಟ್ಟಿ

ಅಡ್ಡಮತ: ಮಿತ್ರರಿಗೆ ಘಾತ

ಪ್ರತಿಪಕ್ಷಗಳ 11 ಶಾಸಕರ ಮತ ಕಾಂಗ್ರೆಸ್‌ಗೆ ಕಾಂಗ್ರೆಸ್ 5, ಬಿಜೆಪಿ 2 ರಲ್ಲಿ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ತೀವ್ರ ಕುತೂಹಲ ಕೆರಳಿಸಿದ್ದ ವಿಧಾನಪರಿಷತ್‌ನ 7 ಸ್ಥಾನಗಳ ದ್ವೈವಾರ್ಷಿಕ ಚುನಾವಣೆಯಲ್ಲಿ ಬಿಜೆಪಿ–ಜೆಡಿಎಸ್ ಶಾಸಕರ ಅಡ್ಡ ಮತದಾನದಿಂದಾಗಿ ಕಾಂಗ್ರೆಸ್‌ನ ಐದೂ ಅಭ್ಯರ್ಥಿಗಳು ಭರ್ಜರಿ ಗೆಲುವು ಸಾಧಿಸಿದ್ದಾರೆ.

ಬಿಜೆಪಿಯ ಇಬ್ಬರು ಅಭ್ಯರ್ಥಿಗಳು ವಿಜಯ ಸಾಧಿಸಿದ್ದರೂ, ಅಡ್ಡ ಮತದಾನದ ಕಾರಣ ನಿರೀಕ್ಷೆಯಷ್ಟು ಮತ ಪಡೆಯುವಲ್ಲಿ ವಿಫಲರಾದರು. ಬಿಜೆಪಿಯ ಹೆಚ್ಚುವರಿ ಮತ ಸಿಕ್ಕಿಯೇ ಸಿಗುತ್ತದೆ ಎಂಬ ಖಾತರಿಯಲ್ಲಿ, ಗೆಲ್ಲಿಸಿಕೊಳ್ಳುವಷ್ಟು ಸಂಖ್ಯಾಬಲ ಇರದಿದ್ದರೂ ಅಭ್ಯರ್ಥಿಯನ್ನು ಕಣಕ್ಕೆ ಇಳಿಸಿದ್ದ ಜೆಡಿಎಸ್‌ಗೆ ದೊಡ್ಡ ಹಿನ್ನಡೆಯಾಗಿದೆ.

ಕಾಂಗ್ರೆಸ್‌ನ ಐದೂ ಅಭ್ಯರ್ಥಿಗಳು ಗೆಲ್ಲುವುದು ನಿಕ್ಕಿಯಾಗಿತ್ತು. ಅದಕ್ಕೆ ಅಗತ್ಯವಿದ್ದ ಬೇರೆ ಪಕ್ಷಗಳ ಕೆಲವು ಮತಗಳು ಪಕ್ಷದ ಅಭ್ಯರ್ಥಿಗಳಿಗೆ ಬೀಳಬಹುದೆಂಬ ಲೆಕ್ಕಾಚಾರ ಇತ್ತು.

▸7

ಫಲಿತಾಂಶ

ಅಭ್ಯರ್ಥಿ	ಪಕ್ಷ	ಪಡೆದ ಮತಗಳು
ಬಿ.ಕೆ. ಹರಿಪ್ರಸಾದ್	ಕಾಂಗ್ರೆಸ್	30
ಪಿ.ವಿ. ಮೋಹನ್	ಕಾಂಗ್ರೆಸ್	29
ಬಿ.ಎಸ್. ಶಿವಣ್ಣ	ಕಾಂಗ್ರೆಸ್	30
ತಿಪ್ಪಣಪ್ಪ ಕಮಕನೂರ	ಕಾಂಗ್ರೆಸ್	30
ವಿನಯ್ ಕಾರ್ತಿಕ್	ಕಾಂಗ್ರೆಸ್	32
ರಘು ಕೌಟಿಲ್ಯ	ಬಿಜೆಪಿ	29
ಲಿಂಗರಾಜ ಪಾಟೀಲ	ಬಿಜೆಪಿ	27
ಗೋವಿಂದರಾಜು	ಜೆಡಿಎಸ್	14

‘ಶಿಸ್ತಿ’ನ ಪಕ್ಷಕ್ಕೆ ಆಘಾತ

‘ಶಿಸ್ತಿ’ನ ಪಕ್ಷವೆಂದೇ ಹೇಳಿಕೊಳ್ಳುವ ಬಿಜೆಪಿಗೆ ವಿಧಾನಪರಿಷತ್ ಚುನಾವಣೆ ದೊಡ್ಡ ಆಘಾತವನ್ನೇ ಕೊಟ್ಟಿದೆ. ಹಿಂದೆಯೂ ಕರ್ನಾಟಕದಲ್ಲಿ ರಾಜ್ಯಸಭೆ, ಪರಿಷತ್ತಿನ ಚುನಾವಣೆಗಳಲ್ಲಿ ಬಿಜೆಪಿ ಶಾಸಕರು ‘ಅಡ್ಡಮತದಾನ’ ಮಾಡಿದ್ದರು.

▸7

222	1	221
ಚಲಾವಣೆಯಾದ ಮತ	ಅಸಿಂಧುಗೊಂಡ ಮತ	ಮಾನ್ಯತೆ ಪಡೆದ ಮತ

ಗೆದ್ದ ಡಿಕೆಶಿ ‘ಚಮತ್ಕಾರ’

ಬಿಜೆಪಿ– ಜೆಡಿಎಸ್ ಶಾಸಕರು ಅಡ್ಡ ಮತದಾನ ಮಾಡಿದ ಪರಿಣಾಮ ಕಾಂಗ್ರೆಸ್‌ಗೆ ಹೆಚ್ಚುವರಿಯಾಗಿ 11 ಮತಗಳು ಬಂದಿವೆ. ಆ ಮೂಲಕ, ತಮ್ಮ ಅತ್ಯಾಪ್ತ, ಪಕ್ಷದ ಐದನೇ ಅಭ್ಯರ್ಥಿ ವಿನಯ್ ಕಾರ್ತಿಕ್ ಅವರನ್ನು ಅತಿ ಹೆಚ್ಚು ಮತಗಳಿಂದ ಗೆಲ್ಲಿಸಿಕೊಳ್ಳಲು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೆಣೆದಿದ್ದ ತಂತ್ರಗಾರಿಕೆ ಫಲ ನೀಡಿದೆ.

ತನ್ನ ಪಕ್ಷದ ಶಾಸಕರನ್ನು ಬಿಡದಿ ಬಳಿಯ ವಂಡರ್ ಲಾ ರೆಸಾರ್ಟ್‌ನಲ್ಲಿ ಎರಡು ದಿನ ಕೂಡಿಹಾಕಿದ್ದ ಶಿವಕುಮಾರ್, ‘ನಿಮ್ಮಲ್ಲಿ ಅನೇಕರಿಗೆ ಜೆಡಿಎಸ್ ನಾಯಕರ ಕಡೆಯಿಂದ ಆಮಿಷದ ಕರೆಗಳು ಬಂದಿರಬಹುದು. ಆದರೆ, ಯಾವ ಕಾರಣಕ್ಕೂ ಅವರ ಆಮಿಷಗಳಿಗೆ ಬಲಿಯಾಗಬೇಡಿ. ಪಕ್ಷದಲ್ಲಿ ಪ್ರತಿಯೊಬ್ಬರ ಚಲನವಲನದ ಮೇಲೂ ಹದ್ದಿನ ಕಣ್ಣಿಟ್ಟಿದ್ದೇವೆ’ ಎಂದು ಎಚ್ಚರಿಕೆ ನೀಡಿದ್ದರು.

ಶಾಸಕಾಂಗ ಪಕ್ಷದ ಸಭೆಯಲ್ಲಿ ಶಿವಕುಮಾರ್ ಆಡಿದ ಮಾತೇ ಬೇರೆ, ನಡೆದ ದಾರಿಯೇ ಭಿನ್ನವಾಗಿದೆ. ವಿಪಕ್ಷಗಳ ನಾಯಕರ ಗಮನ ಸೆಳೆದು, ಆ ಪಕ್ಷಗಳ ಶಾಸಕರನ್ನು ಸೆಳೆಯಲು ನಡೆಸಿದ ಚಮತ್ಕಾರ ಯಶಸ್ಸು ತಂದುಕೊಟ್ಟಿದೆ. ಪಕ್ಷಗಳ ಬಲಾಬಲದ ಲೆಕ್ಕಾಚಾರದಲ್ಲಿ ಕಾಂಗ್ರೆಸ್‌ನ ಐದನೇ ಅಭ್ಯರ್ಥಿಗೆ ಗೆಲುವಿಗೆ ಅಗತ್ಯವಾದ ಮತಗಳ ಕೊರತೆ ಎದುರಾಗಿತ್ತು. ಹೀಗಾಗಿ, ಕಾಂಗ್ರೆಸ್‌ನಿಂದ ಯಾವುದೇ ಅಡ್ಡ ಮತದಾನ ಆಗದಂತೆ ಎಚ್ಚರಿಕೆಯ ಹೆಜ್ಜೆ ಇಟ್ಟಿದ್ದ ಶಿವಕುಮಾರ್, ಆಪ್ತನನ್ನು ಶತಾಯಗತಾಯ ಗೆಲ್ಲಿಸಿಕೊಳ್ಳಲೇಬೇಕೆಂದು ಬಿಜೆಪಿ, ಜೆಡಿಎಸ್ ಶಾಸಕರತ್ತ ಚಿತ್ತ ಹರಿಸಿದ್ದರು.

‘ಕಾಂಗ್ರೆಸ್‌ಗೆ ಪಕ್ಷಾತೀತ ಬೆಂಬಲ’

‘ವಿಧಾನ ಪರಿಷತ್ ಚುನಾವಣೆಯಲ್ಲಿ ನಮ್ಮ ಸರ್ಕಾರಕ್ಕೆ ಶಾಸಕರ ಬೆಂಬಲ ನೋಡಿ ನನಗೆ ಆಶ್ಚರ್ಯವಾಗಿದೆ. ಇದು ನಮ್ಮ ಸರ್ಕಾರಕ್ಕೆ ಮಾತ್ರ ನೀಡಿರುವ ಬೆಂಬಲವಲ್ಲ. ರಾಜ್ಯದ ಜನತೆಯ ಹಿತಕ್ಕಾಗಿ ನಿಮ್ಮ ಜೊತೆ ಇದ್ದೇವೆ ಎಂದು ನೀಡಿರುವ ಬೆಂಬಲ’ ಎಂದು ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

‘ನಾವು ಯಾವ ಹೆಜ್ಜೆಯನ್ನಿಟ್ಟು ಮುಂದುವರಿಯುತ್ತಿದ್ದೇವೆಯೊ ಅದಕ್ಕೆ ನಾವೂ ಜೊತೆಗಿದ್ದೇವೆ ಎಂದು ಪಕ್ಷಾತೀತವಾಗಿ ಶಾಸಕರು ಬೆಂಬಲ ನೀಡಿದ್ದಾರೆ. ನಮ್ಮ ಪಕ್ಷದ ಶಾಸಕರೂ ಒಗ್ಗಟ್ಟಾಗಿ ಬೆಂಬಲಿಸಿದ್ದಾರೆ. ನಮಗೆ ಹೆಚ್ಚಿನ ಮತ ನೀಡಿದ ಬೇರೆ, ಬೇರೆ ಪಕ್ಷಗಳ ವಿಶ್ವಾಸವನ್ನು ನಾವು ಉಳಿಸಿಕೊಳ್ಳುತ್ತೇವೆ. ನಿಮ್ಮ ಭಾವನೆಯನ್ನು ಅರಿತುಕೊಂಡು ನಿಮ್ಮ ಸೇವೆಯಲ್ಲಿ ಮುಂದುವರಿಯುತ್ತೇವೆ. ನೀವು ನಮಗೆ ನೀಡಿದ ವಿಶ್ವಾಸ ಜನರಿಗೆ ನೀಡಿದ ಶಕ್ತಿ’ ಎಂದು ಅಡ್ಡ ಮತದಾನ ಮಾಡಿದ ಶಾಸಕರ ನಡೆಯನ್ನು ಬಣ್ಣಿಸಿದರು.

ಶಿಂದೆ ಬಣದತ್ತ ಭಿನ್ನಮತೀಯರು

ನವದೆಹಲಿ (ಪಿಟಿಐ): ಗುರುವಾರ ಇಲ್ಲಿ ನಡೆದ ಸಂಸದೀಯ ಪಕ್ಷದ ಸಭೆಗೆ ಗೈರಾಗುವ ಮೂಲಕ ವಿಪ್ ಉಲ್ಲಂಘಿಸಿದ ಆರು ಸಂಸದರಿಗೆ ಶಿವಸೇನಾ (ಯುಬಿಟಿ) ನೋಟಿಸ್ ಜಾರಿಗೊಳಿಸಿದ್ದು, ‘ಅನರ್ಹತೆ’ಗೊಳಿಸುವ ಕಠಿಣ ಎಚ್ಚರಿಕೆ ನೀಡಿದೆ.

ವಿವರ ▸11

ಶಾಂತಿ ಒಪ್ಪಂದಕ್ಕೆ ಟ್ರಂಪ್, ಪೆಜೆಶ್ಕಿಯಾನ್ ಸಹಿ

ವಾಷಿಂಗ್ಟನ್/ ಇಸ್ಲಾಮಾಬಾದ್ (ಎಎಫ್‌ಪಿ/ ಪಿಟಿಐ): ಪಶ್ಚಿಮ ಏಷ್ಯಾ ಯುದ್ಧವನ್ನು ಕೊನೆಗೊಳಿಸುವ ಶಾಂತಿ ಒಪ್ಪಂದಕ್ಕೆ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹಾಗೂ ಇರಾನ್‌ನ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರು ಪ್ರತ್ಯೇಕವಾಗಿ ಸಹಿ ಹಾಕಿದ್ದಾರೆ.

ಒಪ್ಪಂದದಂತೆ ಹೊರ್ಮುಜ್ ಜಲಸಂಧಿಯು ಹಡಗುಗಳ ಸಂಚಾರಕ್ಕೆ ಮುಕ್ತಗೊಳ್ಳಲಿರುವ ಕಾರಣ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಗುರುವಾರ ತೈಲ ಬೆಲೆಯಲ್ಲಿ ಇಳಿಕೆ ಕಂಡಿದೆ. ಪ್ಯಾರಿಸ್‌ನ ಹೊರವಲಯದ ವೆರ್ಸೈನಲ್ಲಿರುವ ಅರಮನೆಯಲ್ಲಿ ಫ್ರಾನ್ಸ್ ಅಧ್ಯಕ್ಷ ಇಮ್ಯಾನುಯೆಲ್ ಮ್ಯಾಕ್ರನ್ ಬುಧವಾರ ರಾತ್ರಿ ಏರ್ಪಡಿಸಿದ್ದ ಔತಣ ಕೂಟದ ಸಂದರ್ಭದಲ್ಲಿ ಟ್ರಂಪ್ ಅವರು ಒಪ್ಪಂದಕ್ಕೆ ಸಹಿ ಹಾಕಿದ್ದಾರೆ. ಮತ್ತೊಂದೆಡೆ, ಇರಾನ್ ಅಧ್ಯಕ್ಷ ಮಸೂದ್ ಪೆಜೆಶ್ಕಿಯಾನ್ ಅವರು ಗುರುವಾರ ಒಪ್ಪಂದಕ್ಕೆ ಸಹಿ ಹಾಕಿದ್ದಾರೆ.

‘ಶಾಂತಿ ಒಪ್ಪಂದಕ್ಕೆ ಪೆಜೆಶ್ಕಿಯಾನ್ ಅವರು ಸಹಿ ಹಾಕಿದ್ದು, ಒಪ್ಪಂದದ ಅಂಶಗಳನ್ನು ಅನುಷ್ಠಾನಕ್ಕೆ ತರುವ ಸಮಯ ಬಂದಿದೆ’ ಎಂದು ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ ಇಸ್ಮಾಯಿಲ್ ಬಘಾಯಿ ಹೇಳಿದ್ದಾರೆ.

▸10

ಟ್ರಂಪ್ ಹಾಗೂ ಪೆಜೆಶ್ಕಿಯಾನ್ ಅವರು ಸಹಿ ಹಾಕಿದ ಬಳಿಕ ಶಾಂತಿ ಒಪ್ಪಂದದ ಪ್ರತಿಯನ್ನು ಪ್ರದರ್ಶಿಸಿದರು
—ಎಎಫ್‌ಪಿ ಚಿತ್ರ

ನಿಮ್ಮ ಹಳೆಯ ಚಿನ್ನದಿಂದ
ನಿಮ್ಮ ಹಣಕ್ಕಿಂತ ಹೆಚ್ಚಿನ
ಚಿನ್ನವನ್ನು ಖರೀದಿಸಬಹುದು.
ಇಂದೇ ಎಕ್ಸ್‌ಚೇಂಜ್ ಮಾಡಿಕೊಳ್ಳಿ!

ಪ್ರತಿ ಗ್ರಾಂಗೆ ಹಳೆಯ ಚಿನ್ನಾಭರಣಗಳ ಎಕ್ಸ್‌ಚೇಂಜ್‌ನ ಮೇಲೆ
₹550*
ಹೆಚ್ಚಾಗಿ ಪಡೆಯಿರಿ.

ಪ್ರತಿ 8 ಗ್ರಾಂಗೆ
₹4400* ವರೆಗೆ ಉಳಿತಾಯ

ಯಾವುದೇ ಜ್ಯುವೆಲರಿಯಿಂದ ಖರೀದಿಸಿದ
ಯಾವುದೇ ಕ್ಯಾರೆಟ್‌ನ ಹಳೆಯ ಚಿನ್ನವನ್ನು ವಿನಿಮಯ
ಮಾಡಿಕೊಂಡರೆ 0% ಕಡಿತ*

PRINCE JEWELLERY

BENGALURU: 11th Main Road, Near Cosmopolitan Club, 3rd Block, Jayanagar. Ph: 080-4264 9999

*Terms and conditions apply. Offer not applicable for gold coins and bullions. This offer cannot be combined with any other offers and closure of advance purchase plan. The offer on silver articles is not valid for exchange. Limited period offer. Ample car parking space available in all our showrooms. www.princejewellery.com. Open on Sundays.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ ಇರಲಿದ್ದು, ತುಂತುರು ಮಳೆಯಾಗುವ ಸಾಧ್ಯತೆ ಇದೆ

ಕೃಷಿ ಭೂಮಿ ಹಂಚಿಕೆಗೆ ಆಗ್ರಹ

ಬೆಂಗಳೂರು: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಭೂರಹಿತರಿಗೆ ಕೃಷಿ ಭೂಮಿ ಹಂಚಿಕೆ ಮಾಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಸ್ವಾತಂತ್ರ್ಯ ಉದ್ಯಾನದಲ್ಲಿ ಇತ್ತೀಚೆಗೆ ಅಂಬೇಡ್ಕರ್ ಸ್ವಾಭಿಮಾನಿ ಸೇನೆ ಪ್ರತಿಭಟನೆ ನಡೆಸಿತು. ಸಂವಿಧಾನಬದ್ಧವಾಗಿ ಅರ್ಹರಿಗೆ ಸಿಗಬೇಕಾದ ಸೌಲಭ್ಯಗಳನ್ನು ಕಲ್ಪಿಸಲು ಸರ್ಕಾರ ಮುಂದಾಗಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಸರ್ಕಾರಿ ವಿದ್ಯಾರ್ಥಿನಿಲಯಗಳಲ್ಲಿ ಹಾಗೂ ಶಾಲಾ, ಕಾಲೇಜುಗಳಲ್ಲಿ ಅರಿವಿನ ಕಾರ್ಯಕ್ರಮಕ್ಕಾಗಿ ಲಕ್ಷಾಂತರ ರೂಪಾಯಿ ಅನುದಾನ ನೀಡಲಾಗುತ್ತಿದೆ. ಎಸ್‌ಸಿಎಸ್‌ಪಿ ಮತ್ತು ಟಿಎಸ್‌ಪಿ ಅನುದಾನವನ್ನು ದುರುಪಯೋಗ ಮಾಡಿಕೊಂಡು ಸಮುದಾಯಕ್ಕೆ ಅನ್ಯಾಯ ಮಾಡಲಾಗುತ್ತಿದೆ ಎಂದು ಆರೋಪಿಸಿದರು.

ಪಿಎಂವಿಬಿಆರ್‌ವೈ ಪ್ರೋತ್ಸಾಹಧನ ವಿತರಣೆ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರದ 'ಪ್ರಧಾನಮಂತ್ರಿ ವಿಕಸಿತ ಭಾರತ ರೋಜಗಾರ್ ಯೋಜನೆ' (ಪಿಎಂವಿಬಿಆರ್‌ವೈ) ಅಡಿಯಲ್ಲಿ ಪ್ರೋತ್ಸಾಹಧನ ಬಿಡುಗಡೆ ಕಾರ್ಯಕ್ರಮವನ್ನು ಕಾರ್ಮಿಕರ ಭವಿಷ್ಯನಿಧಿ ಕೇಂದ್ರದ ವಿವಿಧ ವಲಯಗಳ ವತಿಯಿಂದ ಬೇರೆ ಬೇರೆ ಕೇಂದ್ರಗಳಲ್ಲಿ ಜೂನ್ 19ರಂದು ಸಂಜೆ 4ಕ್ಕೆ ಹಮ್ಮಿಕೊಳ್ಳಲಾಗಿದೆ.

ಬೆಂಗಳೂರು (ಕೇಂದ್ರ), ಬೆಳ್ಳಂದೂರು, ಎಲೆಕ್ಟ್ರಾನಿಕ್ ಸಿಟಿ, ಇಂದಿರಾನಗರ, ಕೋರಮಂಗಲ, ಮಲ್ಲೇಶ್ವರ, ಪೀಣ್ಯ, ಯಲಹಂಕ, ಕೆ.ಆರ್. ಪುರ, ಆರ್.ಆರ್. ನಗರ, ತುಮಕೂರು ವಲಯ ಕೇಂದ್ರಗಳ ವತಿಯಿಂದ 13 ಸ್ಥಳಗಳಲ್ಲಿ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ಇದಲ್ಲದೇ ರಾಜ್ಯದ ವಿವಿಧ ಭಾಗಗಳ ಉದ್ಯೋಗಿಗಳಿಗೆ ನೆರವಾಗಲು 11 ಕಡೆಗಳಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

ಬೆಂಗಳೂರು ಮತ್ತು ಸುತ್ತಮುತ್ತಲ 13 ಕೇಂದ್ರಗಳಲ್ಲಿ 84,121 ಉದ್ಯೋಗಿಗಳಿಗೆ ₹55.85 ಕೋಟಿ, 6,014 ಉದ್ಯೋಗದಾತರಿಗೆ ₹222.01 ಕೋಟಿ ಪ್ರೋತ್ಸಾಹಧನ ವಿತರಣೆಯಾಗಲಿದೆ.

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ದೆಹಲಿಯ ವಿಜ್ಞಾನ ಭವನದಲ್ಲಿ ಸಂಜೆ 5ಕ್ಕೆ ಈ ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದು, ಮೊದಲ ಬಾರಿಗೆ ಉದ್ಯೋಗ ಪಡೆದವರಿಗೆ ₹15,000ದ ವರೆಗೆ ಪ್ರೋತ್ಸಾಹಧನದಂತೆ ದೇಶದಲ್ಲಿ ಒಟ್ಟು ₹2,400 ಕೋಟಿ ಸಹಾಯಧನ ವಿತರಣೆ ಆಗಲಿದೆ.

ನಿರಂತರ ಉದ್ಯೋಗ ಸೃಷ್ಟಿಯನ್ನು ಉತ್ತೇಜಿಸಲು, ಅರ್ಹ ಉದ್ಯೋಗದಾತರಿಗೆ ಪ್ರತಿ ಹೆಚ್ಚುವರಿ ಉದ್ಯೋಗಿಗೆ ತಿಂಗಳಿಗೆ ₹3,000ದ ವರೆಗೆ ಪ್ರೋತ್ಸಾಹಧನ ಸಿಗಲಿದೆ. ಉದ್ಯೋಗ ಸೃಷ್ಟಿ ಮತ್ತು ಸಾಮಾಜಿಕ ಭದ್ರತೆಯ ವ್ಯಾಪ್ತಿಯನ್ನು ವಿಸ್ತರಿಸಲು ಪಿಎಂ-ವಿಬಿಆರ್‌ವೈ ರೂಪಿಸಲಾಗಿದ್ದು, 15 ಲಕ್ಷ ಫಲಾನುಭವಿಗಳಿಗೆ ಉದ್ಯೋಗಾವಕಾಶ ಒದಗಿಸಲು ನೆರವಾಗಿದೆ.

ಪಿಎಂ-ವಿಬಿಆರ್‌ವೈ ಯೋಜನೆ 2025ರ ಆಗಸ್ಟ್ 1ರಂದು ಜಾರಿಗೆ ಬಂದಿದೆ. ಒಟ್ಟು ₹99,446 ಕೋಟಿ ವೆಚ್ಚದ ಈ ಯೋಜನೆಯು ಎರಡು ವರ್ಷಗಳ ಅವಧಿಯಲ್ಲಿ 3.5 ಕೋಟಿಗೂ ಹೆಚ್ಚು ಉದ್ಯೋಗ ಸೃಷ್ಟಿಗೆ ಪ್ರೋತ್ಸಾಹ ನೀಡುವ ಗುರಿಯನ್ನು ಹೊಂದಿದೆ. ಇವುಗಳಲ್ಲಿ ಅಂದಾಜು 1.92 ಕೋಟಿ ಫಲಾನುಭವಿಗಳು ಮೊದಲ ಬಾರಿಗೆ ಉದ್ಯೋಗ ಕ್ಷೇತ್ರಕ್ಕೆ ಪ್ರವೇಶಿಸುವವರಾಗಿರುತ್ತಾರೆ ಎಂದು ನಿರೀಕ್ಷಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ನೈಋತ್ಯ ರೈಲ್ವೆ

ರೈಲ್ವೆ ಸಚಿವಾಲಯ

ಅಧಿಸೂಚನೆ

ಬೆಂಗಳೂರು, 2ನೇ ಜೂನ್ 2026

ಎಸ್.ಒ. 2800(ಇ) – ರೈಲ್ವೆ ಕಾಯ್ದೆ–1989 (1989 ರ 24)ರ ಕಲಂ 20(ಎ) ರಡಿ, ಕೇಂದ್ರ ಸರ್ಕಾರವು ಸಾರ್ವಜನಿಕ ಉದ್ದೇಶಕ್ಕಾಗಿ ಅಂದರೆ "ವಿಶೇಷ ರೈಲ್ವೆ ಯೋಜನೆಯ ಲೆವೆಲ್ ಕ್ರಾಸಿಂಗ್ ಸಂಖ್ಯೆ: 56 (ಬೆಣಚಗೆರೆ ಗೇಟ್) ಬೆಣಚಗೆರೆ ಮತ್ತು ಎನ್. ಮತ್ತಿಘಟ್ಟ ಗ್ರಾಮದ ಸರ್ವೆ ನಂಬರ್‌ಗಳಲ್ಲಿ ಮೇಲ್ಸೇತುವೆ ಹಾಗೂ ಸರ್ವೀಸ್ ರಸ್ತೆ ನಿರ್ಮಾಣ ಕಾರ್ಯಕ್ಕಾಗಿ ಭೂಸ್ವಾಧೀನಪಡಿಸಿಕೊಳ್ಳಲು ಉದ್ದೇಶಿಸಿ ಸದರಿ ಅಧಿಸೂಚನೆ ಘೋಷಿಸಿರುತ್ತದೆ.

ಸದರಿ ಭೂಸ್ವಾಧೀನಕ್ಕೆ ಸಂಬಂಧಿಸಿದಂತೆ ಆಸ್ತಕಿಯುಳ್ಳವರು ತಮ್ಮ ಆಕ್ಷೇಪವಿದ್ದಲ್ಲಿ, ಆಕ್ಷೇಪಣೆಗಳನ್ನು ಈ ಅಧಿಸೂಚನೆ ಪ್ರಕಟಗೊಂಡ 30 ದಿನಗಳೊಳಗಾಗಿ ಈ ಕಾರ್ಯಾಲಯಕ್ಕೆ ರೈಲ್ವೆ ಕಾಯ್ದೆ–1989ರ ಕಲಂ 20ಡಿ(1) ರಂತೆ ಸಲ್ಲಿಸಬೇಕು. ತದನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ಯಾವುದೇ ಮುನ್ಸೂಚನೆ ನೀಡದೇ ವಿಲೇ ಮಾಡಲಾಗುವುದು.

ಅಂತಹ ಆಕ್ಷೇಪಣೆಗಳನ್ನು ಲೆವೆಲ್ ಕ್ರಾಸಿಂಗ್ ಸಂಖ್ಯೆ ಸಂಖ್ಯೆ: 56 (ಬೆಣಚಗೆರೆ ಗೇಟ್) ಬೆಣಚಗೆರೆ ಮತ್ತು ಎನ್. ಮತ್ತಿಘಟ್ಟ ಗ್ರಾಮದ ಸರ್ವೆ ನಂಬರ್‌ಗಳಲ್ಲಿ ಮೇಲ್ಸೇತುವೆ ಹಾಗೂ ಸರ್ವೀಸ್ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿ, ತುಮಕೂರು–ರಾಯದುರ್ಗ, ತುಮಕೂರು–ದಾವಣಗೆರೆ ಹಾಗೂ ವಿಶೇಷ ರೈಲ್ವೆ ಯೋಜನೆ, ತುಮಕೂರು ರವರಿಗೆ ಖುದ್ದಾಗಿ ಅಥವಾ ವಕೀಲರ ಮುಖಾಂತರವಾಗಿ ಸಲ್ಲಿಸಿದ್ದ ಆಕ್ಷೇಪಣೆಗಳನ್ನು ವಿಚಾರಣೆ ನಡೆಸಿ, ಮುಂದಿನ ಕ್ರಮ ವಹಿಸಲಾಗುವುದು.

ಸಕ್ಷಮ ಪ್ರಾಧಿಕಾರವು ರೈಲ್ವೆ ಕಾಯ್ದೆ–1989 ರ ಕಲಂ 20ಡಿ(2) ರಂತೆ ನೀಡಿರುವ ಆದೇಶವು ಅಂತಿಮವಾಗಿರುತ್ತದೆ.

ಈ ಅಧಿಸೂಚನೆಗೆ ಸಂಬಂಧಿಸಿದ ನಕ್ಷೆ ಹಾಗೂ ಜಮೀನಿನ ವಿವರಗಳನ್ನು ಸಕ್ಷಮ ಪ್ರಾಧಿಕಾರ ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿ, ತುಮಕೂರು–ರಾಯದುರ್ಗ, ತುಮಕೂರು–ದಾವಣಗೆರೆ ಹಾಗೂ ವಿಶೇಷ ರೈಲ್ವೆ ಯೋಜನೆ, ತುಮಕೂರು ರವರ ಕಾರ್ಯಾಲಯದಲ್ಲಿ ಪರಿಶೀಲಿಸಬಹುದು.

ಅನುಸೂಚಿ

ಲೆವೆಲ್ ಕ್ರಾಸಿಂಗ್ ಸಂಖ್ಯೆ ಸಂಖ್ಯೆ: 56 (ಬೆಣಚಗೆರೆ ಗೇಟ್) ಬೆಣಚಗೆರೆ ಮತ್ತು ಎನ್. ಮತ್ತಿಘಟ್ಟ ಗ್ರಾಮದ ಸರ್ವೆ ನಂಬರ್‌ಗಳಲ್ಲಿ ಮೇಲ್ಸೇತುವೆ ಹಾಗೂ ಸರ್ವೀಸ್ ರಸ್ತೆ ನಿರ್ಮಾಣಕ್ಕೆ ಸಂಬಂಧಿಸಿದ ಜಮೀನಿನ ವಿವರ ಈ ಕೆಳಕಂಡಂತಿದೆ.

ಜಿಲ್ಲೆ: ತುಮಕೂರು,
ತಾಲ್ಲೂಕು: ಗುಬ್ಬಿ,
ಹೋಬಳಿ: ನಿಟ್ಟೂರು,
ಗ್ರಾಮ: ಎನ್.ಮತ್ತಿಘಟ್ಟ

ಕ್ರ. ಸಂ.	ಸರ್ವೆ ನಂ.	ಆರ್.ಟಿ.ಸಿ. ಯಂತೆ ಖಾತೆದಾರರ ಹೆಸರು	ಭೂಸ್ವಾಧೀನ ವಿಸ್ತೀರ್ಣ (ಎ–ಗು)				ತರಹೆ	ಷರಾ
			ಐನ್	ಎ ಖರಾಬು	ಬಿ ಖರಾಬು	ಬಾಕಿ		
1	57/6	ಎಂ. ಬಿ. ಬಸವಲಿಂಗಯ್ಯ ಬಿನ್ ಬಸಪ್ಪ	0–02 1/2	–	–	0–02 1/2	ಖುಷ್ಕಿ	–
ಒಟ್ಟು			**0–02 1/2**	–	–	**0–02 1/2**	–	–

ಜಿಲ್ಲೆ: ತುಮಕೂರು,
ತಾಲ್ಲೂಕು: ಗುಬ್ಬಿ,
ಹೋಬಳಿ: ನಿಟ್ಟೂರು,
ಗ್ರಾಮ: ಬೆಣಚಗೆರೆ

ಕ್ರ. ಸಂ.	ಸರ್ವೆ ನಂ.	ಆರ್.ಟಿ.ಸಿ. ಯಂತೆ ಖಾತೆದಾರರ ಹೆಸರು	ಭೂಸ್ವಾಧೀನ ವಿಸ್ತೀರ್ಣ (ಎ–ಗು)				ತರಹೆ	ಷರಾ
			ಐನ್	ಎ ಖರಾಬು	ಬಿ ಖರಾಬು	ಬಾಕಿ		
1	54	ಬಿ.ಎಸ್. ಲಿಂಗಣ್ಣ ಬಿನ್ ಶಿವಣ್ಣ	0–14 1/2	–	0–02	0–12 1/2	ಖುಷ್ಕಿ	–
2	121	ರಂಗಸ್ವಾಮಯ್ಯ ಬಿನ್ ಚಿಣ್ಣಯ್ಯ, ಶಿವಣ್ಣ ಬಿನ್ ಚಿಣ್ಣಯ್ಯ, ಚಂದ್ರಯ್ಯ ಬಿನ್ ಚಿಣ್ಣಯ್ಯ (ಜಂಟಿ), ರಂಗನರಸಮ್ಮ ಕೋಂ ಗಂಗಯ್ಯ, ಕಾವೇರಿ ನೀರಾವರಿ ನಿಗಮಕ್ಕೆ ಭೂಸ್ವಾಧೀನ, ಚಿಕ್ಕಮ್ಮ ಕೋಂ ಲೇಟ್ ದೊಡ್ಡಯ್ಯ, ನರಸಿಂಹಯ್ಯ ಬಿನ್ ಲೇಟ್ ಕೆಂಚಯ್ಯ, ಚಿಕ್ಕಣ್ಣ ಬಿನ್ ಲೇಟ್ ಕೆಂಚಯ್ಯ, ಭದ್ರಯ್ಯ ಬಿನ್ ಲೇಟ್ ಕೆಂಚಯ್ಯ (ಜಂಟಿ), ಲೋಕಮ್ಮ ಕೋಂ ಲೇಟ್ ಕಾಳಯ್ಯ	0–03	–	0–00 1/2	0–02 1/2	ಖುಷ್ಕಿ	–
3	40	ಸರ್ಕಾರಿ ಗೋಮಾಳ, ರಂಗಸ್ವಾಮಯ್ಯ ಬಿನ್ ಗಂಗಯ್ಯ ಮುನಿಯಮ್ಮ ಕೋಂ ರಂಗಸ್ವಾಮಯ್ಯ(ಜಂಟಿ), ಭದ್ರಕಾಳಮ್ಮ ಕೋಂ ಚಿಕ್ಕಣ್ಣ, ಭಾಗ್ಯಮ್ಮ ಕೋಂ ಲೇ ವೀರಭದ್ರಯ್ಯ ರವೀಶ್ ಬಿ ಬಿನ್ ಲೇ ವೀರಭದ್ರಯ್ಯ ಈರಣ್ಣ ಬಿ ಬಿನ್ ಲೇ ವೀರಭದ್ರಯ್ಯ (ಜಂಟಿ), ಚಿಕ್ಕಣ್ಣ ಬಿನ್ ಕೆಂಚಯ್ಯ, ಹನುಮಂತಯ್ಯ ಬಿನ್ ಪಾಪಣ್ಣ, ಎಸ್ ಗಂಗಪ್ಪ ಬಿನ್ ಸಿದ್ದರಾಮಯ್ಯ, ಭಾಗ್ಯಮ್ಮ ಕೋಂ ಲೇ ವೀರಭದ್ರಯ್ಯ ರವೀಶ್ ಬಿ ಬಿನ್ ಲೇ ವೀರಭದ್ರಯ್ಯ ಈರಣ್ಣ ಬಿ ಬಿನ್ ಲೇ ವೀರಭದ್ರಯ್ಯ (ಜಂಟಿ), ಕಾಳಯ್ಯ ಬಿನ್ ನರಸಯ್ಯ, ಬೋಜ ಬಿನ್ ರೇಣುಕಯ್ಯ, ರಂಗಸ್ವಾಮಯ್ಯ ಬಿನ್ ನರಸಯ್ಯ, ರಂಗಸ್ವಾಮಯ್ಯ ಬಿನ್ ಚಿಣ್ಣಯ್ಯ, ಕಾಳಮ್ಮ ಕೋಂ ಚನ್ನಬಸಪ್ಪ, ನರಸಯ್ಯ ಬಿನ್ ರಂಗಯ್ಯ, ಚಿಕ್ಕಣ್ಣ ಹೆಂಡತಿ ದೇವಿರಮ್ಮ, ವೀರಭದ್ರಯ್ಯ ಬಿನ್ ಕೆಂಚಯ್ಯ ರೇಣುಕಮ್ಮ ಕೋಂ ಕೆಂಪಯ್ಯ (ಜಂಟಿ), ಗೌರಮ್ಮ ಕೋಂ ಲೇಟ್ ನಂಜುಂಡಪ್ಪ, ಬಿ.ಎನ್. ಶಿವಕುಮಾರ್ ಬಿನ್ ಲೇಟ್ ನಂಜುಂಡಪ್ಪ ಸುಧಾ ಕೋಂ ಬಿ ಎನ್ ಶಿವಕುಮಾರ್ ನಿಜಗುಣಯ್ಯ ಬಿನ್ ಲೇಟ್ ನಂಜುಂಡಯ್ಯ (ಜಂಟಿ), ನರಸಿಂಹಯ್ಯ ಬಿನ್ ಮೂಡಲಗಿರಯ್ಯ ದೊಡ್ಡಯ್ಯ ಬಿನ್ ಮೂಡಲಗಿರಯ್ಯ (ಜಂಟಿ), ಸುಜೀತ್ ಬಿನ್ ಲೇಟ್ ನಾಗರಾಜು	0–08 3/4	–	0–01	0–07 3/4	ಮಂಜೂರಿ	ಸದರಿ ಸ.ನಂ. 40 ಆಕಾರ ಬಂದಿನಂತೆ ಸರ್ಕಾರಿ ಗೋಮಾಳ ಆಗಿರುತ್ತದೆ. ಹಾಲಿ ಪಹಣಿಗಳಂತೆ ಖಾತೆದಾರರ ಹೆಸರುಗಳನ್ನು ನಮೂದಿಸಲಾಗಿದೆ.
4	41	ಲಕ್ಷ್ಮಿದೇವಮ್ಮ ಕೋಂ ಲೇಟ್ ಸೀಬಯ್ಯ ವೀರಣ್ಣ ಬಿನ್ ಲೇಟ್ ಸೀಬಯ್ಯ ದೊಡ್ಡಯ್ಯ ಬಿನ್ ಲೇಟ್ ಸೀಬಯ್ಯ (ಜಂಟಿ)	0–01	–	–	0–01	ಖುಷ್ಕಿ	–
5	42	ರೇವಯ್ಯ ಬಿನ್ ನರಸಯ್ಯ	0–01 1/2	–	–	0–01 1/2	ಖುಷ್ಕಿ	–
6	43	ಸರ್ಕಾರಿ	0–02	–	–	0–02	ಸರ್ಕಾರಿ	–
ಒಟ್ಟು			**0–30 3/4**	–	**0–03 1/2**	**0–27 1/4**	–	–

ಘೋಷ್ವಾರೆ

ಗ್ರಾಮ	ತರಹೆ	ವಿಸ್ತೀರ್ಣ (ಎ–ಗು)			
		ಒಟ್ಟು (ಎ–ಗು)	ಎ ಖರಾಬು (ಎ–ಗು)	ಬಿ ಖರಾಬು (ಎ–ಗು)	ಬಾಕಿ (ಎ–ಗು)
ಎನ್.ಮತ್ತಿಘಟ್ಟ	ಖುಷ್ಕಿ	0–02 1/2	–	–	0–02 1/2
ಬೆಣಚಗೆರೆ	ಮಂಜೂರಿ	0–08 3/4	–	0–01	0–07 3/4
	ಸರ್ಕಾರಿ	0–02	–	–	0–02
	ಖುಷ್ಕಿ	0–20	–	0–02 1/2	0–17 1/2
ಒಟ್ಟು	–	**0–33 1/4**	–	**0–03 1/2**	**0–29 3/4**

ನಂ.ಡಬ್ಲ್ಯೂ .271/ಸಿಎನ್/ಬಿಎನ್‌ಸಿ/2026–27/ಲ್ಯಾಂಡ್ ಎಸ್‌ಆರ್‌ಪಿ/1727

ವಿವರಗಳಿಗೆ **https://egazette.gov.in** ಗೆ ಲಾಗ್ ಆನ್ ಮಾಡಿ.

ಸಹಿ/–
ಪ್ರದೀಪ್ ಪುರಿ,
ಮುಖ್ಯ ಎಂಜಿನಿಯರ್–III, ನಿರ್ಮಾಣ, ಬೆಂಗಳೂರು ಕಂಟೋನ್ಮೆಂಟ್

ಪಿಯುಬಿ/227/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026–27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway-SWR | SWRRLY | @SWRAILWAYHQ | @sw_railways

ಶುಲ್ಕ ಪಾವತಿಗೆ ವಿಶೇಷ ಕೌಂಟರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇ-ಚಲನ್ ಮೂಲಕ ದಾಖಲಾಗಿರುವ ಸಂಚಾರ ನಿಯಮ ಉಲ್ಲಂಘನೆ ಪ್ರಕರಣಗಳ ದಂಡ ಪಾವತಿಗೆ ಶೇ 50ರಷ್ಟು ರಿಯಾಯಿತಿ ಘೋಷಿಸಿದ್ದು, ಶುಲ್ಕ ಪಾವತಿಗೆ ವಿಶೇಷ ಕೌಂಟರ್ ತೆರೆಯಲಾಗಿದೆ.

ಕರ್ನಾಟಕ ಸ್ಟೇಟ್ ಪೊಲೀಸ್ (ಕೆ.ಎಸ್.ಪಿ) ಆ್ಯಪ್, ಬಿಟಿಪಿ ಅಸ್ತ್ರಂ ಆ್ಯಪ್, ಹತ್ತಿರದ ಸಂಚಾರ ಪೊಲೀಸ್ ಠಾಣೆಗಳಲ್ಲಿ ವಾಹನದ ನೋಂದಣಿ ಸಂಖ್ಯೆ ವಿವರ ಒದಗಿಸಿ ದಂಡ ಪಾವತಿಸಬಹುದು.

ಅಲ್ಲದೇ ಈ ಕೆಳಕಂಡ ರಸ್ತೆ, ಜಂಕ್ಷನ್‌ಗಳಲ್ಲಿ ವಿಶೇಷ ಕೌಂಟರ್‌ಗಳಲ್ಲಿ ಪಾವತಿಸಬಹುದಾಗಿದೆ.

ರಿಂಗ್ ರಸ್ತೆಯ ಹೆಣ್ಣೂರು ರಸ್ತೆ, ಹಳೆ ಮದ್ರಾಸ್ ರಸ್ತೆಯ ದೇವಸಂದ್ರ ಜಂಕ್ಷನ್, ಕುಂದಲಹಳ್ಳಿ ಜಂಕ್ಷನ್, ಕೆ.ಜಿ.ರಸ್ತೆಯ ಮೈಸೂರು ಬ್ಯಾಂಕ್, ಮಾಗಡಿ ರಸ್ತೆಯ ಸುಮ್ಮನಹಳ್ಳಿ, ಮೈಸೂರು ರಸ್ತೆಯ ಮೆಟ್ರೊ (ಬಿಎಚ್‌ಇಎಲ್), 12ನೇ ಮುಖ್ಯ ರಸ್ತೆಯ ಆರ್‌ಟಿಒ ಕಚೇರಿ ಹತ್ತಿರ, ತುಮಕೂರು ರಸ್ತೆಯ ಜಾಲಹಳ್ಳಿ ಕ್ರಾಸ್ ಜಂಕ್ಷನ್, ಬಳ್ಳಾರಿ ರಸ್ತೆಯ ಹೆಬ್ಬಾಳ ಜಂಕ್ಷನ್, ಕೆ.ಜಿ. ರಸ್ತೆಯ ಸಾಗರ ಜಂಕ್ಷನ್, ಎಲೆಕ್ಟ್ರಾನಿಕ್ ಸಿಟಿ ರಸ್ತೆಯ ಹೊಸೂರು ರಸ್ತೆ ಜಂಕ್ಷನ್, ಬನ್ನೇರುಘಟ್ಟ ರಸ್ತೆಯ ಗೊಟ್ಟಿಗೆರೆ ಜಂಕ್ಷನ್.

ಸಂಚಾರ ನಿರ್ವಹಣಾ ಕೇಂದ್ರ, ಕರ್ನಾಟಕ ಒನ್ ವೆಬ್‌ಸೈಟ್ ಹಾಗೂ ಕರ್ನಾಟಕ ಒನ್ ಕೇಂದ್ರದಲ್ಲಿ ಪಾವತಿಸಬಹುದಾಗಿದೆ ಎಂದು ಸಂಚಾರಿ ಪೊಲೀಸರು ತಿಳಿಸಿದ್ದಾರೆ.

₹10.50 ಕೋಟಿ ಮೌಲ್ಯದ ಆಸ್ತಿ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರವು (ಬಿಡಿಎ) ಗುರುವಾರ ಕಾರ್ಯಾಚರಣೆ ನಡೆಸಿ, ಅಗ್ರಹಾರ ದಾಸರಹಳ್ಳಿಯಲ್ಲಿ ₹10.50 ಕೋಟಿ ಮೌಲ್ಯದ ಆಸ್ತಿ ವಶಪಡಿಸಿಕೊಂಡಿದೆ.

ಬೆಂಗಳೂರು ಉತ್ತರ ತಾಲ್ಲೂಕಿನ ಯಶವಂತಪುರ ಹೋಬಳಿಯ ಅಗ್ರಹಾರ ದಾಸರಹಳ್ಳಿ ಗ್ರಾಮದ ಸರ್ವೆ ನಂ. 14, 15/1, 2 ಮತ್ತು 3ರಲ್ಲಿ ಅನಧಿಕೃತ ಕಾಂಪೌಂಡ್ ತೆರವುಗೊಳಿಸಿ, ಸುಮಾರು ₹10.50 ಕೋಟಿ ಬೆಲೆ ಬಾಳುವ ಪ್ರದೇಶವನ್ನು ಪ್ರಾಧಿಕಾರವು ವಶಪಡಿಸಿಕೊಂಡಿತು.

ಪ್ರಾಧಿಕಾರದ ಕಾರ್ಯನಿರತ ಪಡೆಯ ಆರಕ್ಷಕ ಅಧೀಕ್ಷಕ, ಪಶ್ಚಿಮ ವಿಭಾಗದ ಕಾರ್ಯಪಾಲಕ ಎಂಜಿನಿಯರ್, ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಹಾಗೂ ಸ್ಥಳೀಯ ಪೊಲೀಸರು ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

ಐಎಎಸ್ ಅಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಆಯುಕ್ತ ಪಿ.ಮಣಿವಣ್ಣನ್ ಅವರಿಗೆ ನಗರ ಭೂಸಾರಿಗೆ ನಿರ್ದೇಶನಾಲಯದ ಆಯುಕ್ತ ಹುದ್ದೆಯ ಹೆಚ್ಚುವರಿ ಕಾರ್ಯಭಾರ ವಹಿಸಲಾಗಿದೆ.

ಎನ್.ವಿ.ಪ್ರಸಾದ್–ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಕಾರ್ಯದರ್ಶಿ, ತಳಸಿ ಮದ್ದಿನೇನಿ–ಉನ್ನತ ಶಿಕ್ಷಣ ಇಲಾಖೆ ಕಾರ್ಯದರ್ಶಿ, ಡಿ.ರಂದೀಪ್– ಪಂಚಾಯತ್ ರಾಜ್ ಇಲಾಖೆ ಕಾರ್ಯದರ್ಶಿ, ಕೆ.ಬಿ. ಶಿವಕುಮಾರ್–ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ, ವಿ.ರಾಮ್ ಪ್ರಸಾತ್ ಮನೋಹರ್–ಪ್ರವಾಸೋದ್ಯಮ ಕಾರ್ಯದರ್ಶಿ, ಬಿ.ಸಿ.ಸತೀಶ– ಕೃಷಿ ಇಲಾಖೆ ಆಯುಕ್ತ, ಅಕ್ರಂ ಪಾಶ–ರಾಷ್ಟ್ರೀಯ ಆರೋಗ್ಯ ಅಭಿಯಾನದ ನಿರ್ದೇಶಕ, ಕೆ.ನಿತೀಶ್–ಪೌರಾಡಳಿತ ನಿರ್ದೇಶನಾಲಯದ ವಿಶೇಷ ಆಯುಕ್ತ, ಜ್ಞಾನೇಂದ್ರ ಕುಮಾರ್ ಗಂಗ್ವಾರ್– ಸಣ್ಣ, ಅತಿಸಣ್ಣ, ಮಧ್ಯಮ ಉದ್ಯಮದ ನಿರ್ದೇಶಕ, ಗಜಾನನ್ ಬಲೆ–ಬಾಗಲಕೋಟೆ ಜಿಲ್ಲಾ ಪಂಚಾಯಿತಿ ಸಿಇಒ ಹುದ್ದೆಗೆ ವರ್ಗಾವಣೆ ಮಾಡಲಾಗಿದೆ.

ರಘುನಂದನ್ ಮೂರ್ತಿ ಅವರನ್ನು ಬಿಎಂಟಿಸಿ ವ್ಯವಸ್ಥಾಪಕ ನಿರ್ದೇಶಕರ ಹುದ್ದೆಗೆ ವರ್ಗಾಯಿಸಿ ಖಜಾನೆ ಇಲಾಖೆಯ ಆಯುಕ್ತ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ. ದೆಹಲಿ ಕರ್ನಾಟಕ ಭವನದ ಸ್ಥಾನಿಕ ಆಯುಕ್ತೆ ಇಮ್ ಕೊಂಗ್ಲಾ ಜಮೀರ್ ಅವರಿಗೆ ಅದೇ ಭವನದ ಸಮನ್ವಯ ವಿಭಾಗದ ಕಾರ್ಯದರ್ಶಿ ಹುದ್ದೆ ನೀಡಲಾಗಿದೆ. ಸ್ಥಾನಿಕ ಆಯುಕ್ತರ ಹುದ್ದೆಗೆ ಸಮೀರ್ ಶುಕ್ಲಾ ಅವರನ್ನು ನೇಮಿಸಲಾಗಿದೆ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: classifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

Sites

Bannerghatta Road

KHB Sites Near India 2nd International Cricket Stadium
Jigani, Electronic city, Bommasandra, Ready for Registration, SBI Bank loan avbl, Land owner Sites Call: 70260 13388

Srirampura

30X100 SITE, 1st Cross, Srirampuram, N-Face, Near Metro - Mantri Mall - Suburban Railway Station, 17,000/sqft, PH : 9739732433

Flat

Banashankari

KATHRIGUPPE EAST, GH RESIDENCY, 3BHK FLATS For Sale, Ready to Move. 9000/ SFT. 80507-27159/ 96065-03064

Industrial & Factory

Tumkur Road

SALE, 10/ 28/ 50/ 105 Acres Industrial Warehouse, Commercial, Agriculture, Villa, Residencial Land. NAIK: 9972636255

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd.
Bengaluru

BUSINESS

Business to Business

Electrical Goods/ Appliances

SALE 750 kva Oil Cooled Transformer 11 kv / 430 v Mfg. Year: 2015 Good Working Condition Location: Jigani, Bangalore Contact: Mr. Sarvesh - 8549911589 Mr. Ragvendra - 9920644560

Business Offers

Franchise

EXCELLENT COACHING facility available for partnership for institutions/ individuals in vijayangar 1st stage near metro Contact: 6364469552

Business For Sale

A MEDICAL Device Manufacturing Unit, with a ready to market USFDA cleared product, Neuromuscular Transmission Monitoring during surgery, based out of Panjim, GOA, available for sale or takeover. DM at 9561092576 for more details.

PERSONAL

Change of Name

CHANGE OF NAME
We, **Vishwanath Reddy V** S/o C Venkatesh Gowda and **Chytanya H B** W/o Vishwanath Reddy, residing at No. 163, Railway Station Road, Anchekeri, Kengeri, Bengalore-560060, have changed our minor Son's name from **Jayanth V** (Old Name) to **JAYANTH V GOWDA** (New Name) vide affidavit dated 16-06-2026 before notary Sri. G.B. Turamari, Bengaluru (LAW 315 LCL 2021) on 17.06.2026

CHANGE OF NAME
I, **Raghavendra S D,** residing at #10, 1st Main, Opp KHDC Godown, A-9 Peenya 2nd Stage Bengaluru-560058, in my daughter Aditri S R ICSE/10th records my name as mentioned **S D Raghavendra** instead of **Raghavendra S D** and my wife name as mentioned **S Varalakshmi** instead of **Varalakshmi S** with an order is sworn to before the Prl.Civil Judge and JMFC Kollegala on 20.04.2019

SOCIAL SERVICES

Old Age Home

SUKHSHANTHI LUXURY Retirement Home, near Sarjapura Bangalore Rs. 22,575/- monthly Rs. 1,500 per day furnished accommodation. 3 Meals, 24X7 Nurse, Ambulance. Call: 9341289357

CONNECT

JOB OPPORTUNITIES

Graphic Designers

REQUIRED GRAPHIC Designer- Photoshop/ Corel Draw/ Illustrator Experience 1 Year or above in around Rajajinagar. Contact: 9108458798/ 9845579620

PUBLIC NOTICE

Fortis
ಫೋರ್ಟಿಸ್ ಹೆಲ್ತ್ ಮ್ಯಾನೇಜ್‌ಮೆಂಟ್ ಲಿಮಿಟೆಡ್
ನಂ. 23, 80 ಅಡಿ ರಸ್ತೆ, ಗುರುಕೃಪಾ, ನಾಗರಭಾವಿ 2ನೇ ಹಂತ, ಬೆಂಗಳೂರು– 560072, ಕರ್ನಾಟಕ
ವಿಷಯ: ಆಸ್ಪತ್ರೆಯ ವೈದ್ಯಕೀಯ ದಾಖಲೆಗಳ ವಿಲೇವಾರಿ
ಜನವರಿ 2016 ರಿಂದ ಡಿಸೆಂಬರ್ 2019 ರವರೆಗಿನ (ಒಳರೋಗಿ ಸಂಖ್ಯೆ: 27531–12025/19) ವೈದ್ಯಕೀಯ ದಾಖಲೆಗಳನ್ನು ನಾಶ ಮಾಡಲಾಗುತ್ತದೆ.
ಆಸಕ್ತರು ವೈದ್ಯಕೀಯ ಇಲಾಖೆಯಲ್ಲಿ ಅವರಿಗೆ ಸಂಬಂಧಿಸಿದ ದಾಖಲೆಗಳನ್ನು ಅಧಿಸೂಚನೆ ಹೊರಡಿಸಿದ ಒಂದು ತಿಂಗಳ ಒಳಗಾಗಿ ಪಡೆಯಬಹುದು.
ಗಮನಿಸಿ: ವೈದ್ಯಕೀಯ ಕಾನೂನು ಮೊಕದ್ದಮೆಗೆ ಒಳಪಟ್ಟ, ಜನನ, ಮರಣ ಮತ್ತು ಮಕ್ಕಳ ವೈದ್ಯಕೀಯ ದಾಖಲೆಗಳಿಗೆ ಅನ್ವಯಿಸುವುದಿಲ್ಲ.
ಸಂಪರ್ಕಿಸಿ:
+ 91 81 0521 2967

PUBLIC NOTICE

THIS IS TO NOTIFY the General Public that our client proposes to purchase the below mentioned Schedule property from **Sri.SIDDARAMAIAH,** Son of Late Sri.Eranna, aged about 63 years residing at: S.M.Gollahalli, Aralumallige Post, Doddaballapur Taluk, Bangalore Rural District, who has represented that he purchased the below mentioned Schedule property from his Vendors (1) Sri.K.Shiva Shankar, (2) Sri.Manu Shankar, (3) Smt.Manjula, Wife of Sri.K.Shiva Shankar, (4) Smt.Archana Shankar, (5) Smt.Vijayamma, (6) Smt.Bhavani.K, (7) Master.Lochan S.Gowda, (8) Smt.Vijaya.R, (9) Sri.Sanjeet Rakesh, (10) Smt.Sindhushri.V, (11) Sri.Bharath.P, (12) Sri.Thejas.P and (13) Sri.Raghavendra.K. Persons objecting for the proposed purchase or having any right in the Schedule property may lodge their objections and/or claims with the undersigned along with supporting documentary evidence within **Fifteen days (15 days)** from the date of this publication and objections and/or claims received thereafter will not be binding on our clients and our clients will proceed to purchase the Schedule property as if there are no claims/objections.

:SCHEDULE PROPERTY:

All that Two Vacant Residential Sites, within the Municipal Ward No.7 of Byatarayanapura, situated at Kempapura, Hebbal, Bangalore and previously forming part of Sy.No.58/10 (Old No.58/4B) of Hebbal Village, Kasaba Hobli, Bangalore North Taluk detailed below:-

Sl. No.	Site No.	Extent	Boundaries
1.	Municipal No. 421/58/4B/58/10/1, E-PID No. 9878221854,	5696 Sq.Ft	East : Private Property; West : Road and Private Property; North : Private Property; South : Site No.2 and Road.
2.	Municipal No. 422/58/4B/58/10/2, E-PID No. 1682214026,	1860 Sq.Ft	East : Private Property; West : Road North : Site No. 01 South : Site No. 3

YASEEN BABU,
K.M. LEGAL ADVOCATES,
No.2B, 'WILOCRISA', #14, 2nd Floor, Rest House Crescent Road BANGALORE-560001. Ph : +91 9845855933
Email: kmlegaladvocates@gmail.com
Place: Bangalore **Date:** 19/06/2026

4ನೇ ಮಹಡಿಯಿಂದ ಜಿಗಿದು ಆತ್ಮಹತ್ಯೆ

ಬೆಂಗಳೂರು: ಕಟ್ಟಡದ ನಾಲ್ಕನೇ ಮಹಡಿಯಿಂದ ಹಾರಿ ವ್ಯಕ್ತಿಯೊಬ್ಬರು ಆತ್ಮಹತ್ಯೆ ಮಾಡಿಕೊಂಡಿರುವ ಘಟನೆ ಆರ್‌.ಟಿ.ನಗರದ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ.

ಚಾಮುಂಡಿನಗರದಲ್ಲಿ ಈ ಘಟನೆ ನಡೆದಿದ್ದು, ಆತ್ಮಹತ್ಯೆ ಮಾಡಿಕೊಂಡಿರುವ ವ್ಯಕ್ತಿಯ ಹೆಸರು, ವಿಳಾಸ ತಿಳಿದುಬಂದಿಲ್ಲ. ವ್ಯಕ್ತಿ ಬೆಳಿಗ್ಗೆ 7 ಗಂಟೆ ಸುಮಾರಿನಲ್ಲಿ ಕಟ್ಟಡದ ನಾಲ್ಕನೇ ಮಹಡಿಗೆ ಹೋಗಿ ಅಲ್ಲಿಂದ ಜಿಗಿದಿದ್ದು, ತೀವ್ರ ಗಾಯಗೊಂಡು ಸ್ಥಳದಲ್ಲೇ ಸಾವಿಗೀಡಾಗಿದ್ದಾರೆ. ಆರ್‌.ಟಿ.ನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿಕೊಂಡು, ತನಿಖೆ ಕೈಗೊಂಡಿದ್ದಾರೆ.

ದರೋಡೆ: ಆರೋಪಿಗಳ ಪತ್ತೆಗೆ 2 ತಂಡ

ಉದ್ಯಮಿಯನ್ನು ಅಪಹರಿಸಿ ₹1.9 ಕೋಟಿ ಹಣ ದರೋಡೆ ಮಾಡಿದ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉದ್ಯಮಿಯನ್ನು ಅಪಹರಿಸಿ ₹1.9 ಕೋಟಿ ಹಣ ದರೋಡೆ ಮಾಡಿ ಪರಾರಿಯಾಗಿರುವ ಆರೋಪಿಗಳ ಬಂಧನಕ್ಕೆ ಎರಡು ವಿಶೇಷ ತಂಡಗಳನ್ನು ರಚಿಸಲಾಗಿದೆ.

ಹಣ ಕಳೆದುಕೊಂಡ ಆರ್‌.ಐ.ಶಿವಶಂಕರ್ ನೀಡಿದ ದೂರಿನ ಅನ್ವಯ ಪ್ರಕರಣ ದಾಖಲಿಸಿರುವ ಮಾದನಾಯಕನಹಳ್ಳಿ ಠಾಣೆ ಪೊಲೀಸರು ಆರೋಪಿಗಳಿಗಾಗಿ ಶೋಧಕಾರ್ಯ ನಡೆಸುತ್ತಿದ್ದಾರೆ.

ಎರಡು ತಂಡಗಳು ಕಾರ್ಯಾಚರಣೆ ಆರಂಭಿಸಿದ್ದು, ಮೊಬೈಲ್ ಕರೆಗಳ ಮಾಹಿತಿ ಸಂಗ್ರಹಿಸಲಾಗುತ್ತಿದೆ. ಘಟನೆ ನಡೆದ ಸುತ್ತಲಿನ ಸಿ.ಸಿ.ಟಿ.ವಿ. ಕ್ಯಾಮೆರಾಗಳ ದೃಶ್ಯಾವಳಿಯನ್ನು ಪರಿಶೀಲನೆ ನಡೆಸಲಾಗುತ್ತಿದೆ. ಕೃತ್ಯದ ಬಳಿಕ ಆರೋಪಿಗಳು ಹೊರ ರಾಜ್ಯಕ್ಕೆ ತೆರಳಿರುವ ಸಾಧ್ಯತೆ ಇದೆ. ಹಾಗಾಗಿ ಒಂದು ತಂಡ ಹೊರ ರಾಜ್ಯಕ್ಕೆ ತೆರಳಿದೆ ಎಂದು ಮೂಲಗಳು ತಿಳಿಸಿವೆ.

ಮುನಿಸ್ವಾಮಿರೆಡ್ಡಿ ಲೇಔಟ್ ನಿವಾಸಿಯಾಗಿರುವ ಉದ್ಯಮಿ ಶಿವಶಂಕರ್ ಅವರು ತಮ್ಮ ಸ್ನೇಹಿತ ಚೇತನ್ ಜೊತೆ ಕಾರಿನಲ್ಲಿ ಹೋಗುತ್ತಿದ್ದಾಗ ಮಾರ್ಗಮಧ್ಯೆ ಕುದುರೆಗೆರೆ ಗಣೇಶ ದೇವಸ್ಥಾನದ ಬಳಿ ಕಾರು ಮತ್ತು ದ್ವಿಚಕ್ರ ವಾಹನದಲ್ಲಿ ಬಂದಿದ್ದ ಐವರು ಅಡ್ಡಗಟ್ಟಿದ್ದರು.

ಬಳಿಕ ದರೋಡೆಕೋರರು ಅವರ ಮೇಲೆ ಬಾಟಲಿ ಹಾಗೂ ಚಾಕುವಿನಿಂದ ಹಲ್ಲೆ ನಡೆಸಿ ಅಪಹರಿಸಿದ್ದರು. ಕಾರಿನಲ್ಲಿ ₹74 ಲಕ್ಷ ಹಣ ದೋಚಿದಲ್ಲದೇ, ಅವರ ಮನೆಯಲ್ಲಿಟ್ಟಿದ್ದ ₹35 ಲಕ್ಷ ಹಣವನ್ನೂ ತರಿಸಿಕೊಂಡು, ಪರಾರಿಯಾಗಿದ್ದರು.

ಹಣವಿರುವುದು ಗೊತ್ತಿದ್ದವರೇ ಸಂಚು ರೂಪಿಸಿ ದರೋಡೆ ನಡೆಸಿರುವ ಬಗ್ಗೆ ಅನುಮಾನ ವ್ಯಕ್ತವಾಗಿದ್ದು, ಪೊಲೀಸರು ಮಾಹಿತಿ ಸಂಗ್ರಹಿಸುತ್ತಿದ್ದಾರೆ.

ದೂರುದಾರ ಶಿವಶಂಕರ್ ಈ ಹಿಂದೆ ರೈಸ್ ಪುಲ್ಲಿಂಗ್ ದಂಧೆಯಲ್ಲಿ ಸಕ್ರಿಯವಾಗಿದ್ದು, ಕಳೆದ ವರ್ಷ ವಿ.ವಿ ಪುರಂ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು. ಈಗ ಕಳೆದುಕೊಂಡಿರುವ ಹಣ ಸಹ ರೈಸ್ ಪುಲ್ಲಿಂಗ್ ದಂಧೆಗೆ ಸಂಬಂಧಿಸಿರುವ ಅನುಮಾನವಿದೆ. ಹಾಗಾಗಿ ಹಲವು ಆಯಾಮಗಳಲ್ಲಿ ತನಿಖೆ ನಡೆದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಶಿವಂಕರ್, ಸ್ನೇಹಿತರ ಪಾಲುದಾರಿಕೆಯಲ್ಲಿ ಡಿ–360 ಸೆಕ್ಯೂರಿಟಿ ಏಜೆನ್ಸಿ ನಡೆಸುತ್ತಿದ್ದರು. ರೈಸ್ ಪುಲ್ಲಿಂಗ್ ಹಾಗೂ ವಿಗ್ರಹಗಳ ಖರೀದಿ ವ್ಯವಹಾರದಲ್ಲಿ ಆಸ್ತಿ ಹೊಂದಿರುವ ಶಿವಶಂಕರ್, ಆಂಧ್ರ ಪ್ರದೇಶದ ಮೊಹಮದ್ ಪರ್ವೇಜ್, ಜಿಪ್ಸನ್ ಹಾಗೂ ಅಲಿ ಜತೆಗೆ ಅಮೆರಿಕನ್ ನ್ಯೂಕ್ಲಿಯರ್ ರಿಸರ್ಚ್ ಸೆಂಟರ್ ಹೆಸರಿನಲ್ಲಿ ಕಂಪನಿ ಆರಂಭಿಸಲು ನಿರ್ಧರಿಸಿದ್ದರು.

ಇದಕ್ಕಾಗಿ ಪ್ರತಿಯೊಬ್ಬರೂ ತಮ್ಮ ಪಾಲಿನ ಹಣ ಹೂಡಿಕೆ ಮಾಡಲು ನಿರ್ಧರಿಸಿದ್ದರು. ಈ ವ್ಯವಹಾರದ ಹಣವನ್ನು ಪಡೆದು ಮನೆಯಲ್ಲಿಟ್ಟಿದ್ದರು. ಸೋಮವಾರ ಯಲಹಂಕದ ಹೋಟೆಲ್‌ನಲ್ಲಿ ಪರ್ವೇಜ್ ಹಾಗೂ ಇತರರಿಂದ ಹಣ ಪಡೆದು ಶಿವಶಂಕರ್ ಮನೆಗೆ ತೆರಳುವಾಗ ದರೋಡೆ ನಡೆದಿದೆ.

ಅಪರಾಧ ಸುದ್ದಿ

ಮಹಿಳೆ ಬಂಧನ: ಚಿನ್ನಾಭರಣ ವಶ

ಬೆಂಗಳೂರು: ಹೂವಿನ ಕುಂಡದಲ್ಲಿಟ್ಟು ಹೋಗಿದ್ದ ಬೀಗದ ಕೀ ಅನ್ನು ತೆಗೆದುಕೊಂಡು ಮನೆಗೆ ನುಗ್ಗಿ ಕಳ್ಳತನ ಮಾಡಿದ್ದ ಮಹಿಳೆಯನ್ನು ಬಂಧಿಸಿರುವ ಕೋಣನಕುಂಟೆ ಪೊಲೀಸರು, ₹2.38 ಲಕ್ಷ ಮೌಲ್ಯದ 33 ಗ್ರಾಂ ಚಿನ್ನಾಭರಣ ವಶಪಡಿಸಿಕೊಂಡಿದ್ದಾರೆ.

ಕೆಂಗೇರಿಯ ಅನ್ನಪೂರ್ಣ ಲೇಔಟ್ ನಿವಾಸಿ ಜಯಂತಿ ಬಂಧಿತ ಆರೋಪಿ. ಈಕೆಯ ವಿರುದ್ಧ 11 ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಠಾಣಾ ವ್ಯಾಪ್ತಿಯ ಪಿಳ್ಳಗಾನಹಳ್ಳಿ ನಿವಾಸಿಯೊಬ್ಬರು ಕೆಲಸದ ನಿಮಿತ್ತ ಹೊರಗೆ ಹೋಗುವ ಸಂದರ್ಭದಲ್ಲಿ ಮನೆಗೆ ಬೀಗ ಹಾಕಿ ಕೀ ಅನ್ನು ಹೂವಿನ ಕುಂಡದಲ್ಲಿ ಇಟ್ಟಿದ್ದರು. ವಾಪಸ್ ಬರುವಷ್ಟರಲ್ಲಿ ಆಭರಣ ಕಳ್ಳತನವಾಗಿತ್ತು.

ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡ ಪೊಲೀಸರು, ವಿವಿಧ ಆಯಾಮಗಳಲ್ಲಿ ಮಾಹಿತಿಗಳನ್ನು ಕಲೆಹಾಕಿ ಹಾಗೂ ಸಿ.ಸಿ.ಟಿ.ವಿ. ಕ್ಯಾಮೆರಾಗಳ ದೃಶ್ಯಾವಳಿಯನ್ನು ಆಧರಿಸಿ ಕೆಂಗೇರಿಯ ಅನ್ನಪೂರ್ಣ ಲೇಔಟ್ ಬಳಿ ಮಹಿಳೆಯನ್ನು ವಶಕ್ಕೆ ಪಡೆದು ವಿಚಾರಣೆಗೆ ಒಳಪಡಿಸಿದರು.

ಕಳವು ಮಾಡಿದ್ದ ಚಿನ್ನಾಭರಣಗಳನ್ನು ತನ್ನ ಮನೆಯಲ್ಲಿ ಇಟ್ಟಿರುವುದಾಗಿ ಮಹಿಳೆ ತಿಳಿಸಿದ್ದು, ಆಕೆಯ ಮನೆಯಿಂದ 33 ಗ್ರಾಂ ಚಿನ್ನ ವಶಪಡಿಸಿಕೊಳ್ಳಲಾಯಿತು ಎಂದು ಪೊಲೀಸರು ತಿಳಿಸಿದ್ದಾರೆ.

DH DECCAN HERALD The Power of Good

JOB OPPORTUNITY

We are a leading newspaper and magazine publishing group in Karnataka. We invite applications for the following position in our organisation.

Reporter / Senior Reporter (Mangaluru)

Department : Deccan Herald - Editorial
Experience : 3 - 6 years
Job Location : Mangaluru
Salary : Attractive package commensurate with experience & qualifications

This role requires consistently delivering routine and special stories while identifying newsworthy developments in Mangaluru region.

Requisites:

- Strong reporting skills with proficiency in English.
- Ability to translate news copies from Kannada to English.

Please send your application with a recent photograph to

THE PRINTERS (MYSORE) PRIVATE LIMITED
75, Mahatma Gandhi Road, Bengaluru – 560 001.
E-mail: neesha.srinivas@printersmysore.co.in
Website : www.printersmysore.com

ಉಸಿರುಗಟ್ಟಿ ಇಬ್ಬರು ಕಾರ್ಮಿಕರು ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಳಗೆರೆ ರಸ್ತೆ ಸಮೀಪದ ಬೆಳ್ಳಂದೂರು ತ್ಯಾಜ್ಯ ನೀರು ಸಂಸ್ಕರಣಾ ಘಟಕದಲ್ಲಿ ಕೆಲಸ ಮಾಡುತ್ತಿದ್ದ ಇಬ್ಬರು ಕಾರ್ಮಿಕರು ಉಸಿರುಗಟ್ಟಿ ಮೃತಪಟ್ಟಿದ್ದು, ಒಬ್ಬರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.

ತಮಿಳುನಾಡಿನ ಅಗಲಿನ (30), ಬಿಹಾರದ ಕಾರ್ಮಿಕ ಮೃತರು. ಮತ್ತೊಬ್ಬರು ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಸಂಜೆ ಕೆಲಸ ಮಾಡುವ ವೇಳೆ ಮೂವರು ಕಾರ್ಮಿಕರು ಅಸ್ವಸ್ಥಗೊಂಡಿದ್ದಾರೆ. ಈ ಪೈಕಿ ಸ್ಥಳದಲ್ಲೇ ಇಬ್ಬರು ಮೃತಪಟ್ಟಿದ್ದಾರೆ.

ಘಟಕದ ಮೇಲ್ವಿಚಾರಕರ ನಿರ್ಲಕ್ಷ್ಯದಿಂದ ಅವಘಡ ಸಂಭವಿಸಿದೆ. ಸುರಕ್ಷತಾ ಕ್ರಮ ಕೈಗೊಂಡಿರಲಿಲ್ಲ ಎಂಬುದು ಪ್ರಾಥಮಿಕ ತನಿಖೆ ವೇಳೆ ಗೊತ್ತಾಗಿದೆ.

ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿ, ಮೃತದೇಹಗಳನ್ನು ಹೊರಗೆ ತೆಗೆದಿದ್ದಾರೆ. ರಕ್ಷಣೆ ಮಾಡಿದ ಕಾರ್ಮಿಕನನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ.

ಕಿವಿ ಓಲೆ ಕಸಿದು ಪರಾರಿಯಾಗಿದ್ದ ಆರೋಪಿ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯ ಚಿನ್ನದ ಕಿವಿ ಓಲೆ ಕಸಿದು ಪರಾರಿಯಾಗಿದ್ದ ಆರೋಪಿಯನ್ನು ಅಶೋಕನಗರ ಪೊಲೀಸರು ಬಂಧಿಸಿದ್ದಾರೆ.

ಪಶ್ಚಿಮ ಬಂಗಾಳದ ಕನ್ಯೆ ಅಧಿಕಾರಿ (40) ಬಂಧಿತ ಆರೋಪಿ. ನಗರದಲ್ಲಿ ಕಟ್ಟಡ ಕಾರ್ಮಿಕನಾಗಿ ಕೆಲಸ ಮಾಡುತ್ತಿದ್ದ ಆರೋಪಿ, ಜೂನ್ 14ರ ರಾತ್ರಿ 8 ಗಂಟೆ ಸುಮಾರಿಗೆ ಹೊಸೂರು ರಸ್ತೆಯ ಜಾನ್ಸನ್ ಮಾರ್ಕೆಟ್ ಬಳಿ ಬಸ್‌ಗಾಗಿ ಕಾಯುತ್ತಿದ್ದಾಗ ಕೃತ್ಯ ಎಸಗಿದ್ದಾನೆ.

ಈ ಸಂಬಂಧ ನೀಲಸಂದ್ರದ ಮುನೇಗೌಡ ಗಾರ್ಡನ್ ನಿವಾಸಿ ಅಮೀರಾ ಬಿ ಅವರು ನೀಡಿದ ದೂರಿನ ಮೇರೆಗೆ ಆರೋಪಿಯನ್ನು ಬಂಧಿಸಿ ₹50 ಸಾವಿರ ಮೌಲ್ಯದ ಕಿವಿ ಓಲೆಯನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಜಾನ್ಸನ್ ಮಾರುಕಟ್ಟೆ ಬಳಿಯ ಕನ್‌ವೆನ್ಷನ್‌ವೊಂದರಲ್ಲಿ ಕೆಲಸ ಮಾಡುವ ಅಮೀರಾ, ಕೆಲಸ ಮುಗಿಸಿ ಮನೆಗೆ ಹೋಗಲು ಬಸ್‌ಗಾಗಿ ಕಾಯುತ್ತಿದ್ದರು. ಈ ವೇಳೆ,'ನೀಲಸಂದ್ರಕ್ಕೆ ಬಸ್ ಬರುತ್ತದೆಯೇ' ಎಂದು ಆರೋಪಿಯು ಮಹಿಳೆಯನ್ನು ಪ್ರಶ್ನಿಸಿದ್ದ. ಕೆಲ ಹೊತ್ತಿನ ಬಳಿಕ ಅವರು ಧರಿಸಿದ್ದ ಚಿನ್ನದ ಕಿವಿಯೋಲೆ ಕಸಿದು ಪರಾರಿಯಾಗಿದ್ದ.

111 ಕೆಜಿ ಗಾಂಜಾ ವಶ; ಆರೋಪಿ ಬಂಧನ

ಮಂಡ್ಯ: ಮದ್ದೂರು ತಾಲ್ಲೂಕಿನ ಕೆಸ್ತೂರು ಪೊಲೀಸರು ಕಾರ್ಯಾಚರಣೆ ನಡೆಸಿ ಸುಮಾರು ₹60 ಲಕ್ಷ ಮೌಲ್ಯದ 111 ಕೆಜಿ ಗಾಂಜಾ ವಶಪಡಿಸಿಕೊಂಡು ಆರೋಪಿಯನ್ನು ಬಂಧಿಸಿದ್ದಾರೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿ.ಜೆ. ಶೋಭಾರಾಣಿ ತಿಳಿಸಿದರು.

ಗುರುವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಆಂಧ್ರಪ್ರದೇಶದ ಮದನಪಲ್ಲಿಯ ಶ್ರೀನಿವಾಸಲು ಬಂಧಿತ ಆರೋಪಿ. ನಿನ್ನೆ ಸಂಜೆ 5.30ರ ಸಮಯದಲ್ಲಿ ಡಿವೈಎಸ್ಪಿ ಯಶವಂತ್‌ಕುಮಾರ್ ಅವರಿಗೆ ಬಂದ ಖಚಿತ ಮಾಹಿತಿ ಆಧರಿಸಿ ವಿಶೇಷ ತಂಡ ರಚಿಸಲಾಗಿತ್ತು ಎಂದು ತಿಳಿಸಿದರು.

ನೋಂದಣಿ ಸಂಖ್ಯೆ:05–1906–07, ದಿ.09–09–1907

RAJYA VOKKALIGARA SANGHA (R)
KEMPEGOWDA INSTITUTE OF MEDICAL SCIENCES AND RESEARCH CENTRE

RVS/ADMN/514/2026-27 Date: 18.06.2026

WALK IN INTERVIEW

SL.NO	Designation	Vacant Posts	
	Department	Assistant Professor	Senior Resident
1	ANATOMY	1	4
2	PHYSIOLOGY	2	4
	MICROBIOLOGY	2	
3	BIOCHEMISTRY	4	4
4	COMMUNITY MEDICINE	-	1
5	FORENSIC MEDICINE	1	4
6	GENERAL MEDICINE	3	1
7	GENERAL SURGERY	2	1
8	OBG	1	-
	OPTHALMOLOGY	1	
9	EMERGENCY MEDICINE & ICU	2	5 MD/DNB in Emergency Medicine /Medicine / Anaesthesia / pulmonology/ GeneralSurgery

FOR SUPER SPECIALITY DEPARTMENT

SL.NO	Department	No of Posts	Qualification
1	Medical Gastroentrology	1	DM Gastroentrology
2	Medical Oncologist	1	DM/DnB in Medical Oncology
3	Cardiology	2	DM Cardiology
4	Neurology	1	DM Neurology
5	Interventional Radiologist	Consultant	Radiologist (PDCC)
6	Cardio Thoracic Surgery	Consultant	Mch
7	Neurosurgery	2 (1 Prof) (1 Asso.Prof)	Mch

Eligibility Criteria : As per National Medical Commission Norms

Walk in Interview on 22.06.2026, Monday at 2.00 PM

Venue: Rajya Vollakigara Sanga, No.148, Krishnarajendra Road, 2nd Floor, Meeting Hall, V.V Pura, Bangalore-560004

Sd/- Principal KIMS; Sd/- Chairman GC KIMS; Sd/- Chairman GC, Superspeciality; Sd/- Chairman KIMSH; Sd/- Treasurer RVS; Sd/- Joint Secretary RVS; Sd/- Vice President-1 RVS
Sd/- Vice President-2 RVS; Sd/- General Secretary RVS; Sd/- Honorary President RVS; Sd/- President RVS

For any Queries Please contact Dr. Jagannatha B, Principal, Mob: 9448081088

ಟಿಕೆಟ್‌ರಹಿತ ಪ್ರಯಾಣ: 4,476 ಜನರಿಗೆ ದಂಡ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಮೇ ತಿಂಗಳಲ್ಲಿ ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದ 4,476 ಪ್ರಯಾಣಿಕರಿಂದ ₹8.94 ಲಕ್ಷ ದಂಡ ವಸೂಲಿ ಮಾಡಲಾಗಿದೆ.

ಕೆಎಸ್‌ಆರ್‌ಟಿಸಿ ತನಿಖಾ ತಂಡದಲ್ಲಿನ ಅಧಿಕಾರಿಗಳು 42,158 ಬಸ್‌ಗಳಲ್ಲಿ ತಪಾಸಣೆ ನಡೆಸಿದ್ದರು. ನಿಗಮದ ಆದಾಯದಲ್ಲಿ ₹1.52 ಲಕ್ಷ ಸೋರಿಕೆ ಪತ್ತೆಹಚ್ಚಿದ್ದರು. ಅದನ್ನು ದಂಡ ಸಹಿತ ವಸೂಲಿ ಮಾಡಲಾಗಿದೆ. ಪ್ರಯಾಣಿಕರು ಟಿಕೆಟ್ ಪಡೆದು ಪ್ರಯಾಣಿಸಬೇಕು ಎಂದು ಕೆಎಸ್‌ಆರ್‌ಟಿಸಿ ಮುಖ್ಯ ಸಂಚಾರ ವ್ಯವಸ್ಥಾಪಕರು ತಿಳಿಸಿದ್ದಾರೆ.

ಕಾಂಪೌಂಡ್ ಕುಸಿದು ಮಗು ಸಾವು

ಬೆಂಗಳೂರು: ಮನೆ ಮುಂದೆ ಆಟವಾಡುತ್ತಿದ್ದಾಗ ಕಾಂಪೌಂಡ್ ಕುಸಿದು 5 ವರ್ಷದ ಮಗು ಮೃತಪಟ್ಟಿದ್ದು, ಮತ್ತೊಂದು ಮಗು ಗಂಭೀರವಾಗಿ ಗಾಯಗೊಂಡಿರುವ ಘಟನೆ ಬಾಗಲೂರು ಪೊಲೀಸ್ ಠಾಣಾ ವ್ಯಾಪ್ತಿಯ ಬಂಡಿಕೊಡಿಗೆಹಳ್ಳಿಯಲ್ಲಿ ಬುಧವಾರ ಸಂಜೆ ನಡೆದಿದೆ.

ಅಫೀನ್ (5) ಮೃತ ಬಾಲಕ. ಗಾಯಾಳು ಸಮನ್ವಿಗೆ (5) ಯಲಹಂಕ ಸರ್ಕಾರಿ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ನೀಡಲಾಗುತ್ತಿದೆ. ಬಂಡಿಕೊಡಿಗೆಹಳ್ಳಿಯ ಬಿ.ನರಸಪ್ಪ ಅವರ ಮನೆಯ ಕಾಂಪೌಂಡ್‌ನಲ್ಲಿ ಮಕ್ಕಳು ಆಟವಾಡುತ್ತಿದ್ದಾಗ ಈ ದುರಂತ ಸಂಭವಿಸಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಯಾದಗಿರಿಯ ದಾವಲ್ ಸಾಬವ್ ಅವರು ಪತ್ನಿ ಹಾಗೂ ಮಗು ಜತೆ ಐದು ದಿನಗಳ ಹಿಂದಷ್ಟೇ ಬಂಡಿಕೊಡಿಗೇಹಳ್ಳಿಯ ಸಹೋದರಿ ಮನೆಗೆ ಬಂದಿದ್ದರು. ಕ್ಯಾಬ್ ಚಾಲಕರಾಗಿರುವ ದಾವಲ್ ಕೆಲಸಕ್ಕೆ ಹುಡುಕಾಟ ನಡೆಸಿದ್ದರು.

ಬುಧವಾರ ಸಂಜೆ ಪಕ್ಕದ ಮನೆಯ ಮಕ್ಕಳ ಜತೆ ಅಫೀನ್, ಸಮನ್ವಿ ಹಾಗೂ ಮತ್ತೊಂದು ಮಗು ಮನೆಯ ಕಾಂಪೌಂಡ್‌ನ ಗೇಟ್‌ನಲ್ಲಿ ಆಟವಾಡುತ್ತಿದ್ದರು. ಗೇಟ್ ಹಿಡಿದು ಆಟವಾಡುತ್ತಿದ್ದಾಗ ಗೇಟ್ ಸಮೇತ ಸಣ್ಣಗೋಡೆ ಮಕ್ಕಳ ಮೇಲೆ ಬಿದ್ದಿದೆ. ಸ್ಥಳೀಯರು ಮಕ್ಕಳಿಬ್ಬರನ್ನು ಆಸ್ಪತ್ರೆಗೆ ದಾಖಲಿಸಿದ್ದು, ಗಂಭೀರವಾಗಿ ಗಾಯಗೊಂಡ ಅಫೀನ್ ಮಾರ್ಗಮಧ್ಯೆ ಮೃತಪಟ್ಟಿದ್ದಾನೆ ಎಂದು ಪೊಲೀಸರು ತಿಳಿಸಿದರು.

ಮಕ್ಕಳ ಪೋಷಕರು ನೀಡಿದ ದೂರು ಆಧರಿಸಿ, ಮನೆ ಮಾಲೀಕರ ವಿರುದ್ಧ ನಿರ್ಲಕ್ಷ್ಯ ಪ್ರಕರಣ ದಾಖಲಿಸಿ, ತನಿಖೆ ಕೈಗೊಳ್ಳಲಾಗಿದೆ ಎಂದು ಬಾಗಲೂರು ಪೊಲೀಸರು ಹೇಳಿದ್ದಾರೆ.

ಸಂಚಾರ ಪೊಲೀಸರಿಗೆ ಸುರಕ್ಷತಾ ಕಿಟ್

ಆಹ್ವಾನ್ ಫೌಂಡೇಷನ್ ಮತ್ತು ನೆಟ್ ಕ್ರ್ಯಾಕರ್ ಸಂಸ್ಥೆಯ ಸಹಯೋಗದಲ್ಲಿ ಸಂಚಾರ ಪೊಲೀಸ್ ಸಿಬ್ಬಂದಿಯ ಸುರಕ್ಷತೆಗಾಗಿ 'ಟ್ರಾಫಿಕ್ ಪೊಲೀಸ್ ವೆಲ್‌ಫೇರ್ ಕಿಟ್' ವಿತರಣೆ ಮಾಡಲಾಯಿತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಹ್ವಾನ್ ಫೌಂಡೇಷನ್ ಮತ್ತು ನೆಟ್ ಕ್ರ್ಯಾಕರ್ ಸಂಸ್ಥೆಯ ಸಹಯೋಗದಲ್ಲಿ ಸಂಚಾರ ಪೊಲೀಸ್ ಸಿಬ್ಬಂದಿಯ ಸುರಕ್ಷತೆಗಾಗಿ 'ಟ್ರಾಫಿಕ್ ಪೊಲೀಸ್ ವೆಲ್‌ಫೇರ್ ಕಿಟ್' ವಿತರಣೆ ಮಾಡಲಾಯಿತು.

ರಸ್ತೆ ಸುರಕ್ಷತೆ ಹಾಗೂ ಸಂಚಾರ ವ್ಯವಸ್ಥೆಯನ್ನು ಸಮರ್ಪಕವಾಗಿ ನಿರ್ವಹಿಸಲು ನಿರಂತರವಾಗಿ ಶ್ರಮಿಸುತ್ತಿರುವ ಪೊಲೀಸ್ ಸಿಬ್ಬಂದಿಯ ಸೇವೆಯನ್ನು ಗೌರವಿಸುವ ಹಾಗೂ ಅವರ ಕೆಲಸದ ಪರಿಸ್ಥಿತಿ ಸುಧಾರಿಸುವ ಉದ್ದೇಶದಿಂದ ಈ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

ಕಿಟ್‌ನಲ್ಲಿ ಹೆಲ್ಮೆಟ್, ರೇನ್ ಕೋಟ್, ಮಳೆಯಿಂದ ರಕ್ಷಿಸುವ ಜಾಕೆಟ್, ಸನ್ ಗ್ಲಾಸ್, ಮಾಸ್ಕ್, ಕೈ ಗವಸು, ಛತ್ರಿ ಹಾಗೂ ನೀರಿನ ಬಾಟಲಿ ಸೇರಿ ಅಗತ್ಯ ವಸ್ತುಗಳನ್ನು ಒಳಗೊಂಡಿದೆ. ಇದು ಅಧಿಕಾರಿಗಳ ಸುರಕ್ಷತೆ ಮತ್ತು ಉತ್ತಮ ಆರೋಗ್ಯಕ್ಕೆ ನೆರವಾಗಲಿದೆ.

ಈ ಕುರಿತು ಮಾತನಾಡಿದ ಆಹ್ವಾನ್ ಫೌಂಡೇಷನ್ ಸಿಇಒ ಬ್ರಜ್ ಕಿಶೋರ್, 'ಸಂಚಾರ ಪೊಲೀಸರು ಕಠಿಣ ಹವಾಮಾನ ಹಾಗೂ ಕೆಲಸದ ಒತ್ತಡದ ನಡುವೆಯೂ ರಸ್ತೆ ಸುರಕ್ಷತೆ ಮತ್ತು ಸಂಚಾರ ವ್ಯವಸ್ಥೆ ಕಾಪಾಡಲು ಶ್ರಮಿಸುತ್ತಾರೆ. ಪ್ರತಿಯೊಬ್ಬ ಅಧಿಕಾರಿಯೂ ಸಮಾಜಕ್ಕೆ ನೀಡುತ್ತಿರುವ ಸೇವೆಗಾಗಿ ಗೌರವಕ್ಕೆ ಅರ್ಹರಾಗಿದ್ದಾರೆ' ಎಂದರು.

ದಕ್ಷಿಣ ವಲಯ ಸಂಚಾರ ವಿಭಾಗದ ಎಸಿಪಿ ಆರ್.ಮಂಜುನಾಥ್, 'ಪೊಲೀಸ್ ಸಿಬ್ಬಂದಿಯ ಸೇವೆಯನ್ನು ಗುರುತಿಸಿ, ಅಗತ್ಯ ಕಿಟ್‌ಗಳನ್ನು ಒದಗಿಸಿರುವ ಆಹ್ವಾನ್ ಫೌಂಡೇಷನ್‌ನ ಕ್ರಮ ಒಳ್ಳೆಯದು. ಈ ಕಿಟ್‌ಗಳು ಸಂಚಾರ ಪೊಲೀಸ್ ಸಿಬ್ಬಂದಿಯ ಸುರಕ್ಷತೆಯಲ್ಲಿ ಮಹತ್ವದ ಪಾತ್ರವಹಿಸುತ್ತವೆ' ಎಂದರು.

ದಕ್ಷಿಣ ವಲಯ ಸಂಚಾರ ವಿಭಾಗದ ಡಿಸಿಪಿ ಗೋಪಾಲ್ ಎಂ.ಬ್ಯಾಕೋಡ್, ಜೆ.ಪಿ.ನಗರ ಸಂಚಾರ ಪೊಲೀಸ್ ಠಾಣೆ ಪೊಲೀಸ್ ಇನ್‌ಸ್ಪೆಕ್ಟರ್ ಟಿ.ಎಸ್. ರಾಧಾಕೃಷ್ಣ, ನೆಟ್‌ಕ್ರ್ಯಾಕರ್ ಸಂಸ್ಥೆಯ ಪ್ರತಿನಿಧಿಗಳಾದ ಅನು ಸದಾಶಿವನ್, ದುರ್ಗಾ ಪ್ರಸಾದ್ ಮಹಾಪಾತ್ರ, ಸಂದೀಪ್ ಕುಮಾರ್ ಮತ್ತು ಅನಂತ್ ಕುಮಾರ್ ಭಾಗವಹಿಸಿದ್ದರು.

'ಮಾತೃಭಾಷೆ: ಮಕ್ಕಳಲ್ಲಿ ಪ್ರೀತಿ ಮೂಡಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮಾತೃಭಾಷೆಯ ಕುರಿತು ಪೋಷಕರು ಮಕ್ಕಳಲ್ಲಿ ಪ್ರೀತಿ ಮೂಡಿಸಬೇಕು' ಎಂದು ಲೇಖಕ ನಾ.ದಾಮೋದರ ಶೆಟ್ಟಿ ಸಲಹೆ ನೀಡಿದರು.

ವೈಟ್‌ಫೀಲ್ಡ್‌ನ ಶ್ರೀಸರಸ್ವತಿ ಎಜುಕೇಶನ್ ಟ್ರಸ್ಟ್‌ನಲ್ಲಿ ಬುಧವಾರ ಮಕ್ಕಳ ಸಾಹಿತ್ಯ ಮಾಸಪತ್ರಿಕೆ 'ತೊದಲ್ನುಡಿ'ಯ 13ನೇ ವಾರ್ಷಿಕ ಸಂಚಿಕೆಯನ್ನು ಲೋಕಾರ್ಪಣೆ ಮಾಡಿದ ಅವರು, 'ಮಾತೃಭಾಷೆಯಲ್ಲಿ ಕಲಿಕೆ ಸುಲಭ. ಓದುವ ಅಭಿರುಚಿಯನ್ನು ಉತ್ತೇಜಿಸಲು ಸಹಕಾರಿ' ಎಂದು ಪ್ರತಿಪಾದಿಸಿದರು.

ಇದೇ ಸಂದರ್ಭದಲ್ಲಿ ದ್ರಾವಿಡ ಭಾಷಾ ಟ್ರಾನ್ಸ್‌ಲೇಟರ್ಸ್ ಅಸೋಸಿಯೇಷನ್ ಸಹಯೋಗದಲ್ಲಿ ನಡೆದ 'ಪಂಚ ದ್ರಾವಿಡ ಕವಿ ಸಂಗಮ'ದಲ್ಲಿ ಕನ್ನಡ, ಮಲಯಾಳಂ, ತಮಿಳು, ತೆಲುಗು ಹಾಗೂ ತುಳು ಭಾಷೆಯ ಐವತ್ತಕ್ಕೂ ಹೆಚ್ಚು ಕವಿಗಳು ಕವಿತೆ ಓದಿದರು.

ಕಾರ್ಯಕ್ರಮವನ್ನು ಚುಟುಕು ಕವಿ ಎಚ್. ಡುಂಡಿರಾಜ್ ಉದ್ಘಾಟಿಸಿದರು.

'ತೊದಲ್ನುಡಿ'ಯ 13ನೇ ವಾರ್ಷಿಕ ಸಂಚಿಕೆ ಬಿಡುಗಡೆ ಹಾಗೂ 'ಪಂಚ ದ್ರಾವಿಡ ಕವಿ ಸಂಗಮ' ಕವಿಗೋಷ್ಠಿಯಲ್ಲಿ ಪಾಲ್ಗೊಂಡ ಕವಿಗಳು ಲೇಖಕರಾದ ನಾ.ದಾಮೋದರಶೆಟ್ಟಿ, ಚುಟುಕು ಕವಿ ಎಚ್.ಡುಂಡಿರಾಜ್, ಸುಷ್ಮಾ ಶಂಕರ್ ಮತ್ತು ಕವಯಿತ್ರಿ ಡಾ. ವಡಿವಳಗಿ ದೇವಸಹಾಯಂ ಅವರೊಂದಿಗೆ...

ಅಸೋಸಿಯೇಶನ್ ಅಧ್ಯಕ್ಷೆ ಡಾ.ಸುಷ್ಮಾ ಶಂಕರ್ ಅಧ್ಯಕ್ಷತೆ ವಹಿಸಿದ್ದರು. ಖ್ಯಾತ ತಮಿಳು ಕವಯಿತ್ರಿ ಡಾ. ವಡಿವಳಗಿ ದೇವಸಹಾಯಂ ಅತಿಥಿಯಾಗಿದ್ದರು.

ಕನ್ನಡದ ಕವಿಗಳಾಗಿ ಅಮರನಾಥ್, ಸಿ.ಆರ್. ಸುರೇಶ್, ಕೆ.ಟಿ. ಶ್ರೀಮತಿ, ಎನ್. ಶಾರದಮ್ಮ, ನಯನಾ ಕೆ.ಎನ್., ರಾಧಾಮಣಿ ಎಂ. ಕೋಲಾರ, ಶ್ರೀನಿವಾಸನ್ ಎನ್.ವಿ. ಹಾಗೂ ವೀಣಾ ಸುಧೀಂದ್ರ ಪಾಲ್ಗೊಂಡರು. ಕೆ. ಪ್ರಭಾಕರನ್, ಮಲರ್ವಿಳಿ, ಮಾಯಾ ಬಿ. ನಾಯರ್, ಡಾ. ಮಾಲ್ಯಾದ್ರಿ, ಹಾಗೂ ಬಿ.ಎಸ್. ಶಿವಕುಮಾರ್ ಕವಿತೆಗಳನ್ನು ವಿಶ್ಲೇಷಿಸಿದರು. ರಾಕೇಶ್ ವಿ.ಎಸ್., ರೆಬಿನ್ ರವೀಂದ್ರನ್ ಕಾರ್ಯಕ್ರಮ ನಿರ್ವಹಿಸಿದರು.

'ಸುಸ್ಥಿರ ಕೃಷಿಗೆ ತಂತ್ರಜ್ಞಾನ ನೆರವು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೃಷಿ ಕ್ಷೇತ್ರದಲ್ಲಿ ಡಿಜಿಟಲ್ ತಂತ್ರಜ್ಞಾನಗಳ ಬಳಕೆ ಹೆಚ್ಚಾಗಿದ್ದು, ಕೃತಕ ಬುದ್ಧಿಮತ್ತೆ, ಡ್ರೋನ್ ತಂತ್ರಜ್ಞಾನದಿಂದ ರೈತರಿಗೆ ಸೂಕ್ತ ಸಮಯದಲ್ಲಿ ಮಾಹಿತಿ ದೊರೆಯುತ್ತಿದೆ. ಅದರಿಂದ ಸುಸ್ಥಿರ ಪ್ರಗತಿ ಸಾಧ್ಯವಾಗಿದೆ' ಎಂದು ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಎಸ್.ವಿ.ಸುರೇಶ ಹೇಳಿದರು.

ನಗರದ ಗಾಂಧಿ ಕೃಷಿ ವಿಜ್ಞಾನ ಕೇಂದ್ರದಲ್ಲಿ ವಿಶ್ವವಿದ್ಯಾಲಯವು ರಾಷ್ಟ್ರೀಯ ಕೃಷಿ ಅರ್ಥಶಾಸ್ತ್ರ ಸಂಶೋಧನಾ ಸಂಘದ ಸಹಯೋಗದಲ್ಲಿ ಬುಧವಾರ ಆರಂಭವಾದ 'ಡಿಜಿಟಲ್ ಕೃಷಿ - ಸುಸ್ಥಿರ ಮತ್ತು ಸಮಗ್ರ ಆಹಾರ ವ್ಯವಸ್ಥೆ' ಎರಡು ದಿನಗಳ ಸಮ್ಮೇಳನ ಉದ್ಘಾಟಿಸಿ ಮಾತನಾಡಿದರು.

'ಕೃಷಿಯನ್ನು ಲಾಭದಾಯಕ ಹಾಗೂ ಪರಿಸರ ಸ್ನೇಹಿಯಾಗಿ ರೂಪಿಸುವಲ್ಲಿ ಡಿಜಿಟಲ್ ತಂತ್ರಜ್ಞಾನವು ಮಹತ್ವದ ಪಾತ್ರ ವಹಿಸುತ್ತಿದೆ. ರೈತರು, ಸಂಶೋಧಕರು ಹಾಗೂ ನೀತಿ ನಿರೂಪಕರ ಮೇಲೆ ಸಂವಹನ ಸಾಧ್ಯವಾಗಿಸಿ, ಕೃಷಿ ಅಭಿವೃದ್ಧಿಗೆ ಹೊಸ ದಿಕ್ಕು ನೀಡಿದೆ. ಸುಸ್ಥಿರ ಆಹಾರ ವ್ಯವಸ್ಥೆಯನ್ನು ನಿರ್ಮಿಸಲು ತಂತ್ರಜ್ಞಾನ ಮತ್ತು ಸಂಶೋಧನೆಯ ಸಮನ್ವಯವೂ ಅಗತ್ಯ' ಎಂದು ಅಭಿಪ್ರಾಯಪಟ್ಟರು.

ರಾಷ್ಟ್ರೀಯ ಕೃಷಿ ಅರ್ಥಶಾಸ್ತ್ರ ಸಂಶೋಧನಾ ಸಂಘದ ಅಧ್ಯಕ್ಷ ಪಿ.ಕೆ.ಜೋಶಿ, 'ಡಿಜಿಟಲ್ ತಂತ್ರಜ್ಞಾನಗಳ ನೆರವಿನಿಂದ ಕೃಷಿ ಮಾರುಕಟ್ಟೆ ವ್ಯವಸ್ಥೆಯನ್ನು ಮತ್ತಷ್ಟು ಬಲಪಡಿಸಬಹುದು. ಬೆಲೆ, ಹವಾಮಾನ ಮಾಹಿತಿ, ಬೆಳೆ ನಿರ್ವಹಣೆ ಹಾಗೂ ಮೌಲ್ಯವರ್ಧನೆ ಕುರಿತ ಮಾಹಿತಿ ನೀಡಬಹುದು. ಗ್ರಾಮೀಣ ಭಾಗದಲ್ಲಿ ಡಿಜಿಟಲ್ ಸಾಕ್ಷರತೆ ಹೆಚ್ಚಿಸಲು ಕ್ರಮ ವಹಿಸಬೇಕಿದೆ' ಎಂದರು.

ಐಐಪಿಎಂ ನಿರ್ದೇಶಕ ಆರ್.ಎಸ್.ಸೆಂಥಿಲ್ ವಿನಾಯಕಂ, 'ಆಹಾರ ಭದ್ರತೆ, ಪೌಷ್ಟಿಕ ಆಹಾರ ಉತ್ಪಾದನೆ ಹಾಗೂ ಹವಾಮಾನ ಬದಲಾವಣೆ ಸವಾಲುಗಳನ್ನು ಎದುರಿಸಲು ಡಿಜಿಟಲ್ ಕೃಷಿ ಪ್ರಮುಖ ಸಾಧನ' ಎಂದು ಹೇಳಿದರು.

ಡಾ.ಬಿ.ಆರ್.ಅಂಬೇಡ್ಕರ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಡಿ.ಸಿ.ರೈ, ಎಂ.ಬಿ.ಪ್ರಕಾಶ್, ಸಿದ್ಧಯ್ಯ, ಕೆ.ಪಿ.ರಘುಪ್ರಸಾದ್ ಪಾಲ್ಗೊಂಡಿದ್ದರು.

'ಅಸ್ತ್ರಂ' ಆಧರಿಸಿ ಪರಿಹಾರ ಕ್ರಮ

ಬೆಂಗಳೂರು: ದಕ್ಷಿಣ ನಗರ ಪಾಲಿಕೆ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳು, ಮಳೆ ಹಾನಿ ಹಾಗೂ ಮಳೆ-ಗಾಳಿಗೆ ಬಿದ್ದ ಮರ ತೆರವು ಸೇರಿದಂತೆ ಇನ್ನಿತರ ಸಾರ್ವಜನಿಕ ದೂರುಗಳಿಗೆ ತಕ್ಷಣ ಸ್ಪಂದಿಸಲು, ಬೆಂಗಳೂರು ಸಂಚಾರ ಪೊಲೀಸ್ ಬಳಸುತ್ತಿರುವ 'ಅಸ್ತ್ರಂ' ಆ್ಯಪ್ ಅನ್ನು ಪರಿಣಾಮಕಾರಿಯಾಗಿ ಬಳಸಲು ಎಂಜಿನಿಯರ್‌ಗಳಿಗೆ ತರಬೇತಿ ನೀಡಲಾಯಿತು.

ಪಾಲಿಕೆಯ ಮುಖ್ಯ ಎಂಜಿನಿಯರ್ ಬಸವರಾಜ್ ಕಬಾಡೆ ಅವರ ನೇತೃತ್ವದಲ್ಲಿ ನಡೆದ ಕಾರ್ಯಾಗಾರದಲ್ಲಿ, ರಸ್ತೆಗಳಲ್ಲಿ ಸಾರ್ವಜನಿಕ ಸಂಚಾರಕ್ಕೆ ಅಡಚಣೆ ಉಂಟುಮಾಡುವ ಗುಂಡಿಗಳು, ಮಳೆ ಹಾನಿ ಹಾಗೂ ರಸ್ತೆಗೆ ಬಿದ್ದ ಮರಗಳನ್ನು ಈ ತಂತ್ರಜ್ಞಾನದ ಮೂಲಕ ಹೇಗೆ ಗುರುತಿಸಬೇಕು ಮತ್ತು ತಕ್ಷಣವೇ ಸ್ಥಳಕ್ಕೆ ತೆರಳಿ ದುರಸ್ತಿ ಹಾಗೂ ತೆರವು ಕಾರ್ಯಗಳ ಕುರಿತ ಸಂಕ್ಷಿಪ್ತ ಮಾಹಿತಿ ನೀಡುವ ಕುರಿತು ಪ್ರಾತ್ಯಕ್ಷಿಕೆ ಮೂಲಕ ವಿವರಣೆ ನೀಡಿದರು.

ಸಮಸ್ಯೆಗಳ ಸ್ಥಳಗಳಿಗೆ ಪಾಲಿಕೆ ಎಂಜಿನಿಯರ್ ಹಾಗೂ ಅವರ ತಂಡ ತಕ್ಷಣವೇ ಭೇಟಿ ನೀಡಿ, ಸಮಸ್ಯೆ ಬಗೆಹರಿಸಲು ಈ ಅಪ್ಲಿಕೇಶನ್ ಸಹಕಾರಿಯಾಗಲಿದೆ ಎಂದು ಬಸವರಾಜ್ ತಿಳಿಸಿದರು.

ಜವಳಿ ಅಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ರವರ ಕಛೇರಿ

ನಂ.9, ವೆಸ್ಟ್ ಆಫ್ ಕಾರ್ಡ್ ರೋಡ್, ಕೆಎಸ್‌ಎಸ್‌ಐಡಿಸಿ ಕೈಗಾರಿಕಾ ವಸಾಹತು, 4ನೇ ಮುಖ್ಯರಸ್ತೆ, ರಾಜಾಜಿನಗರ, ಬೆಂಗಳೂರು–560010. ಇ–ಮೇಲ್: gatotcgok@gmail.com

ಸಂ: DHT-ADMN0VEH/1/2025-ADMIN/Call-2 ದಿನಾಂಕ: 17.06.2026

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕೈಮಗ್ಗ ಮತ್ತು ಜವಳಿ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು ಇಲ್ಲಿನ ಅಧಿಕಾರಿಗಳಿಗೆ ದೈನಂದಿನ ಸರ್ಕಾರಿ ಕೆಲಸ ನಿಮಿತ್ತ ಬಾಡಿಗೆ ಆಧಾರದ ಮೇಲೆ 2026–27ನೇ ಸಾಲಿಗೆ 2020ರ ನಂತರದ ವರ್ಷಗಳ ಹಳದಿ ಬೋರ್ಡ್ ಇರುವ ವಾಹನವನ್ನು ಪಡೆಯಲು ವಾಹನದ ಏಜೆನ್ಸಿಯವರಿಂದ ಇ-ಪ್ರಕ್ಯೂರ್‌ಮೆಂಟ್ ಮೂಲಕ ಇ–ಟೆಂಡರ್ ಕರೆಯಲಾಗಿದೆ. ಸ್ವಂತ/ ಬಾಡಿಗೆ ವಾಹನ ಹೊಂದಿದ ಏಜೆನ್ಸಿಯವರು ಅರ್ಜಿಯನ್ನು ಸಲ್ಲಿಸಲು ಅರ್ಹರಾಗಿರುತ್ತಾರೆ. ಸರ್ಕಾರದ ಆದೇಶ ಸಂಖ್ಯೆ: ಸಿಆಸುಇ 30 ಶಿವಾನಿ 2019, ಬೆಂಗಳೂರು **ದಿನಾಂಕ: 31.03.2022ರ** ಪ್ರಕಾರ ವಾಹನ ಚಾಲಕರೊಂದಿಗೆ, 07 ವಾಹನವನ್ನು ಬಾಡಿಗೆ ಆಧಾರದ ಮೇಲೆ ಪಡೆಯಲು ಗರಿಷ್ಠ ಮಾಹೆಯಾನ Non-A.C. ವಾಹನಕ್ಕೆ **ರೂ.35,000/–** + Taxes ಮತ್ತು A.C. ವಾಹನಕ್ಕೆ **ರೂ.40,000/–** + Taxes ಗಳ ಮಿತಿಗೆ ಗರಿಷ್ಠ 2500 ಕಿ.ಮೀಟರ್‌ಗಳಿಗೆ ಮೀರದಂತೆ ಬಾಡಿಗೆ ಆಧಾರದ ಮೇಲೆ ಪೂರೈಸಲು ನೊಂದಾಯಿತ ಟ್ರಾವೆಲ್ಸ್ ಏಜೆನ್ಸಿಯವರಿಂದ ಇ–ಪ್ರಕ್ಯೂಮೆಂಟ್ ಮೂಲಕ ಪಡೆಯಲು ಟೆಂಡರ್‌ನ್ನು ಅಹ್ವಾನಿಸಲಾಗಿದೆ. ಟೆಂಡರ್ ಫಾರ್ಮ್‌ಗಳನ್ನು ಹಾಗೂ ನಿಬಂಧನೆಗಳನ್ನೊಳಗೊಂಡ ಟೆಂಡರ್ ದಾಖಲಾತಿಗಳನ್ನು ಇ–ಪ್ರಕ್ಯೂರ್‌ಮೆಂಟ್ ವೆಬ್‌ಸೈಟ್ **www.eproc.karnataka.gov.in** ದಲ್ಲಿ ಪಡೆಯಬಹುದು. **(1)** ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಪಡೆಯುವ ಪ್ರಾರಂಭದ ದಿನಾಂಕ: **18.06.2026. (2)** ಭರ್ತಿ ಮಾಡಿದ ಅರ್ಜಿಗಳನ್ನು ಆನ್‌ಲೈನ್ ಮುಖಾಂತರ ಸ್ವೀಕರಿಸುವ ಕೊನೆಯ ದಿನಾಂಕ: **02.07.2026 ರಂದು ಅಪರಾಹ್ನ 5.00 ಗಂಟೆಗೆ. (3)** ಟೆಕ್ನಿಕಲ್ ಬಿಡ್ ತೆರೆಯುವ ದಿನಾಂಕ: **04.07.2026 ಬೆಳಿಗ್ಗೆ 11.00 ಗಂಟೆಗೆ. (4)** ಹಣಕಾಸು ಬಿಡ್ ತೆರೆಯುವ ದಿನಾಂಕ: **08.07.2026 ಬೆಳಿಗ್ಗೆ 11.00 ಗಂಟೆಗೆ.** ಟೆಂಡರ್ ತಪಶೀಲುಗಳಿಗಾಗಿ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಆಸಕ್ತರ ನಿಗದಿಪಡಿಸಿದ ದಿನಾಂಕಕ್ಕೆ ಅರ್ಜಿ ಸಲ್ಲಿಸಬೇಕಾಗುತ್ತದೆ. ಹೆಚ್ಚಿನ ಮಾಹಿತಿಯನ್ನು **www.eproc.karnataka.gov.in** ವೆಬ್‌ಸೈಟ್‌ನಲ್ಲಿ ನೋಡಬಹುದು ಹಾಗೂ ಹೆಚ್ಚಿನ ವಿವರಗಳಿಗಾಗಿ **ಕೈಮಗ್ಗ ಮತ್ತು ಜವಳಿ ಇಲಾಖೆ,** ಕೇಂದ್ರ ಕಛೇರಿ, ರಾಜಾಜಿನಗರ ಇಂಡಸ್ಟ್ರಿಯಲ್ ಎಸ್ಟೇಟ್, ರಾಜಾಜಿನಗರ, ಬೆಂಗಳೂರು ಇಲ್ಲಿ ಕಛೇರಿ ವೇಳೆಯಲ್ಲಿ ಸರ್ಕಾರಿ ರಜಾ ದಿನಗಳನ್ನು ಹೊರತುಪಡಿಸಿ ಪಡೆಯಬಹುದು.

ಸಹಿ/– ಜವಳಿ ಆಯುಕ್ತರು ಪತ್ರಾಂಕಿತ ಸಹಾಯಕರು

ವಾಸಾಸಂಇ/ವಾ.ಪ್ರಾ/ಎಎಎ/1217/2026–27

ತುಮಕೂರು ಮಹಾನಗರ ಪಾಲಿಕೆ, ತುಮಕೂರು

ವೆಬ್‌ಸೈಟ್ : www.tumkurucity.mrc.gov.in
ಇಮೇಲ್: ka.tumkuru.cc@gmail.com,
ಕಚೇರಿದೂರವಾಣಿ : 2272200, ಸಹಾಯವಾಣಿ : 9449872599

ನಂ:ತುಮಪಾ:ಕಾಅ:ಇ.ಟೆಂಡರ್:08:2026–27 ದಿನಾಂಕ: 15–06–2026

ಟೆಂಡರ್ ಪ್ರಕಟಣೆ
(ಇ–ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ)

2026–27ನೇ ಸಾಲಿನ ಮಹಾನಗರ ಪಾಲಿಕೆ ನಿಧಿಯಡಿ ವಿದ್ಯುತ್ ಸಂಬಂಧಿತ ಕಾಮಗಾರಿಗಳನ್ನು ಕೊಟೇಷನ್/ಮ್ಯಾನುಯಲ್ ಟೆಂಡರ್ ಮೂಲಕ ನಿರ್ವಹಿಸಲು ಮತ್ತು ಡಿಜಿಟಲ್ ಟ್ವಿನ್ ಹಾಗೂ ಎಐ ಬೇಸಡ್ ಸ್ಮಾರ್ಟ್ ಸಿವಿಕ್ ಮಾನಿಟರಿಂಗ್ ಸಿಸ್ಟಮ್ (ನಗರ ನೇತ್ರಾ) ಕಾಮಗಾರಿಗಳಿಗೆ ಸಂಬಂಧಿಸಿದಂತೆ, ಮಾರುಕಟ್ಟೆಯ ಸ್ಪೆಸಿಫಿಕೇಶನ್ & ದರಗಳನ್ನು ಪಡೆಯಲು ಕೊಟೇಷನ್‌ಗಳನ್ನು ಆಹ್ವಾನಿಸಿದ್ದು ಪಾಲಿಕೆಯ ಕಾರ್ಯಪಾಲಕ ಅಭಿಯಂತರ ರವರ ಕಛೇರಿಯಿಂದ ಕೊಟೇಷನ್ ಆಹ್ವಾನಿಸಿದ್ದು, ಅರ್ಹ ಗುತ್ತಿಗೆದಾರರು/ ಏಜನ್ಸಿದಾರರು/ ಸರಬರಾಜುದಾರರು ಭಾಗವಹಿಸಬಹುದು. ಹೆಚ್ಚಿನ ವಿವರಗಳನ್ನು ಕಛೇರಿ ಸಮಯದಲ್ಲಿ ಮಹಾನಗರ ಪಾಲಿಕೆಯ ಕಛೇರಿಗೆ ಭೇಟಿ ನೀಡಿ ಪಡೆಯಬಹುದಾಗಿದೆ. ಮಹಾನಗರ ಪಾಲಿಕೆಯ ಸಹಾಯಕ ದೂರವಾಣಿ ಸಂಖ್ಯೆ: **9449872599** ರಿಂದ ಮಾಹಿತಿ ಪಡೆಯಬಹುದು.

ಸೂಚನೆ: 1) ಈ ಮೇಲ್ಕಂಡ ಕಾಮಗಾರಿಯ ಮುಂದೆ ನಮೂದಿಸಿದ ಅಂದಾಜು ಮೊತ್ತ ಹಾಗೂ ಟೆಂಡರ್‌ಗಿಟ್ಟ ಮೊತ್ತ ದಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಟೆಂಡರ್ ದಾಖಲೆಯಲ್ಲಿ ನಮೂದಿಸಿದ ಟೆಂಡರ್‌ಗಿಟ್ಟ ಮೊತ್ತವು ಅಂತಿಮವಾಗಿರುತ್ತದೆ. 2) ಈ ಕೆಳಕಂಡ ದಿನಾಂಕಗಳಲ್ಲಿ ಯಾವುದೇ ಬದಲಾವಣೆ ಅದಲ್ಲಿ ಆ ದಿನಾಂಕಗಳನ್ನು ಪಾಲಿಕೆಯ ಸೂಚನಾ ಫಲಕದಲ್ಲಿ ಗಮನಿಸುವುದು ಹಾಗೂ ಯಾವುದೇ ಪ್ರತ್ಯೇಕ ಪ್ರಕಟಣೆಗಳನ್ನು ಹೊರಡಿಸಲಾಗುವುದಿಲ್ಲ.

ಆಕ್ಷೇಪಣೆ ಪಡೆಯುವ ಕೊನೆಯ ದಿನಾಂಕ ಮತ್ತು ವೇಳೆ	**20–06–2026 ಸಮಯ: 17.00**
ಕೊಟೇಷನ್ ಸಲ್ಲಿಸುವ ಅಂತಿಮ ದಿನಾಂಕ ಮತ್ತು ವೇಳೆ	**23–06–2026 ಸಮಯ: 17.00**
ಕೊಟೇಷನ್ ತೆರೆಯುವ ದಿನಾಂಕ ಮತ್ತು ವೇಳೆ	**24–06–2026 ಸಮಯ : 17.15 ನಂತರ**

ಸಹಿ/– ಕಾರ್ಯಪಾಲಕ ಅಭಿಯಂತರರು(ವಿ)
ಮಹಾನಗರ ಪಾಲಿಕೆ, ತುಮಕೂರು

DIPR/TUM/RO-54/26-27/Oysters

ಕರ್ನಾಟಕ ಸರ್ಕಾರ

ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ

ಕಾರ್ಯಪಾಲಕ ಇಂಜಿನೀಯರ್‌ರವರ ಕಛೇರಿ, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಜಯನಗರ ವಾಣಿಜ್ಯ ಸಂಕೀರ್ಣ ಮಳಿಗೆ, ಜಯನಗರ, ಬೆಂಗಳೂರು–560011.

ಸಂಖ್ಯೆ: ಕಾಇಂ/ಸನೀ/ಸ.ಇಂ–1 & 5/ಟೆಂಡರ್ ಪ್ರಕಟಣೆ ಸಂ.03/2026–27 ದಿನಾಂಕ: 18.06.2026

ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯದ ರಾಜ್ಯಪಾಲರ ಪರವಾಗಿ ಅರ್ಹ ಗುತ್ತಿಗೆದಾರರು ಲೆಕ್ಕ ಶೀರ್ಷಿಕೆ 4702–ಆಣೆಕಟ್ಟು ಮತ್ತು ಪಿಕಪ್ ಕೆರೆಗಳ ಆಧುನಿಕರಣ, ಗಿರಿಜನ ಉಪಯೋಜನೆ ಮತ್ತು ವಿಶೇಷ ಘಟಕ ಕಾಮಗಾರಿಗಳು ಹಾಗೂ Depository Work ಯೋಜನೆಯಡಿ ಅನುಮೋದನೆಗೊಂಡ ಈ ಕೆಳಕಂಡಂತೆ ಕಾಮಗಾರಿಗಳ ಕೆಟಿಪಿಪಿ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ KW-1, KW-2 KW-3 & KW-4 ರ ಮುಖಾಂತರ ಪರಿಶಿಷ್ಟ ಜಾತಿ, ಪ್ರವರ್ಗ 2(ಎ), ಮತ್ತು ಸಾಮಾನ್ಯ (ಜನರಲ್) ಗುತ್ತಿಗೆದಾರರಿಗೆ ಟೆಂಡರ್ ಆಹ್ವಾನಿಸಲಾಗಿದೆ. ಈ ಕಾಮಗಾರಿಗೆ ಕೆಪಿಪಿಪಿ ವೆಬ್ ಸೈಟ್ **https://kppp.karnataka.gov.in** ನಲ್ಲಿ ಪ್ರಕಟಿಸಿದಂತೆ ದಿನಾಂಕ ಹಾಗೂ ಇನ್ನುಳಿದ ವಿವರಗಳನ್ನು ಖಚಿತಪಡಿಸಿಕೊಂಡು ಟೆಂಡರಿನಲ್ಲಿ ಹೆಚ್ಚಿನ ವಿವರಗಳನ್ನು ಸದರಿ ಕಛೇರಿಯಿಂದ ಹಾಗೂ ಮೇಲಿನ ವೆಬ್‌ಸೈಟ್‌ನಲ್ಲಿ ಮಾಹಿತಿ ಪಡೆಯಬಹುದು.

ಕಾಮಗಾರಿಯ ಹೆಸರು :– ಬೆಂಗಳೂರು ದಕ್ಷಿಣ ಜಿಲ್ಲೆ, ಮಾಗಡಿ ತಾಲ್ಲೂಕು, ಚನ್ನಪಟ್ಟಣ ತಾಲ್ಲೂಕು, ಕನಕಪುರ ತಾಲ್ಲೂಕು, ರಾಮನಗರ ತಾಲ್ಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ, ದೇವನಹಳ್ಳಿ ತಾಲ್ಲೂಕು, ಹೊಸಕೋಟೆ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ದಕ್ಷಿಣ ತಾಲ್ಲೂಕುಗಳಲ್ಲಿ ಕೊಳವೆಬಾವಿ ಕೊರೆದು ನೀರಾವರಿ ಸೌಲಭ್ಯ, ಹರಿಯುವ ಹಳ್ಳಕ್ಕೆ ಚೆಕ್ಕ ಡ್ಯಾಂ ನಿರ್ಮಾಣ, ಕೂಡ್ಲೂರು ಕೆರೆ ಅಭಿವೃದ್ಧಿ ಕಾಮಗಾರಿ, ರಾಮಮ್ಮನಕೆರೆ ಅಭಿವೃದ್ಧಿ ಕಾಮಗಾರಿ, ಅಕ್ಕೂರು ಹೊಸಕೆರೆಗೆ ಆರ್.ಸಿ.ಸಿ. ವಾಲ್ ಅಭಿವೃದ್ಧಿ ಕಾಮಗಾರಿ, Improvement to Nelligudda tank Phase 2 in Avaragere and Hirehalli village, Improvement to Nelligudda tank in Muddapura karenahalli village ನಿರ್ಮಾಣ ಕಾಮಗಾರಿಗಳನ್ನು ಒಳಗೊಂಡಂತೆ **ಒಟ್ಟು 17 ಕಾಮಗಾರಿಗಳನ್ನು ಆಹ್ವಾನಿಸಲಾಗಿದೆ.**

ಟೆಂಡರ್‌ಗಿಟ್ಟ ಮೊತ್ತ (ರೂ.ಲಕ್ಷಗಳಲ್ಲಿ) : **ರೂ.4.6715 (ಕನಿಷ್ಠ) & ರೂ.121.06 (ಗರಿಷ್ಠ)** ಇಎಂಡಿ: **ರೂ.6.100 (ಕನಿಷ್ಠ) & ರೂ.2,00,000 (ಗರಿಷ್ಠ).**

ಕಾಮಗಾರಿ ಪೂರ್ಣಗೊಳಿಸಬೇಕಾದ ಅವಧಿ: 2 ರಿಂದ 11 ತಿಂಗಳು ಮಳೆಗಾಲ ಸೇರಿದಂತೆ.

(ಟೆಂಡರ್‌ಗಿಟ್ಟ ಮೊತ್ತ, ಇಎಂಡಿ, ಕಾಮಗಾರಿಯ ಅವದಿ ಆಯಾ ಕಾಮಗಾರಿಗಳಿಗೆ ಅನುಗುಣವಾಗಿ ಕೆಪಿಪಿಪಿ ಪೋರ್ಟಲ್‌ನಲ್ಲಿ ಇದ್ದಂತೆ)

(1) ಟೆಂಡರ್ ದಾಸ್ತಾ ವೇಜುಗಳನ್ನು ವೆಬ್‌ಸೈಟ್ ಪ್ರಕಟಿಸುವ ದಿನಾಂಕ: **18.06.2026 ಸಂಜೆ 16.00** ಗಂಟೆಯ ನಂತರ, (2) ಪ್ರೀ ಬಿಡ್ ಮೀಟಿಂಗ್ ದಿನಾಂಕ ಮತ್ತು ಸಮಯ : **25.06.2026 ಮಧ್ಯಾಹ್ನ 15.00** ಗಂಟೆಯವರೆಗೆ. (3) ವಿವರಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆಯಬಹುದಾದ ದಿನಾಂಕ ಮತ್ತು ವೇಳೆ: **03.07.2026 ಮಧ್ಯಾಹ್ನ 15.00** ಗಂಟೆಯವರೆಗೆ. (4) ಭರ್ತಿಮಾಡಿದ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ: **03.07.2026 ಸಂಜೆ 16.30** ಗಂಟೆಯವರೆಗೆ, (5) ತಾಂತ್ರಿಕ ಬಿಡ್ಡನ್ನು ತೆರೆಯುವ ದಿನಾಂಕ: **06.07.2026 ಬೆಳಗ್ಗೆ 11.30** ಗಂಟೆಗೆ, (6) ಆರ್ಥಿಕ ಬಿಡ್ಡನ್ನು ತೆರೆಯುವ ದಿನಾಂಕ: **ತಾಂತ್ರಿಕ ಬಿಡ್ ಅನುಮೋದನೆಯಾದ ನಂತರ**

ಷರತ್ತುಗಳು: 1) ಹೆಚ್ಚಿನ ವಿವರಗಳನ್ನು ಕೆಪಿಪಿಪಿ ಪೋರ್ಟಲ್ ಮುಖಾಂತರ ವೆಬ್‌ಸೈಟ್ ವಿಳಾಸ: **https://kppp.karnataka.gov.in** ರಲ್ಲಿ ಪಡೆಯಬಹುದಾಗಿದೆ. ಬದಲಾವಣೆ ಇದ್ದಲ್ಲಿ ಕೆಪಿಪಿಪಿ ಪೋರ್ಟಲ್ ಮುಖಾಂತರ ಪ್ರಕಟಿಸಲಾಗುವುದು. 2) ಗುತ್ತಿಗೆ ಪಡೆಯಲು ಕನಿಷ್ಠ ಅರ್ಹತೆಗಳಿಗಾಗಿ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್‌ನ ಐ ಟಿ ಟಿ ನಿಬಂಧನೆ– 1,2, 3 & 4ರಲ್ಲಿ ನಮೂದಿಸಿದ ಸೂಚನೆಗಳನ್ನು ಸೂಕ್ಷ್ಮವಾಗಿ ಗಮನಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ. 3) ಗುತ್ತಿಗೆದಾರರು ಜಿಎಸ್‌ಟಿ ಹೊರತುಪಡಿಸಿ ದರಗಳನ್ನು ನಮೂದಿಸಬೇಕು. 4) ಎಲ್ಲಾ ಟೆಂಡರ್‌ನ್ನು ಅಥವಾ ಯಾವುದಾದರೂ ಟೆಂಡರ್‌ನ್ನು ಮುಂದೂಡುವ ಅಥವಾ ತಿರಸ್ಕರಿಸುವ ಹಕ್ಕನ್ನು ಕಾಯ್ದಿರಿಸಲಾಗಿದೆ.

ಸಹಿ/– ಕಾರ್ಯಪಾಲಕ ಅಭಿಯಂತರರು,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ

ವಾಸಾಸಂಇ/ವಾ.ಪ್ರ/1230/ಶಿರಡಿ ಸಾಯಿ/2026–27

DIAGEO India — ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

ಕಾರ್ಪೊರೇಟ್ ಐಡೆಂಟಿಟಿ ನಂಬರ್: L01551KA1999PLC024991
ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು-560 001, ಕರ್ನಾಟಕ, ಭಾರತ.
ಫೋನ್: +91 80 22210705; ಫ್ಯಾಕ್ಸ್: +91 80 2224 5253
ಇಮೇಲ್: investor.india@diageo.com; ವೆಬ್‌ಸೈಟ್: www.diageoindia.com

ಸೂಚನೆ

ಭೌತಿಕ ಷೇರುಗಳ ವರ್ಗಾವಣೆ ಮತ್ತು ಡಿಮೆಟರಲೈಸೇಶನ್ (ಡಿಮ್ಯಾಟ್)ಗಾಗಿ ಸೆಬಿಯ ವಿಶೇಷ ಅವಕಾಶ

ಸೆಬಿ ಸುತ್ತೋಲೆ ಸಂಖ್ಯೆ. HO/38/13/11(2)2026-MIRSD-POD/I/3750/2026 ದಿನಾಂಕ 30ನೇ ಜನವರಿ 2026 ("**ಸೆಬಿ ಸುತ್ತೋಲೆ**") ಪ್ರಕಾರ, ಭೌತಿಕ ಷೇರುಗಳ ವರ್ಗಾವಣೆ ಮತ್ತು ಡಿಮೆಟರಲೈಸೇಶನ್ (ಡಿಮ್ಯಾಟ್)ಗಾಗಿ ವಿಶೇಷ ಅವಕಾಶ 4ನೇ, ಫೆಬ್ರವರಿ 2027 ರವರೆಗೆ ತೆರೆದಿರುತ್ತದೆ ಎಂಬುದನ್ನು ದಯವಿಟ್ಟು ಗಮನಿಸಿ.

ಈ ಸೌಲಭ್ಯವು 1ನೇ ಏಪ್ರಿಲ್ 2019 ಕ್ಕಿಂತ ಮೊದಲು ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ("**ಕಂಪನಿ**") ನ ಭೌತಿಕ ಷೇರುಗಳನ್ನು ಖರೀದಿಸಿದ ಮತ್ತು

ಎ) ಷೇರುಗಳನ್ನು ವರ್ಗಾವಣೆಗಾಗಿ ಸಲ್ಲಿಸದ, ಅಥವಾ

ಬಿ) ಷೇರುಗಳನ್ನು ವರ್ಗಾವಣೆಗಾಗಿ ಸಲ್ಲಿಸಿದ, ಆದರೆ ಅದನ್ನು ತಿರಸ್ಕರಿಸಿದ, ಹಿಂತಿರುಗಿಸಿದ, ದಸ್ತಾವೇಜನ್ನು ಕೊರತೆಯಿಂದಾಗಿ ಪ್ರಕ್ರಿಯೆಗೊಳಿಸದ ಹೂಡಿಕೆದಾರರಿಗೆ ಲಭ್ಯವಿದೆ.

ವಿಶೇಷ ಅವಕಾಶದ ಅನ್ವಯಿಕೆ:

ಏಪ್ರಿಲ್ 1, 2019 ಕ್ಕಿಂತ ಮೊದಲು ಕಾರ್ಯಗತಗೊಳಿಸಿದ ವರ್ಗಾವಣೆ ಪತ್ರಗಳಿಗೆ ಈ ಅವಕಾಶದ ಅನ್ವಯಿಕತೆಯ ಕುರಿತು ಸ್ಪಷ್ಟತೆಗಾಗಿ, ಹೂಡಿಕೆದಾರರು ಈ ಕೆಳಗಿನ ಮ್ಯಾಟ್ರಿಕ್ಸ್ ಅನ್ನು ಉಲ್ಲೇಖಿಸಬಹುದು:

1ನೇ ಏಪ್ರಿಲ್ 2019 ಕ್ಕಿಂತ ಮೊದಲು ವರ್ಗಾವಣೆಗಾಗಿ ಸಲ್ಲಿಸಲಾದ	ಹೂಡಿಕೆದಾರರೊಂದಿಗೆ ಮೂಲ ಭದ್ರತಾ ಪ್ರಮಾಣಪತ್ರದ ಲಭ್ಯತೆ	ವಿಶೇಷ ಅವಕಾಶ ಅಡಿಯಲ್ಲಿ ಅರ್ಹತೆ
ಇಲ್ಲ (ತಾಜಾ ಸಲ್ಲಿಕೆ)	ಹೌದು	ಹೌದು, ಸೆಬಿ ಸುತ್ತೋಲೆಯ ಅಡಿಯಲ್ಲಿ ಹೇಳಲಾದ ಷರತ್ತುಗಳಿಗೆ ಒಳಪಟ್ಟಿರುತ್ತದೆ
ಹೌದು (ತಿರಸ್ಕರಿಸಿದ, ಮೊದಲೇ ಹಿಂತಿರುಗಿಸಲಾದ)	ಹೌದು	
ಹೌದು	ಇಲ್ಲ	ಇಲ್ಲ
ಇಲ್ಲ	ಇಲ್ಲ	ಇಲ್ಲ

ವರ್ಗಾವಣೆ ಪತ್ರ(ಗಳು) ಮತ್ತು ಇತರ ಪೋಷಕ ದಾಖಲೆಗಳೊಂದಿಗೆ ಮೂಲ ಷೇರು ಪ್ರಮಾಣಪತ್ರ(ಗಳು) ಜೊತೆಗೆ ಸಲ್ಲಿಸಲಾದ ವಿನಂತಿ(ಗಳನ್ನು) ವಿಶೇಷ ಅವಕಾಶದ ಅಡಿಯಲ್ಲಿ ಮಾತ್ರ ಪರಿಗಣಿಸಲಾಗುತ್ತದೆ ಎಂಬುದನ್ನು ದಯವಿಟ್ಟು ಗಮನಿಸಿ.

ಈ ವಿಶೇಷ ಅವಕಾಶವನ್ನು ಪಡೆಯಲು ಬಯಸುವ ಹೂಡಿಕೆದಾರರು ಕಂಪನಿಯ ರಿಜಿಸ್ಟ್ರಾರ್ ಮತ್ತು ಷೇರು ವರ್ಗಾವಣೆ ಏಜೆಂಟ್ (ಆರ್‌ಟಿಎ) ಅವರನ್ನು ಈ ಕೆಳಗಿನಂತೆ ಸಂಪರ್ಕಿಸಬಹುದು

ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್
ಘಟಕ: ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್
30, ರಮಣ ರೆಸಿಡೆನ್ಸಿ, 4ನೇ ಕ್ರಾಸ್, ಸಂಪಿಗೆ ರಸ್ತೆ
ಮಲ್ಲೇಶ್ವರಂ, ಬೆಂಗಳೂರು 560 003, ಕರ್ನಾಟಕ, ಭಾರತ.
ದೂರವಾಣಿ: +91 80 2346 0815 ರಿಂದ 818
ಇಮೇಲ್: bglsta@integratedindia.in

ಹೂಡಿಕೆದಾರರು ನಿಮ್ಮ ಪ್ರಶ್ನೆಗಳನ್ನು ಮೇಲೆ ತಿಳಿಸಲಾದ ಇಮೇಲ್ ಐಡಿಗೆ ಸಂಪರ್ಕಿಸಬಹುದು.

ಹೆಚ್ಚಿನ ವಿವರಗಳಿಗಾಗಿ, ಹೂಡಿಕೆದಾರರು ಮೇಲಿನ ತ್ವರಿತ ಪ್ರತಿಕ್ರಿಯೆ (QR) ಕೋಡ್ ಅನ್ನು ಸ್ಕ್ಯಾನ್ ಮಾಡುವ ಮೂಲಕ ಸೆಬಿ ಸುತ್ತೋಲೆಯನ್ನು ಉಲ್ಲೇಖಿಸಬಹುದು.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್ ಪರವಾಗಿ
ಸಹಿ/–
ಪ್ರಗ್ಯಾ ಕೌಲ್
ಕಂಪನಿ ಕಾರ್ಯದರ್ಶಿ ಮತ್ತು ಅನುಸರಣಾ ಅಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : 18ನೇ ಜೂನ್ 2026

IN THE COURT OF THE C.C.H 63 LXII ADDL. CITY CIVIL & SESSION JUDGE AT BANGALORE

CRL. R.P No : 292/2024

NOTICE

To, KRISHNA M,
Retired Sub-Inspector of Police of Rajarajeshwari Nagar Police Station Bangalore City

Take notice that the Petitioner have filed the Criminal Revision Petition and sought legal action against you with other such reliefs. Hence, you are hereby summoned to appear before this Hon'ble court in person or by a pleader duly instructed and able to answer all material questions and objections (if any) relating to the petition on **30th day of June 2026 at 11.00 A.M.** Failing which, the petition will be disposed-off in your absence as ex-parte.

Given under my hand and seal of the court on this 09/06/2026.

By Order of the Court
Sd/- Assistant Registrar
City Civil Court, Bengaluru

Advocate for Petitioner Sri. ANIL KUMAR. C,
Ph. 99723 21623

ನೈಋತ್ಯ ರೈಲ್ವೆ

ರೈಲ್ವೆ ಸಚಿವಾಲಯ
ಅಧಿಸೂಚನೆ
ಬೆಂಗಳೂರು, 3 ಜೂನ್ 2026

S.O.2838 (E) – ಕೇಂದ್ರ ಸರ್ಕಾರ (ರೈಲ್ವೆ ಸಚಿವಾಲಯ, ನೈಋತ್ಯ ರೈಲ್ವೆ, ನಿರ್ಮಾಣ ಸಂಸ್ಥೆ, ಬೆಂಗಳೂರು ಕಂಟೋನ್ಮೆಂಟ್) S.O4936(E) ದಿನಾಂಕ 31.10.2025 ರಂದು ಭಾರತದ ಗೆಜೆಟ್‌ನಲ್ಲಿ ಪ್ರಕಟವಾದ ಅಧಿಸೂಚನೆಯ ಮೂಲಕ, ಅಸಾಧಾರಣ, ಭಾಗ–II, ವಿಭಾಗ – 3, ಉಪ–ವಿಭಾಗ (ii) ರೈಲ್ವೆ ಕಾಯ್ದೆ, 1989 (1989 ರ 24) ರ ವಿಭಾಗ 2, ಷರತ್ತು 20A ಅಡಿಯಲ್ಲಿ ಹೊರಡಿಸಲಾಗಿದೆ (ಇಲ್ಲಿ ಈ ಕಾಯ್ದೆ ಎಂದು ಉಲ್ಲೇಖಿಸಲಾಗಿದೆ) ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ಪಂಡಿತನಹಳ್ಳಿ ಗ್ರಾಮದಲ್ಲಿ "ಕಿ.ಮೀ.59/800–900 ರಲ್ಲಿ LC ಸಂಖ್ಯೆ 33 ರ ಬದಲಿಗೆ 2 ಲೇನ್ ROB ನಿರ್ಮಾಣ" ಗಾಗಿ ಅಧಿಸೂಚನೆಗೆ ಲಗತ್ತಿಸಲಾದ ವೇಳಾಪಟ್ಟಿಯಲ್ಲಿ ನಿರ್ದಿಷ್ಟಪಡಿಸಿದ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶವನ್ನು ರೈಲ್ವೆ ಸಚಿವಾಲಯ, ನೈಋತ್ಯ ರೈಲ್ವೆ, ನಿರ್ಮಾಣ ಸಂಸ್ಥೆ, ಬೆಂಗಳೂರು ಕಂಟೋನ್ಮೆಂಟ್ ಘೋಷಿಸುತ್ತದೆ.

ಮತ್ತು ಸದರಿ ಅಧಿಸೂಚನೆಯ ಸಾರಾಂಶವನ್ನು ಪ್ರಜಾವಾಣಿ ಸುದ್ದಿ ಪತ್ರಿಕೆ ದಿನಾಂಕ 14.11.2025 ಮತ್ತು ಡೆಕ್ಕನ್ ಹೆರಾಲ್ಡ್ ಸುದ್ದಿ ಪತ್ರಿಕೆ ದಿನಾಂಕ 14.11.2025 ರಲ್ಲಿ ರೈಲ್ವೆ ಕಾಯ್ದೆ, 1989 ರ ಸೆಕ್ಷನ್ 2, ಷರತ್ತು 20A ರ ಅಡಿಯಲ್ಲಿ ಪ್ರಕಟಿಸಲಾಗಿದೆ. ಮತ್ತು ಸಕ್ಷಮ ಪ್ರಾಧಿಕಾರವು ಸೆಕ್ಷನ್ 2, ಷರತ್ತು 20D ಅಡಿಯಲ್ಲಿ ಸಲ್ಲಿಸಲಾದ ಆಕ್ಷೇಪಣೆಗಳನ್ನು ಸ್ವೀಕರಿಸಿ, ಅದನ್ನು ಸೂಕ್ತವಾಗಿ ಪರಿಗಣಿಸಿ ಇತ್ಯರ್ಥಪಡಿಸಿದೆ.

ಮತ್ತು, ರೈಲ್ವೆ ಕಾಯ್ದೆ, 1989 ರ ಸೆಕ್ಷನ್ 2, ಷರತ್ತು 20E ರ ಅನುಸಾರವಾಗಿ, ಸಕ್ಷಮ ಪ್ರಾಧಿಕಾರವು ತನ್ನ ವರದಿಯನ್ನು ರೈಲ್ವೆ ಸಚಿವಾಲಯ, ನೈಋತ್ಯ ರೈಲ್ವೆ, ನಿರ್ಮಾಣ ಸಂಸ್ಥೆ, ಬೆಂಗಳೂರು ಕಂಟೋನ್ಮೆಂಟ್‌ಗೆ ಸಲ್ಲಿಸಿದೆ.

ಆದ್ದರಿಂದ, ಈಗ, ಸಕ್ಷಮ ಪ್ರಾಧಿಕಾರದ ಸದರಿ ವರದಿಯನ್ನು ಸ್ವೀಕರಿಸಿದ ನಂತರ ಮತ್ತು ರೈಲ್ವೆ ಕಾಯ್ದೆ, 1989 ರ ಸೆಕ್ಷನ್ 2, ಷರತ್ತು 20E ನಿಂದ ನೀಡಲಾದ ಅಧಿಕಾರಗಳನ್ನು ಚಲಾಯಿಸಿ, ರೈಲ್ವೆ ಸಚಿವಾಲಯ, ನೈಋತ್ಯ ರೈಲ್ವೆ, ನಿರ್ಮಾಣ ಸಂಸ್ಥೆ, ಬೆಂಗಳೂರು ಕಂಟೋನ್ಮೆಂಟ್, ಸದರಿ ಅನುಸೂಚಿಯಲ್ಲಿ ನಿರ್ದಿಷ್ಟಪಡಿಸಿದ ಭೂಮಿಯನ್ನು ಮೇಲೆ ತಿಳಿಸಿದ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಳ್ಳಬೇಕೆಂದು ಈ ಮೂಲಕ ಘೋಷಿಸುತ್ತದೆ;

ಮತ್ತು ಮುಂದುವರಿದು, ರೈಲ್ವೆ ಕಾಯ್ದೆ, 1989 ರ ಸೆಕ್ಷನ್ 2, ಷರತ್ತು 20E ರ ಅನುಸಾರವಾಗಿ, ರೈಲ್ವೆ ಸಚಿವಾಲಯ, ನೈಋತ್ಯ ರೈಲ್ವೆ, ನಿರ್ಮಾಣ ಸಂಸ್ಥೆ, ಬೆಂಗಳೂರು ಕಂಟೋನ್ಮೆಂಟ್, ಈ ಅಧಿಸೂಚನೆಯನ್ನು ಅಧಿಕೃತ ಗೆಜೆಟ್‌ನಲ್ಲಿ ಪ್ರಕಟಿಸಿದ ನಂತರ, ಸದರಿ ವೇಳಾಪಟ್ಟಿಯಲ್ಲಿ ನಿರ್ದಿಷ್ಟಪಡಿಸಿದ ಭೂಮಿಯು ಎಲ್ಲಾ ಹೊರೆಗಳಿಂದ ಮುಕ್ತವಾಗಿ ಕೇಂದ್ರ ಸರ್ಕಾರದಲ್ಲಿ ಸಂಪೂರ್ಣವಾಗಿ ನಿಹಿತವಾಗುತ್ತದೆ ಎಂದು ಈ ಮೂಲಕ ಘೋಷಿಸುತ್ತದೆ.

ವೇಳಾಪಟ್ಟಿ

ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ಭೂಪ್ರದೇಶದಲ್ಲಿ ರಚನೆಗಳೊಂದಿಗೆ ಅಥವಾ ಇಲ್ಲದೆ ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ಸಂಕ್ಷಿಪ್ತ ವಿವರಣೆ.

ರಾಜ್ಯ : ಕರ್ನಾಟಕ — **ಜಿಲ್ಲೆ : ತುಮಕೂರು**
ತಾಲ್ಲೂಕು : ತುಮಕೂರು — **ಗ್ರಾಮ : ಪಂಡಿತನಹಳ್ಳಿ**

ಕ್ರ. ಸಂ.	ಸರ್ವೇ ನಂ./ ಪ್ಲಾಟ್ ನಂ.	ಭೂಮಿಯ ಪ್ರಕಾರ	ಭೂಮಿಯ ಸ್ವಭಾವ	ವಿಸ್ತೀರ್ಣ (ಎ–ಗುಂ)	ಭೂಮಾಲಿಕರ / ಆಸಕ್ತ ವ್ಯಕ್ತಿಗಳ ಹೆಸರು
1	50/3	ಎನ್.ಎ.ಕೆ	ಎನ್.ಎ.ಕೆ	0–05	ಬಿ.ಜಿ. ಗಂಗಹನುಮೇಗೌಡ, ತಂದೆ: ಗಂಗಪ್ಪ
2	53/3	ಒಣಭೂಮಿ	ಒಣಭೂಮಿ	0–02 1/2	ನೀಲಮ್ಮ ಪತಿ: ವಿತಲಸ್ವಾಮಿ, ಬೋಗ ನರಸಿಂಹಯ್ಯ ತಂದೆ: ದಿ. ನರಸಹನುಮಯ್ಯ, ಪಿ.ಎನ್. ಗಿರೀಶ್ ತಂದೆ: ನರಸಹನುಮಯ್ಯ (ಜಂಟಿ), ಗೌರಮ್ಮ ಪತಿ: ದಿ. ಹನುಮಂತಯ್ಯ, ಲಕ್ಷ್ಮಮ್ಮ ಪತಿ: ದಿ. ಲಕ್ಷ್ಮಯ್ಯ (ಜಂಟಿ)
3	55/1	ಒಣಭೂಮಿ	ಒಣಭೂಮಿ	0–04 1/4	ನರಸಮ್ಮ ಹಾಗೂ ಅವರ ಪುತ್ರರು ಮತ್ತು ಪುತ್ರಿಯರು ನರಸಿಂಹಯ್ಯ ಮತ್ತು ನರಸಿಂಹಮೂರ್ತಿ (ಜಂಟಿ), ಲಕ್ಷ್ಮಯ್ಯ ತಂದೆ: ಅಂಜಿನಿ, ಹನುಮಂತಯ್ಯ ತಂದೆ: ಅಂಜಿನಿ, ಗಂಗಮ್ಮ ಪತಿ: ಸತೀಶ್, ಸಿದ್ದಯ್ಯ ತಂದೆ: ರಾಮಯ್ಯ, ಹೆಚ್. ಗಂಗಹನುಮಯ್ಯ ತಂದೆ: ಹನುಮನರಸಯ್ಯ, ಚಿಕ್ಕಹನುಮಯ್ಯ ತಂದೆ: ಹನುಮಯ್ಯ, ಎಲ್. ನರಸಹನುಮಯ್ಯ ತಂದೆ: ಲೇಂಕಪ್ಪ (ಜಂಟಿ)
4	56	ಒಣಭೂಮಿ	ಒಣಭೂಮಿ	0–03 3/4	ನರಸಿಂಹಮೂರ್ತಿ ಡಿ.ಪಿ. ತಂದೆ: ದಿ. ದೊಡ್ಡಯ್ಯ, ಕುಲಾಲವಾಡಿ ಇನಾಂ, ಪುಟ್ಟಹನುಮಯ್ಯ, ದಾನಹನುಮ, ಸಂಜೀವ, ಗಂಗಹನುಮಯ್ಯ, ಲೇಂಕಹನುಮ, ಗಂಗಮ್ಮ ಪತಿ: ಹುಚ್ಚಹನುಮ್ಮ (ಜಂಟಿ), ಭಾಗ್ಯ ಪತಿ: ಲಕ್ಷ್ಮೀಪತಿ ಪಿ.ಎಚ್
5	57/6	ಎನ್.ಎ.ಕೆ	ಎನ್.ಎ.ಕೆ	0–00 1/2	ಎಂ.ಎನ್. ಲಕ್ಷ್ಮಿಕಾಂತಯ್ಯ ತಂದೆ: ನರಸೇಗೌಡ
6	(1)50/3& (2)57/4	ರಸ್ತೆ	ರಸ್ತೆ	0–33	ರಾಷ್ಟ್ರೀಯ ಹೆದ್ದಾರಿ 48ರಿಂದ ಪಂಡಿತನಹಳ್ಳಿ ಗ್ರಾಮದ ಉತ್ತರ ಭಾಗದ ರಸ್ತೆ, ಸರ್ವೇ ನಂ.50/3 ರಿಂದ ಸರ್ವೇ ನಂ.57/4ರವರೆಗೆ
ಒಟ್ಟು ವಿಸ್ತೀರ್ಣ				1 ಏಕರೆ 09 ಗುಂಟೆ (0 ಏಕರೆ 33 ಗುಂಟೆ ಸರ್ಕಾರಿ ರಸ್ತೆ, 0 ಏಕರೆ 16 ಗುಂಟೆ ಖಾಸಗಿ ಜಮೀನು)	

ನಂ.ಡಬ್ಲ್ಯೂ .271/ಸಿಎನ್/ಬಿಎನ್‌ಸಿ/2026–27/ಲ್ಯಾಂಡ್ ಎಸ್‌ಆರ್‌ಪಿ/1727

ವಿವರಗಳಿಗೆ **https://egazette.gov.in** ಗೆ ಲಾಗ್ ಆನ್ ಮಾಡಿ.

ಸಹಿ/–
ಪ್ರದೀಪ್ ಪುರಿ,
ಮುಖ್ಯ ಎಂಜಿನಿಯರ್–III, ನಿರ್ಮಾಣ, ಬೆಂಗಳೂರು ಕಂಟೋನ್ಮೆಂಟ್

ಪಿಯುಬಿ/230/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026–27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway-SWR · SWRRLY · @SWRAILWAYHQ · @sw_railways

ನೈಋತ್ಯ ರೈಲ್ವೆ

ರೈಲ್ವೆ ಸಚಿವಾಲಯ
ಅಧಿಸೂಚನೆ
ಬೆಂಗಳೂರು, 2ನೇ ಜೂನ್ 2026

ಎಸ್.ಒ. 2801(ಇ). ರೈಲ್ವೆ ಕಾಯ್ದೆ 1989 (1989 ರ 24) (ಇನ್ನು ಮುಂದೆ ಸದರಿ ಕಾಯ್ದೆ ಎಂದು ಉಲ್ಲೇಖಿಸಲಾಗಿದೆ) ರ ಸೆಕ್ಷನ್ 20 ಎ ನ ಉಪವಿಭಾಗ (1) ರ ಮೂಲಕ ನೀಡಲಾದ ಅಧಿಕಾರಗಳನ್ನು ಚಲಾಯಿಸುವಾಗ, ಕೇಂದ್ರ ಸರ್ಕಾರವು ಇಲ್ಲಿ ಲಗತ್ತಿಸಲಾದ ವೇಳಾಪಟ್ಟಿಯಲ್ಲಿ ಸಂಕ್ಷಿಪ್ತ ವಿವರಣೆಯನ್ನು ನೀಡಲಾದ ಭೂಮಿಯು ಸಾರ್ವಜನಿಕ ಉದ್ದೇಶಕ್ಕಾಗಿ ವಿಶೇಷ ರೈಲ್ವೆ ಯೋಜನೆಯನ್ನು ಕಾರ್ಯಗತಗೊಳಿಸಲು ಅಗತ್ಯವಿದೆ ಎಂದು ತೃಪ್ತಿಪಡಿಸಿದ ನಂತರ, ಲೆವೆಲ್ ಕ್ರಾಸಿಂಗ್ ಸಂಖ್ಯೆ 81 ರ ಬದಲಿಗೆ ಕರಡಿ–ತಿಪಟೂರು ನಡುವಿನ ಆರ್‌ಒಬಿ ನಿರ್ಮಾಣವು ಅಂತಹ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳುವ ಉದ್ದೇಶವನ್ನು ಈ ಮೂಲಕ ಘೋಷಿಸುತ್ತದೆ.

ಸದರಿ ಭೂಮಿಯಲ್ಲಿ ಆಸಕ್ತಿ ಹೊಂದಿರುವ ಯಾವುದೇ ವ್ಯಕ್ತಿಯು ಅಧಿಕೃತ ಗೆಜೆಟ್‌ನಲ್ಲಿ ಈ ಅಧಿಸೂಚನೆಯನ್ನು ಪ್ರಕಟಿಸಿದ ದಿನಾಂಕದಿಂದ ಮೂವತ್ತು ದಿನಗಳ ಒಳಗೆ ಸದರಿ ಕಾಯಿದೆಯ ಸೆಕ್ಷನ್ 20D ಯ ಉಪ–ವಿಭಾಗ (1) ರ ಅಡಿಯಲ್ಲಿ ಮೇಲೆ ತಿಳಿಸಿದ ಉದ್ದೇಶಕ್ಕಾಗಿ ಅಂತಹ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಮತ್ತು ಬಳಸಲು ಆಕ್ಷೇಪಣೆ ಸಲ್ಲಿಸಬಹುದು.

ಕರಡಿ–ತಿಪ್ಟೂರು ನಡುವಿನ ಆರ್.ಒ.ಬಿ. ನಿರ್ಮಾಣದ ಲೆವೆಲ್ ಕ್ರಾಸಿಂಗ್ ಸಂಖ್ಯೆ 81 ರ ಬದಲಿಗೆ ಆರ್.ಒ.ಬಿ / ಆರ್.ಯು.ಬಿ.ಗಳಿಗಾಗಿ ತುಮಕೂರು–ರಾಯದುರ್ಗ ಮತ್ತು ತುಮಕೂರು–ದಾವಣಗೆರೆ ರೈಲ್ವೆ ಯೋಜನೆ ತುಮಕೂರು ಅವರ ಸಕ್ಷಮ ಪ್ರಾಧಿಕಾರ ಮತ್ತು ವಿಶೇಷ ಭೂಸ್ವಾಧೀನ ಅಧಿಕಾರಿಗೆ ಅಂತಹ ಪ್ರತಿಯೊಂದು ಆಕ್ಷೇಪಣೆಯನ್ನು ಲಿಖಿತವಾಗಿ ಸಲ್ಲಿಸಬೇಕು ಮತ್ತು ಅದರ ಆಧಾರವನ್ನು ನಿಗದಿಪಡಿಸಬೇಕು ಮತ್ತು ಸಕ್ಷಮ ಪ್ರಾಧಿಕಾರವು ಆಕ್ಷೇಪಣೆದಾರರಿಗೆ ವೈಯಕ್ತಿಕವಾಗಿ ಅಥವಾ ಕಾನೂನು ವೃತ್ತಿಪರರಿಂದ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶವನ್ನು ನೀಡಬೇಕು ಮತ್ತು ಅಂತಹ ಎಲ್ಲಾ ಆಕ್ಷೇಪಣೆಗಳನ್ನು ಆಲಿಸಿದ ನಂತರ ಮತ್ತು ಸಕ್ಷಮ ಪ್ರಾಧಿಕಾರವು ಅಗತ್ಯವೆಂದು ಭಾವಿಸಿದರೆ ಅಂತಹ ಹೆಚ್ಚಿನ ವಿಚಾರಣೆಯನ್ನು ಮಾಡಿದ ನಂತರ ಆಕ್ಷೇಪಣೆಗಳನ್ನು ಅನುಮತಿಸಬಹುದು ಅಥವಾ ನಿರಾಕರಿಸಬಹುದು.

ಸದರಿ ಕಾಯ್ದೆಯ ಸೆಕ್ಷನ್ 20D ಯ ಉಪ–ವಿಭಾಗ (2) ರ ಅಡಿಯಲ್ಲಿ ಸಕ್ಷಮ ಪ್ರಾಧಿಕಾರವು ಮಾಡಿದ ಯಾವುದೇ ಆದೇಶವು ಅಂತಿಮವಾಗಿರುತ್ತದೆ.

ಈ ಅಧಿಸೂಚನೆಯ ವ್ಯಾಪ್ತಿಗೆ ಬರುವ ಭೂಮಿಯ ನಕ್ಷೆಗಳು ಮತ್ತು ಇತರ ವಿವರಗಳು ಲಭ್ಯವಿದ್ದು, ಆಸಕ್ತ ವ್ಯಕ್ತಿಯು ಮೇಲೆ ತಿಳಿಸಲಾದ ಸಕ್ಷಮ ಪ್ರಾಧಿಕಾರ ಮತ್ತು ವಿಶೇಷ ಭೂಸ್ವಾಧೀನ ಅಧಿಕಾರಿಯ ಕಚೇರಿಯಾದ ತುಮಕೂರು–ರಾಯದುರ್ಗ ಮತ್ತು ತುಮಕೂರು–ದಾವಣಗೆರೆ ರೈಲ್ವೆ ಯೋಜನೆ ತುಮಕೂರು ನಲ್ಲಿ ಪರಿಶೀಲಿಸಬಹುದು.

ವೇಳಾಪಟ್ಟಿ

ಕರಡಿ–ತಿಪಟೂರು ನಡುವಿನ ROB ನಿರ್ಮಾಣದ ಲೆವೆಲ್ ಕ್ರಾಸಿಂಗ್ ಸಂಖ್ಯೆ 81 ರ ಬದಲಿಗೆ ಪ್ರಸ್ತಾವಿತ ವಿಶೇಷ ರೈಲ್ವೆ ಯೋಜನೆಯ ಸೇತುವೆಗಳ ವ್ಯಾಪ್ತಿಯಲ್ಲಿ ಬರುವ ಅಥವಾ ರಚನೆಯಿಲ್ಲದೆ ಸ್ವಾಧೀನಪಡಿಸಿಕೊಳ್ಳಬೇಕಾದ ಭೂಮಿಯ ಸಂಕ್ಷಿಪ್ತ ವಿವರಣೆ.

ಜಿಲ್ಲೆ: ತುಮಕೂರು ತಾಲೂಕು: ತಿಪಟೂರು ಹೋಬಳಿ: ಕಸಬಾ ಗ್ರಾಮ: ಕೊಪ್ಪ

ಕ್ರ. ಸಂ.	ಸರ್ವೆ ನಂ.	ಫಲಾನುಭವಿ	ಸ್ವಾಧೀನಪಡಿಸಿಕೊಂಡ ವಿಸ್ತಾರ (ಎಕರೆ–ಗುಂಟಾಸ್‌ಗಳಲ್ಲಿ) ಒಟ್ಟು (ಎ–ಜಿ)	ಎ ಖರಾಬ್ (ಎ–ಜಿ)	ಬಿ ಖರಾಬ್ (ಎ–ಜಿ)	ಸಮತೋಲನ (ಎ–ಜಿ)	ಭೂಮಿಯ ವರ್ಗೀಕರಣ
1	52/4	ಬಿ.ಎಸ್. ಬಸವರಾಜು ಎಸ್/ಒ ಶಿವಪ್ಪ	0–36	–	–	0–36	ಒಣ
2	52/5	ಟಿ.ಎಸ್. ಚನ್ನೇಗೌಡ ಎಸ್/ಒ ಸುಬಗಯ್ಯಗೌಡ	0–00 1/2	–	–	0–00 1/2	ಒಣ
3	52/6	ಟಿ.ಎಸ್. ಚನ್ನೇಗೌಡ ಎಸ್/ಒ ಸುಬಗಯ್ಯಗೌಡ	0–03 1/2	–	–	0–03 1/2	ಒಣ
4	52/7	ದಿಲ್ ಶಾದಿಬೀ ಡಿ/ಒ ಮೊಹಮ್ಮದ್ ಹುಶೀನ್ ಸಬ್ ಶಹತಾಜ್ ಬೀ ಡಿ/ಒ ಮೊಹಮ್ಮದ್ ಹುಶೀನ್ ಸಬ್	0–02	–	–	0–02	ಒಣ
5	52/11	ಟಿ.ಎಸ್. ಚನ್ನೇಗೌಡ ಎಸ್/ಒ ಸುಬಗಯ್ಯಗೌಡ	0–05 1/2	–	–	0–05 1/2	ಒಣ
6	52/13	ಎಂ ಸೌಭಾಗ್ಯ ಟಿ.ಎಸ್. ಚನ್ನೇಗೌಡ	0–02	–	–	0–02	ಒಣ
7	53	ಟಿ.ಎಸ್. ಚನ್ನೇಗೌಡ ಎಸ್/ಒ ಸುಬಗಯ್ಯಗೌಡ	0–04	–	–	0–04	ಒಣ
8	57	ಕೆಂಪಯ್ಯ ಸಿ/ಒ ಚನ್ನಯ್ಯ ಎಂ.ವೀರರಾಜು ಸ/ಓ ಕೆ.ಎಂ. ಮುನಿಕೃಷ್ಣಪ್ಪ ಎಂ. ವೀರರಾಜು ಕೆ.ಸಿ. ಗಂಗಾಧರಯ್ಯ S/O ಚಂದ್ರಯ್ಯ ವಸಂತಮ್ಮ D/O ಚಂದ್ರಯ್ಯ ಗುರುದತ್ S/O ಚಂದ್ರಯ್ಯ ಮಮತಾ ಡಿ/ಒ ಚಂದ್ರಯ್ಯ ರಂಗಯ್ಯ ಎಸ್/ಒ ದಾಸಣ್ಣ ರಾಮಯ್ಯ ಸೋ/ಓ ಲಕ್ಕಯ್ಯ ಲಕ್ಷ್ಮಿ W/O ಕೆ.ಎಂ. ರವೀಂದ್ರ ಗಂಗಮ್ಮ ಚಂದ್ರಯ್ಯ ಕೆ.ಸಿ. ಗಂಗಾಧರಯ್ಯ ಎಸ್/ಒಚಂದ್ರಯ್ಯ ವಸಂತಮ್ಮ ಡಿ/ಒ ಚಂದ್ರಯ್ಯ ಗುರುದತ್ತ ಎಸ್/ಒ ಚಂದ್ರಯ್ಯ ಮಮತಾ ಡಿ/ಒ ಚಂದ್ರಯ್ಯ ಗಂಗಮ್ಮ ಚಂದ್ರಯ್ಯ ಗೋಮಾಳ ಲಕ್ಷ್ಮಿ W/O ಕೆ.ಎಂ. ರವೀಂದ್ರ	0–37 1/2	–	–	0–37 1/2	ಅನುದಾನ
ಒಟ್ಟು			**2–11**	–	–	**2–11**	–

ಅಮೂರ್ತ

ಒಣ	ಅನುದಾನ	ಖರಾಬ್	ಒಟ್ಟು
1–13 1/2	0–37 1/2	–	2–11

ನಂ.ಡಬ್ಲ್ಯೂ .271/ಸಿಎನ್/ಬಿಎನ್‌ಸಿ/2026–27/ಲ್ಯಾಂಡ್ ಎಸ್‌ಆರ್‌ಪಿ/1727

ವಿವರಗಳಿಗೆ **https://egazette.gov.in** ಗೆ ಲಾಗ್ ಆನ್ ಮಾಡಿ.

ಸಹಿ/–
ಪ್ರದೀಪ್ ಪುರಿ,
ಮುಖ್ಯ ಎಂಜಿನಿಯರ್–III, ನಿರ್ಮಾಣ, ಬೆಂಗಳೂರು ಕಂಟೋನ್ಮೆಂಟ್

ಪಿಯುಬಿ/229/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2026–27

ಸುಲಭ ಟಿಕೆಟ್ ಬುಕಿಂಗ್, PNR ಸ್ಥಿತಿ ಮತ್ತು ಹೆಚ್ಚಿನ ರೈಲ್ವೆ ಸೇವೆಗಳಿಗಾಗಿ **RailOne** ಅಪ್ಲಿಕೇಶನ್ ಡೌನ್‌ಲೋಡ್ ಮಾಡಿ.

South Western Railway-SWR · SWRRLY · @SWRAILWAYHQ · @sw_railways

ಗಂಟೆಯೊಳಗೆ ರೋಗಿಗೆ ಸ್ಪಂದನ

ಕ್ಯಾನ್ಸರ್: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ಉಪಶಮನ ಆರೈಕೆಗೆ ಹೆಚ್ಚಿದ ಬೇಡಿಕೆ

● ವರುಣ ಹೆಗಡೆ

ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ಪ್ರಾರಂಭಿಸಿರುವ ಗೃಹ ಆಧಾರಿತ ಉಪಶಮನ ಆರೈಕೆಗೆ (ಪ್ಯಾಲಿಯೇಟಿವ್ ಕೇರ್) ಉತ್ತಮ ಸ್ಪಂದನ ವ್ಯಕ್ತವಾಗಿದೆ. ಆದ್ದರಿಂದ ಈ ಸೇವೆಯನ್ನು ವಿಸ್ತರಿಸಿ, ತುರ್ತು ದೂರವಾಣಿ ಕರೆಗಳಿಗೆ ಗಂಟೆಯೊಳಗೆ ಸ್ಪಂದಿಸಲು ಸಂಸ್ಥೆ ಮುಂದಾಗಿದೆ.

ಸಂಸ್ಥೆಯ ವೇದನೆ ಮತ್ತು ಉಪಶಮನ ವೈದ್ಯಕೀಯ ವಿಭಾಗ ಈ ವರ್ಷ ಮಾರ್ಚ್ ತಿಂಗಳಿನಿಂದ ಗೃಹ ಆಧಾರಿತ ಉಪಶಮನ ಸೇವೆಯನ್ನು ಒದಗಿಸುತ್ತಿದೆ. ತಜ್ಞ ವೈದ್ಯರನ್ನು ಒಳಗೊಂಡ ತಂಡವು ನಿಗದಿತ ಕ್ಯಾನ್ಸರ್ ಪೀಡಿತರಿಗೆ ಮನೆಯಲ್ಲಿಯೇ ಅಗತ್ಯ ವೈದ್ಯಕೀಯ ಆರೈಕೆ ಒದಗಿಸುತ್ತಿದ್ದು, ರೋಗಿಯ ಜೀವನದ ಗುಣಮಟ್ಟ ಸುಧಾರಿಸಲು ಈ ವಿಶೇಷ ವೈದ್ಯಕೀಯ ಚಿಕಿತ್ಸೆ ನೆರವಾಗಿದೆ. ನೋವು ಮತ್ತು ರೋಗ ಲಕ್ಷಣಗಳನ್ನು ನಿರ್ವಹಿಸಲು, ದೈಹಿಕ ಹಾಗೂ ಮಾನಸಿಕ ಒತ್ತಡ ಕಡಿಮೆ ಮಾಡಲು ಈ ಆರೈಕೆ ಸಹಕಾರಿಯಾಗಿದೆ. ಈವರೆಗೆ ಗೃಹ ಆಧಾರಿತ ಉಪಶಮನ ಆರೈಕೆಗೆ 487 ರೋಗಿಗಳನ್ನು ಸಂಪರ್ಕಿಸಿ, ಸಮಾಲೋಚನೆ ನಡೆಸಲಾಗಿದೆ. ಒಟ್ಟು 191 ಮನೆಗಳಿಗೆ ಭೇಟಿ ನೀಡಿ, 164 ಕ್ಯಾನ್ಸರ್ ಪೀಡಿತರಿಗೆ ಮನೆಗಳಲ್ಲಿಯೇ ಆರೈಕೆ (ಕ್ಲಿನಿಕಲ್ ಬೆಡ್‌ಸೈಡ್ ಪ್ರಕ್ರಿಯೆ) ಮಾಡಲಾಗಿದೆ.

ರೋಗಿಗಳ ಸ್ಥಿತಿಗತಿಯನ್ನಾಧರಿಸಿ ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ. ಅತಿ ಆದ್ಯತೆಯ ಪ್ರಕರಣಗಳಲ್ಲಿ ರೋಗಿಯ ಹೆಸರು ನೋಂದಾಯಿಸಿಕೊಂಡ ಮರುದಿನವೇ ಗೃಹ ಆರೈಕೆ ತಂಡಗಳು ಮನೆಗಳಿಗೆ ಭೇಟಿ ನೀಡಲಿವೆ. ಮಧ್ಯಮ ಆದ್ಯತೆಯ ಪ್ರಕರಣಗಳಲ್ಲಿ, ನಂತರದ ದಿನಗಳಲ್ಲಿ ಯೋಜಿತ ಭೇಟಿ ಮಾಡಲಾಗುತ್ತಿದೆ. ಕಡಿಮೆ ಆದ್ಯತೆಯ ಪ್ರಕರಣಗಳಲ್ಲಿ ಅಗತ್ಯತೆ ಮತ್ತು ಲಭ್ಯತೆ ಆಧರಿಸಿ ತಂಡವು ಭೇಟಿ ಕೊಡುತ್ತಿದೆ. ಈ ಸೇವೆಯ ಮುಂದುವರಿದ ಭಾಗವಾಗಿ ಹಾಗೂ ಈ ಉಚಿತ ಸೇವೆಗೆ ಬೇಡಿಕೆ ಹೆಚ್ಚುತ್ತಿರುವ ಕಾರಣ, ತುರ್ತು ಕರೆಗಳಿಗೆ ಸ್ಪಂದಿಸಲು ಮತ್ತೊಂದು ಗೃಹ ಆರೈಕೆ ತಂಡವನ್ನು ಆರಂಭಿಸಲು ಸಂಸ್ಥೆಯು ಯೋಜನೆ ರೂಪಿಸಿದೆ.

3,370 ಕಿ.ಮೀ. ಸಂಚಾರ: ಸದ್ಯ ಈ ಯೋಜನೆಯಡಿ ಎರಡು ತಂಡಗಳು ಕಾರ್ಯನಿರ್ವಹಿಸುತ್ತಿದ್ದು, ಎರಡು ವಿಶೇಷ ವಾಹನಗಳ ಮೂಲಕ ಮನೆಗಳಿಗೆ ಭೇಟಿ ನೀಡುತ್ತಿವೆ. ಮಾರ್ಚ್‌ನಿಂದ ಈವರೆಗೆ ವಾಹನಗಳು 3,370 ಕಿ.ಮೀ. ಸಂಚರಿಸಿವೆ. ಕ್ಯಾನ್ಸರ್ ರೋಗಿಗಳಿಗೆ ಅವರ ಮನೆಯಲ್ಲಿಯೇ ಸಮಗ್ರ ಮತ್ತು ಮಾನವೀಯ ಆರೈಕೆಯನ್ನು ಒದಗಿಸುವ ಉದ್ದೇಶದಿಂದ ಈ ಸೇವೆಯನ್ನು ಪ್ರಾರಂಭಿಸಲಾಗಿದ್ದು, ಸದ್ಯ ಸಂಸ್ಥೆಯಿಂದ ಸುಮಾರು 40 ಕಿ.ಮೀ. ವ್ಯಾಪ್ತಿಯಲ್ಲಿ ರೋಗಿಗಳನ್ನು ತಲುಪಲಾಗುತ್ತಿದೆ.

‘ನಿಗದಿತ ರೋಗಿ ನೋಂದಣಿಯಾದ ನಂತರ ಅವರ ಪ್ರಾಥಮಿಕ ಮೌಲ್ಯಮಾಪನವನ್ನು ನಡೆಸಲಾಗುತ್ತದೆ. ನಂತರ ರೋಗಿಯ ವಿವರಗಳನ್ನು ಒಳಗೊಂಡ ಶಿಫಾರಸು ಅರ್ಜಿಯನ್ನು ಗೃಹ ಆರೈಕೆ ತಂಡಕ್ಕೆ ನೀಡಲಾಗುತ್ತದೆ. ಸಂಸ್ಥೆಯ ಆವರಣದಲ್ಲಿರುವ ಇನ್ಫೊಸಿಸ್ ಧರ್ಮಶಾಲಾ ಕಟ್ಟಡದ ನೆಲ ಮಹಡಿಯಲ್ಲಿ ಪ್ರತ್ಯೇಕ ಕಚೇರಿ ಕಾರ್ಯನಿರ್ವಹಿಸುತ್ತಿದೆ’ ಎಂದು ಸಂಸ್ಥೆಯ ವೇದನೆ ಮತ್ತು ಉಪಶಮನ ವೈದ್ಯಕೀಯ ವಿಭಾಗದ (ಪ್ಯಾಲಿಯೇಟಿವ್ ಕೇರ್) ಮುಖ್ಯಸ್ಥ ಡಾ. ಯದುರಾಜ್ ಎಂ.ಕೆ. ತಿಳಿಸಿದರು.

ಗೃಹ ಆಧಾರಿತ ಉಪಶಮನ ಆರೈಕೆ ಸೇವೆಗೆ ಸಹಾಯವಾಣಿ: 9187590629

ಅಂಕಿ ಅಂಶಗಳು

874
ರೋಗಿಗಳ ಚಿಕಿತ್ಸೆಗೆ ಸಂಸ್ಥೆ ಹೊಂದಿರುವ ಬೆಡ್‌ಗಳು

800-1,000
ನಿತ್ಯ ಭೇಟಿ ನೀಡುವ ಸರಾಸರಿ ಹೊರ ರೋಗಿಗಳು

ಗೃಹ ಆಧಾರಿತ ಉಪಶಮನ ಆರೈಕೆಗೆ ಉತ್ತಮ ಸ್ಪಂದನ ವ್ಯಕ್ತವಾಗಿದೆ. ಅನಗತ್ಯ ತುರ್ತು ದಾಖಲಾತಿ ತಪ್ಪಿಸುವ ಈ ಆರೈಕೆಯು ರೋಗಿಗೆ ಸಹಕಾರಿಯಾಗಿದ್ದು, ಸೇವೆ ಪಡೆದವರು ಸಂಸ್ಥೆಗೆ ಕೃತಜ್ಞತೆ ಸಲ್ಲಿಸುತ್ತಿದ್ದಾರೆ

ಡಾ.ಟಿ. ನವೀನ್, ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆ ನಿರ್ದೇಶಕ

ರೋಗಿಗಳ ನಿರ್ವಹಣೆಗೆ ಸಹಕಾರಿ

ವಿವಿಧ ಪ್ರಕಾರದ ಕ್ಯಾನ್ಸರ್‌ಗಳಿಗೆ ಚಿಕಿತ್ಸೆ ಹಾಗೂ ರೋಗ ಪತ್ತೆ ಸಂಬಂಧ ಇಲ್ಲಿನ ಹೊಂಬೇಗೌಡ ನಗರದಲ್ಲಿರುವ ಸಂಸ್ಥೆಗೆ ಭೇಟಿ ನೀಡುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚಳವಾಗುತ್ತಿದೆ. ರಾಜ್ಯದ ವಿವಿಧ ಭಾಗಗಳ ಜತೆಗೆ ಹೊರ ರಾಜ್ಯಗಳಿಂದಲೂ ಪ್ರತಿನಿತ್ಯ ಸಾವಿರಾರು ಸಂಖ್ಯೆಯಲ್ಲಿ ರೋಗಿಗಳು ಬರುತ್ತಾರೆ. ದಾಖಲಾತಿ ಹಾಗೂ ಚಿಕಿತ್ಸೆ ವಿಳಂಬವಾದಲ್ಲಿ ರೋಗ ಉಲ್ಬಣಗೊಳ್ಳುವ ಸಾಧ್ಯತೆ ಇರುತ್ತದೆ. ಮನೆ ಆಧಾರಿತ ಉಪಶಮನ ಆರೈಕೆಯಿಂದ ಆಸ್ಪತ್ರೆಯಲ್ಲಿ ಅನಗತ್ಯ ದಾಖಲಾತಿಯೂ ಕಡಿಮೆಯಾಗಿ, ಒಳರೋಗಿಗಳಿಗೆ ಹಾಸಿಗೆಗಳು ಲಭ್ಯವಾಗುತ್ತಿವೆ. ಮನೆ ಭೇಟಿ ವೇಳೆ ರೋಗಿಗೆ ಅಗತ್ಯ ಚಿಕಿತ್ಸೆ ಒದಗಿಸುವ ಜತೆಗೆ, ಲಭ್ಯ ಔಷಧವನ್ನೂ ನೀಡಲಾಗುತ್ತಿದೆ.

ತಂಡದಲ್ಲಿಯಾರೆಲ್ಲ?
ಉಪಶಮನ ಆರೈಕೆ ವೈದ್ಯರು, ನರ್ಸಿಂಗ್ ಅಧಿಕಾರಿ, ಫಿಸಿಯೋಥೆರಪಿಸ್ಟ್, ಸೈಕೋ-ಆಂಕಾಲಜಿಸ್ಟ್, ಸಾಮಾಜಿಕ ಕಾರ್ಯಕರ್ತರು, ಸ್ವಯಂಸೇವಕರು, ಚಾಲಕರು

ಹ್ಯಾಕಥಾನ್: ಉಡುಪಿ ತಂಡಕ್ಕೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋರಮಂಗಲದ ಜ್ಯೋತಿನಿವಾಸ್ ಕಾಲೇಜಿನಲ್ಲಿ ನಡೆದ ‘ವಿಚ್ ಹಂಟ್– ಭಾರತದ ಮೊದಲ ಮಹಿಳಾ ಹ್ಯಾಕಥಾನ್’ನಲ್ಲಿ ಉಡುಪಿಯ ಧನ್ಯಶ್ರೀ ಭಟ್, ಸಿಂಚನಾ ನಾಗೇಶ್, ವೈಭವಿ ನಾಯಕ್, ವರ್ಷಿತಾ ಕುಮಾರಿ ಅವರ ‘ವೀಫೋರ್’ ತಂಡವು ₹ 2.5 ಲಕ್ಷ ನಗದು ಬಹುಮಾನ ಗೆದ್ದಿತು.

ಹೋಪ್‌ವರ್ಕ್ಸ್ ಫೌಂಡೇಷನ್ ಆಯೋಜಿಸಿದ್ದ ಹ್ಯಾಕಥಾನ್ ಅನ್ನು ಗೃಹ ಸಚಿವ ಪ್ರಿಯಾಂಕ್ ಖರ್ಗೆ ಉದ್ಘಾಟಿಸಿದರು. 23 ರಾಜ್ಯಗಳ 6,151 ಸ್ಪರ್ಧಿಗಳು ಭಾಗವಹಿಸಿದ್ದರು. ₹19 ಲಕ್ಷ ಮೊತ್ತದ ಬಹುಮಾನಗಳನ್ನು ವಿತರಿಸಲಾಯಿತು.

ಮೈಸೂರಿನ ಜೆಎಸ್‌ಎಸ್ ವಿಜ್ಞಾನ ಮತ್ತು ತಂತ್ರಜ್ಞಾನ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಾದ ಮೌಲಿಕ್ ಜೈನ್, ರಾಧಿಕಾ ಕುಮರಿ, ತನ್ಯಾರಾಜ್ ಮತ್ತು ಸಂತೋಷಿನಿ ಅವರು ‘ಮೇಟಿಸ್’ ತಂಡವು ಮಾಡಿದ ಸ್ಮಾರ್ಟ್ ಸಿಟಿಯ ‘ಸುರಕ್ಷಿತ ಪಾದಚಾರಿ’ ಆವಿಷ್ಕಾರವು ವಿಶೇಷ ಮೆಚ್ಚುಗೆಗೆ ಪಾತ್ರವಾಯಿತು.

ಆರೋಗ್ಯ ಮತ್ತು ಜೀವನಶೈಲಿ, ಸ್ಮಾರ್ಟ್ ಸಿಟಿ, ಶಿಕ್ಷಣ, ಹವಾಮಾನ ಕ್ರಿಯಾಯೋಜನೆ ವಿಭಾಗಗಳಲ್ಲಿ 779 ಹೊಸ ಪ್ರಯೋಗಗಳನ್ನು ನಡೆಸಿ, 373 ಆವಿಷ್ಕಾರಗಳನ್ನು ‘ಕೃತಕ ಬುದ್ಧಿಮತ್ತೆ–ಹ್ಯಾಕಥಾನ್’ನಲ್ಲಿ ಸ್ಪರ್ಧಿಗಳು ಸೃಷ್ಟಿಸಿದರು. ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ, ನೀತಿ ಆಯೋಗದ ದೇಬ್‌ಜಾನಿ ಗೋಷ್, ಇಂಟೆಲ್ ಇಂಡಿಯಾದ ಅಧ್ಯಕ್ಷ ಗೋಕುಲ್ ವಿ.ಸುಬ್ರಹ್ಮಣ್ಯಂ, ಶ್ರೇಯಾ ಕೃಷ್ಣನ್ ಪಾಲ್ಗೊಂಡಿದ್ದರು.

ಜ್ಯೋತಿನಿವಾಸ್ ಕಾಲೇಜಿನಲ್ಲಿ ನಡೆದ ‘ವಿಚ್ ಹಂಟ್– ಮಹಿಳಾ ಹ್ಯಾಕಥಾನ್’ನಲ್ಲಿ ಉಡುಪಿಯ ಧನ್ಯಶ್ರೀ ಭಟ್, ಸಿಂಚನಾ ನಾಗೇಶ್, ವೈಭವಿ ನಾಯಕ್, ವರ್ಷಿತಾ ಕುಮಾರಿ ಅವರ ‘ವೀಫೋರ್’ ತಂಡವು ₹2.5 ಲಕ್ಷ ನಗದು ಬಹುಮಾನ ಗೆದ್ದುಕೊಂಡಿತು

ಘನತ್ಯಾಜ್ಯ ವಿಲೇವಾರಿ: ಶಾಸಕರ ಪತ್ರ

ಪ್ರಜಾವಾಣಿ ವಾರ್ತೆ

ರಾಜರಾಜೇಶ್ವರಿನಗರ: ‘ಶಿವನಪಾಳ್ಯ ಮುಖ್ಯರಸ್ತೆಯಲ್ಲಿರುವ ಕಸ ನಿರ್ವಹಣೆ ಘಟಕದಲ್ಲಿ ಸಮರ್ಪಕವಾಗಿ ಕಸ ವಿಲೇವಾರಿ ಮಾಡುತ್ತಿಲ್ಲ’ ಎಂದು ಆರೋಪಿಸಿ ಸ್ಥಳೀಯ ನಿವಾಸಿಗಳು ಪ್ರತಿಭಟನೆ ನಡೆಸಿದ ಬೆನ್ನಿಗೇ, ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಗಮದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗೆ ಶಾಸಕ ಎಸ್.ಟಿ.ಸೋಮಶೇಖರ್ ಅವರು ಪತ್ರ ಬರೆದಿದ್ದು, ತುರ್ತು ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದಾರೆ.

ಕಸ ನಿರ್ವಹಣೆ ಘಟಕವನ್ನು ಸ್ವಚ್ಛಗೊಳಿಸಲಾಗಿದೆ.

‘ಶಿವನಪಾಳ್ಯದಲ್ಲಿರುವ ಮಿನಿ-ಟ್ರಾನ್ಸ್‌ಫಾರ್ಮರ್ ಸ್ಟೇಷನ್‌ನ ಕಾರ್ಯನಿರ್ವಹಣೆಯನ್ನು ತಕ್ಷಣವೇ ಪರಿಶೀಲಿಸಿ, ಪರ್ಯಾಯ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕು. ಘಟಕದ ಕಾರ್ಯವನ್ನು ಸ್ಥಗಿತಗೊಳಿಸಬೇಕು’ ಎಂದು ಒತ್ತಾಯಿಸಿದ್ದಾರೆ.

‘ಉಲ್ಲಾಳು ವಾರ್ಡ್‌ನ ಶಿವನಪಾಳ್ಯದಲ್ಲಿರುವ ಮಿನಿಟ್ರಾನ್ಸ್‌ಫಾರ್ಮರ್ ಸ್ಟೇಷನ್ ಸಮರ್ಪಕವಾಗಿ ಕಾರ್ಯನಿರ್ವಹಿಸುತ್ತಿಲ್ಲ. ಶಿವನಪಾಳ್ಯ ಸೇರಿದಂತೆ ಶಿರ್ಕೆ, ಜ್ಞಾನಭಾರತಿ ಬಡಾವಣೆಯ ನಾಗರಿಕರು ನಿತ್ಯ ಹಸಿಕಸದ ಕೊಳೆತ ದುರ್ವಾಸನೆ, ನೊಣ, ಸೊಳ್ಳೆಗಳ ಹಾವಳಿಯಿಂದ ಬೇಸತ್ತಿದ್ದಾರೆ’ ಎಂದು ಗಮನ ಸೆಳೆದಿದ್ದಾರೆ.

‘ಕರ್ತವ್ಯ’ ತಂತ್ರಾಂಶ: ಶೇ 70.60ರಷ್ಟು ಸಾಧನೆ

ಬೆಂಗಳೂರು: ಸರ್ಕಾರಿ ನೌಕರರ ಚಲನವಲನ ದಾಖಲಿಸುವ ‘ಕರ್ತವ್ಯ’ ತಂತ್ರಾಂಶದಲ್ಲಿ ನೋಂದಣಿ ಪ್ರಕ್ರಿಯೆ ವೇಗವಾಗಿ ನಡೆಯುತ್ತಿದ್ದು, ಈಗಾಗಲೇ ಶೇ 70.60ಕ್ಕಿಂತಲೂ ಹೆಚ್ಚು ಸಿಬ್ಬಂದಿ ನೋಂದಾಯಿಸಿಕೊಂಡಿದ್ದಾರೆ ಎಂದು ಸರ್ಕಾರದ ಮೂಲಗಳು ತಿಳಿಸಿವೆ.

ಜೂನ್ 12 ರವರೆಗೆ 2,13,925 ನೌಕರರು ನೋಂದಣಿ ಮಾಡಿಕೊಳ್ಳಲು ಬಾಕಿ ಇದ್ದರು. ಕಳೆದ 4-5 ದಿನಗಳಲ್ಲಿ ನಡೆಸಲಾದ ವಿಶೇಷ ಆಂದೋಲನದಿಂದಾಗಿ ಈ ಸಂಖ್ಯೆ ಜೂನ್ 18ರ ವೇಳೆಗೆ 1,40,433ಕ್ಕೆ ಕುಸಿದಿದೆ. ಅಂದರೆ, ಕೇವಲ ಒಂದು ವಾರದಲ್ಲಿ ನೋಂದಣಿಯಾಗದ ನೌಕರರ ಸಂಖ್ಯೆಯಲ್ಲಿ ಶೇ 34.4ರಷ್ಟು ಇಳಿಕೆ ಆಗಿದೆ.

ನೋಂದಣಿ ಸ್ಥಿತಿಗತಿ: ‘ಮಾನವ ಸಂಪನ್ಮೂಲ ನಿರ್ವಹಣಾ ವ್ಯವಸ್ಥೆ (ಎಚ್‌ಆರ್‌ಎಂಎಸ್) ದತ್ತಾಂಶದ ಪ್ರಕಾರ, ಒಟ್ಟು 43 ಪ್ರಮುಖ ಇಲಾಖೆಗಳು ಹಾಗೂ ಅವುಗಳ ವ್ಯಾಪ್ತಿಯಲ್ಲಿರುವ 137 ಸಂಸ್ಥೆಗಳಲ್ಲಿರುವ 4,78,181 ನೌಕರರ ಪೈಕಿ 3,37,748 (ಶೇ 70.6) ನೌಕರರು ನೋಂದಾಯಿಸಿಕೊಂಡಿದ್ದಾರೆ’ ಎಂದು ಮೂಲಗಳು ಹೇಳಿವೆ.

ಸಿಬ್ಬಂದಿಯು ನೋಂದಣಿಗಾಗಿ ಇ-ಆಡಳಿತ ಕೇಂದ್ರವು ವಿಶೇಷ ತರಬೇತಿ ಮತ್ತು ನೋಂದಣಿ ಶಿಬಿರಗಳನ್ನು ಆಯೋಜಿಸಿದೆ. ತಾಂತ್ರಿಕ ಸಮಸ್ಯೆಗಳ ಪರಿಹಾರಕ್ಕೆ ನೋಡಲ್ ಅಧಿಕಾರಿಗಳು, ಸಹಾಯವಾಣಿ ಮತ್ತು ಎಐ ಆಧಾರಿತ ವಾಯ್ಸ್ ಬಾಟ್ ಸೌಲಭ್ಯ ಕಲ್ಪಿಸಲಾಗಿದೆ. ಎಲ್ಲ ಅಧಿಕಾರಿಗಳು ಮತ್ತು ನೌಕರರು ನಿಗದಿತ ಸಮಯದೊಳಗೆ ಶೇ 100 ರಷ್ಟು ನೋಂದಣಿ ಪೂರ್ಣಗೊಳಿಸುವಂತೆ ಎಲ್ಲ ಇಲಾಖೆಗಳ ಮುಖ್ಯಸ್ಥರಿಗೆ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಕಟ್ಟುನಿಟ್ಟಿನ ನಿರ್ದೇಶನ ನೀಡಿದ್ದಾರೆ.

ಶಾರ್ಟ್ ಸರ್ಕಿಟ್: ₹1.5 ಕೋಟಿ ನಷ್ಟ

ಪ್ರಜಾವಾಣಿ ವಾರ್ತೆ

ಹಳೇಬೀಡು: ಇಲ್ಲಿನ ಜಾವಗಲ್ ರಸ್ತೆಯ ದುರ್ಗಾಸ್ ಎಂಟರ್‌ಪ್ರೈಸಸ್ ಅಂಗಡಿಯಲ್ಲಿ ವಿದ್ಯುತ್ ಶಾರ್ಟ್ ಸರ್ಕಿಟ್‌ನಿಂದ ಬೆಂಕಿ ಕಾಣಿಸಿಕೊಂಡು ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಕಲ್ಸ್ ಹಾಗೂ ಗೃಹ ಬಳಕೆ ಸಾಮಗ್ರಿಗಳು ಸಂಪೂರ್ಣ ಸುಟ್ಟಿವೆ. ₹1.50 ಕೋಟಿಗೂ ಹೆಚ್ಚು ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ.

ಕಟ್ಟಡದ ನೆಲ ಹಾಗೂ ಒಂದನೇ ಅಂತಸ್ತನ್ನು ಬಾಡಿಗೆ ಪಡೆದು ಅರಸೀಕೆರೆಯ ಕಾಂತರಾಜು ಎಂಬುವವರು ಎಲೆಕ್ಟ್ರಾನಿಕ್ಸ್, ಎಲೆಕ್ಟ್ರಿಕಲ್ಸ್ ಹಾಗೂ ಗೃಹ ಬಳಕೆಯ ವಸ್ತುಗಳ ಮಾರಾಟ ಮಾಡುತ್ತಿದ್ದರು. ನೆಲ ಅಂತಸ್ತಿನ ಗೋದಾಮಿನಲ್ಲಿ ಕಾಣಿಸಿಕೊಂಡ ಬೆಂಕಿ ಶರವೇಗದಲ್ಲಿ ಕಟ್ಟಡದ ಎರಡು ಅಂತಸ್ತನ್ನು ವ್ಯಾಪಿಸಿತು. ಬೆಂಕಿಯಲ್ಲಿ ಟಿ.ವಿ, ವಾಶಿಂಗ್ ಮಷಿನ್, ಫ್ರಿಡ್ಜ್, ಮೊಬೈಲ್ ಫೋನ್ ಮೊದಲಾದ ವಸ್ತುಗಳು ಸುಟ್ಟು ಕರಕಲಾಗಿವೆ. ಠಾಣಾಧಿಕಾರಿ ಬಿ.ಎಸ್. ಮಂಜುನಾಥ್ ನೇತೃತ್ವದ ತಂಡ ಸುತ್ತಲಿನ ಕಟ್ಟಡಗಳಿಗೆ ಬೆಂಕಿ ಆವರಿಸದಂತೆ ಎಚ್ಚರವಹಿಸಿತು.

ನಗರದಲ್ಲಿ ಇಂದು

3 ಸಾವಿರ ಮಹಿಳೆಯರಿಂದ 4ನೇ ವರ್ಷದ ಲಲಿತಾ ಸಹಸ್ರನಾಮ ಪೂಜಾ ಕಾರ್ಯಕ್ರಮ: ಆಶೀರ್ವಚನ: ಸುಬುಧೇಂದ್ರ ತೀರ್ಥ ಸ್ವಾಮೀಜಿ, ನೇತೃತ್ವ: ಸಿ.ಕೆ. ರಾಮಮೂರ್ತಿ, ಅತಿಥಿಗಳು: ನಾ. ತಿಪ್ಪೇಸ್ವಾಮಿ, ಬಿ.ವೈ. ವಿಜಯೇಂದ್ರ, ಎಲ್.ಎಸ್. ತೇಜಸ್ವಿ ಸೂರ್ಯ, ಪ್ರಣೀತಾ ಸುಭಾಶ್, ಆಯೋಜನೆ: ರಕ್ಷಾ ಫೌಂಡೇಷನ್, ಸ್ಥಳ: ಚಂದ್ರಗುಪ್ತ ಮೌರ್ಯ (ಶಾಲಿನಿ) ಆಟದ ಮೈದಾನ, ಜಯನಗರ 5ನೇ ಬ್ಲಾಕ್, ಬೆಳಿಗ್ಗೆ 9.30

ಸುಬುಧೇಂದ್ರ ತೀರ್ಥ ಸ್ವಾಮೀಜಿ

ಪ್ರೊ.ನಾಗೇಶ್ ವಿ. ಬೆಟ್ಟಕೋಟೆ-60 ಅಭಿನಂದನಾ ಸಮಾರಂಭ: ಸಾನ್ನಿಧ್ಯ: ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಅಧ್ಯಕ್ಷತೆ: ಜಯಕರ್ ಎಸ್.ಎಂ., ಉದ್ಘಾಟನೆ: ಗೊ.ರು. ಚನ್ನಬಸಪ್ಪ, ಗೌರವ ಸಮರ್ಪಣೆ: ಎಸ್.ಸಿ. ಶರ್ಮಾ, ಗ್ರಂಥ ಬಿಡುಗಡೆ: ಹಂಸಲೇಖ, ಅಭಿನಂದನಾ ನುಡಿ: ಕೆ. ರಾಮಕೃಷ್ಣಯ್ಯ, ಪ್ರಾಸ್ತಾವಿಕ ನುಡಿ: ಕೆ.ವಿ. ನಾಗರಾಜಮೂರ್ತಿ, ಉಪಸ್ಥಿತಿ: ಕೆ.ಟಿ. ಶಾಂತಲಾ, ಹಂಸಿನಿ ನಾಗೇಂದ್ರ, ಬಿ. ನೀಲಮ್ಮ, ಶಿವಣ್ಣ ಎಸ್., ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ ಪ್ರದರ್ಶನ ಕಲಾ ವಿಭಾಗ, ಅಭಿನಂದನಾ ಸಮಿತಿ, ಸ್ಥಳ: ಪ್ರೊ.ವೆಂಕಟಗಿರಿಗೌಡ ಸಭಾಂಗಣ, ಜ್ಞಾನ ಭಾರತಿ, ಬೆಂಗಳೂರು ವಿಶ್ವವಿದ್ಯಾಲಯ, ಬೆಳಿಗ್ಗೆ 10.30

‘ಕೃಷಿ ಭೂಮಿಯ ಸ್ವಾಧೀನ-ರೈತರ ಅಸ್ತಿತ್ವಕ್ಕೆ ಪೂರಕವೇ... ಮಾರಕವೇ...?’ ವಿಷಯದ ಬಗ್ಗೆ ಚರ್ಚೆ ಮತ್ತು ವಿಚಾರಸಂಕಿರಣ: ಅತಿಥಿಗಳು: ಪ್ರಮೋದ್ ಚೌಧರಿ, ಸಾಯಿ ರೆಡ್ಡಿ, ಅಶೋಕ್ ದಳವಾಯಿ, ಚಂದ್ರಶೇಖರ ಎಂ. ಬಿರಾದರ್, ಆಯೋಜನೆ: ಭಾರತೀಯ ಆಗ್ರೋ ಎಕನಾಮಿಕ್ಸ್ ರಿಸರ್ಚ್ ಸೆಂಟರ್, ಸಮನ್ವಯ ಟ್ರಸ್ಟ್, ಭಾರತೀಯ ಕಿಸಾನ್ ಸಂಘ, ಸ್ಥಳ: ಗಾಂಧಿ ಭವನ, ಕುಮಾರ ಪಾರ್ಕ್ ಪೂರ್ವ, ಬೆಳಿಗ್ಗೆ 10.30

ಜಾಗತಿಕ ಸೌಂದರ್ಯ ಸ್ಪರ್ಧೆ: ಅತಿಥಿಗಳು: ಉಮಾ ರೆಡ್ಡಿ, ಜಯಮಾಲಾ, ನಿಧಿ ಅಗರ್ವಾಲ್, ಗಂಗಾ ಶ್ರೀಧರ್, ವಿಜಯ್, ಆಯೋಜನೆ: ಆಲ್ ಇಂಡಿಯಾ ಹೇರ್ ಆ್ಯಂಡ್ ಬ್ಯೂಟಿ ಅಸೋಸಿಯೇಷನ್, ಇಂಡಿಯಾ ಬ್ಯೂಟಿ ಅಸೋಸಿಯೇಷನ್, ಅಖಿಲ ಕರ್ನಾಟಕ ಬ್ಯೂಟಿ ಪಾರ್ಲರ್ ಅಸೋಸಿಯೇಷನ್, ಸ್ಥಳ: ತ್ರಿಪುರ ವಾಸಿನಿ, ಅರಮನೆ ಮೈದಾನ, ಬೆಳಿಗ್ಗೆ 10.45

ರೇಬಾ ಹೋರೆ ಜನ್ಮಶತಮಾನೋತ್ಸವ ಪ್ರಯುಕ್ತ ‘ಬ್ರೋಕನ್ ಫುಟ್ ಜರ್ನಲ್ ಮತ್ತು ಇತರ ಕಥನಗಳು’ ವಿಶೇಷ ಕಲಾ ಪ್ರದರ್ಶನ: ಆಯೋಜನೆ: ‘ಸೀಗಲ್’ ಕೋಲ್ಕತ್ತ, ಸ್ಥಳ: ಕರ್ನಾಟಕ ಚಿತ್ರಕಲಾ ಪರಿಷತ್, ಕುಮಾರಕೃಪಾ ರಸ್ತೆ, ಬೆಳಿಗ್ಗೆ 11

ಆತ್ಮಾನಂದ ಅವರ ಚಿತ್ರಕಲಾ ಪ್ರದರ್ಶನ: ಆಯೋಜನೆ: ಕರ್ನಾಟಕ ಕಲಾ ಪ್ರತಿಷ್ಠಾನ, ಸ್ಥಳ: ವರ್ಣ ಕಲಾ ಗ್ಯಾಲರಿ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಳಿಗ್ಗೆ 11

‘ಸ್ವರ್ಣರಶ್ಮಿ ಕೌಶಲಾಭಿವೃದ್ಧಿ ಮತ್ತು ತರಬೇತಿ ಸಂಸ್ಥೆ’ ಕಟ್ಟಡದ ಶಿಲಾನ್ಯಾಸ: ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ, ಅತಿಥಿ: ವಿ. ಸೋಮಣ್ಣ, ಎನ್.ಮುನಿರತ್ನ, ಉಪಸ್ಥಿತಿ: ಮನೋಜಕುಮಾರ ದುಬೆ, ಆಯೋಜನೆ: ಸ್ವರ್ಣರಶ್ಮಿ ಪ್ರತಿಷ್ಠಾನ, ಸ್ಥಳ: 25 ಬಿ, 2ನೇ ಮುಖ್ಯರಸ್ತೆ, ಎ.ಪಿ.ಎಂ. ಬಡಾವಣೆ, (ದೀಪಾ ಕಾಂಪ್ಲೆಕ್ಸ್ ಸಮೀಪ), ನಾಗರಬಾವಿ ವರ್ತುಲ ರಸ್ತೆ, ಮಧ್ಯಾಹ್ನ 4.30

ಗಂಗಾಧರೇಂದ್ರ ಸರಸ್ವತೀ ಸ್ವಾಮೀಜಿ

‘ದೈವಿಕ ಮತ್ತು ಪರಿಸರ’ ಶೀರ್ಷಿಕೆಯಡಿ ಕಲಾ ಪ್ರದರ್ಶನದ ಉದ್ಘಾಟನೆ: ಅತಿಥಿ: ಕಾಂತರಾಜ್, ಕಲಾವಿದರು: 15 ವರ್ಷದೊಳಗಿನ ಮಕ್ಕಳು, ಆಯೋಜನೆ: ತನುಶ್ರೀ ಆರ್ಟ್ ಸೆಂಟರ್, ಸ್ಥಳ: ದೇವರಾಜ್ ಅರಸ್ ಗ್ಯಾಲರಿ, ಕರ್ನಾಟಕ ಚಿತ್ರಕಲಾ ಪರಿಷತ್ತು, ಕುಮಾರಕೃಪಾ ರಸ್ತೆ, ಸಂಜೆ 5 (ಕಲಾ ಪ್ರದರ್ಶನ ಬೆಳಿಗ್ಗೆ 10ರಿಂದ ಸಂಜೆ 7)

ಸಂಗೀತ ಸಂಜೆ: ನೇತೃತ್ವ: ಭರತ್ ರಾಮಾನುಜಂ, ಗಾಯನ: ಸುಜಾತ, ನಾಗರಾಜ್, ಶರದ್, ಸುಹಾಸ್ ಭಟ್, ಸೀತಾರಾಮ ಶಾಸ್ತ್ರಿ, ಸಹನಾ ರಾಕೇಶ್, ಮಾನಸ, ಶರಣ್ಯ ಸೀತಾರಾಮ್, ಆಯೋಜನೆ: ರಿದಮ್ಸ್ ರೆಟ್ರೋ ತಂಡ, ಸ್ಥಳ: ಚೌಡಯ್ಯ ಸ್ಮಾರಕ ಭವನ, ಮಲ್ಲೇಶ್ವರ, ಸಂಜೆ 6

ಫ್ಯೂಷನ್ ಸಂಗೀತ: ಸಿಲ್ವೆಸ್ಟರ್ ಪ್ರದೀಪ್, ಸಂತೋಷ್ ಜಯರಾಮ್, ಆಯೋಜನೆ ಹಾಗೂ ಸ್ಥಳ: ಇಂಡಿಯನ್ ಹೆರಿಟೇಜ್ ಅಕಾಡೆಮಿ, ಕೋರಮಂಗಲ, ಸಂಜೆ 6.30

26ನೇ ವರ್ಷದ ಪ್ರವಚನ ವಾಹಿನಿ: ‘ವಾಲ್ಮೀಕಿ ರಾಮಾಯಣ ಹಾಗೂ ಸುಂದರಕಾಂಡದ ಸೂಕ್ಷ್ಮಾವಲೋಕನ’ ವಿಷಯದ ಬಗ್ಗೆ ಪ್ರವಚನ: ರಾಮಚಂದ್ರಮೂರ್ತಿ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ಕೋಟೆ ಮಾರಮ್ಮ ದೇವಸ್ಥಾನದ 48ನೇ ರಜತ ಮಹೋತ್ಸವ: ವಾದ್ಯಗೋಷ್ಠಿ, ಆಯೋಜನೆ ಮತ್ತು ಸ್ಥಳ: ಕೋಟೆ ಶ್ರೀಮಾರಮ್ಮ ದೇವಸ್ಥಾನ ಅನ್ನದಾನ ಸಮಿತಿ, ಕೋಟೆ ‘ಇ’ ಬೀದಿ, ಕಲಾಸಿಪಾಳ್ಯ, ಸಂಜೆ 6.30

ಕನಕದಾಸರ ವಿರಚಿತ ‘ಕೇಶವನಾಮ’ ಪ್ರವಚನ: ಕಲ್ಯಾ ನರಸಿಂಹ ಮೂರ್ತಾಚಾರ್ಯ, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಸುಧೀಂದ್ರನಗರ, ಸಂಜೆ 7

‘ದ್ರೋಹಿ ಜಿಂದಗಿ’ ನಾಟಕ ಪ್ರದರ್ಶನ: ನಿರ್ದೇಶನ: ಗರ್ಲಿನ್ ಜಡ್ಜ್, ನೇಹಾ ಸಿಂಗ್, ತಂಡ: ರಹೀ ಥಿಯೇಟರ್, ಆಯೋಜನೆ ಮತ್ತು ಸ್ಥಳ: ರಂಗಶಂಕರ, ಜೆ.ಪಿ.ನಗರ, ಸಂಜೆ 7.30

ಸಾಹಿತ್ಯಿಕ, ಸಾಂಸ್ಕೃತಿಕ ಸೇರಿದಂತೆ ವಿವಿಧ ಪ್ರಕಾರಗಳ ಕಾರ್ಯಕ್ರಮಗಳ ವಿವರಗಳನ್ನು ‘ನಗರದಲ್ಲಿ ಇಂದು’ ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ..
nagaradalli_indu@prajavani.co.in

‘ನಾಲ್ಕು ದಶಕಗಳಾದರೂ ಉತ್ಸಾಹ ಕುಗ್ಗಿಲ್ಲ’

ಥ್ರಿಲ್ಲರ್ ಮಂಜು

ಸಾಹಸ ನಿರ್ದೇಶಕ, ನಟ, ನಿರ್ಮಾಪಕ ಹಾಗೂ ನಿರ್ದೇಶಕರಾಗಿ ಚಿತ್ರರಂಗದಲ್ಲಿ ನಾಲ್ಕು ದಶಕಗಳನ್ನು ಪೂರೈಸಿರುವ ಥ್ರಿಲ್ಲರ್ ಮಂಜು, ‘ಡೆಡ್ಲಿ ಕಿಲ್ಲರ್’ ಚಿತ್ರದ ಮೂಲಕ ಮತ್ತೆ ನಿರ್ದೇಶಕನ ಕ್ಯಾಪ್ ಧರಿಸಿದ್ದಾರೆ. ನಿರ್ದೇಶನದ ಜವಾಬ್ದಾರಿ, ಸಿನಿಮಾ ಸಂಸ್ಕೃತಿಯ ಬದಲಾವಣೆ ಮತ್ತು ಚಿತ್ರೋದ್ಯಮದ ಇಂದಿನ ಸ್ಥಿತಿಗತಿ ಕುರಿತು ಅವರು ಮನಬಿಚ್ಚಿ ಮಾತನಾಡಿದ್ದಾರೆ.

• ವಿನಾಯಕ ಕೆ.ಎಸ್.

• ಹದಿನೈದು ವರ್ಷಗಳ ಬಳಿಕ ಮತ್ತೆ ನಿರ್ದೇಶನದ ಸಾಹಸ ಕೈ ಹಾಕಿದ್ದೀರಿ?

ನಾನು ಸಾಹಸ ನಿರ್ದೇಶಕ ಹಾಗೂ ನಟನಾಗಿ ಸಾಕಷ್ಟು ಸಿನಿಮಾಗಳಲ್ಲಿ ಕೆಲಸ ಮಾಡುತ್ತಿದ್ದೇನೆ. ಆದರೆ ನಿರ್ದೇಶನ ಎಂದಾಗ ಒಳ್ಳೆಯ ಕಥೆ ಬೇಕು, ಅದನ್ನು ಸಾಕಾರಗೊಳಿಸಬಲ್ಲ ನಿರ್ಮಾಪಕರೂ ಸಿಗಬೇಕು. ಆ ಕಾರಣಕ್ಕೆ ಸಮಯ ತೆಗೆದುಕೊಂಡೆ. ನನ್ನ ಗಮನ ಸಾಹಸದತ್ತ ಸ್ವಲ್ಪ ಹೆಚ್ಚು ಇರುತ್ತದೆ. ಆದರೂ ನಿರ್ದೇಶನವನ್ನು ಸಂಪೂರ್ಣವಾಗಿ ಬಿಡಲು ಸಾಧ್ಯವಿಲ್ಲ. ‘ಡೆಡ್ಲಿ ಕಿಲ್ಲರ್’ ಆ್ಯಕ್ಷನ್ ಪ್ರಧಾನ ಚಿತ್ರ. ಇದರಲ್ಲಿ ಆತಂಕ, ಕುತೂಹಲ ಮತ್ತು ಅನಿರೀಕ್ಷಿತ ತಿರುವುಗಳಿವೆ. ಪೊಲೀಸರಿಂದ ತಪ್ಪಿಸಿಕೊಳ್ಳಲು ಯತ್ನಿಸುವ ಅಪರಾಧಿಗಳ ಕಥೆಯನ್ನು ಸಿನಿಮಾ ಹೇಳುತ್ತದೆ. ಈ ಚಿತ್ರದ ಕಥೆ, ಸಂಭಾಷಣೆ, ಹಾಡುಗಳನ್ನು ನಾನೇ ಬರೆದಿದ್ದೇನೆ. ಜೊತೆಗೆ ಸಾಹಸ ಸಂಯೋಜನೆ ಹಾಗೂ ನಟನೆಯನ್ನೂ ಮಾಡಿದ್ದೇನೆ.

• ಉಳಿದ ಕೆಲಸಗಳಿಗಿಂತ ನಿರ್ದೇಶಕರಾಗುವುದು ಎಷ್ಟು ಸವಾಲು?

ನಿರ್ದೇಶಕನನ್ನು ದೋಣಿಯ ನಾವಿಕ ಎಂದು ಕರೆಯುತ್ತಾರೆ. ಇಡೀ ಸಿನಿಮಾ ಆತನ ಭುಜದ ಮೇಲೆಯೇ ನಿಂತಿರುತ್ತದೆ. ಇದು ಅಪಾರ ಶ್ರಮ ಬೇಡುವ ಕೆಲಸ. ಸಿನಿಮಾ ಗೆದ್ದರೆ ಅದರ ಯಶಸ್ಸು ಎಲ್ಲರಿಗೂ ಹಂಚಿಕೆಯಾಗುತ್ತದೆ. ಸೋತರೆ ಅದರ ಹೊಣೆಗಾರಿಕೆಯನ್ನು ನಿರ್ದೇಶಕನೇ ಹೊತ್ತುಕೊಳ್ಳಬೇಕಾಗುತ್ತದೆ. ಹಾಗಂತ ಜೀವನದಲ್ಲಿ ಅಪಾಯಗಳನ್ನು ಸ್ವೀಕರಿಸದೇ ಇರಲು ಸಾಧ್ಯವಿಲ್ಲ. ಸವಾಲುಗಳನ್ನು ಎದುರಿಸಿ ಮುನ್ನಡೆಯಬೇಕು. ಸೋಲು–ಗೆಲುವು ಎಲ್ಲರ ಬದುಕಿನ ಭಾಗ. ಯಾರ ಜೀವನದಲ್ಲೂ ಶಾಶ್ವತ ಗೆಲುವು ಅಥವಾ ಶಾಶ್ವತ ಸೋಲು ಇರುವುದಿಲ್ಲ. ಆದ್ದರಿಂದ ಸವಾಲುಗಳ ಬಗ್ಗೆ ಯೋಚಿಸುವುದಕ್ಕಿಂತ ನಮ್ಮ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಾ ಹೋಗಬೇಕು.

• ತಿರುಗಿ ನೋಡಿದರೆ ಈತನಕದ ಸಿನಿ ಪಯಣ ಹೇಗಿತ್ತು?

1985ರಲ್ಲಿ ಸಾಹಸ ಸಂಯೋಜಕನಾಗಿ ಚಿತ್ರರಂಗ ಪ್ರವೇಶಿಸಿದೆ. ಬಳಿಕ ನಟ, ನಿರ್ದೇಶಕ ಮತ್ತು ನಿರ್ಮಾಪಕನಾಗಿಯೂ ಕೆಲಸ ಮಾಡಿದೆ. ಇಷ್ಟು ಬೇಗ ನಾಲ್ಕು ದಶಕಗಳು ಕಳೆದುಹೋಗಿವೆ ಎಂದರೆ ಆಶ್ಚರ್ಯವಾಗುತ್ತದೆ. ಇಂದಿಗೂ ನನ್ನಲ್ಲಿ ಸಾಕಷ್ಟು ಕನಸುಗಳು ಮತ್ತು ಆಸೆಗಳಿವೆ. ಉತ್ಸಾಹ ಮಾತ್ರ ಸ್ವಲ್ಪವೂ ಕಡಿಮೆಯಾಗಿಲ್ಲ. ಇಷ್ಟು ವರ್ಷ ಕೆಲಸ ಮಾಡಿದ್ದೇನೆ ಎಂಬ ತೃಪ್ತಿಯ ವಿಶ್ರಾಂತಿ ನನ್ನಲ್ಲಿ ಬಂದಿಲ್ಲ. ಹೊಸಬರಿಗೆ ಇರುವ ಉತ್ಸಾಹವೇ ಈಗಲೂ ಇದೆ. ನನ್ನ ಕೆಲಸದ ಮೇಲಿನ ಗಮನ ಮತ್ತು ಬದ್ಧತೆ ಅಷ್ಟೇ ಗಟ್ಟಿಯಾಗಿದೆ.

• ಅಂದಿಗೆ ಹೋಲಿಸಿದರೆ ಇವತ್ತು ಚಿತ್ರಗಳ ಯಶಸ್ಸು ಕಡಿಮೆ ಎನ್ನಿಸುತ್ತದೆಯೇ?

ಆ ಕಾಲದಲ್ಲಿಯೂ ಸೋಲುಗಳಿದ್ದವು. ಒಂದು ಹಂತದಲ್ಲಿ ಆರು ತಿಂಗಳು ಯಾವುದೇ ಸಿನಿಮಾ ಯಶಸ್ಸು ಕಾಣದ ಸಂದರ್ಭಗಳೂ ಬಂದಿವೆ. ಬಳಿಕ ಒಂದು ಸಿನಿಮಾ ಗೆದ್ದರೆ ಉದ್ಯಮ ಮತ್ತೆ ಚೇತರಿಸಿಕೊಳ್ಳುತ್ತಿತ್ತು. ಇಂಥ ಏರಿಳಿತಗಳು ಚಿತ್ರರಂಗದಲ್ಲಿ ಸಹಜ. ಆದರೆ ಒಟ್ಟಾರೆ ನೋಡಿದರೆ ಆ ಕಾಲದಲ್ಲಿ ಯಶಸ್ಸಿನ ಪ್ರಮಾಣ ಹೆಚ್ಚಿತ್ತು. ಈಗ ಡಿಜಿಟಲ್ ಯುಗ. ಮೊಬೈಲ್‌ನಲ್ಲೇ ಇಡೀ ಜಗತ್ತು ಸಿಗುತ್ತಿದೆ. ಇಂತಹ ಸಂದರ್ಭದಲ್ಲಿ ಜನರು ಹಣ ಕೊಟ್ಟು ಚಿತ್ರಮಂದಿರಕ್ಕೆ ಬರಬೇಕೆಂದರೆ ಸಿನಿಮಾ ವಿಭಿನ್ನ ಅನುಭವ ನೀಡಬೇಕು. ಏನೋ ಒಂದು ವಿಶೇಷ ಆಕರ್ಷಣೆ ಇರಬೇಕು. ‘ಈ ಚಿತ್ರವನ್ನು ಚಿತ್ರಮಂದಿರದಲ್ಲೇ ನೋಡಬೇಕು’ ಎನ್ನುವ ಭಾವನೆ ಮೂಡಿಸಬೇಕು.

ನಾನೇ ಏಳು ಸಿನಿಮಾಗಳನ್ನು ನಿರ್ಮಿಸಿದ್ದೇನೆ. ಆ ದಿನಗಳಲ್ಲಿ ಸಿನಿಮಾ ಮುಹೂರ್ತವೇ ಒಂದು ಹಬ್ಬದಂತಿತ್ತು. ಆ್ಯಕ್ಷನ್ ಅಥವಾ ಸ್ಟಾರ್ ನಟರ ಸಿನಿಮಾಗಳಾದರೆ ಹುಬ್ಬಳ್ಳಿ, ಮಂಗಳೂರು, ಮೈಸೂರು ಭಾಗಗಳ ವಿತರಣೆ ಹಕ್ಕುಗಳು ಪೂಜೆಯ ದಿನವೇ ಮಾರಾಟವಾಗುತ್ತಿದ್ದವು. ಮೊದಲ ಪ್ರತಿ ಬಂದ ಕೂಡಲೇ ಉಳಿದ ಪ್ರದೇಶಗಳ ಹಕ್ಕುಗಳನ್ನೂ ವಿತರಕರು ಖರೀದಿಸುತ್ತಿದ್ದರು. ಈಗ ಪರಿಸ್ಥಿತಿ ಬದಲಾಗಿದೆ. ಸಿನಿಮಾ ಬಿಡುಗಡೆಯಾದ ಬಳಿಕವೂ ಮಾರಾಟ ಕಷ್ಟವಾಗುತ್ತದೆ. ಕೆಲವೇ ಕೆಲವು ಸ್ಟಾರ್ ಸಿನಿಮಾಗಳು ಮಾತ್ರ ಬಿಡುಗಡೆಗೂ ಮುನ್ನ ಉತ್ತಮ ವ್ಯಾಪಾರ ಮಾಡುತ್ತವೆ.

• ಸಾಹಸ ಸಂಯೋಜನೆಯ ಸ್ಥಿತಿ ಹೇಗಿದೆ?

ಪ್ಯಾನ್ ಇಂಡಿಯಾ ಸಿನಿಮಾ ಪರಿಕಲ್ಪನೆ ಬಂದ ಬಳಿಕ ಸಾಹಸ ಸಂಯೋಜನೆಯೂ ದೊಡ್ಡ ಸವಾಲಾಗಿದೆ. ಪ್ರೇಕ್ಷಕರ ನಿರೀಕ್ಷೆಗಳು ಹೆಚ್ಚಾಗಿವೆ. ಅದ್ಭುತ ಸಾಹಸ ದೃಶ್ಯಗಳನ್ನು ರೂಪಿಸಬೇಕಾದರೆ ದೊಡ್ಡ ಬಜೆಟ್ ಅಗತ್ಯ. ಆದರೆ ಎಲ್ಲ ನಿರ್ಮಾಪಕರಿಗೂ ಅಷ್ಟು ಆರ್ಥಿಕ ಸಾಮರ್ಥ್ಯ ಇರುವುದಿಲ್ಲ. ಹೀಗಾಗಿ ಇಂದಿನ ದಿನಗಳಲ್ಲಿ ಸಾಹಸ ಸಂಯೋಜನೆಯೂ ಸುಲಭದ ಕೆಲಸವಲ್ಲ.

• ನಿಮ್ಮ ಮುಂದಿನ ಸಿನಿಮಾಗಳು...

‘ಮುಗಿಲ ಮಲ್ಲಿಗೆ’ ಚಿತ್ರದಲ್ಲಿ ನಟಿಸಿದ್ದೇನೆ. ಇನ್ನೂ ಹೆಸರಿಡದ ಎರಡು ಸಿನಿಮಾಗಳಲ್ಲೂ ಅಭಿನಯಿಸುತ್ತಿದ್ದೇನೆ. ನಾಲ್ಕು ಸಿನಿಮಾಗಳು ಬಿಡುಗಡೆಗೆ ಸಿದ್ಧವಾಗಿವೆ. ಸಾಹಸ ಸಂಯೋಜಕನಾಗಿ ಕೆಲಸ ಮಾಡಿರುವ ಸುಮಾರು 15ರಿಂದ 20 ಸಿನಿಮಾಗಳು ಬಿಡುಗಡೆಯ ಹಂತದಲ್ಲಿವೆ. ಕೆಲಸ ಮಾತ್ರ ನಿರಂತರವಾಗಿ ಸಾಗುತ್ತಿದೆ. ❖

• ಸಿನಿಮಾ ಸಂಸ್ಕೃತಿ ಬದಲಾಗಿದೆ ಎನ್ನಿಸುತ್ತದೆಯೇ?

ಹಿಂದೆ ನಾಯಕ ನಟ ಸೆಟ್‌ಗೆ ಬಂದ ತಕ್ಷಣ ಎಲ್ಲ ವಿಭಾಗಗಳ ಮುಖ್ಯಸ್ಥರ ಬಳಿ ಹೋಗಿ ಆ ದಿನದ ಕೆಲಸದ ಬಗ್ಗೆ ಚರ್ಚಿಸುತ್ತಿದ್ದರು. ನಿರ್ದೇಶಕರೊಂದಿಗೆ ಮುಕ್ತ ಸಂವಾದ ನಡೆಸುತ್ತಿದ್ದರು. ಇಡೀ ತಂಡ ಪರಸ್ಪರ ಪರಿಚಯ ಹೊಂದಿರುತ್ತಿತ್ತು. ಆದರೆ ಈಗ ಎಲ್ಲರೂ ಅಲ್ಲದಿದ್ದರೂ ಕೆಲವರು ಸೆಟ್‌ಗೆ ಬಂದ ತಕ್ಷಣ ಕ್ಯಾರವಾನ್‌ಗೆ ತೆರಳುತ್ತಾರೆ. ಮೊದಲಿನಂತ ಮುಕ್ತ ಸಂವಾದ ಮತ್ತು ತಂಡವಾಗಿ ಕೆಲಸ ಮಾಡುವ ಸಂಸ್ಕೃತಿ ಸ್ವಲ್ಪ ಕಡಿಮೆಯಾಗುತ್ತಿದೆ ಎನ್ನಿಸುತ್ತದೆ.

ಮೇಘಾ ಶೆಟ್ಟಿ, ವಿನಯ್ ರಾಜ್‌ಕುಮಾರ್

ಜುಲೈ 3ಕ್ಕೆ ‘ಗ್ರಾಮಾಯಣ’ ತೆರೆಗೆ

ವಿನಯ್ ರಾಜಕುಮಾರ್, ಮೇಘಾ ಶೆಟ್ಟಿ ಜೋಡಿಯಾಗಿ ನಟಿಸಿರುವ ‘ಗ್ರಾಮಾಯಣ’ ಚಿತ್ರಕ್ಕೆ ಕೊನೆಗೂ ಬಿಡುಗಡೆ ಮುಹೂರ್ತ ಕೂಡಿಬಂದಿದೆ. ದೇವನೂರು ಚಂದ್ರು ನಿರ್ದೇಶನದ ಚಿತ್ರ ಜುಲೈ 3ರಂದು ತೆರೆಗೆ ಬರಲಿದೆ. ಚಿತ್ರದ ‘ಏನೇ ಹೇಳು ಕುಸುಮ’ ಹಾಡು ಇತ್ತೀಚೆಗೆ ಬಿಡುಗಡೆಗೊಂಡಿದೆ.

ಪ್ರಮೋದ್ ಮರವಂತೆ ಬರೆದು, ಪೂರ್ಣಚಂದ್ರ ತೇಜಸ್ವಿ ಸಂಗೀತ ನೀಡಿರುವ ಈ ಹಾಡನ್ನು ನಿಹಾಲ್ ತಾವ್ರೊ ಹಾಗೂ ಸಾಕ್ಷಿ ಕಲ್ಲೂರ್ ಹಾಡಿದ್ದಾರೆ. ಲಹರಿ ಸಂಸ್ಥೆ ಚಿತ್ರಕ್ಕೆ ಬಂಡವಾಳ ಹೂಡಿದೆ. ಸಂತೋಷ್ ರೈ ಪಾತಾಜೆ ಛಾಯಾಚಿತ್ರಗ್ರಹಣವಿದೆ.

‘ನಮ್ಮ ಸಂಸ್ಥೆ ನಿರ್ಮಾಣದ ಒಂಬತ್ತನೇ ಚಿತ್ರ. ಒಂಬತ್ತು ನಮ್ಮ ಸಂಸ್ಥೆಗೆ ಅದೃಷ್ಟದ ಸಂಖ್ಯೆ. ಚಿತ್ರದಲ್ಲಿ ಒಂಬತ್ತು ಹಾಡುಗಳಿದ್ದು, ಐದನೆ ಹಾಡು ಈಗ ಬಿಡುಗಡೆಗೊಂಡಿದೆ. ಸುವರ್ಣ ಸಂಭ್ರಮದಲ್ಲಿರುವ ನಮ್ಮ ಸಂಸ್ಥೆಯಿಂದ ಗ್ರಾಮೀಣ ಸೊಗಡಿನ ಒಂದೊಳ್ಳೆ ಸದಭಿರುಚಿಯ ಚಿತ್ರ ನಿರ್ಮಾಣವಾಗಿದೆ’ ಎಂದರು ಲಹರಿ ವೇಲು.

‘ನೋಡುಗರಿಗೆ ಬೇಕಾದ ಎಲ್ಲಾ ಅಂಶಗಳಿರುವ ಸಿನಿಮಾ. ಈವರೆಗೂ ಮಾಡಿರದ ಪಾತ್ರದಲ್ಲಿ ವಿನಯ್ ರಾಜಕುಮಾರ್ ಅಭಿನಯಿಸಿದ್ದಾರೆ. ಮೇಘ ಶೆಟ್ಟಿ ಅವರದ್ದು ಕೂಡ ವಿಭಿನ್ನ ಪಾತ್ರ. ಅಚ್ಯುತ ಕುಮಾರ್, ಗೋಪಾಲಕೃಷ್ಣ ದೇಶಪಾಂಡೆ, ಅರುಣ್ ಸಾಗರ್, ಬಲ ರಾಜವಾಡಿ, ಅಪರ್ಣಾ ವಸ್ತಾರೆ, ಸೀತಾ ಕೋಟೆ, ಪ್ರಶಾಂತ್ ಹೊನ್ನಾಳಿ, ಅವಿನಾಶ್ ರೈ ಹೀಗೆ ಅನುಭವಿ ಕಲಾವಿದರ ದೊಡ್ಡ ತಾರಾಬಳಗವೇ ಇರುವ ಈ ಚಿತ್ರದ ವಿಶೇಷ ಪಾತ್ರದಲ್ಲಿ ಲೂಸ್ ಮಾದ ಯೋಗಿ ಅಭಿನಯಿಸಿದ್ದಾರೆ’ ಎಂದರು ನಿರ್ದೇಶಕ. ❖

‘ಬಾಯ್ಸ್ ನೆವರ್ ಕಾಂಪ್ರಮೈಸ್’ ಟೀಸರ್ ಬಿಡುಗಡೆ

ನಕ್ಷತ್ರ

‘ಜಸ್ಟ್ ಮದ್ವೇಲಿ’, ‘ರಾಜಣ್ಣನ ಮಗ’ ಚಿತ್ರಗಳನ್ನು ನಿರ್ಮಿಸಿದ್ದ ಹರೀಶ್ ಜಲಗೆರೆ ಅವರು ಈಗ ನಿರ್ದೇಶನಕ್ಕೆ ಕೈ ಹಾಕಿ ‘ಬಾಯ್ಸ್ ನೆವರ್ ಕಾಂಪ್ರಮೈಸ್’ ಚಿತ್ರಕ್ಕೆ ಆ್ಯಕ್ಷನ್ ಕಟ್ ಹೇಳಿದ್ದಾರೆ.

ಹರೀಶ್ ಅವರ ಹಿಂದಿನ ಎರಡೂ ಚಿತ್ರ ನಿರ್ದೇಶಿಸಿದ್ದ ಕೋಲಾರ ಸೀನು, ಈಗ ಅವರ ಹೊಸ ಸಾಹಸಕ್ಕೆ ಜತೆಗೂಡಿದ್ದಾರೆ. ಇದು, ಹಾರರ್ ಕಾಮಿಡಿ ಕಥಾಹಂದರದ ಚಿತ್ರ. ಇದರ ಟೀಸರ್, ಬಾಯ್ಸ್ ಆಂಥೆಮ್ ಈಚೆಗೆ ಬಿಡುಗಡೆಗೊಂಡಿತು.

ಸಾಮ್ರಾಟ್, ನಕ್ಷತ್ರ, ಸುಪ್ರಿತ್ ಕಾಟಿ, ಸೀತಾರಾಮ, ಮಂಡ್ಯಸಿದ್ದು, ರಾಜೀವ್ ರೆಡ್ಡಿ, ಉಮೇಶ್ ಕಿನ್ನಾಳ, ಗಜೇಂದ್ರ, ಹೇಮಂತ್ ಗೌಡ, ರಾಜರಾಜ ಚೋಳ ಸೇರಿ ಚಿತ್ರದಲ್ಲಿ ಬಹುತೇಕ ಹೊಸಬರೇ ಬಣ್ಣ ಹಚ್ಚಿದ್ದಾರೆ. ಮಾಡೆಲಿಂಗ್ ಕ್ಷೇತ್ರದಲ್ಲಿದ್ದ ನಟಿ ನಕ್ಷತ್ರ ಮೊದಲ ಸಲ ಮುಖ್ಯಪಾತ್ರ ನಿಭಾಯಿಸಿದ್ದಾರೆ.

ಮಾರಿ ಗೋಲ್ಡ್ ಸ್ಟುಡಿಯೋಸ್ ಮೂಲಕ ಉಜ್ವಲ ನಾಗರಾಜ ಜಲಗೆರೆ ಚಿತ್ರವನ್ನು ನಿರ್ಮಿಸಿದ್ದು, ಲೋಕಿ ತವಸ್ಯ ಅವರು ಸಂಗೀತ ನೀಡಿದ್ದರೆ, ಎಂ.ಎಸ್. ತ್ಯಾಗರಾಜ್ ಅವರ ಹಿನ್ನೆಲೆ ಸಂಗೀತವಿದೆ. ಛಾಯಾಚಿತ್ರಗ್ರಹಣದ ಹೊಣೆ ಪ್ರಮೋದ್ ಭಾರತೀಯ ಅವರದು. ಕಾರ್ತೀಕ್ ಈಶ್ವರಚಾರಿ ಅವರ ಸಂಕಲನವಿದೆ.

‘ಇದು ಹಾರರ್ ಕಾಮಿಡಿ ಜಾನರ್ ಚಿತ್ರವಾಗಿದ್ದು, ಸಂದೇಶವೂ ಇದೆ. ಒಂದಷ್ಟು ಹುಡುಗರು ತುಂಟಾಟಕ್ಕೆ ಹೋಗಿ ದೆವ್ವದ ಜತೆ ಹೇಗೆ ಕನೆಕ್ಟ್ ಆಗುತ್ತಾರೆ ಎಂಬುದು ಚಿತ್ರದ ಹೂರಣ. ಎಲ್ಲ ವರ್ಗದ ಪ್ರೇಕ್ಷಕರಿಗೂ ಸೂಕ್ತವಾದ ಕಥೆಯನ್ನು ಮಾಡಿದ್ದೇವೆ. ಜುಲೈ 10ಕ್ಕೆ ಚಿತ್ರ ತೆರೆಕಾಣಲಿದೆ’ ಎಂದರು ನಿರ್ದೇಶಕ.

‘ಜುಲೈ ಮೊದಲವಾರ ಕಿಚ್ಚ ಸುದೀಪ್ ಅವರಿಂದ ‘ಬಾಯ್ಸ್ ನೆವರ್ ಕಾಂಪ್ರಮೈಸ್’ ಚಿತ್ರದ ಟ್ರೇಲರ್ ಬಿಡುಗಡೆ ಮಾಡಿಸುವ ಚಿಂತನೆ ಇದೆ. ಹಾರರ್ ವಿಷಯವನ್ನು ಹಾಸ್ಯದ ಮೂಲಕ ದಾಟಿಸಿದ್ದೇವೆ. ಸಿನಿಮಾ ಅಂದುಕೊಂಡಂತೆ ತುಂಬಾ ಚೆನ್ನಾಗಿ ಬಂದಿದೆ. ಇದರ ಹಿಂದೆ ತಂಡದ ಶ್ರಮವಿದೆ’ ಎಂದರು ನಿರ್ಮಾಪಕ.

‘ಹಾಡುಗಳು ಚೆನ್ನಾಗಿ ಬಂದಿದ್ದು, ಇದಕ್ಕೆ ನಿರ್ದೇಶಕರ ಯತ್ನವೂ ಕಾರಣ. ಮ್ಯೂಸಿಕ್‌ಗೆ ತಕ್ಕಂತೆ ಮೇಕಿಂಗ್ ಮಾಡಿದ್ದಾರೆ’ ಎಂದರು ಸಂಗೀತ ನಿರ್ದೇಶಕ ಲೋಕಿ ತವಸ್ಯ. ಆಂಟನಿದಾಸನ್, ಐಶ್ವರ್ಯ ರಂಗರಾಜನ್ ಹಾಡಿರುವ ಗೀತೆಗಳು ಶೀಘ್ರ ಬಿಡುಗಡೆ ಆಗಲಿದೆ. ❖

ಗಿಲ್ಲಿ ಈಗ ನಾಯಕ

ಗಿಲ್ಲಿ ನಟ

ಕಿರುತೆರೆಯ ರಿಯಾಲಿಟಿ ಶೋ ‘ಬಿಗ್ ಬಾಸ್’ ಮೂಲಕ ರಾಜ್ಯದಾದ್ಯಂತ ಹೆಸರು ಮಾಡಿದ್ದ ಮಂಡ್ಯದ ಹೈದ ಗಿಲ್ಲಿ ನಟ ನಂತರ ಒಂದೆರಡು ಸಿನಿಮಾಗಳಲ್ಲೂ ಸಣ್ಣ ಪಾತ್ರಗಳಲ್ಲಿ ನಟಿಸಿದ್ದರು. ಆದರೆ, ‘ಮುಂದೇನು’ ಎಂಬ ಪ್ರಶ್ನೆ ಅವರ ಅಭಿಮಾನಿಗಳಲ್ಲಿ ಇತ್ತು.

ಈಗ ಅದಕ್ಕೆ ಉತ್ತರ ಸಿಕ್ಕಿದೆ. ಗಿಲ್ಲಿ ನಟ, ಸಾಮಾಜಿಕ ಜಾಲತಾಣದ ತನ್ನ ಖಾತೆಯಲ್ಲಿ ಇತ್ತೀಚೆಗೆ ‘ಒಂದು ವಿಶೇಷವಿದೆ’ ಎಂಬ ಪೋಸ್ಟ್ ಹಾಕಿ ಬೆಂಬಲಿಗರಲ್ಲಿ ಕುತೂಹಲ ಮೂಡಿಸಿದ್ದರು. ಆ ವಿಶೇಷ ಏನು ಎಂಬುದು ಈಗ ಬಹಿರಂಗವಾಗಿದೆ.

ಜೂನ್ 21ರಂದು ಅವರ ಜನ್ಮದಿನ. ಈ ವರ್ಷ ಆ ದಿನಕ್ಕೆ ಮತ್ತೊಂದು ವಿಶೇಷವಿದೆ. ಅವರೀಗ ಪೂರ್ಣಪ್ರಮಾಣದ ನಾಯಕನಟನಾಗಿ ಕಾಣಿಸಿಕೊಳ್ಳಲಿದ್ದಾರೆ. ಜನ್ಮದಿನದಂದೇ ಅವರ ನೂತನ ಚಿತ್ರವೂ ಸೆಟ್ಟೇರಲಿದೆ.

ಹೊಸ ಚಿತ್ರಕ್ಕೆ ಇನ್ನೂ ಹೆಸರಿಟ್ಟಿಲ್ಲ. ಚಿತ್ರತಂಡವು ಇತರೆ ಪಾತ್ರವರ್ಗದ ವಿವರಗಳನ್ನು ನೀಡಿಲ್ಲ. ಶ್ರೀಲೀಲಾ ಅವರು ನಾಯಕಿಯಾಗಿ ಕಾಣಿಸಿಕೊಳ್ಳುವ ಸಾಧ್ಯತೆಗಳಿವೆ.

ಕೆವಿಎನ್ ಪ್ರೊಡಕ್ಷನ್ ಸಂಸ್ಥೆಯು ಗಿಲ್ಲಿಯನ್ನು ನಾಯಕನಟನಾಗಿ ಬೆಳ್ಳಿತೆರೆಗೆ ಪರಿಚಯಿಸುತ್ತಿದೆ. ಕೆವಿಎನ್ ಪ್ರೊಡಕ್ಷನ್‌ನ ಕಾರ್ಯಕಾರಿ ನಿರ್ಮಾಪಕರಾದ ನವೀನ್, ಹರೀಶ್ ಅವರ ಚೊಚ್ಚಲ ನಿರ್ಮಾಣದ ಚಿತ್ರ ಇದಾಗಲಿದೆ. ಹಾಸ್ಯಚಿತ್ರಗಳನ್ನು ನಿರ್ದೇಶಿಸಿ ಗಮನಸೆಳೆದಿರುವ ಚಂದ್ರಮೋಹನ್ ಈ ಚಿತ್ರವನ್ನು ನಿರ್ದೇಶಿಸಲಿದ್ದಾರೆ.

ಕೆವಿಎನ್ ಪ್ರೊಡಕ್ಷನ್‌ನ ಸಂಸ್ಥಾಪಕ ಕೆ.ವೆಂಕಟನಾರಾಯಣ, ಕೆವಿಎನ್‌ನ ಬ್ಯುಸಿನೆಸ್ ಹೆಡ್‌ನ ಸುಪ್ರೀತ್ ಹರೀಶ್ ಅವರು ಚಿತ್ರ ನಿರ್ಮಾಣದಲ್ಲಿ ನವೀನ್‌ಗೆ ಸಾಥ್ ನೀಡಲಿದ್ದಾರೆ.

ಕೆವಿಎನ್ ಪ್ರೊಡಕ್ಷನ್ ಈಗಾಗಲೇ ‘ಜನ ನಾಯಗನ್’, ‘ಟಾಕ್ಸಿಕ್’, ‘ಕೆಡಿ: ದಿ ಡೆವಿಲ್’ ಅಂತಹ ಬಿಗ್ ಬಜೆಟ್ ಚಿತ್ರಗಳನ್ನು ನಿರ್ಮಿಸಿ ಗಮನಸೆಳೆದಿದೆ. ಹೊಸಚಿತ್ರದ ಮುಹೂರ್ತದಂದು ಚಿತ್ರದ ಕುರಿತ ಇನ್ನಷ್ಟು ವಿವರಗಳನ್ನು ನಿರೀಕ್ಷಿಸಬಹುದು ಎಂದಿದೆ ಚಿತ್ರತಂಡ ❖

ಗೋಲ್ಮಾಲ್ ಗ್ಯಾಂಗ್ ಟೀಸರ್ ಬಿಡುಗಡೆ

ಆರಾಧನಾ ಭಟ್

ಮನರಂಜನೆಯನ್ನೇ ಗುರಿಯಾಗಿಸಿಕೊಂಡ ಸಿನಿಮಾ ‘ಗೋಲ್ಮಾಲ್ ಗ್ಯಾಂಗ್’. ಚಿತ್ರದ ಟೀಸರ್ ಇತ್ತೀಚೆಗೆ ಬಿಡುಗಡೆ ಆಗಿದೆ. ಶಾಂತ್ವು ಯೂನಿವರ್ಸಲ್ ಪಿಕ್ಚರ್ ಬ್ಯಾನರ್‌ನಲ್ಲಿ ಸತೀಶ್ ಚಂದ್ರ ಅವರು ಚಿತ್ರ ನಿರ್ಮಿಸಿದ್ದಾರೆ.

ನಿರ್ದೇಶಕ ಶಿವಕುಮಾರ್ ಮಾತನಾಡಿ, ‘ಸಿನಿಮಾದಲ್ಲಿ ಹದಿನಾರು ಕಲಾವಿದರಿದ್ದಾರೆ. ಎಲ್ಲ ಪಾತ್ರಗಳಿಗೂ ಜೀವವಿದೆ. ಎಲ್ಲ ಕಲಾವಿದರೂ ಉತ್ತಮವಾಗಿ ಅಭಿನಯಿಸಿದ್ದಾರೆ. ಗೋಲ್ಮಾಲ್ ಮಾಡುವಂತೆ ಪಾತ್ರಗಳೇ ಹೆಚ್ಚಿವೆ. ಅದಕ್ಕಾಗಿಯೇ ಚಿತ್ರಕ್ಕೆ ಈ ಶೀರ್ಷಿಕೆ ಇಡಲಾಗಿದೆ’ ಎಂದರು.

ನಿರ್ಮಾಪಕ ಕೆ.ಸತೀಶ್ ಚಂದ್ರ ಎಲೆಕೆರೆ, ‘ಶೂಟಿಂಗ್ ಸೆಟ್‌ನಲ್ಲೂ ಒಗ್ಗೂಡಿ ಚರ್ಚಿಸುತ್ತಿದ್ದೆವು. ಗೆದ್ದೇ ಗೆಲ್ತೀವಿ ಅಂತ ಬಂದಿದ್ದೀವಿ. 26 ವರ್ಷದಿಂದ ಚಿತ್ರೋದ್ಯಮಕ್ಕೆ ಕಾರ್ಮಿಕರ ಪೂರೈಕೆ ಮಾಡುತ್ತಿದ್ದೇನೆ. ನಿರುದ್ಯೋಗದ ಸಮಸ್ಯೆಗೆ ತುಸು ಪರಿಹಾರವಾಗಿ ನಮ್ಮದೇ ಒಂದು ಬ್ಯಾನರ್ ಶುರು ಮಾಡಿ, ಕೆಲಸ ಕೊಡಬೇಕು ಅಂತ ಚಿತ್ರ ಆರಂಭಿಸಿದೆವು’ ಎಂದರು.

ನಾಯಕ ಕಾರ್ತಿಕ್, ‘ನಿರ್ಮಾಪಕರಿಗೆ ಎಳೆಯ ಮಕ್ಕಳಿಗಿರುವ ಉತ್ಸಾಹವಿದೆ. ನಾನೇ ನಾಯಕ ಎಂದು ತಿಳಿದಾಗ ಕೆಲವು ನಾಯಕಿಯರು ಒಪ್ಪಲಿಲ್ಲ. ಕಿರುಚಿತ್ರದವರ ಜೊತೆಗೆ ಮಾಡಲ್ಲ ಅಂದವರೇ ಹೆಚ್ಚು. ಆದರೆ ನಿರ್ಮಾಪಕರು ನಾಯಕಿ ಇಲ್ಲ ಅಂದರೂ ಕಾರ್ತಿಕ್ ಬದಲಿಸುವುದಿಲ್ಲ ಅಂದರು. ಅದಕ್ಕೆ ಭಾವುಕನಾದೆ. ನಾನೇ ನನ್ನ ಹೀರೊ ಅಂದುಕೊಂಡಿರಲಿಲ್ಲ’ ಎಂದರು.

ನಾಯಕಿ ಆರಾಧನಾ ಭಟ್ ಮಾತನಾಡಿ ‘ಗೋಲ್ಮಾಲ್ ಗ್ಯಾಂಗ್’ ಸಿನಿಮಾದಿಂದ ನಾಯಕಿ ಆಗುತ್ತಿದ್ದೇನೆ. ಅದಕ್ಕೆ ನಿರ್ಮಾಪಕರೇ ಕಾರಣ. ಚಿತ್ರದಲ್ಲಿ ಸುಮಾರು ಗ್ಯಾಂಗ್ ಇವೆ. ನಾನು ಯಾವ ಗ್ಯಾಂಗ್ ಅನ್ನೋದೆ ತಿರುವು’ ಎಂದಿದ್ದಾರೆ. ❖

‘ಬಲರಾಮನ’ ರ‍್ಯಾಪ್ ಸಾಂಗ್

ವಿನೋದ್ ಪ್ರಭಾಕರ್, ಆಲ್ ಓಕೆ, ಶ್ರೇಯಸ್ ಜಯರಾಂ

ವಿನೋದ್ ಪ್ರಭಾಕರ್ ನಾಯಕನಾಗಿ ನಟಿಸಿರುವ ‘ಬಲರಾಮನ ದಿನಗಳು’ ಚಿತ್ರದ ರ‍್ಯಾಪ್ ಸಾಂಗ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ಕೆ.ಎಂ. ಚೈತನ್ಯ ನಿರ್ದೇಶನದ ಚಿತ್ರ ಜೂ.26ಕ್ಕೆ ತೆರೆ ಕಾಣಲಿದೆ.

‘ಯಾರಿಲ್ಲ ಯಾರಿಲ್ಲ’ ಎಂಬ ಈ ಗೀತೆಯನ್ನು ಆಲ್ ಓಕೆ ಹಾಡಿದ್ದಾರೆ. ಸಾಹಿತ್ಯ ಕೂಡ ಅವರದ್ದೇ. ಸಂತೋಷ್ ನಾರಾಯಣ್ ಸಂಗೀತವಿದೆ. ಹಾಡು ಬಿಡುಗಡೆ ವೇದಿಕೆಯಲ್ಲಿ ಆಲ್ ಓಕೆ ಹಾಡಿದ ಸಾಲುಗಳಿಗೆ ವಿನೋದ್ ಪ್ರಭಾಕರ್ ಹೆಜ್ಜೆ ಹಾಕಿ ಗಮನ ಸೆಳೆದರು. 1980ರ ದಶಕದ ಗ್ಯಾಂಗ್‌ಸ್ಟರ್ ಕಥೆಯಲ್ಲಿ ವಿನೋದ್ ಪ್ರಭಾಕರ್‌ಗೆ ಪ್ರಿಯಾ ಆನಂದ್ ಜೋಡಿಯಾಗಿದ್ದಾರೆ. ಇಡೀ ಹಾಡು ವಿನೋದ್ ಪ್ರಭಾಕರ್ ಅವರ ಪಾತ್ರವನ್ನು ಕಟ್ಟಿಕೊಡುತ್ತದೆ.

‘ನಿರ್ದೇಶಕ ಕೆ.ಎಂ.ಚೈತನ್ಯ ಅವರೇ ಈ ಹಾಡಿಗೆ ಕಾರಣ. ವಿನೋದ್ ಪ್ರಭಾಕರ್ ಅವರ ಸಿನಿಮಾದಲ್ಲಿ ಕೆಲಸ ಮಾಡಬೇಕೆಂಬ ಕನಸಿತ್ತು. ಅದು ಚೈತನ್ಯ ಅವರ ಸಹಕಾರದಿಂದ ನನಸಾಗಿದೆ. ರಾಷ್ಟ್ರ ಮಟ್ಟದಲ್ಲಿ ಹೆಸರು ಮಾಡಿರುವ ಸಂಗೀತ ನಿರ್ದೇಶಕ ಸಂತೋಷ್ ನಾರಾಯಣ್ ಕನ್ನಡಕ್ಕೆ ಬಂದು ಕೆಲಸ ಮಾಡಿರುವುದು ಹೆಮ್ಮೆಯ ವಿಷಯ. ಕನ್ನಡ ಸ್ವತಂತ್ರ ರ‍್ಯಾಪ್ ಸಾಂಗ್ ಸಿನಿಮಾಕ್ಕೆ ಬಳಕೆಯಾಗುತ್ತಿರುವುದು ಖುಷಿಯ ವಿಷಯ. ಇದರಿಂದ ಎರಡೂ ಉದ್ಯಮಗಳಿಗೂ ಸಹಾಯವಾಗಲಿದೆ’ ಎಂದರು ಆಲ್ ಓಕೆ.

‘ಜೂನ್ 26ಕ್ಕೆ ನಮ್ಮ ಸಿನಿಮಾವನ್ನು ನಿಮ್ಮ ಮಡಿಲಿಗೆ ಹಾಕುತ್ತಿದ್ದೇವೆ. ಕೆವಿಎನ್ ಸಂಸ್ಥೆ ಈ ಸಿನಿಮಾವನ್ನು ವಿತರಣೆ ಮಾಡುತ್ತಿದೆ. ಹೋದ ವರ್ಷ ‘ಮಾದೇವ’ ಕೂಡ ಜೂನ್‌ನಲ್ಲಿ ಬಿಡುಗಡೆಯಾಗಿತ್ತು. ಅದನ್ನು ಜನ ಕೈ ಹಿಡಿದಿದ್ದರು. ಅದೇ ರೀತಿ ಈ ಸಿನಿಮಾವನ್ನು ಗೆಲ್ಲಿಸಿಕೊಡಿ’ ಎಂದು ವಿನೋದ್ ಪ್ರಭಾಕರ್ ಕೋರಿದರು.

ಕಾರಣಾಂತರಗಳಿಂದ ನಿರ್ದೇಶಕರು ಕಾರ್ಯಕ್ರಮದಲ್ಲಿ ಹಾಜರಿರಲಿಲ್ಲ. ‘ನಿರ್ಮಾಪಕರು ‘ಆ ದಿನಗಳು’ ರೀತಿಯದ್ದೇ ಸಿನಿಮಾ ಮಾಡಬೇಕೆಂದು ಕೇಳಿದರು. ಹಾಗಾಗಿ ಆ ಸಿನಿಮಾದ್ದೇ ಪಾತ್ರಗಳು ಇಲ್ಲೂ ಮುಂದುವರೆದಿದ್ದು, ಅತುಲ್ ಕುಲಕರ್ಣಿ, ಶರತ್ ಲೋಹಿತಾಶ್ವ, ಆಶೀಶ್ ವಿದ್ಯಾರ್ಥಿ ಹಾಗೂ ಬಿಗ್‌ಬಾಸ್ ಖ್ಯಾತಿಯ ವಿನಯ್ ಗೌಡ ಸೇರಿ ಹಲವು ಪ್ರತಿಭಾನ್ವಿತ ಕಲಾವಿದರು ಚಿತ್ರದಲ್ಲಿದ್ದಾರೆ. ಒಳ್ಳೆಯ ಸಿನಿಮಾಗಳು ಗೆಲ್ಲಬೇಕು. ಆಗ ನಿರ್ಮಾಪಕರು ಇನ್ನಷ್ಟು ಉತ್ತಮ ಸಿನಿಮಾಗಳನ್ನು ಮಾಡಬಹುದು’ ಎಂದಿದ್ದಾರೆ ನಿರ್ದೇಶಕ.

ಪದ್ಮಾವತಿ ಫಿಲ್ಮ್ಸ್ ಬ್ಯಾನರ್ ಅಡಿಯಲ್ಲಿ ಪದ್ಮಾವತಿ ಜಯರಾಂ ಹಾಗೂ ಶ್ರೇಯಸ್ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ. ವೇಣು ಛಾಯಾಚಿತ್ರಗ್ರಹಣವಿದೆ. ❖

ಮೂರು ಸಿನಿಮಾಗಳು ತೆರೆಗೆ

ಪಾಯಲ್ ಚಂಗಪ್ಪ

ಊರಬ್ಬ

ಕುಣಿಗಲ್ ತಾಲ್ಲೂಕಿನ ಉಜ್ಜಿನಿ ಚೌಡೇಶ್ವರಿ ಜಾತ್ರೆ, ಅದರ ಹಿನ್ನೆಲೆಯಲ್ಲಿ ನಡೆಯುವ ಒಂದಷ್ಟು ಘಟನೆಗಳನ್ನಿಟ್ಟುಕೊಂಡು ಸಿದ್ಧಗೊಂಡ ಚಿತ್ರವಿದು. ಲಕ್ಕಿ ಶಂಕರ್ ನಿರ್ದೇಶನವಿದೆ. ನರೇಶ್ ಗೌಡ ಬಂಡವಾಳ ಹೂಡಿದ್ದಾರೆ. ಜತೆಗೆ ಚಿತ್ರದ ನಾಯಕನಾಗಿಯೂ ನಟಿಸಿದ್ದಾರೆ.

ದೊಡ್ಡಣ್ಣ, ತನಿಷಾ ಕುಪ್ಪಂಡ, ಪಾಯಲ್ ಚಂಗಪ್ಪ, ಸಿದ್ಧು ಮೂಲಿಮನಿ, ಮಿಮಿಕ್ರಿ ಗೋಪಿ, ಬಿರಾದಾರ್, ಮಿತ್ರ ಮುಂತಾದವರು ಚಿತ್ರದ ಪ್ರಮುಖ ಪಾತ್ರಗಳಲ್ಲಿ ನಟಿಸಿದ್ದಾರೆ. ಅಕ್ಷಯ್ ಎಸ್.ರಿಷಭ್ ಸಂಗೀತ, ಕೃಷ್ಣಕುಮಾರ್ ಅವರ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ.

ಕಾಲಘಟ್ಟ

ಕೆ. ಪ್ರಕಾಶ್ ಅಂಬಳೆ ನಿರ್ದೇಶನದ ಸಿನಿಮಾವಿದು. ಕಿರುತೆರೆ ನಟ ಅಭಿದಾಸ್ ನಾಯಕ.

‘1995 ಹಾಗೂ 2025ರ ಕಾಲಘಟ್ಟಗಳಲ್ಲಿ ನಡೆಯುವ ಕಥೆ. ಜನಪದ ಹಾಗೂ ಗೊರವನ ಸಂಸ್ಕೃತಿ ಆಧಾರಿತ ಸಿನಿಮಾ’ ಎಂದಿದೆ ಚಿತ್ರತಂಡ. ನಿತಿನ್, ಮೇಘ, ಖುಷಿ, ಶೋಭರಾಜ್, ಭವ್ಯ, ಪ್ರಶಾಂತ್ ಮುಂತಾದವರು ಚಿತ್ರದ ತಾರಾಬಳಗದಲ್ಲಿದ್ದಾರೆ.

ಸದಾಶಿವ ಹಿರೇಮಠ ಹಾಗೂ ರಾಜ್ ಕಡೂರ್ ಛಾಯಾಚಿತ್ರಗ್ರಹಣ, ಎ.ಎಂ. ನೀಲ್ ಸಂಗೀತ ನಿರ್ದೇಶನ, ವೆಂಕಿ ಯು.ಡಿ.ವಿ. ಸಂಕಲನವಿದೆ. ಲಯನ್ ಚಿಕ್ಕೇಗೌಡ ಹಾಗೂ ಟಿ.ಸಿ. ತಳಗವಾಡಿ ಚಿತ್ರಕ್ಕೆ ಬಂಡವಾಳ ಹೂಡಿದ್ದಾರೆ.

ಎಜ್ಯುಕೇಟೆಡ್ ಬುಲ್ಸ್

ಬಹುತೇಕ ಹೊಸ ಕಲಾವಿದರಿಂದಲೇ ಕೂಡಿರುವ ಚಿತ್ರವಿದು. ಜಿ.ಕೆ.ಮುದ್ದುರಾಜ್ ಆ್ಯಕ್ಷನ್ ಕಟ್ ಹೇಳಿದ್ದಾರೆ.

‘ನಾಲ್ಕು ಜನ ವಿದ್ಯಾವಂತರಿಗೆ ಸಮಾಜದಲ್ಲಿ ತಮ್ಮನ್ನು ತಾವು ಗುರುತಿಸಿಕೊಳ್ಳಬೇಕೆಂಬ ಹಂಬಲ. ಇವರ ಆಸೆಯನ್ನು ಕೆಲವರು ದುರುಪಯೋಗಪಡಿಸಿಕೊಳ್ಳುತ್ತಾರೆ. ಇದರಿಂದ ಅವರು ಸಂಕಷ್ಟಕ್ಕೆ ಸಿಲುಕಿಕೊಳ್ಳುತ್ತಾರೆ. ಅದರಿಂದ ಏನೆಲ್ಲ ಆಗುತ್ತದೆ ಎಂಬುದೇ ಕಥೆ. ವಿದ್ಯೆಯ ಜತೆ ಬುದ್ಧಿ ಸ್ವಲ್ಪ ಜಾಸ್ತಿಯೇ ಇರಬೇಕು ಎಂಬ ಪರಿಕಲ್ಪನೆಯಲ್ಲಿ ಮಾಡಿದ ಚಿತ್ರವಿದು’ ಎಂದಿದ್ದಾರೆ ನಿರ್ದೇಶಕ.

ನೀರಜ್‌ಗೆ ಪೂರ್ವಿಕಾ ಜೋಡಿಯಾಗಿದ್ದಾರೆ. ಅಜಯ್ ಕುಮಾರ್, ತೇಜಸ್ ಕುಮಾರ್, ರಾಕೇಶ್, ಚಿದಾನಂದ್, ಭವ್ಯ ಉಳಿದ ಪಾತ್ರಗಳಲ್ಲಿ ನಟಿಸಿದ್ದಾರೆ. ಸೂರಜ್ ಜೋಯಿಸ್ ಸಂಗೀತ ನಿರ್ದೇಶನವಿದೆ. ರತಿಂದ್ ಗೌಡ ಛಾಯಾಚಿತ್ರಗ್ರಹಣ, ಸಂಜೀವರೆಡ್ಡಿ ಸಂಕಲನವಿದೆ. ಎಂ.ಪಿ.ಅರುಣ್‌ಕುಮಾರ್ ಕಥೆ, ಹರೀಶ್ ಸಂಭಾಷಣೆ, ರಾಮ್ ನಾರಾಯಣ್ ಸಾಹಿತ್ಯವಿರುವ ಚಿತ್ರ ಬೆಂಗಳೂರು ಸುತ್ತಮುತ್ತ ಚಿತ್ರೀಕರಣಗೊಂಡಿದೆ. ❖

ಅಭಿದಾಸ್, ಮೇಘಶ್ರೀ

ದಿಯಾ ಕೀರ್ತಿ, ಮುಕುಂದ ರಾಮಸ್ವಾಮಿ, ಶ್ವೇತಾ ಕೊಗ್ಲೂರು

‘ಲವ್ ಸೀಸನ್ಸ್’ ತೆರೆಗೆ ಬರಲು ಸಿದ್ಧ

ಕೃತ್ವಿಕ್ ನಿರ್ದೇಶನದ ‘ಲವ್ ಸೀಸನ್ಸ್’ ಚಿತ್ರ ಇದೇ ಜುಲೈ 3ರಂದು ತೆರೆಕಾಣಲಿದೆ. ಈಗಾಗಲೇ ಬಿಡುಗಡೆ ಆಗಿರುವ ಚಿತ್ರದ ಮೂರು ಹಾಡುಗಳಿಗೆ ಸಿಕ್ಕಿರುವ ಪ್ರತಿಕ್ರಿಯೆ ಕಂಡು ಚಿತ್ರತಂಡ ಖುಷಿಗೊಂಡಿದೆ. ಈ ಗೆಲುವಿನ ಖುಷಿಯನ್ನು ಸಂಗೀತ ನಿರ್ದೇಶಕರು, ಗಾಯಕರು, ಚಿತ್ರಸಾಹಿತಿಗಳ ಜೊತೆಗೂಡಿ ಚಿತ್ರತಂಡ ಸಂಭ್ರಮಿಸಿದೆ.

ಎನ್.ಆರ್ ಸ್ಟುಡಿಯೋಸ್ ಬ್ಯಾನರ್‌ನಡಿ ಎನ್.ಆರ್ ಮಂಜುನಾಥ (ನೀಲೇರಿ) ಅವರು ಚಿತ್ರ ನಿರ್ಮಿಸಿದ್ದಾರೆ. ಕೃತ್ವಿಕ್ ನಿರ್ದೇಶನ, ವೀರ್ ಸಮರ್ಥ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

ಚಿತ್ರದ ಬಿಡುಗಡೆ ಹಿನ್ನಲೆಯಲ್ಲಿ ಕಾರ್ಯಕ್ರಮದಲ್ಲಿ ಮಾತನಾಡಿದ ಚಿತ್ರ ಸಾಹಿತಿ ಕೆ.ಕಲ್ಯಾಣ್, ‘ಸಂಗೀತ ನಿರ್ದೇಶಕ ವೀರ್ ಸಮರ್ಥ್ ಅವರು ನೆನಪಿನಲ್ಲಿ ಉಳಿಯುವಂತಹ ಹಾಡುಗಳನ್ನು ಕೊಟ್ಟಿದ್ದಾರೆ’ ಎಂದರು.

ಗೀತರಚನಕಾರ ಪ್ರಮೋದ್ ಮರವಂತೆ, ‘ಲವ್ ಸೀಸನ್ಸ್’ ಚಿತ್ರದ ಹಾಡುಗಳ ಗೆಲುವಿನ ಭಾಗವಾಗಿದ್ದು ಅಭಿಮಾನದ ಸಂಗತಿ ಎಂದು ಸಂಭ್ರಮಿಸಿದರು. ಕೆ.ಕಲ್ಯಾಣ್ ಅವರೂ ಸಾಹಿತ್ಯ ಬರೆದಿದ್ದಾರೆ.

ಅವಿನಾಶ ಶಾಸ್ತ್ರಿ ಛಾಯಾಚಿತ್ರಗ್ರಹಣ, ಮಧು ತುಂಬಕೆರೆ ಅವರ ಸಂಕಲನ, ಭಜರಂಗಿ ಮೋಹನ್ ಅವರ ನೃತ್ಯ ಸಂಯೋಜನೆ ಇರುವ ಚಿತ್ರದ ನಾಯಕರಾಗಿ ಮುಕುಂದ ರಾಮಸ್ವಾಮಿ ನಟಿಸಿದ್ದಾರೆ. ದಿಯಾ ಕೀರ್ತಿ, ಚಂದನಾ ಗೌಡ ಮತ್ತು ಶ್ವೇತಾ ಕೊಗ್ಲೂರು ನಾಯಕಿಯರಾಗಿ ಜೊತೆಯಾಗಿದ್ದಾರೆ.

ಮಂಡ್ಯ ರಮೇಶ್, ರಾಜೇಶ್ ನಟರಂಗ, ಸಂಗೀತಾ ಅನಿಲ್, ಜಯತೀರ್ಥ, ಚೇತನ್ ದುರ್ಗ, ಕಾಮಿಡಿ ಕಿಲಾಡಿ ಸದಾನಂದ, ಹುಲಿ ಕಾರ್ತಿಕ್, ಬೇಬಿ ರೀತು ಸಿಂಗ್ ಮುಂತಾದವರ ತಾರಾಬಳಗವಿದೆ. ❖

ಮುಖ್ಯರಸ್ತೆಗಳಲ್ಲಿ ಒಂದು ಬಾರಿ ಕಸ ತೆರವು

ರಸ್ತೆಯಲ್ಲಿ ತ್ಯಾಜ್ಯ ಎಸೆಯುವುದು ಕಂಡರೆ ದುಪ್ಪಟ್ಟು ದಂಡ ಹಾಕಿ: ಸಚಿವ ಕೃಷ್ಣ ಬೈರೇಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಮುಖ್ಯರಸ್ತೆಗಳಲ್ಲಿನ ಕಸ, ಕಟ್ಟಡ ನಿರ್ಮಾಣ ತ್ಯಾಜ್ಯ (ಡೆಬ್ರಿಸ್), ಕಳೆಯನ್ನು ಒಂದು ಬಾರಿ ತೆರವು ಮಾಡಲು ವಿಶೇಷ ಅಭಿಯಾನ ನಡೆಸಲಾಗುವುದು ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ರಸ್ತೆ ಬದಿಯಲ್ಲಿ ಕಸ ಬಿಸಾಡುವುದರಿಂದ ಸಾರ್ವಜನಿಕರ ಆರೋಗ್ಯಕ್ಕೆ ಹಾನಿಯಾಗುವುದಲ್ಲದೆ ನಗರದ ಸೌಂದರ್ಯವೂ ಹಾಳಾಗುತ್ತದೆ. ಯಾರೂ ರಸ್ತೆ ಬದಿಯಲ್ಲಿ ಕಸ ಬಿಸಾಡಬಾರದು. ಮನೆಗಳ ಹತ್ತಿರ ಬರುವ ವಾಹನಗಳಿಗೆ ಕಸ ನೀಡಬೇಕು. ಈಗಿರುವ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಂಡರೆ ಶೇ 50ರಷ್ಟು ಸುಧಾರಣೆ ಸಾಧ್ಯ ಎಂದರು.

ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು, ನಗರ ಪಾಲಿಕೆಗಳ ಆಯುಕ್ತರೊಂದಿಗೆ ಗುರುವಾರ ಸಭೆ ನಡೆಸಿದ ಬಳಿಕ ಮಾಧ್ಯಮ ಪ್ರತಿನಿಧಿಗಳಿಗೆ ಅವರು ಈ ಮಾಹಿತಿ ನೀಡಿದರು.

ಕಸದ ಸಮಸ್ಯೆ ಪ್ರತಿದಿನ ಚರ್ಚೆಯಾಗುತ್ತಿರುವ ಪ್ರಮುಖ ವಿಷಯವಾಗಿದೆ. ಈ ಸಮಸ್ಯೆಗೆ ಶಾಶ್ವತ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ಅಧಿಕಾರಿಗಳಿಗೆ ಹಲವು ನಿರ್ದೇಶನಗಳನ್ನು ನೀಡಲಾಗಿದೆ ಎಂದು ಹೇಳಿದರು.

ತ್ಯಾಜ್ಯ ಸಂಗ್ರಹಣೆಗಾಗಿ ಹೊಸ ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿದೆ. 33 ಪ್ಯಾಕೇಜ್‌ಗಳಿಗೆ ಟೆಂಡರ್ ಆಹ್ವಾನಿಸಲಾಗಿದ್ದು, ಅದರಲ್ಲಿ ಆರು ಪ್ಯಾಕೇಜ್‌ಗಳು ನ್ಯಾಯಾಲಯದಲ್ಲಿವೆ. ಉಳಿದ 27 ಪ್ಯಾಕೇಜ್‌ಗಳು ಅಂತಿಮ ಹಂತದಲ್ಲಿದ್ದು, ಹೊಸ ವ್ಯವಸ್ಥೆ ಜಾರಿಯಾಗುವವರೆಗೆ ಈಗಿರುವ ವ್ಯವಸ್ಥೆಯಲ್ಲಿಯೇ ಅಗತ್ಯ ಬದಲಾವಣೆಗಳನ್ನು ತಂದು ಕಸದ ಸಮಸ್ಯೆ ನಿಯಂತ್ರಣಕ್ಕೆ ತರಲು ಸೂಚಿಸಲಾಗಿದೆ ಎಂದರು.

ತ್ಯಾಜ್ಯ ವಿಲೇವಾರಿಗೆ ಕೆಲವು ಕಡೆ ವಾಹನಗಳ ಕೊರತೆ ಇದ್ದರೆ, ಇನ್ನೂ ಕೆಲವು ಕಡೆ ಸಿಬ್ಬಂದಿ ಕೊರತೆಯಿದೆ. ಪ್ರಸ್ತುತ ತ್ಯಾಜ್ಯ ವಿಲೇವಾರಿಗಾಗಿ ಬಳಸುತ್ತಿರುವ ವಾಹನಗಳಲ್ಲಿ ಜಿಪಿಎಸ್ ವ್ಯವಸ್ಥೆ ಇಲ್ಲ. ಕೆಲವು ಗುತ್ತಿಗೆದಾರರು ಅವ್ಯವಸ್ಥೆಯನ್ನು ಮುಂದುವರಿಸಿಕೊಂಡು ಬಂದಿದ್ದು, ಹಲವು ವರ್ಷಗಳಿಂದ ಹೊಸ ಟೆಂಡರ್ ಪ್ರಕ್ರಿಯೆಗೆ ಅಡ್ಡಿಯಾಗುವಂತೆ ನ್ಯಾಯಾಲಯಗಳಲ್ಲಿ ದಾವೆ ಹೂಡುತ್ತಿದ್ದರು. ಇಂತಹ ಸಮಸ್ಯೆಗಳಿಗೆ ಕಡಿವಾಣ ಹಾಕಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

ನಗರದಲ್ಲಿ ಹಿಂದೆ ಇಷ್ಟು ಪ್ರಮಾಣದಲ್ಲಿ ರಸ್ತೆ ಬದಿ ಕಸ ಬಿಸಾಡುವ ಪ್ರವೃತ್ತಿ ಇರಲಿಲ್ಲ. ಆಟೊ ಟಿಪ್ಪರ್‌ಗಳ ಮೂಲಕ ಮನೆ-ಮನೆಗೆ ತೆರಳಿ ಕಸ ಸಂಗ್ರಹಿಸಲಾಗುತ್ತಿದೆ. ಆದರೆ ಅನೇಕ ನಾಗರಿಕರು ಮನೆ ಮುಂದೆ ಬರುವ ವಾಹನಗಳಿಗೆ ಕಸ ನೀಡದೆ ರಸ್ತೆ ಬದಿಯಲ್ಲೇ ಬಿಸಾಡುವ ಅಭ್ಯಾಸ ಮುಂದುವರಿಸಿಕೊಂಡಿದ್ದಾರೆ. ಇದಕ್ಕೆ ಕಡಿವಾಣ ಹಾಕುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ಕಠಿಣ ಕ್ರಮ ಅಗತ್ಯ: 'ಕೆಲವು ಸಂದರ್ಭಗಳಲ್ಲಿ ಕಠಿಣ ನಿರ್ಧಾರಗಳನ್ನು ತೆಗೆದುಕೊಳ್ಳುವುದು ಅನಿವಾರ್ಯ. ನಿಯಮ ಉಲ್ಲಂಘಿಸುವವರ ವಿರುದ್ಧ ಮಾತ್ರ ಕಠಿಣ ಕ್ರಮ ಕೈಗೊಳ್ಳಲಾಗುವುದು. ಬೆಳಿಗ್ಗೆ ಕಸ ಸಂಗ್ರಹಿಸಿದ ಬಳಿಕ ಮಧ್ಯಾಹ್ನ ಮತ್ತೆ ಸಾರ್ವಜನಿಕ ಸ್ಥಳಗಳಲ್ಲಿ ಕಸ ಎಸೆದರೆ ನಗರವನ್ನು ಸ್ವಚ್ಛವಾಗಿಡುವುದು ಸಾಧ್ಯವಾಗುವುದಿಲ್ಲ. ಆದ್ದರಿಂದ ಇಂತಹ ಸಂದರ್ಭಗಳಲ್ಲಿ ಕಟ್ಟುನಿಟ್ಟಿನ ಕ್ರಮ ಅಗತ್ಯವಾಗುತ್ತದೆ' ಎಂದು ಕೃಷ್ಣ ಬೈರೇಗೌಡ ಹೇಳಿದರು.

ಸಚಿವರ ಮಾತು



- ಮನೆಗಳ ಮುಂದೆ ಕಸದ ವಾಹನಗಳು ಬರುವಂತೆ ಮಾಡುವುದು ನಮ್ಮ ಜವಾಬ್ದಾರಿ
- ಮೂರರಿಂದ ನಾಲ್ಕು ತಿಂಗಳಲ್ಲಿ ಬದಲಾವಣೆ ತರಲು ಕ್ರಮ
- ಕಸ ವಿಂಗಡಣೆ– ವಿಲೇವಾರಿ ಶೇ 70ರಷ್ಟು ಸರಿ ಇದೆ. ಸಮಸ್ಯೆಯಲ್ಲಿ ಶೇ 20ರಷ್ಟು ಪಾಲು ಅಧಿಕಾರಿಗಳದ್ದು, ಶೇ 10ರಷ್ಟು ನಾಗರಿಕರದ್ದು
- ಆಯುಕ್ತರು, ಸಿಇಒ, ಡಿಜಿಎಂ, ಎಜಿಎಂ ಎಲ್ಲರೂ ಫೀಲ್ಡ್‌ನಲ್ಲಿ ಇರಬೇಕು, ನಾನು ಫೀಲ್ಡ್‌ಗೆ ಬಂದಾಗ ಸಮಸ್ಯೆ ಇದ್ದರೆ ಕಠಿಣ ಕ್ರಮ
- ದುಡ್ಡು ಮಾಡುತ್ತಾರೆ ಎಂದು ರಸ್ತೆ ಮಾಡುವುದನ್ನೇ ಬಿಡುವುದಕ್ಕೆ ಆಗುತ್ತಾ? ಗುಣಮಟ್ಟ ಕಾಪಾಡಿ ಕೆಲಸ ಮಾಡಬೇಕು

ಕಸ ವಿಂಗಡಣೆ ಕಡ್ಡಾಯ

ನಗರದ ಕೆಲವು ಪ್ರದೇಶಗಳಲ್ಲಿ ಹಸಿ ಮತ್ತು ಒಣ ತ್ಯಾಜ್ಯ ವಿಂಗಡಣೆ ಶೇ 70ರಿಂದ 80ರಷ್ಟಿದೆ. ಕೆಲವು ಪ್ರದೇಶಗಳಲ್ಲಿ ಅದು ಶೇ 45 ಅಷ್ಟೇ ಇದೆ. ಇನ್ನು ಮುಂದೆ ವಿಂಗಡಿಸದ ಕಸವನ್ನು ಸಂಗ್ರಹಿಸಿದರೆ ಸಂಬಂಧಿಸಿದ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಹಾಗೂ ಗುತ್ತಿಗೆದಾರರಿಗೆ ದಂಡ ವಿಧಿಸಲಾಗುವುದು ಎಂದು ಕೃಷ್ಣ ಬೈರೇಗೌಡ ತಿಳಿಸಿದರು.

'ಕಸ ಸಮಸ್ಯೆ ಬಗೆಹರಿಸಲು ಶೇ 50ರಷ್ಟು ನಾಗರಿಕರ ಸಹಕಾರ ಅಗತ್ಯವಾಗಿದೆ. ಸರ್ಕಾರ, ನಗರ ಪಾಲಿಕೆ ಹಾಗೂ ನಾಗರಿಕರು ಕೈಜೋಡಿಸಿದಾಗ ಮಾತ್ರ ಶಾಶ್ವತ ಸುಧಾರಣೆ ಸಾಧ್ಯ. ನಿಮ್ಮ ಮನೆ ಹತ್ತಿರ ಕಸ ಸಂಗ್ರಹಿಸಲು ವಾಹನ ಬರದಿದ್ದರೆ ನಮಗೆ ತಿಳಿಸಿ. ವಾಹನಗಳು ಬರುವಂತೆ ಮಾಡುವುದು ಪಾಲಿಕೆಯ ಜವಾಬ್ದಾರಿ. ಆದರೆ ವಾಹನ ಬಂದರೂ ರಸ್ತೆ ಬದಿಯಲ್ಲಿ ಕಸ ಬಿಸಾಡುವವರ ವಿರುದ್ಧ ದಂಡನಾತ್ಮಕ ಕ್ರಮ ಕೈಗೊಳ್ಳಲಾಗುವುದು' ಎಂದು ಹೇಳಿದರು.

'ಶೇ 50ರಷ್ಟು ಒಳ್ಳೆಯವರು ಶೇ 25ರಷ್ಟು ಎಲ್ಲೆ ಮೀರಿದವರು'

'ನಗರದಲ್ಲಿ ಶೇ 50ರಷ್ಟು ಒಳ್ಳೆಯ ಅಧಿಕಾರಿಗಳು ಇದ್ದಾರೆ. ಅವರು ಉತ್ತಮ ಕೆಲಸ ಮಾಡುತ್ತಲೇ ಇರುತ್ತಾರೆ. ಶೇ 25ರಷ್ಟು ಮಂದಿ ಗಾಳಿ ಬಂದಾಗ ತೂರಿಕೊಳ್ಳುವ ರೀತಿಯಲ್ಲಿ ಎಲ್ಲ ಸಂದರ್ಭಕ್ಕೂ ಹೊಂದಿಕೊಳ್ಳುತ್ತಾರೆ. ಇನ್ನುಳಿದ ಶೇ 25ರಷ್ಟು ಅಧಿಕಾರಿಗಳು ಎಲ್ಲವನ್ನೂ ಮೀರಿರುತ್ತಾರೆ. ಅವರನ್ನು ಸರಿ ದಾರಿಗೆ ತರುವ ಪ್ರಯತ್ನ ಯಾವಾಗಲೂ ಮಾಡುತ್ತಲೇ ಇರಬೇಕಾಗುತ್ತದೆ. ಕಠಿಣ ಕ್ರಮಗಳೂ ಆಗಬೇಕಾಗುತ್ತದೆ' ಎಂದು ಸಚಿವ ಕೃಷ್ಣ ಬೈರೇಗೌಡ ಪ್ರತಿಕ್ರಿಯಿಸಿದರು.

'ನಗರದಲ್ಲಿ ಕಸ ಸಮಸ್ಯೆಗೆ ಅಧಿಕಾರಿಗಳೇ ಕಾರಣವಾಗಿದ್ದಾರೆ' ಎಂಬ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, 'ಎಲ್ಲವೂ ಇರುತ್ತದೆ. ಅದನ್ನೆಲ್ಲ ಸರಿಪಡಿಸಿಕೊಂಡು ನಗರವನ್ನು ಸ್ವಚ್ಛಗೊಳಿಸಬೇಕಾಗುತ್ತದೆ' ಎಂದರು.

ಅಧಿಕಾರಿಗಳಿಗೆ ಸಚಿವರ ಸೂಚನೆ

- ಕಸದ ಗಾಡಿಗಳು ನಗರದ ಪ್ರತಿ ಮನೆಯನ್ನೂ ತಲುಪುವಂತೆ ನೋಡಿಕೊಳ್ಳಬೇಕು
- ಜನರಿಂದ ಹಸಿಕಸ ಒಣಕಸವನ್ನು ಕಡ್ಡಾಯವಾಗಿ ಬೇರ್ಪಡಿಸಿಯೇ ಪಡೆಯಬೇಕು
- ವಿಂಗಡಿಸಿದ ಕಸವನ್ನೇ ಕಸ ವಿಲೇವಾರಿ ಘಟಕಕ್ಕೆ ತಲುಪಿಸಬೇಕು
- ಹಸಿ ತ್ಯಾಜ್ಯವನ್ನು ಎರೆಗೊಬ್ಬರವನ್ನಾಗಿ ಪರಿವರ್ತಿಸಬೇಕು
- ಕಸವಿರುವ ರಸ್ತೆಗಳಲ್ಲಿ ಮಾರ್ಷಲ್‌ಗಳ ಬೀಟ್ ಸಂಖ್ಯೆ ಹೆಚ್ಚಿಸಬೇಕು
- ಜನ ರಸ್ತೆಯಲ್ಲಿ ಕಸ ಎಸೆಯುವುದು ಕಂಡರೆ ದುಪ್ಪಟ್ಟು ದಂಡ ಹಾಕಿ, ಅವರಿಂದಲೇ ಶುಚಿಗೊಳಿಸಬೇಕು
- ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲಾಗುವುದು
- 'ತಾರಸಿ ಉದ್ಯಾನ'ದ ಬಗ್ಗೆ ಜನರಲ್ಲಿ ಅರಿವು ಮೂಡಿಸಿ, ಮನೆ ಕಸವನ್ನು ಅವರೇ ಗೊಬ್ಬರವನ್ನಾಗಿಸಿಕೊಳ್ಳಲು ಅರಿವು ಕಾರ್ಯಕ್ರಮ ನಡೆಸಬೇಕು

ಇಲ್ಲಿದೆ ನೋಡಿ ಕಸ...

DH DECCAN HERALD
ಪ್ರಜಾವಾಣಿ ಸಿಟಿಜನ್ ಕನೆಕ್ಟ್
ಉತ್ತಮ ಬೆಂಗಳೂರಿಗಾಗಿ ಸಹಯೋಗ
96060 38256
dhpvcitizenconnect@printersmysore.co.in

ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳ ಸಂಪರ್ಕ
- ಕರೀಗೌಡ-ಸಿಇಒ- 77605 04651
- ರಮಾಮಣಿ-ಸಿಒಒ- 94481 97256
- ರಾಜೇಶ್-ಸಿಜಿಎಂ- 948068 84046
- ರಾಘವೇಂದ್ರ ಪ್ರಸಾದ್ -ಸಿಜಿಎಂ-91102 89696

ನಗರದಲ್ಲಿ ದಿನವೂ ಕಸ ವಿಲೇವಾರಿ ಆಗುತ್ತಿದೆ ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಅಧಿಕಾರಿಗಳು ಹೇಳುತ್ತಿದ್ದರೂ, ಮುಖ್ಯರಸ್ತೆ, ವಾರ್ಡ್ ರಸ್ತೆಗಳಲ್ಲಿ ಕಸದ ರಾಶಿ ನಿತ್ಯವೂ ಬಿದ್ದಿರುತ್ತದೆ. ನಿಮ್ಮ ಪ್ರದೇಶಗಳಲ್ಲಿ ಇಂತಹ ಸಮಸ್ಯೆ ಇದ್ದರೆ, ಚಿತ್ರಸಹಿತ ವಿವರಗಳೊಂದಿಗೆ ಬಿಎಸ್‌ಡಬ್ಲ್ಯುಎಂಎಲ್ ಅಧಿಕಾರಿಗಳಿಗೆ ಕಳುಹಿಸಿಕೊಡಿ ಮತ್ತು ಆ ಮಾಹಿತಿಯನ್ನು 'ಪ್ರಜಾವಾಣಿ'ಗೂ ಕಳುಹಿಸಿಕೊಡಿ. ಅದನ್ನು ಪ್ರಕಟಿಸಲಾಗುತ್ತದೆ.

ಎಸ್‌ಎಸ್‌ಐ ಕೈಗಾರಿಕಾ ಪ್ರದೇಶ ರಾಜಾಜಿನಗರ 3ನೇ ಅಡ್ಡರಸ್ತೆಯಲ್ಲಿರುವ ಕಸ

ಎಸ್‌ಜೆಪಿ ರಸ್ತೆಯಲ್ಲಿ ವಿಲೇವಾರಿಯಾಗದ ತ್ಯಾಜ್ಯದ ರಾಶಿ

ಕಬ್ಬನ್ ಪೇಟೆ ರಸ್ತೆಗೆ ಹೋಗುವ ದಾರಿಯಲ್ಲಿನ ಕಸದ ರಾಶಿ

ಹೃದಯಾಘಾತ: 17 ವರ್ಷದ ವಿದ್ಯಾರ್ಥಿ ಸಾವು

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಜಯದೇವ ಹೃದ್ರೋಗ ಆಸ್ಪತ್ರೆಯಲ್ಲಿ ಎರಡು ದಿನಗಳಲ್ಲಿ ಹೃದಯಾಘಾತದಿಂದ 12 ಮಂದಿ ಮೃತಪಟ್ಟ ಘಟನೆ ಮಾಸುವ ಮುನ್ನವೇ ಗುರುವಾರ ದ್ವಿತೀಯ ಪಿಯು ಓದುತ್ತಿದ್ದ 17 ವರ್ಷದ ವಿದ್ಯಾರ್ಥಿ ತೀವ್ರ ಹೃದಯಾಘಾತದಿಂದ ಕಾಲೇಜು ಆವರಣದಲ್ಲಿಯೇ ಕುಸಿದು ಬಿದ್ದು ಮೃತಪಟ್ಟಿದ್ದಾನೆ.

ನಗರದ ಮರಿಮಲ್ಲಪ್ಪ ಕಾಲೇಜು ಆವರಣದಲ್ಲಿ ಗುರುವಾರ ಮಧ್ಯಾಹ್ನ ಸಹಪಾಠಿಗಳ ಜೊತೆ ನಡೆದುಕೊಂಡು ಹೋಗುತ್ತಿದ್ದ ಮಂಡ್ಯ ಜಿಲ್ಲೆ ಮದ್ದೂರು ತಾಲ್ಲೂಕು ಯರಗನಹಳ್ಳಿಯ ಮಾದೇಶ್ ಕಾಂತಾರಾಜು ಕುಸಿದುಬಿದ್ದು, ಸಾವನ್ನಪ್ಪಿದ್ದಾನೆ.

ತೀವ್ರ ಹೃದಯಾಘಾತವೇ ಸಾವಿಗೆ ಕಾರಣವಿರಬಹುದು ಎಂದು ವೈದ್ಯರು ತಿಳಿಸಿದ್ದಾರೆ. ಮರಣೋತ್ತರ ಪರೀಕ್ಷೆ ನಂತರ ನಿಖರ ಕಾರಣಗೊತ್ತಾಗಲಿದೆ.

ಮಾದೇಶ್

ನಗರದ ಮರಿಮಲ್ಲಪ್ಪ ಕಾಲೇಜಿನ ವಿಜ್ಞಾನ ವಿಭಾಗದಲ್ಲಿ ದ್ವಿತೀಯ ಪಿಯು ಓದುತ್ತಿದ್ದ ಮಾದೇಶ್ ಗುರುವಾರ ಮಧ್ಯಾಹ್ನ ಸಹಪಾಠಿಗಳೊಂದಿಗೆ ಕಾಲೇಜಿನ ಆವರಣದಲ್ಲಿ ನಡೆದು ಹೋಗುತ್ತಿದ್ದಾಗ ಇದ್ದಕ್ಕಿದ್ದಂತೆ ಕುಸಿದು ಬಿದ್ದಿದ್ದಾನೆ. ಪ್ರಜ್ಞಾಹೀನನಾದ ಆತನನ್ನು ಕಾಲೇಜಿನ ಸಿಬ್ಬಂದಿ ಸಮೀಪದ ಖಾಸಗಿ ಆಸ್ಪತ್ರೆಗೆ ಕರೆದೊಯ್ದಿದ್ದಾರೆ. ಅಲ್ಲಿನ ವೈದ್ಯರು ಪರಿಶೀಲಿಸಿದಾಗ ಆತ ಮೃತಪಟ್ಟಿರುವುದು ಗೊತ್ತಾಗಿದೆ ಎಂದು ಪೊಲೀಸರು ತಿಳಿಸಿದರು.

'ಆರು ತಿಂಗಳಲ್ಲಿ ವಾರ್ಡ್ ರಸ್ತೆಗಳ ಅಭಿವೃದ್ಧಿ'

ಬೆಂಗಳೂರು: ಮುಖ್ಯಮಂತ್ರಿಯವರ ₹2,000 ಕೋಟಿ ವಿಶೇಷ ಅನುದಾನದಲ್ಲಿ ಐದು ನಗರ ಪಾಲಿಕೆಗಳ ವಾರ್ಡ್ ರಸ್ತೆಗಳನ್ನು ಆರು ತಿಂಗಳಲ್ಲಿ ಅಭಿವೃದ್ಧಿ ಮಾಡಲಾಗುವುದು ಎಂದು ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ ಕೃಷ್ಣ ಬೈರೇಗೌಡ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಹೊಸ ಸರ್ಕಾರ ಅಧಿಕಾರ ಸ್ವೀಕರಿಸಿದ ನಂತರ ಜನರ ನಿರೀಕ್ಷೆಗಳು ಸಾಕಷ್ಟಿದ್ದು, ಅವರ ನಿರೀಕ್ಷೆಗಳಿಗೆ ತಕ್ಕಂತೆ ಕೆಲಸ ಮಾಡಲು ಸರ್ಕಾರ ಹಲವು ಯೋಜನೆಗಳನ್ನು ರೂಪಿಸಿದೆ. ಅದರಂತೆ, ಡಿ.ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಪ್ರಮುಖ ತೀರ್ಮಾನವನ್ನು ಕೈಗೊಳ್ಳಲಾಗಿದ್ದು, ಅದನ್ನು ತ್ವರಿತವಾಗಿ ಹಾಗೂ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದರು.

ರಸ್ತೆಗಳ ಪರಿಸ್ಥಿತಿಯನ್ನು ಸುಧಾರಿಸಬೇಕೆಂಬುದು ಜನರ ಪ್ರಮುಖ ನಿರೀಕ್ಷೆಯಾಗಿದೆ. ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳನ್ನು ಹೊರತುಪಡಿಸಿ, ಹದಗೆಟ್ಟಿರುವ ವಾರ್ಡ್ ರಸ್ತೆಗಳನ್ನು ಅಭಿವೃದ್ಧಿಪಡಿಸಲು ವಿಶೇಷ ಅನುದಾನ ಬಿಡುಗಡೆ ಮಾಡಲಾಗಿದೆ. ರಸ್ತೆಗಳನ್ನು ಗುರುತಿಸಿ, ಅವುಗಳಿಗೆ ಡಾಂಬರೀಕರಣ ಮಾಡಲು ಅಂದಾಜು ಪಟ್ಟಿ ತಯಾರಿಸಿ, ಅಲ್ಪಾವಧಿಯ ಟೆಂಡರ್ ಪ್ರಕ್ರಿಯೆ ಪೂರ್ಣಗೊಳಿಸಿ ಕೂಡಲೇ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲು ನಗರ ಪಾಲಿಕೆಗಳ ಆಯುಕ್ತರಿಗೆ ಸೂಚಿಸಲಾಗಿದೆ ಎಂದು ಮಾಹಿತಿ ನೀಡಿದರು.

ವಾರ್ಡ್ ರಸ್ತೆಗಳ ಅಂದಾಜು ಹಾಗೂ ಟೆಂಡರ್ ಪ್ರಕ್ರಿಯೆಯನ್ನು ಮುಂದಿನ ಎರಡು ತಿಂಗಳೊಳಗೆ ಪೂರ್ಣಗೊಳಿಸಿ, ಆರು ತಿಂಗಳ ಅವಧಿಯಲ್ಲಿ ಕಾಮಗಾರಿಗಳನ್ನು ಮುಗಿಸುವ ಗುರಿ ಹೊಂದಿದ್ದೇವೆ. ಮಳೆಗಾಲವನ್ನು ಗಮನದಲ್ಲಿಟ್ಟುಕೊಂಡು, ಗುಣಮಟ್ಟಕ್ಕೆ ಯಾವುದೇ ಧಕ್ಕೆಯಾಗದಂತೆ ಮಳೆ ಇಲ್ಲದ ಅವಧಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. ಪ್ರಮಾಣಿತ ಕಾರ್ಯವಿಧಾನ (ಎಸ್‌ಒಪಿ) ಅನುಸಾರ ಸಂಬಂಧಿತ ಎಲ್ಲಾ ಅಂಗಸಂಸ್ಥೆಗಳೊಂದಿಗೆ ಸಮನ್ವಯ ಸಾಧಿಸಿ ಡಾಂಬರೀಕರಣ ಕಾಮಗಾರಿ ಕೈಗೊಳ್ಳಲಾಗುವುದು. ಪೂರ್ವಾನುಮತಿ ಇಲ್ಲದೆ ರಸ್ತೆಗಳನ್ನು ಅಗೆಯದಂತೆ ಕಟ್ಟುನಿಟ್ಟಿನ ಕ್ರಮ ವಹಿಸಲಾಗುವುದು ಎಂದು ಹೇಳಿದರು.

'ರಸ್ತೆ ಡಾಂಬರೀಕರಣ ಕಾಮಗಾರಿ ನಡೆಯುವ ಸಂದರ್ಭದಲ್ಲಿ ನಾನು ಸ್ಥಳ ಪರಿಶೀಲನೆ ನಡೆಸುತ್ತೇನೆ. ನಿಯಮಿತವಾಗಿ ಪರಿಶೀಲನೆ ನಡೆಸುವಂತೆ ಅಧಿಕಾರಿಗಳಿಗೂ ಸೂಚಿಸಲಾಗಿದೆ. ರಸ್ತೆ ಗುಣಮಟ್ಟವನ್ನು ಹೆಚ್ಚಿಸುವುದು ನಮ್ಮ ಆದ್ಯತೆಯಾಗಿದ್ದು, ಗುಣಮಟ್ಟದಲ್ಲಿ ಯಾವುದೇ ರಾಜಿ ಇರುವುದಿಲ್ಲ' ಎಂದರು.

ಕೆ.ಆರ್‌ಪುರ ಸಮೀಪದ ಕ್ಯಾಲಸನಹಳ್ಳಿಯ ಸರ್ಕಾರಿ ಶಾಲೆಗೆ ಕಾಂಗ್ರೆಸ್ ಮುಖಂಡ ಅಗರ ಪ್ರಕಾಶ್ ಅವರು ಶುದ್ಧ ಕುಡಿಯುವ ನೀರಿನ ಘಟಕವನ್ನು ಕೊಡುಗೆಯಾಗಿ ನೀಡಿದರು. ಕಾಂಗ್ರೆಸ್‌ನ ಬೆಂಗಳೂರು ಪೂರ್ವ ಜಿಲ್ಲಾ ಘಟಕದ ಅಧ್ಯಕ್ಷ ಡಿ.ಕೆ.ಮೋಹನ್, ಪುರುಷೋತ್ತಮ, ಸುರೇಶ್, ಮಂಜುನಾಥ್, ಕಲ್ಕೆರೆ ಕುಮಾರ್, ಸುನೀಲ್ ಪಾಲ್ಗೊಂಡರು

ಪವಿತ್ರಾಗೆ ರಾಜಾತಿಥ್ಯ ಆರೋಪ: ಮಹಿಳೆ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಜೈಲಿನಲ್ಲಿರುವ ಪವಿತ್ರಾಗೌಡಗೆ ರಾಜಾತಿಥ್ಯ ನೀಡಲಾಗುತ್ತಿದೆ ಎಂಬ ಆರೋಪದ ಸಂಬಂಧ ಜೈಲಿನ ಸಿಬ್ಬಂದಿಯೊಬ್ಬರು ಸಂಧ್ಯಾ ನಾಗರಾಜ್ ಎಂಬುವವರ ವಿರುದ್ಧ ಪರಪ್ಪನ ಅಗ್ರಹಾರ ಠಾಣೆಯಲ್ಲಿ ದೂರು ದಾಖಲಿಸಿದ್ದಾರೆ.

ಸದ್ಯ ಪೊಲೀಸರು ಗಂಭೀರ ಸ್ವರೂಪವಲ್ಲದ ಪ್ರಕರಣ (ಎನ್‌ಸಿಆರ್) ದಾಖಲಿಸಿಕೊಂಡಿದ್ದಾರೆ. ಸಂಧ್ಯಾ ಈ ಹಿಂದೆ ಅಪರಾಧ ಪ್ರಕರಣವೊಂದರಲ್ಲಿ ಬಂಧನಕ್ಕೊಳಗಾಗಿ ಮೂರು ತಿಂಗಳು ಜೈಲಿನಲ್ಲಿದ್ದರು. ಈ ವೇಳೆ ಪವಿತ್ರಾಗೌಡ ಜೈಲಿನ ಸಿಬ್ಬಂದಿಯಿಂದಲೇ ವಿಶೇಷ ಆತಿಥ್ಯ ಸ್ವೀಕರಿಸುತ್ತಿದ್ದಾರೆ. ವಿಚಾರಣಾಧೀನ ಕೈದಿಯೊಬ್ಬರನ್ನು ತನ್ನ ಕೆಲಸಕ್ಕೆ ಇಟ್ಟುಕೊಂಡಿದ್ದಾರೆ ಎಂದು ಮಾಧ್ಯಮಗಳಿಗೆ ಹೇಳಿಕೆ ನೀಡಿದ್ದರು.

'ವೈಯಕ್ತಿಕ ಕಾರಣಕ್ಕಾಗಿ ಅಪರಾಧ ಪ್ರಕರಣವೊಂದರಲ್ಲಿ ಮೂರು ತಿಂಗಳ ಹಿಂದೆ ಜೈಲು ಸೇರಿದ್ದೆ. ಮಹಿಳಾ ಬ್ಯಾರಕ್‌ನಲ್ಲಿ ಇರುವಾಗ ಪವಿತ್ರಾಗೌಡಗೆ ಮನೆಯಿಂದಲೇ ಊಟ ಸಿಗುತ್ತಿತ್ತು. ಅದನ್ನು ಮಹಿಳಾ ಸಿಬ್ಬಂದಿ ಬಾಕ್ಸ್‌ನಲ್ಲಿ ತರುತ್ತಿದ್ದರು' ಎಂದು ಸಂಧ್ಯಾ ಆರೋಪಿಸಿದ್ದಾರೆ.

ಪವಿತ್ರಾಗೌಡ

ಜೈಲಿನ ಅಧಿಕಾರಿ ಕೊಟ್ರೇಶ್ ಅವರು ಮುಖ್ಯ ವೀಕ್ಷಕಿ ದೇವಮ್ಮ ಅವರ ಮೂಲಕ ಸಂಧ್ಯಾ ವಿರುದ್ಧ ದೂರು ನೀಡಿದ್ದಾರೆ. ಅವಮಾನ ಮಾಡಲು ಇಲ್ಲಸಲ್ಲದ ಆರೋಪ ಮಾಡಿ ಮಾನಸಿಕವಾಗಿ ಕುಗ್ಗುವಂತೆ ಮಾಡಿದ್ದಾರೆ. ತಮ್ಮ ವಿರುದ್ಧ ಸುಳ್ಳು ಆರೋಪ ಮಾಡಲಾಗಿದ್ದು, ಸಂಧ್ಯಾ ವಿರುದ್ಧ ಪ್ರಕರಣ ದಾಖಲಿಸಿ ತನಿಖೆ ನಡೆಸುವಂತೆ ದೂರಿನಲ್ಲಿ ಉಲ್ಲೇಖಿಸಲಾಗಿದೆ.

ಕೃಷಿ ಕಾರ್ಮಿಕರಿಗೆ ಪ್ರಾವಿಷನ್ ಸ್ಟೋರ್‌ನಲ್ಲಿ ಬಿಯರ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹಳ್ಳಿಯಿಂದ ದಣಿದು ಬಂದ ಕೃಷಿ ಕಾರ್ಮಿಕರಿಗೆ ನೀಡಲೆಂದು ಪ್ರಾವಿಷನ್ ಸ್ಟೋರ್‌ನಲ್ಲಿ ಬಿಯರ್ ಮತ್ತು ಮದ್ಯದ ಬಾಟಲಿಗಳನ್ನು ಸಂಗ್ರಹಿಸಲಾಗಿತ್ತು' ಎಂದು ಪ್ರಕರಣವೊಂದರ ವಿಚಾರಣೆ ವೇಳೆ ಯುವ ವಕೀಲೆಯೊಬ್ಬರು ಹೈಕೋರ್ಟ್‌ನಲ್ಲಿ ಅಚ್ಚರಿಯ ವಾದ ಮಂಡಿಸಿದರು.

'ನನ್ನ ವಿರುದ್ಧ ಅಬಕಾರಿ ಪೊಲೀಸರು ದಾಖಲಿಸಿರುವ ಎಫ್‌ಐಆರ್ ಮತ್ತು ಈ ಕುರಿತ ನ್ಯಾಯಿಕ ವಿಚಾರಣೆ ರದ್ದುಗೊಳಿಸಬೇಕು' ಎಂದು ಕೋರಿ ತುಮಕೂರು ಜಿಲ್ಲೆ ಗುಬ್ಬಿ ತಾಲ್ಲೂಕಿನ ಮಣಿಕುಪ್ಪೆಯ ಯಶೋದಮ್ಮ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ನ್ಯಾಯಮೂರ್ತಿಗಳು 'ಎಷ್ಟು ಪ್ರಮಾಣದ ಮದ್ಯ ಜಪ್ತಿ ಮಾಡಲಾಗಿದೆ' ಎಂದು ಅರ್ಜಿದಾರರ ಪರ ಯುವ ವಕೀಲೆ ಮೇಘನಾ ಅವರನ್ನು ಪ್ರಶ್ನಿಸಿದರು. ಇದಕ್ಕೆ ಮೇಘನಾ, 'ಒಟ್ಟು 7.8 ಲೀಟರ್ ಬಿಯರ್ ಹಾಗೂ 22 ಲೀಟರ್‌ಗಳಷ್ಟು ವಿವಿಧ ಬಗೆಯ ಮದ್ಯದ ಬಾಟಲಿಗಳು' ಎಂದರು.

ಮಧ್ಯ ಪ್ರವೇಶಿಸಿದ ಪ್ರಾಸಿಕ್ಯೂಟರ್ ನಾಗೇಶ್ವರಪ್ಪ, 'ಅರ್ಜಿದಾರರು ಮದ್ಯವನ್ನು ಪ್ರಾವಿಷನ್ ಸ್ಟೋರ್‌ನಲ್ಲಿ (ದಿನಸಿ ಅಂಗಡಿ) ಮಾರಾಟ ಮಾಡುತ್ತಿದ್ದರು' ಎಂಬ ಅಂಶವನ್ನು ನ್ಯಾಯಪೀಠದ ಗಮನಕ್ಕೆ ತಂದರು.

ಇದಕ್ಕೆ ತೀವ್ರ ಅಚ್ಚರಿ ವ್ಯಕ್ತಪಡಿಸಿದ ನ್ಯಾಯಮೂರ್ತಿಗಳು, 'ಪ್ರಾವಿಷನ್ ಸ್ಟೋರಾ? ಪ್ರಾವಿಷನ್ ಸ್ಟೋರ್‌ನಲ್ಲಿ ಮಾರಾಟ ಮಾಡಲು ಅರ್ಜಿದಾರರು ಪರವಾನಗಿ ಹೊಂದಿದ್ದಾರೆಯೇ' ಎಂದು ಪ್ರಶ್ನಿಸಿದರು.

ಇದಕ್ಕೆ ವಿನಮ್ರವಾಗಿ ಉತ್ತರಿಸಿದ ಮೇಘನಾ, 'ಕೃಷಿ ಕಾರ್ಮಿಕರಿಗೆ ನೀಡಲು ಇದನ್ನು ಇರಿಸಲಾಗಿತ್ತು...!' ಎಂದರು. ಈ ಮಾತಿಗೆ ನಗು ಚೆಲ್ಲಿದ ನ್ಯಾಯಮೂರ್ತಿಗಳು, 'ಓಹೋ.. ನಿಮ್ಮದು ಭಾರಿ ಸದುದ್ದೇಶ ಇದ್ದಂತಿದೆ. ವಕೀಲರು ನಿಜ ಹೇಳಬೇಕು. ಆದರೆ, ಇಷ್ಟೊಂದು ನಿಜ ಹೇಳಬಾರದು. ಪರವಾನಗಿ ಪಡೆಯದೆ ಪ್ರಾವಿಷನ್ ಸ್ಟೋರ್‌ನಲ್ಲಿ ಟೊಮೆಟೊ ಸಾಸ್ ಪಕ್ಕ ಲಿಕ್ಕರ್ ಇಟ್ಟು ಮಾರಾಟ ಮಾಡಿದರೆ ಒಪ್ಪಲಾಗುತ್ತದೆಯೇ..!' ಎಂದು ಚಟಾಕಿ ಹಾರಿಸಿ ಪ್ರಕರಣದ ವಿಚಾರಣೆಗೆ ಮಧ್ಯಂತರ ತಡೆ ನೀಡಿದರು.

ಪ್ರತಿವಾದಿ ಅಬಕಾರಿ ಇಲಾಖೆಯ ಗುಬ್ಬಿ ವಲಯದ ಉಪ ನಿರೀಕ್ಷಕರಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿದರು. 'ಪ್ರಾವಿಷನ್ ಸ್ಟೋರ್‌ನಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡಲಾಗುತ್ತಿದೆ' ಎಂಬ ಆರೋಪದಡಿ ಈ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ.

ದರ್ಶನ್ ಕೇಸ್‌ನಿಂದ ನಿವೃತ್ತಿ ಘೋಷಿಸಿದ ವಕೀಲ ಎಸ್.ಸುನಿಲ್ ಕುಮಾರ್

ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಪ್ರಕರಣದ ಎರಡನೇ ಆರೋಪಿ ದರ್ಶನ್ ಪರ ವಕೀಲ ಎಸ್.ಸುನಿಲ್ ಕುಮಾರ್, ದರ್ಶನ್ ಪರ ವಕಾಲತ್ತಿನಿಂದ ನಿವೃತ್ತಿ ಪಡೆಯುವುದಾಗಿ ಹೈಕೋರ್ಟ್‌ಗೆ ತಿಳಿಸಿದರು.

ಸುನಿಲ್ ಕುಮಾರ್

'ರೇಣುಕ ಸ್ವಾಮಿ ಅವರ ತಾಯಿ ರತ್ನಪ್ರಭಾ ಅವರನ್ನು ಪಾಟಿ ಸವಾಲಿಗೆ ಒಳಪಡಿಸಲು ನಿರಾಕರಿಸಲಾಗಿದೆ' ಎಂದು ಆಕ್ಷೇಪಿಸಿ ಪ್ರಾಸಿಕ್ಯೂಷನ್ ಸಲ್ಲಿಸಿರುವ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಆರೋಪಿಗಳಾದ ದರ್ಶನ್, ಲಕ್ಷ್ಮಣ್ (ದರ್ಶನ್ ಕಾರಿನ ಡ್ರೈವರ್), ನಾಗರಾಜ್ (ದರ್ಶನ್ ಮ್ಯಾನೇಜರ್) ಪರ ಹಾಜರಾಗಿದ್ದ ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್, 'ಈ ಪ್ರಕರಣದಲ್ಲಿ ನಾನು ದರ್ಶನ್ ಮತ್ತಿತರರ ವಕಾಲತ್ತಿನಿಂದ ನಿವೃತ್ತಿ ಪಡೆಯಲು ಬಯಸಿದ್ದೇನೆ' ಎಂದರು.

ಇದಕ್ಕೆ ಪ್ರತಿಯಾಗಿ ಪ್ರಕರಣದ ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನ ಕುಮಾರ್, 'ಇವರ ಈ ಹೇಳಿಕೆ ವಿಚಾರಣೆಯನ್ನು ವಿಳಂಬಿಸುವ ಸೂತ್ರ. ಪ್ರಕರಣದ ವಿಚಾರಣೆಯನ್ನು ನಿಗದಿತ ಮಿತಿಯಲ್ಲಿ ಪೂರ್ಣಗೊಳಿಸುವಂತೆ ಸುಪ್ರೀಂ ಕೋರ್ಟ್ ನಿರ್ದೇಶನವಿದೆ. ಈ ಆದೇಶವನ್ನು ದರ್ಶನ್ ಅವರೇ ಸುಪ್ರೀಂ ಕೋರ್ಟ್‌ಗೆ ಹೋಗಿ ಪಡೆದುಕೊಂಡು ಬಂದಿದ್ದಾರೆ. ಆದರೆ, ವಿಚಾರಣೆಯಲ್ಲಿ ಈಗ ಪ್ರತಿಯೊಂದಕ್ಕೂ ತಕರಾರು ತೆಗೆದು ವಿಳಂಬಗೊಳಿಸಲಾಗುತ್ತಿದೆ' ಎಂದು ಆಕ್ಷೇಪಿಸಿದರು.

ಇದನ್ನು ಅಲ್ಲಗಳೆದ ಸುನಿಲ್ ಕುಮಾರ್, 'ವಿಚಾರಣೆ ಬೇಗ ಮುಗಿಸಿ ಎಂದು ನಾವು ಸುಪ್ರೀಂ ಕೋರ್ಟ್‌ಗೆ ವಿಶೇಷ ಮೇಲ್ಮನವಿ ಸಲ್ಲಿಸಿರಲಿಲ್ಲ. ನಮ್ಮ ಕಕ್ಷಿದಾರರಿಗೆ ಜೈಲಿನಲ್ಲಿ ಮನೆ ಊಟ ನೀಡಲು ಮತ್ತು ಸೂಕ್ತವಾದ ಸೌಲಭ್ಯ ಒದಗಿಸಲು ಮತ್ತು ತ್ವರಿತಗತಿಯಲ್ಲಿ ವಿಚಾರಣೆ ನಡೆಯುತ್ತಿಲ್ಲವಾದ ಕಾರಣ ಜಾಮೀನು ಮಂಜೂರು ಮಾಡಬೇಕು ಎಂದು ಕೋರಿದ್ದೆವು. ಈ ಸಂದರ್ಭದಲ್ಲಿ ಸುಪ್ರೀಂ ವಿಚಾರಣೆಗೆ ಕಾಲಮಿತಿ ವಿಧಿಸಿ ನಿರ್ದೇಶಿಸಿದೆ' ಎಂದು ಸಮಜಾಯಿಷಿ ನೀಡಿದರು.

ಪ್ರಾಸಿಕ್ಯೂಷನ್ ಮತ್ತು ಆರೋಪಿ ಪರ ವಕೀಲರ ನಡುವೆ ವಾಕ್ಸಮರ ನಡೆಯಿತು. ಅಂತಿಮವಾಗಿ ಸುನಿಲ್ ಕುಮಾರ್, 'ಈ ಅರ್ಜಿಗೆ ಸಂಬಂಧಿಸಿದಂತೆ ಹಾಜರಾಗಲು ದರ್ಶನ್, ಇತರ ಆರೋಪಿಗಳು ಜೈಲಿನಲ್ಲಿದ್ದು, ನನಗೆ ಈತನಕ ಯಾವುದೇ ಸೂಚನೆ ಬಂದಿಲ್ಲ. ಈ ಪ್ರಕರಣದಿಂದ ನಿವೃತ್ತಿ ಪಡೆಯಲು ಬಯಸಿದ್ದೇನೆ' ಎಂದು ನ್ಯಾಯಪೀಠಕ್ಕೆ ತಿಳಿಸಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, 'ಈ ದಿನ ಮೆರಿಟ್ ಮೇಲೆ ಯಾವುದೇ ವಿಚಾರಣೆ ನಡೆದಿಲ್ಲವಾದರೂ ಆರೋಪಿ ಪರ ವಕೀಲರು ತಾವು ಹೇಳಬೇಕಾದ್ದನ್ನು ಅಡಕಗೊಳಿಸಿಯೇ ವಿಚಾರಣೆ ಮುಂದೂಡುವಂತೆ ಕೋರಿದ್ದಾರೆ. ಹಾಗಾಗಿ, ವಿಚಾರಣೆಯನ್ನು ಇದೇ 23ಕ್ಕೆ ಮುಂದೂಡಲಾಗಿದೆ' ಎಂದು ತಿಳಿಸಿತು.

ತ್ಯಾಜ್ಯ ಆಯುವ ಶ್ರಮಿಕರ ಒತ್ತಾಯ • 'ಹಸಿರು ದಳ' ಸಂಸ್ಥೆಯಿಂದ ಹಸಿರು ಹಬ್ಬ

'ಪ್ರತ್ಯೇಕ ಕಾಯ್ದೆ ಜಾರಿಗೊಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ತ್ಯಾಜ್ಯ ಆಯುವ ಶ್ರಮಿಕರ ಕಲ್ಯಾಣಕ್ಕೆ ರಾಜ್ಯ ಸರ್ಕಾರವು ಪ್ರತ್ಯೇಕ ಕಾಯ್ದೆಯನ್ನು ಜಾರಿಗೊಳಿಸಬೇಕು' ಎಂದು ಹಸಿರು ದಳ ಸಂಸ್ಥೆಯ ಸಹ ಸಂಸ್ಥಾಪಕಿ ನಳಿನಿ ಒತ್ತಾಯಿಸಿದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಸಂಸ್ಥೆಯು ವಿಶ್ವ ಪರಿಸರ ದಿನಾಚರಣೆ ಪ್ರಯುಕ್ತ ಇತ್ತೀಚೆಗೆ ಆಯೋಜಿಸಿದ್ದ 'ಹಸಿರು ಹಬ್ಬ'ದಲ್ಲಿ ಮಾತನಾಡಿದ ಅವರು, 'ಮಸೂದೆಯನ್ನು ಸಂಸ್ಥೆ ಸಿದ್ಧಪಡಿಸಿದ್ದು, ಭಾರತೀಯ ಕಾನೂನು ಕಾಲೇಜಿನ ತಜ್ಞರೂ ನೆರವಾಗಿದ್ದಾರೆ. ಅದನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು' ಎಂದರು.

'ರಾಜ್ಯದಲ್ಲಿ 4 ಲಕ್ಷಕ್ಕೂ ಹೆಚ್ಚು ಶ್ರಮಿಕರಿದ್ದು, ಶೇ 50ಕ್ಕೂ ಹೆಚ್ಚು ಮಂದಿಗೆ ಭೂಮಿ, ವಸತಿ ಇಲ್ಲ. ಹೀಗಾಗಿ ಪಡಿತರ ಸೌಲಭ್ಯವೂ ದೊರೆಯುತ್ತಿಲ್ಲ. ಜಾತಿ ಪ್ರಮಾಣ ಪತ್ರ ಮಾಡಿಸಲು ಆಗುತ್ತಿಲ್ಲ. ಸರ್ಕಾರವು ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಬೇಕು' ಎಂದು ಹೇಳಿದರು.

'ಕೇಂದ್ರ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯದ ನಮಸ್ತೆ ಯೋಜನೆಯಡಿ ತ್ಯಾಜ್ಯ ಆಯುವ ಶ್ರಮಿಕರಿಗೆ ಗುರುತಿನ ಚೀಟಿ ನೀಡಿದ್ದರಿಂದ ವಿಮೆ ಸೌಲಭ್ಯ ಸಿಕ್ಕಿದೆ. ಆದರೆ, ಪಡಿತರ ಚೀಟಿ ಮಾತ್ರ ಸಿಕ್ಕಿಲ್ಲ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ಕಾರ್ಮಿಕ ಇಲಾಖೆ ಸಹಾಯಕ ಕಾರ್ಮಿಕ ಅಧಿಕಾರಿ ಜಹೀರ್ ಪಾಷಾ, 'ಶ್ರಮಿಕರ ಬೇಡಿಕೆ ಈಡೇರಿಸಲು ಇಲಾಖೆಯು ಕೆಲಸ ಮಾಡಲಿದೆ' ಎಂದರು.

ರಾಜ್ಯ ಕೊಳೆಗೇರಿ ಅಭಿವೃದ್ಧಿ ಮಂಡಳಿ ಕಾರ್ಯದರ್ಶಿ ಎಂ.ಜಯಾ ಮಾತನಾಡಿ, 'ಮಂಡಳಿಯಿಂದ ಮೂರು ತಿಂಗಳಿಗೊಮ್ಮೆ ಕುಂದುಕೊರತೆ ಸಭೆ ನಡೆಸಲಾಗುತ್ತಿದೆ. ಅನುದಾನದ ಕೊರತೆಯಿದ್ದು, ಹಂತ ಹಂತವಾಗಿ ಸೌಲಭ್ಯ ಕಲ್ಪಿಸಲಾಗುವುದು' ಎಂದು ಭರವಸೆ ನೀಡಿದರು.

ಸಂಸ್ಥೆಯ ಕಾರ್ಯನಿರ್ವಾಹಕ ನಿರ್ದೇಶಕಿ ಚಿನ್ಮಯಿ, ಶ್ರೀರಂಗಪಟ್ಟಣದ ಶೆಟ್ಟಹಳ್ಳಿಯ ಪಿಡಿಒ ಶೋಭಾರಾಣಿ ಪಾಲ್ಗೊಂಡಿದ್ದರು.



ಸ್ವಾತಂತ್ರ್ಯ ಉದ್ಯಾನದಲ್ಲಿ 'ಹಸಿರು ದಳ' ಸಂಸ್ಥೆಯು ಆಯೋಜಿಸಿದ್ದ 'ಹಸಿರು ಹಬ್ಬ'ವನ್ನು ತ್ಯಾಜ್ಯ ಆಯುವ ಶ್ರಮಿಕರೊಬ್ಬರು ಗಿಡಕ್ಕೆ ನೀರೆರೆದು ಉದ್ಘಾಟಿಸಿದರು. ನಳಿನಿ, ಚಿನ್ಮಯಿ, ಜಹೀರ್ ಪಾಷಾ, ಎಂ.ಜಯಾ, ಶೋಭಾರಾಣಿ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಕಾಮಗಾರಿ ಆಮೆಗತಿ; ಮಕ್ಕಳಿಗೆ ತೊಂದರೆ

• ಡಿ.ಸುರೇಶ್

ಯಲಹಂಕ: ಜಕ್ಕೂರು ಗ್ರಾಮದ ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆಯ ನೂತನ ಕಟ್ಟಡ ನಿರ್ಮಾಣ ಕಾಮಗಾರಿ ಆಮೆಗತಿಯಲ್ಲಿದ್ದು, ವಿದ್ಯಾರ್ಥಿಗಳ ಶೈಕ್ಷಣಿಕ ಚಟುವಟಿಕೆಗಳಿಗೆ ತೊಂದರೆ ಉಂಟಾಗಿದೆ.

ಜಕ್ಕೂರು, ಶಿವನಹಳ್ಳಿ, ಸಂಪಿಗೆಹಳ್ಳಿ, ಜಿಕೆವಿಕೆ ಬಡಾವಣೆ, ನವ್ಯನಗರ ಹಾಗೂ ಅರ್ಕಾವತಿ ಬಡಾವಣೆಯ ಸುತ್ತಮುತ್ತಲಿನ ಪ್ರದೇಶಗಳ ಸ್ಥಳೀಯ ಹಾಗೂ ವಲಸೆ ಕುಟುಂಬಗಳ ಮಕ್ಕಳು ಈ ಶಾಲೆಯಲ್ಲಿ ವ್ಯಾಸಂಗ ಮಾಡುತ್ತಿದ್ದಾರೆ. 1ರಿಂದ 7ನೇ ತರಗತಿಯವರೆಗೆ ಒಟ್ಟು 609 ವಿದ್ಯಾರ್ಥಿಗಳು ಕಲಿಯುತ್ತಿದ್ದು, 17 ಮಂದಿ ಶಿಕ್ಷಕರು ಕಾರ್ಯನಿರ್ವಹಿಸುತ್ತಿದ್ದಾರೆ.

ಶತಮಾನೋತ್ಸವ ಸಂಭ್ರಮದಲ್ಲಿರುವ ಈ ಶಾಲೆಗೆ ಕೆಪಿಟಿಸಿಎಲ್‌ನ ಸಿಎಸ್‌ಆರ್ ಅನುದಾನದಡಿ ಸುಮಾರು ₹3 ಕೋಟಿ ವೆಚ್ಚದಲ್ಲಿ ನೆಲಮಹಡಿ ಸೇರಿದಂತೆ ಎರಡು ಅಂತಸ್ತಿನ ನೂತನ ಕಟ್ಟಡ ನಿರ್ಮಾಣ ಕಾಮಗಾರಿಗೆ ಒಂದು ವರ್ಷದ ಹಿಂದೆ ಶಂಕುಸ್ಥಾಪನೆ ನೆರವೇರಿಸಲಾಗಿತ್ತು. ಸುಮಾರು 10 ತಿಂಗಳ ಹಿಂದೆ ಹಳೆಯ ಕಟ್ಟಡವನ್ನು ತೆರವುಗೊಳಿಸಿ ಕಾಮಗಾರಿ ಆರಂಭಿಸಲಾಗಿದ್ದರೂ, ಅದು ವಿಳಂಬವಾಗುತ್ತಿರುವುದರಿಂದ ಶಿಕ್ಷಕರು ಹಾಗೂ ಮಕ್ಕಳು ಹಲವು ರೀತಿಯ ಸಮಸ್ಯೆಗಳನ್ನು ಎದುರಿಸಬೇಕಾಗಿದೆ.

ಕಟ್ಟಡ ನಿರ್ಮಾಣ ಕಾರ್ಯ ಪ್ರಗತಿಯಲ್ಲಿರುವುದರಿಂದ ಕಳೆದ ಒಂದು ವರ್ಷದಿಂದ ತರಗತಿಗಳನ್ನು ಸುಮಾರು ಒಂದು ಕಿಲೋಮೀಟರ್ ದೂರದಲ್ಲಿರುವ ಸರ್ಕಾರಿ ಪ್ರೌಢಶಾಲೆಯ ಆವರಣದಲ್ಲಿ ತಾತ್ಕಾಲಿಕವಾಗಿ ನಡೆಸಲಾಗುತ್ತಿದೆ. ಎರಡೂ ಶಾಲೆಗಳಲ್ಲಿ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಿರುವ ಕಾರಣ, ಶಾಲೆಗೆ ಆಗಮಿಸುವುದರಿಂದ ಉಂಟಾಗುವ ಗದ್ದಲದಿಂದ ಎರಡೂ ಶಾಲೆಗಳ ಪಾಠ-ಪ್ರವಚನಗಳಿಗೆ ಅಡಚಣೆಯಾಗುತ್ತಿದೆ ಎಂದು ಮಕ್ಕಳ ಪೋಷಕರಾದ ಎಸ್.ರಾಜೇಶ್ ದೂರಿದರು.

'ಕನ್ನಡ ಮತ್ತು ಆಂಗ್ಲ ಮಾಧ್ಯಮ ತರಗತಿಗಳನ್ನು ಆರಂಭಿಸಿರುವುದರಿಂದ ಎಲ್‌ಕೆಜಿ ತರಗತಿಗೆ ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ದಾಖಲಾಗುವ ಅವಕಾಶವಿದ್ದರೂ ಕೊಠಡಿಗಳ ಕೊರತೆಯಿಂದ ಹೆಚ್ಚಿನ ಮಕ್ಕಳನ್ನು ದಾಖಲಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ. ಅಲ್ಲದೆ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿಗಳ ಪರೀಕ್ಷೆಯ ಫಲಿತಾಂಶದ ಮೇಲೆಯೂ ಪರಿಣಾಮ ಬೀರುವ ಸಾಧ್ಯತೆಯಿದೆ' ಎಂದು ಶಾಲಾಭಿವೃದ್ಧಿ ಸಮಿತಿ ಅಧ್ಯಕ್ಷ ಹೇಮಂತ್‌ಕುಮಾರ್ ದೂರಿದರು.

ಶಾಲಾ ತರಗತಿಯ ಕೊಠಡಿಯಲ್ಲಿ ನಿಗದಿಗಿಂತ ಹೆಚ್ಚಿನ ಸಂಖ್ಯೆಯಲ್ಲಿರುವ ಮಕ್ಕಳು

ಕಾಮಗಾರಿ ವಿಳಂಬವಾಗುತ್ತಿರುವುದರಿಂದ ಮಕ್ಕಳ ಶೈಕ್ಷಣಿಕ ಚಟುವಟಿಕೆಗೆ ತೊಂದರೆಯಾಗುತ್ತಿದೆ. ಕಾಮಗಾರಿ ಪೂರ್ಣಗೊಳಿಸಲು ಸೂಚಿಸಲಾಗಿದೆ
ಕೃಷ್ಣ ಬೈರೇಗೌಡ, ಗ್ರೇಟರ್ ಬೆಂಗಳೂರು ಅಭಿವೃದ್ಧಿ ಸಚಿವ

ಕಾರ್ಮಿಕರ ಕೊರತೆಯಿಂದ ಕಾಮಗಾರಿ ವಿಳಂಬವಾಗಿದೆ. ಮಕ್ಕಳಿಗೆ ತೊಂದರೆಯಾಗುತ್ತಿರುವುದನ್ನು ಗಮನಿಸಿ, ಶೀಘ್ರ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಗಿದೆ
ಶ್ರೀನಾಥ್.ಎಂ.ಬಿ, ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಬೆಂಗಳೂರು ನಗರ ಜಿಲ್ಲಾ ಪಂಚಾಯಿತಿ

ಶುಕ್ರವಾರ • ಜೂನ್ 19, 2026
ಪ್ರಜಾವಾಣಿ

ಕೆ.ಆರ್.ಮಾರುಕಟ್ಟೆ ನೆಲಮಹಡಿಯಲ್ಲಿನ ಹೊಸ ಪಾರ್ಕಿಂಗ್ ವ್ಯವಸ್ಥೆ (ಎಡ) ಒತ್ತುವರಿ ತೆರವು ಮಾಡಿದ್ದರೂ ಕಟ್ಟಡ ತ್ಯಾಜ್ಯ ಸ್ಥಳದಲ್ಲಿಯೇ ಇರುವುದರಿಂದ ಪಾದಚಾರಿಗಳಿಗೆ ಓಡಾಡಲು ತೊಂದರೆಯಾಗಿದೆ —ಪ್ರಜಾವಾಣಿ ಚಿತ್ರ: ಪ್ರಶಾಂತ್ ಎಚ್.ಜಿ.

ಕೆ.ಆರ್.ಮಾರುಕಟ್ಟೆ: ಒತ್ತುವರಿ ತೆರವಿಗೆ ವೇಗ

ಪರ್ಯಾಯ ವ್ಯವಸ್ಥೆಗೆ ಬೀದಿಬದಿ ವ್ಯಾಪಾರಿಗಳ ಬೇಡಿಕೆ
• ಪಾರ್ಕಿಂಗ್ ಸೌಕರ್ಯಕ್ಕೆ ಗ್ರಾಹಕರ ಮೆಚ್ಚುಗೆ

• ಮೋಹನ್ ಕುಮಾರ ಸಿ.

ಬೆಂಗಳೂರು: ಕೆ.ಆರ್.ಮಾರುಕಟ್ಟೆ ನೆಲಮಹಡಿಯಲ್ಲಿ ಹೊಸದಾಗಿ ಯೋಜಿತ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲಾಗಿದ್ದು, ಗ್ರಾಹಕರಿಗೆ ಅನುಕೂಲವಾಗಿದೆ. ಇನ್ನೊಂದೆಡೆ, ಮಾರುಕಟ್ಟೆ ಮಾರ್ಗಗಳಲ್ಲಿ ಒತ್ತುವರಿ ಮಾಡಿ ವಹಿವಾಟು ನಡೆಸಿದ್ದ ಬೀದಿಬದಿ ವ್ಯಾಪಾರಿಗಳನ್ನು ತೆರವು ಮಾಡಿರುವುದಕ್ಕೆ ಅಸಮಾಧಾನವೂ ವ್ಯಕ್ತವಾಗಿದೆ.

'ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು. ಅಲ್ಲಿಯವರೆಗೂ ಈಗಿರುವ ಸ್ಥಳದಲ್ಲಿಯೇ ವ್ಯಾಪಾರಕ್ಕೆ ಅವಕಾಶ ಮಾಡಿಕೊಡಬೇಕು' ಎಂದು ಆಗ್ರಹಿಸಿ ಬೀದಿಬದಿ ವ್ಯಾಪಾರಿಗಳು ಜೂನ್ 16ರಂದು ರೈತಸಂಘದ ನೇತೃತ್ವದಲ್ಲಿ ಪ್ರತಿಭಟನೆ ನಡೆಸಿದ್ದರು. ಪಾಲಿಕೆಯು 'ಬೇರೆ ವ್ಯವಸ್ಥೆ ಕಲ್ಪಿಸುವವರೆಗೂ ಸಹಕರಿಸಬೇಕು' ಎಂದಿತ್ತು.

ಒತ್ತುವರಿ ತೆರವು ಕಾರ್ಯಾಚರಣೆ ನಿತ್ಯ ನಡೆಯುತ್ತಿದ್ದು, ಗುರುವಾರವೂ ವ್ಯಾಪಾರ ಮಾಡುತ್ತಿದ್ದವರನ್ನು ಪಾಲಿಕೆಯ ಸಿಬ್ಬಂದಿ ತೆರವುಗೊಳಿಸಿದರು. ಅದಕ್ಕೆ ಆಕ್ರೋಶವೂ ವ್ಯಕ್ತವಾಯಿತು.

ಎಲ್ಲಿಗೆ ಹೋಗಬೇಕೊ ಗೊತ್ತಿಲ್ಲ: '40 ವರ್ಷದಿಂದ ಬೀದಿಬದಿಯಲ್ಲಿ ವ್ಯಾಪಾರ ಮಾಡುತ್ತಿದ್ದೇನೆ. ನಾಲ್ಕು ದಿನದ ಹಿಂದೆ ಪಾಲಿಕೆಯವರು ಎರಡು ಹಲಗೆಗಳಿದ್ದ ಸೂರನ್ನು ಕಿತ್ತುಕೊಂಡು ಹೋದರು. ಮಳೆಯಲ್ಲಿಯೇ ವ್ಯಾಪಾರ ಮಾಡಬೇಕಿದೆ. ಈಗ ಜಾಗ ಖಾಲಿ ಮಾಡಿ ಎಂದಿದ್ದಾರೆ. ಎಲ್ಲಿಗೆ ಹೋಗಬೇಕೋ ಗೊತ್ತಿಲ್ಲ' ಎಂದು ನಾಯಂಡಹಳ್ಳಿಯ ನಿವಾಸಿಯಾದ ವ್ಯಾಪಾರಿ ರಾಧಮ್ಮ ಅಳಲು ತೋಡಿಕೊಂಡರು.

ಕಟ್ಟಡ ತ್ಯಾಜ್ಯ: ಅವೆನ್ಯೂ ರಸ್ತೆಯಿಂದ ಮಾರುಕಟ್ಟೆಗೆ ಸಂಪರ್ಕಿಸುವ ರಸ್ತೆಯ ಇಕ್ಕೆಲದಲ್ಲಿ ಮಳಿಗೆದಾರರು ಒತ್ತುವರಿ ಮಾಡಿಕೊಂಡು ಜಗಲಿಗಳನ್ನು ನಿರ್ಮಿಸಿದ್ದರು. ಅದನ್ನು ಒಡೆದು ಹಾಕಲಾಗಿದ್ದು, ಕಟ್ಟಡ ತ್ಯಾಜ್ಯವನ್ನು ತೆರವು ಮಾಡಿಲ್ಲ. ಪಾದಚಾರಿಗಳು ಸರಾಗವಾಗಿ ನಡೆಯಲು ಆಗುತ್ತಿಲ್ಲ. ಪಾರ್ಕಿಂಗ್ ದ್ವಾರದವರೆಗೂ ಬ್ಯಾರಿಕೇಡ್ ಹಾಕಲಾಗಿದ್ದು, ಆ ರಸ್ತೆಯಲ್ಲಿಯೇ ಮಾರುಕಟ್ಟೆಗೆ ಬರುವವರು, ವಾಹನ ಸವಾರರಿಂದ ದಟ್ಟಣೆ ಉಂಟಾಗಿದೆ.

ಕೊಚ್ಚೆಗುಂಡಿಯಾಗಿತ್ತು: ಪಾರ್ಕಿಂಗ್ ತಾಣ ಈ ಮೊದಲೇ ಇದ್ದರೂ, ಮಳೆ ನೀರು ನಿಂತು ಕೊಚ್ಚೆಗುಂಡಿಯಾಗಿತ್ತು. ಅಲ್ಲದೆ, ಕೆಲವು ಮಳಿಗೆದಾರರು ಗೋದಾಮಾಗಿ ಬದಲಿಸಿಕೊಂಡಿದ್ದರು. ಇದೀಗ ಪಾರ್ಕಿಂಗ್ ಪ್ರವೇಶ, ನಿರ್ಗಮನ ಮಾರ್ಗಗಳಲ್ಲಿ ಚಾವಣಿ ಹಾಕಲಾಗಿದ್ದು, ಮಳೆ ನೀರು ಸೇರದಂತೆ ಮಾಡಲಾಗಿದೆ. ಅಲ್ಲದೇ, ನಾಡಿನ ಸಂಸ್ಕೃತಿ ಬಿಂಬಿಸುವ ಕಲೆಯನ್ನು ಅನಾವರಣಗೊಳಿಸಲಾಗಿದೆ. ಮಾರುಕಟ್ಟೆಯ ಇತಿಹಾಸ ಫಲಕಗಳನ್ನು ಅಳವಡಿಸಿರುವುದು ವಿಶೇಷ!

ಫಾಸ್ಟ್‌ಟ್ಯಾಗ್ ವ್ಯವಸ್ಥೆ: 'ಪ್ರಿನ್ಸ್ ರಾಯಲ್ ಪಾರ್ಕಿಂಗ್ ಸಲ್ಯೂಷನ್' ಕಂಪನಿಗೆ 10 ವರ್ಷದ ಅವಧಿಗೆ ಪಾರ್ಕಿಂಗ್ ವ್ಯವಸ್ಥೆ ಕಲ್ಪಿಸಲು ಪಾಲಿಕೆಯು ಗುತ್ತಿಗೆ ನೀಡಿದೆ. ಅಲ್ಲಿ 400 ದ್ವಿಚಕ್ರ ವಾಹನ ಹಾಗೂ 200 ಕಾರು ನಿಲ್ಲಿಸುವ ಅವಕಾಶವಿದೆ. 'ಫಾಸ್ಟ್‌ಟ್ಯಾಗ್' ಹಾಗೂ ಟಿಕೆಟ್ ವ್ಯವಸ್ಥೆ ಮಾಡಲಾಗಿದ್ದು, ಮಹಿಳಾ ಸವಾರರಿಗೆ ಜಾಗವನ್ನು ಮೀಸಲಿಡಲಾಗಿದೆ. ಸುರಕ್ಷತೆಗೆ 65 ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗಿದೆ. ಲಿಫ್ಟ್ ಮೂಲಕ ಮಾರುಕಟ್ಟೆಗೆ ನೇರ ಪ್ರವೇಶವಿದೆ.

ಮುಖ್ಯಾಂಶಗಳು
- ಪಾದಚಾರಿ ಮಾರ್ಗದಲ್ಲಿ ಕಟ್ಟಡ ತ್ಯಾಜ್ಯ
- ಕೊಚ್ಚೆಗುಂಡಿಯಾಗಿದ್ದ ಪಾರ್ಕಿಂಗ್ ತಾಣ
- ಈಗ ಪರಂಪರೆಯ ವೈಭವ ಅನಾವರಣ

ಶತಮಾನದ ಇತಿಹಾಸ

ಬೆಂಗಳೂರು ಕೋಟೆಯ ಮೈಸೂರು ಗೇಟ್ ಬಳಿಯ 'ಸಿದ್ದಿಕಟ್ಟೆ' 16ನೇ ಶತಮಾನದಲ್ಲಿ ಕಟ್ಟಲಾಗಿತ್ತು. ಕೆರೆ ಒಣಗಿದ ಮೇಲೆ 1791ರ ಮೂರನೇ ಆಂಗ್ಲೊ–ಮೈಸೂರು ಯುದ್ಧದಲ್ಲಿ ಕದನ ಕಣವಾಗಿತ್ತು. ಆ ನಂತರ ಸಂತೆಮಾಳವಾಗಿ ಬದಲಾಯಿತು. ಏಷ್ಯಾದ ಮೊದಲ ವಿದ್ಯುತ್ ದೀಪ ಬೆಳಗಿದ್ದು, ಇದೇ ಜಾಗದಲ್ಲಿ.

1928ರಲ್ಲಿ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರು ಇಂಡೊ– ಸಾರ್ಸೆನಿಕ್ ಶೈಲಿಯಲ್ಲಿ ವ್ಯವಸ್ಥಿತ ಮಾರುಕಟ್ಟೆಯನ್ನು ಕಟ್ಟಿಸಿದರು. ಚಿಕ್ಕ ಅಂಗಡಿಗಳ ಪಾರಂಪರಿಕ ಕಟ್ಟಡದ ಜಾಗದಲ್ಲಿ 1990ರ ಸುಮಾರಿಗೆ 3 ಅಂತಸ್ತಿನ ಮಾರುಕಟ್ಟೆ ಕಟ್ಟಡ ಕಟ್ಟಲಾಯಿತು.

'ಸುಧಾರಣೆಗೆ ಕ್ರಮವಹಿಸಲಾಗಿದೆ'

'ಅವಘಡ ಸಂಭವಿಸಿದರೆ ಅಗ್ನಿಶಾಮಕ ವಾಹನ, ಆಂಬುಲೆನ್ಸ್ ಹೋಗಲೂ ಜಾಗವಿರಲಿಲ್ಲ. ಬೀದಿಬದಿ ವ್ಯಾಪಾರಿಗಳಿಂದ ಇಕ್ಕಟ್ಟಿನಿಂದ ಕೂಡಿತ್ತು. ಪಾರ್ಕಿಂಗ್ ವ್ಯವಸ್ಥೆ, ಒತ್ತುವರಿ ತೆರವು ಕಾರ್ಯಾಚರಣೆ ನಡೆಸಿ ಮಾರುಕಟ್ಟೆ ಸುಧಾರಣೆಗೆ ಆದ್ಯತೆ ಕೊಡಲಾಗಿದೆ' ಎಂದು ಬೆಂಗಳೂರು ಕೇಂದ್ರ ನಗರ ಪಾಲಿಕೆ ಆಯುಕ್ತ ಜಿ.ಜಗದೀಶ್ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು.

'ಪರ್ಯಾಯ ಜಾಗವನ್ನು ಗುರುತು ಮಾಡಿ ಬೀದಿಬದಿ ವ್ಯಾಪಾರಿಗಳಿಗೆ ಅವಕಾಶ ಮಾಡಿಕೊಡಲಾಗುವುದು. ಮಾದರಿ ಮಾರುಕಟ್ಟೆಯನ್ನು ರೂಪಿಸುವುದು ಪಾಲಿಕೆಯ ಆದ್ಯತೆಯಾಗಿದೆ' ಎಂದರು.

ಪಾರ್ಕಿಂಗ್‌ಗೆ ವಾಹನಗಳು ಹೋಗಲು ಬ್ಯಾರಿಕೇಡ್ ಹಾಕಿದ್ದಾರೆ. ಫುಟ್‌ಪಾತ್‌ನಲ್ಲಿ ತ್ಯಾಜ್ಯ ಬಿದ್ದಿದೆ. ಜನರು ಓಡಾಡಲು ಕಷ್ಟವಾಗಿದೆ
ಸಲ್ಮಾನ್, ವ್ಯಾಪಾರಿ

ನಮಗೆ ಮಳಿಗೆ ಕೊಡಿ ಎಂದೇನೂ ಕೇಳುತ್ತಿಲ್ಲ. ವ್ಯಾಪಾರ ಮಾಡಲು ಒಂದಿಷ್ಟು ಜಾಗ ಕೊಟ್ಟರೆ ದಿನದ ಬದುಕು ನಡೆಯುತ್ತದೆ
ರಾಧಮ್ಮ, ಬೀದಿಬದಿ ವ್ಯಾಪಾರಿ

ಬೇರೆಲ್ಲೂ ವಾಹನ ನಿಲ್ಲಿಸಲಾಗದೇ ನೆಲಮಹಡಿಗೆ ಬಂದರೆ ದುರ್ವಾಸನೆ ಬಡಿಯುತ್ತಿತ್ತು. ಈಗ ಪಾರ್ಕಿಂಗ್ ವ್ಯವಸ್ಥೆ ಅಚ್ಚುಕಟ್ಟಾಗಿದೆ.
ಸುರೇಶ್, ವಿಜಯನಗರ ನಿವಾಸಿ

ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿಕೆ

ಕರ್ನಾಟಕ ವಿರೋಧಿಯಾಗಿ ನಡೆದುಕೊಳ್ಳುತ್ತಿರುವ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರಕ್ಕೆ ಕರ್ನಾಟಕದ ಶಾಸಕರಿಂದ ಪಕ್ಷಾತೀತ ಉತ್ತರ

'ಗ್ಯಾರಂಟಿ ವಿರೋಧಿ ನೀತಿಗೆ ಉತ್ತರ'

ಬೆಂಗಳೂರು: 'ಮೂರು ವರ್ಷಗಳಲ್ಲಿ ಕಾಂಗ್ರೆಸ್ ಪಕ್ಷ ಮಾಡಿದ ಜನಪರ ಕೆಲಸಗಳಿಗೆ ಶಾಸಕರು ನೀಡಿರುವ ಬೆಂಬಲ ಪರಿಷತ್ ಚುನಾವಣೆಯ ಫಲಿತಾಂಶ. ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಗ್ಯಾರಂಟಿ ವಿರೋಧಿ ನಿಲುವನ್ನು ಅವರ ಪಕ್ಷದ ಶಾಸಕರೇ ವಿರೋಧಿಸಿ ಸಂದೇಶ ನೀಡಿದ್ದಾರೆ' ಎಂದು ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು.

ರಣದೀಪ್‌ಸಿಂಗ್ ಸುರ್ಜೇವಾಲಾ

ವಿಧಾನ ಪರಿಷತ್‌ಗೆ ನಡೆದ ಚುನಾವಣೆಯಲ್ಲಿ ಗೆಲುವು ಸಾಧಿಸಿದ ಕಾಂಗ್ರೆಸ್ ಅಭ್ಯರ್ಥಿಗಳ ಜೊತೆ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕರ್ನಾಟಕ ವಿರೋಧಿಯಾಗಿ ನಡೆದುಕೊಳ್ಳುತ್ತಿರುವ ಪ್ರಧಾನಿ ಮೋದಿ ನೇತೃತ್ವದ ಕೇಂದ್ರ ಬಿಜೆಪಿ ಸರ್ಕಾರಕ್ಕೆ ಕರ್ನಾಟಕದ ಶಾಸಕರು ಪಕ್ಷಾತೀತವಾಗಿ ಉತ್ತರ ನೀಡಿದ್ದಾರೆ. ಕರ್ನಾಟಕದ ಹಕ್ಕುಗಳನ್ನು ಮೊಟಕುಗೊಳಿಸಲು ಆಗುವುದಿಲ್ಲ ಎಂದು ಅವರ ಪಕ್ಷದ ಶಾಸಕರೇ ಉತ್ತರ ನೀಡಿದ್ದಾರೆ' ಎಂದರು.

'ಮತದ ಮೂಲಕ ಐದು ಗ್ಯಾರಂಟಿ ಯೋಜನೆಗಳಿಗೆ ಬಿಜೆಪಿ, ಜೆಡಿಎಸ್ ಶಾಸಕರೂ ಒಪ್ಪಿಗೆಯ ಮುದ್ರೆ ಒತ್ತಿದ್ದಾರೆ. ಯಾರೇ ಗ್ಯಾರಂಟಿ ವಿರೋಧಿಸಿದರೂ ನಾವು ಗ್ಯಾರಂಟಿ ಪರವಾಗಿದ್ದೇವೆ ಎಂದು ದನಿ ಎತ್ತಿದ್ದಾರೆ' ಎಂದರು.

ಬಿಜೆಪಿ - ದಳಕ್ಕೆ ತಕ್ಕ ಉತ್ತರ- ಹರಿಪ್ರಸಾದ್: 'ಗ್ಯಾರಂಟಿ ಯೋಜನೆಗಳನ್ನು ಬಿಜೆಪಿ ಮತ್ತು ಜೆಡಿಎಸ್‌ನವರು ಟೀಕೆ ಮಾಡುತ್ತಿದ್ದರು. ಈಗ ಅವರಿಗೆ ತಕ್ಕ ಉತ್ತರ ಸಿಕ್ಕಿದೆ. ಜನತೆಯ ವಿಶ್ವಾಸ ಕಾಂಗ್ರೆಸ್ ಪಕ್ಷದ ಜೊತೆಗಿದೆ' ಎಂದು ವಿಧಾನ ಪರಿಷತ್ತಿಗೆ ನೂತನವಾಗಿ ಆಯ್ಕೆಯಾದ ಕೆಪಿಸಿಸಿ ಅಧ್ಯಕ್ಷ ಬಿ.ಕೆ. ಹರಿಪ್ರಸಾದ್ ಹೇಳಿದರು.

'ಬಿಜೆಪಿ ತನ್ನ ಕುಚೋದ್ಯಗಳನ್ನು ಬಿಟ್ಟು ಜನರ ನೋವು ನಲಿವುಗಳಿಗೆ ಸ್ಪಂದಿಸುವ ಕೆಲಸ ಮಾಡುತ್ತಾರೆ ಎಂದು ನಾವು ತಿಳಿದುಕೊಂಡಿದ್ದೇವೆ. ಬೇರೆ ಪಕ್ಷದ ಯಾರಿಗೂ ನಾವು ಬೆಂಬಲಿಸಿ ಎಂದು ಕೇಳಿರಲಿಲ್ಲ. ಆತ್ಮಸಾಕ್ಷಿಯ ಮತ ನೀಡಿ ಎಂದು ಅವರ ಪಕ್ಷದವರೇ ಹೇಳಿದ್ದರು. ಅವರೇ ಆತ್ಮಸಾಕ್ಷಿಯ ಮತಗಳನ್ನು ನೀಡಿದ್ದಾರೆ' ಎಂದರು.

ಗ್ರಾಮದ ರಸ್ತೆಗೆ ಡಿಜಿಟಲ್ ಗುರುತು

ನವದೆಹಲಿ (ಪಿಟಿಐ): ಗ್ರಾಮಗಳ ಒಳಗಿನ ಪ್ರತಿಯೊಂದು ರಸ್ತೆಗೂ ವಿಶಿಷ್ಟ ಕೋಡ್, ಡಿಜಿಟಲ್ ಗುರುತು ಮತ್ತು ಪ್ರಮಾಣೀಕೃತ ವರ್ಗೀಕರಣವನ್ನು ನೀಡುವ ವ್ಯವಸ್ಥೆಯನ್ನು ಜಾರಿ ಮಾಡುವ ಪ್ರಸ್ತಾವವನ್ನು ಕೇಂದ್ರ ಪಂಚಾಯತ್ ರಾಜ್ ಸಚಿವಾಲಯವು ಮುಂದಿಟ್ಟಿದೆ.

ಆಡಳಿತ ಸುಧಾರಣೆ, ಸೇವೆಗಳ ವಿತರಣೆ, ತುರ್ತು ಸ್ಪಂದನ ಮತ್ತು ಗ್ರಾಮೀಣ ಮೂಲಸೌಕರ್ಯವನ್ನು ಸುಧಾರಿಸುವ ಉದ್ದೇಶದಿಂದ ಈ ಪ್ರಸ್ತಾವವನ್ನು ಮುಂದಿಡಲಾಗಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ಪ್ರಸ್ತಾವಿತ 'ಗ್ರಾಮದೊಳಗಿನ ರಸ್ತೆಗಳ ಕೋಡಿಂಗ್ ಮತ್ತು ಶ್ರೇಣೀಕರಣ ವ್ಯವಸ್ಥೆ' ಯೋಜನೆಗೆ ಚೌಕಟ್ಟು ರೂಪಿಸುವ ಉದ್ದೇಶದಿಂದ ಪ್ರಸ್ತಾವದ ಬಗ್ಗೆ ಶೀಘ್ರವೇ ಸಾರ್ವಜನಿಕರಿಂದ ಅಭಿಪ್ರಾಯವನ್ನು ಪಡೆಯಲಾಗುವುದು ಎಂದು ತಿಳಿಸಿವೆ.

ಪ್ರಸ್ತಾವಿತ ಯೋಜನೆಯಡಿಯಲ್ಲಿ ಗ್ರಾಮಗಳ ರಸ್ತೆಗಳನ್ನು ಮುಖ್ಯ ರಸ್ತೆಗಳು, ತಿರುವು ರಸ್ತೆಗಳು ಮತ್ತು ಇತರ ಅಥವಾ ಸಂಪರ್ಕಿಸುವ ರಸ್ತೆಗಳು ಎಂದು ಮೂರು ವಿಧವಾಗಿ ವಿಂಗಡಿಸಲಾಗುತ್ತದೆ. ಪ್ರತಿ ರಸ್ತೆಗೂ ಅಕ್ಷರಗಳು ಮತ್ತು ಸಂಖ್ಯೆಗಳ ಸಂಯೋಜನೆಯಿರುವ ಕೋಡ್ ನೀಡಲಾಗುತ್ತದೆ ಎಂದು ಮೂಲಗಳು ತಿಳಿಸಿವೆ.

ರಾಜ್ಯಕ್ಕೆ ರಾಷ್ಟ್ರೀಯ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅನುಷ್ಠಾನದ ಹಂತದಲ್ಲಿರುವ ಅತ್ಯಧಿಕ ಪವನ ವಿದ್ಯುತ್ ಸಾಮರ್ಥ್ಯ'ಕ್ಕಾಗಿ ರಾಷ್ಟ್ರೀಯ ಮಟ್ಟದ ಪ್ರಶಸ್ತಿಯನ್ನು ಕರ್ನಾಟಕ ತನ್ನದಾಗಿಸಿಕೊಡಿದೆ.

ಪವನ ವಿದ್ಯುತ್ ಸಾಮರ್ಥ್ಯ

ಗೋವಾದಲ್ಲಿ ನಡೆದ ವಿಶ್ವ ಪವನ ದಿನಾಚರಣೆಯಲ್ಲಿ ಕರ್ನಾಟಕಕ್ಕೆ ಪ್ರತಿಷ್ಠಿತ 'ಹೈಯೆಸ್ಟ್ ವಿಂಡ್ ಕ್ಯಾಪಾಸಿಟಿ ಪೈಪ್‌ಲೈನ್' ಪ್ರಶಸ್ತಿ ಸಂದಿದೆ.

ಕೇಂದ್ರದ ನವ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಪ್ರಲ್ಹಾದ ಜೋಶಿ ಅವರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕ ಕೆ.ಪಿ. ರುದ್ರಪ್ಪಯ್ಯ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದರು. 9 ಗಿಗಾ ವಾಟ್ ಸಾಮರ್ಥ್ಯದ ಪವನ ವಿದ್ಯುತ್ ಯೋಜನೆಗಳು ಅನುಷ್ಠಾನ ಹಂತದಲ್ಲಿದೆ.

ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರು ಕೆ.ಪಿ. ರುದ್ರಪ್ಪಯ್ಯ ಅವರಿಗೆ 'ಹೈಯೆಸ್ಟ್ ವಿಂಡ್ ಕ್ಯಾಪಾಸಿಟಿ ಪೈಪ್‌ಲೈನ್' ಪ್ರಶಸ್ತಿ ಪ್ರದಾನ ಮಾಡಿದರು

ಇಂಧನ ಸಚಿವ ಕೆ.ಜೆ.ಜಾರ್ಜ್, 'ನವೀಕರಿಸಬಹುದಾದ ಇಂಧನ ವಲಯದ ಮೂಲಸೌಕರ್ಯವನ್ನು ಮತ್ತಷ್ಟು ಬಲಪಡಿಸಿ ಹೂಡಿಕೆ ಆಕರ್ಷಿಸುವ ಜತೆಗೆ ದೇಶದ ಇಂಧನ ಪರಿವರ್ತನೆ ಮತ್ತು ನಿವ್ವಳ-ಶೂನ್ಯ ಇಂಗಾಲದ ಗುರಿ ಸಾಧನೆಗೆ ಕೈಜೋಡಿಸಲಿದ್ದೇವೆ' ಎಂದಿದ್ದಾರೆ.

> **ಈ ಪ್ರಶಸ್ತಿ ರಾಜ್ಯದ ಪ್ರಗತಿಪರ ನೀತಿ, ಹೂಡಿಕೆ-ಸ್ನೇಹಿ ವ್ಯವಸ್ಥೆ ಮತ್ತು ನವೀಕರಿಸಬಹುದಾದ ಇಂಧನ ಅಭಿವೃದ್ಧಿಗೆ ಇರುವ ಸಾಂಸ್ಥಿಕ ಬೆಂಬಲಕ್ಕೆ ಸಾಕ್ಷಿಯಾಗಿದೆ**
> **ಗೌರವ್ ಗುಪ್ತ, ಹೆಚ್ಚುವರಿ ಮುಖ್ಯ ಕಾರ್ಯದರ್ಶಿ,** ಇಂಧನ ಇಲಾಖೆ

> **ನವೀಕರಿಸಬಹುದಾದ ಇಂಧನದ ಮೂಲಕ ಸುರಕ್ಷಿತ ಇಂಧನ ಭವಿಷ್ಯ ರೂಪಿಸುವ ಪ್ರಯತ್ನಕ್ಕೆ ಪೂರಕವಾಗಿ ಕಾರ್ಯ ನಿರ್ವಹಿಸಲು ಬದ್ಧರಾಗಿದ್ದೇವೆ**
> **ಕೆ.ಪಿ. ರುದ್ರಪ್ಪಯ್ಯ**
> ವ್ಯವಸ್ಥಾಪಕ ನಿರ್ದೇಶಕ, ಕ್ರೆಡಲ್

'ಜಿ.ಎಸ್.ಪಾಟೀಲ್‌ಗೆ ಸಚಿವ ಸ್ಥಾನ ನೀಡಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೋಣ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಎಸ್.ಪಾಟೀಲ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ಅಭಿಮಾನಿಗಳು ಮತ್ತು ಕಾರ್ಯಕರ್ತರು ತುಮಕೂರಿನಿಂದ ಬೆಂಗಳೂರಿಗೆ ಪಾದಯಾತ್ರೆ ನಡೆಸಿದರು.

ಕ್ಯಾತ್ಸಂದ್ರದಲ್ಲಿರುವ ಸಿದ್ದಗಂಗಾ ಮಠದ ಆವರಣದಿಂದ ಹೊರಟ ಪಾದಯಾತ್ರೆಯು ಬೆಂಗಳೂರು ರಸ್ತೆ ಮಾರ್ಗವಾಗಿ ತೆರಳಿ ರಾತ್ರಿ ನೆಲಮಂಗಲದಲ್ಲಿ ವಾಸ್ತವ್ಯ ಹೂಡಿತು. ಗುರುವಾರ ಮಧ್ಯಾಹ್ನ ಕೆಪಿಸಿಸಿ ಕಾರ್ಯಾಲಯದ ಭಾರತ್ ಜೋಡೋ ಭವನ ತಲುಪಿತು.

'ನಾಲ್ಕು ಬಾರಿ ಶಾಸಕರಾಗಿ ಆಯ್ಕೆಯಾಗಿರುವ ಶಾಸಕ ಜಿ.ಎಸ್. ಪಾಟೀಲ ಅವರಿಗೆ ಸಂಪುಟದಲ್ಲಿ ಸಚಿವ ಸ್ಥಾನ ನೀಡಬೇಕು' ಎಂದು ಅಭಿಮಾನಿಗಳು ಆಗ್ರಹಿಸಿದರು.

ರೋಣ ವಿಧಾನಸಭಾ ಕ್ಷೇತ್ರದ ಶಾಸಕ ಜಿ.ಎಸ್.ಪಾಟೀಲ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಆಗ್ರಹಿಸಿ ಅಭಿಮಾನಿಗಳು ಮತ್ತು ಕಾರ್ಯಕರ್ತರು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಸಲ್ಲಿಸಿದರು

ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮತ್ತು ಕೆಪಿಸಿಸಿ ಅಧ್ಯಕ್ಷ ಬಿ.ಕೆ.ಹರಿಪ್ರಸಾದ್ ಅವರು ಭಾರತ್ ಜೋಡೋ ಭವನಕ್ಕೆ ಬಂದು ಕಾರ್ಯಕರ್ತರು ಮತ್ತು ಅಭಿಮಾನಿಗಳ ಮನವಿ ಸ್ವೀಕರಿಸಿದರು.

'ಪಕ್ಷದ ಹಿರಿಯ ಶಾಸಕ ಜಿ.ಎಸ್. ಪಾಟೀಲ ಅವರನ್ನು ಸಚಿವರನ್ನಾಗಿ ಮಾಡುವ ನಿರ್ಧಾರವನ್ನು ಹೈಕಮಾಂಡ್ ಕೈಗೊಳ್ಳಲಿದೆ. ಹೈಕಮಾಂಡ್‌ಗೆ ಪಾಟೀಲ ಅವರ ಹೆಸರು ಶಿಫಾರಸು ಮಾಡಲಾಗುವುದು. ಅಧಿಕಾರ ಪಡೆಯಬೇಕಾದರೆ ತಾಳ್ಮೆಯಿಂದ ಇರಬೇಕು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದರು' ಎಂದು ಕಾರ್ಯಕರ್ತರು ಹೇಳಿದರು.

ಈ ವೇಳೆ ರೋಣ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಮುಖಂಡರಾದ ಈರಣ್ಣ ಶೆಟ್ಟರು, ಶರಣಪ್ಪ ಬೆಟಗೇರಿ, ಎಂ.ಡಿ.ಮೋರನಾಳ, ಸಂತೋಷ್ ಯಾವಗಲ್, ಯಲ್ಲಾಲಿಂಗೇಶ್ವರ ಮಠದ ಬಸವರಾಜ ಶರಣರು, ಹೊಳೆ ಆಲೂರಿನ ಯಚ್ಚರ ಸ್ವಾಮೀಜಿ, ಕೊಡಗಾನೂರಿನ ಚಂದ್ರಶೇಖರ ಶರಣರು, ಇಟಗಿಯ ಶಿವಶರಣ ಗದಿಗೆಪ್ಪಜ್ಜ ಸೇರಿದಂತೆ ಹಲವರು ಭಾಗವಹಿಸಿದ್ದರು.

ಟಿ.ಟಿ: ತನಿಷ್ಕಾಗೆ 'ಡಬಲ್' ಸಂಭ್ರಮ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಮೈಸೂರು ವಿ.ವಿ. ಜಿಮ್ನಾಷಿಯಂ ಹಾಲ್‌ನಲ್ಲಿ ಗುರುವಾರ ಆರಂಭಗೊಂಡ 'ಎಲ್‌ಐಸಿ ಕಪ್' ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೆನಿಸ್ ಟೂರ್ನಿಯ ಮೊದಲ ದಿನವೇ ಉದಯೋನ್ಮುಖ ಆಟಗಾರ್ತಿ ತನಿಷ್ಕಾ ಕಾಲಭೈರವ ಎರಡು ಪ್ರಶಸ್ತಿಯೊಂದಿಗೆ ಸಂಭ್ರಮಿಸಿದರು. ಮೈಸೂರು ಜಿಲ್ಲಾ ಟೇಬಲ್ ಟೆನಿಸ್ ಅಸೋಸಿಯೇಷನ್ ಆಯೋಜಿಸಿರುವ ಟೂರ್ನಿಯ 19 ವರ್ಷದೊಳಗಿನ ಬಾಲಕಿಯರು ಹಾಗೂ ಮಹಿಳೆಯರ ಸಿಂಗಲ್ಸ್ ವಿಭಾಗಗಳೆರಡರಲ್ಲೂ ಅವರು ಪ್ರಶಸ್ತಿ ಮುಡಿಗೇರಿಸಿಕೊಂಡರು. 19 ವರ್ಷದೊಳಗಿನ ಬಾಲಕಿಯರ ಫೈನಲ್‌ನಲ್ಲಿ ಹಿಮಾಂಶಿ ಚೌಧರಿ ವಿರುದ್ಧ 11-8, 11-5, 6-11, 11-9, 13-11 ಗೇಮ್‌ಗಳ ಅಂತರದಲ್ಲಿ ತನಿಷ್ಕಾ ಗೆದ್ದರು.

ಮಹಿಳೆಯರ ಸಿಂಗಲ್ಸ್ ವಿಭಾಗ ದಲ್ಲೂ ತನ್ನ ಆಧಿಪತ್ಯ ಮುಂದುವರಿಸಿದ ತನಿಷ್ಕಾ, ಫೈನಲ್‌ನಲ್ಲಿ ಮತ್ತೊಮ್ಮೆ ಹಿಮಾಂಶಿ ಚೌಧರಿ ಅವರನ್ನೇ 11-5, 9-11, 12-10, 11-8, 11-7 ರಿಂದ ಪರಾಜಯಗೊಳಿಸಿ ದಿನದ ಎರಡನೇ ಟ್ರೋಫಿ ಎತ್ತಿಹಿಡಿದರು.

ತನಿಷ್ಕಾ ಹಾಗೂ ಬಿ.ಆರ್. ಗೌರವ್ ಪ್ರಜಾವಾಣಿ ಚಿತ್ರ

ಗೌರವ್ ಚಾಂಪಿಯನ್: 19 ವರ್ಷ ದೊಳಗಿನ ಬಾಲಕರ ಸಿಂಗಲ್ಸ್ ವಿಭಾಗದ ಫೈನಲ್‌ನಲ್ಲಿ ಬಿ.ಆರ್. ಗೌರವ್ ಅವರು ಶುಭಂ ತ್ರಿವೇದಿ ವಿರುದ್ಧ 11-9, 6-11, 11-2, 11-7, 11-9ರಿಂದ ಜಯಭೇರಿ ಬಾರಿಸಿದರು.

ಜಗತ್ತಿನ ವಿಶ್ವಾಸಾರ್ಹ ಪಾಲುದಾರ ರಾಷ್ಟ್ರವಾಗುತ್ತಿದೆ ಭಾರತ: ಮೋದಿ

ಪ್ಯಾರಿಸ್ (ಪಿಟಿಐ): 'ಭಾರತವು ಜಗತ್ತಿನ ವಿಶ್ವಾಸಾರ್ಹ ಪಾಲುದಾರ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ' ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

'ದೇಶವು ಅಭಿವೃದ್ಧಿ, ಸಂಶೋಧನೆ ಹಾಗೂ ಮುಂದಿನ ಪೀಳಿಗೆಗೆ ಅವಕಾಶ ಒದಗಿಸುವ ಕ್ಷೇತ್ರಗಳಲ್ಲಿ ಹೂಡಿಕೆ ಮಾಡುತ್ತಿದೆ' ಎಂದು ಇದೇ ವೇಳೆ ಅವರು ಒತ್ತಿ ಹೇಳಿದ್ದಾರೆ.

ಫ್ರಾನ್ಸ್‌ನ ಅತಿ ದೊಡ್ಡ ಒಳಾಂಗಣಗಳಲ್ಲಿ ಒಂದಾದ 'ಸಲ್ಲೆ ಪ್ಲಯೆಲ್'ನಲ್ಲಿ ಭಾರತೀಯ ಸಮುದಾಯವನ್ನು ಉದ್ದೇಶಿಸಿ ಮಾತನಾಡಿದ ಅವರು, 'ಭಾರತದ ಬೆಳವಣಿಗೆ ಪ್ರಯಾಣದ ಅವಧಿಯಲ್ಲಿ ನಿರ್ಣಾಯಕ ಅವಧಿಯಾಗಿದ್ದು, ಅಕಾಂಕ್ಷೆಗಳು ಹೊಸ ಎತ್ತರವನ್ನು ತಲುಪುತ್ತಿವೆ' ಎಂದು ತಿಳಿಸಿದ್ದಾರೆ.

'ದೇಶಗಳ ನಡುವಿನ ಸಂಬಂಧವನ್ನು ಕೇವಲ ವ್ಯಾಪಾರದಿಂದಲೇ ನಿರ್ಧರಿಸಲಾಗುತ್ತಿದ್ದ ಕಾಲವಿತ್ತು. ಈಗ ವ್ಯಾಪಾರದ ಜೊತೆಗೆ ನಂಬಿಕೆಯೂ ಮುಖ್ಯವಾಗಿದೆ. ಪ್ರತಿಯೊಂದು ದೇಶವು ವಿಶ್ವಾಸಾರ್ಹ ಹಾಗೂ ಸ್ಥಿರ ಪೂರೈಕೆಯನ್ನು ಬಯಸುತ್ತದೆ. ನಂಬಿಕೆ ಇಡಬಹುದಾದ ದೀರ್ಘಕಾಲಿನ ಪಾಲುದಾರಿಕೆಯನ್ನು ಬಯಸುತ್ತಿದೆ. ಇಂತಹ, ಸಂದರ್ಭದಲ್ಲಿ ಭಾರತವು ವಿಶ್ವದಲ್ಲಿಯೇ ವಿಶ್ವಾಸಾರ್ಹ ಪಾಲುದಾರ ರಾಷ್ಟ್ರವಾಗಿ ಹೊರಹೊಮ್ಮುತ್ತಿದೆ' ಎಂದು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

21ಕ್ಕೆ ವಿದ್ಯಾರ್ಥಿ ನಿಲಯ ಉದ್ಘಾಟನೆ

ಬೆಂಗಳೂರು: ನಗರದ ಅಂಜನಾಪುರದ ಬಿಡಿಎ ಬಡಾವಣೆಯಲ್ಲಿ 'ಅಖಿಲ ಭಾರತ ಕುರುಹಿನಶೆಟ್ಟಿ (ನೇಕಾರ) ವಿದ್ಯಾರ್ಥಿನಿ ನಿಲಯ ಚಾರಿಟಬಲ್ ಟ್ರಸ್ಟ್' ಬಾಲಕಿಯರ ವಿದ್ಯಾರ್ಥಿ ನಿಲಯವನ್ನು ನಿರ್ಮಿಸಿದ್ದು, ಜೂನ್ 21ರಂದು ಬೆಳಿಗ್ಗೆ 10ಕ್ಕೆ ವಿಧಾನ ಪರಿಷತ್ ಸದಸ್ಯ ಎಸ್.ಕೇಶವಪ್ರಸಾದ್ ಉದ್ಘಾಟಿಸಲಿದ್ದಾರೆ.

ಟ್ರಸ್ಟ್ ಸ್ಥಾಪನೆಯಾದ 12 ವರ್ಷದಲ್ಲಿ ವಿದ್ಯಾರ್ಥಿ ನಿಲಯವನ್ನು ಕಟ್ಟಲಾಗಿದೆ. ನಿಲಯದಲ್ಲಿ 60 ವಿದ್ಯಾರ್ಥಿನಿಯರಿಗೆ ಉಚಿತ ವಸತಿ ಮತ್ತು ಭೋಜನ ವ್ಯವಸ್ಥೆಯಿದೆ. ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಸಂಸ್ಥೆಯ ಅಧ್ಯಕ್ಷ ಆರ್.ಲಕ್ಷ್ಮಿನಾರಾಯಣ ಪ್ರಕಟಣೆಯಲ್ಲಿ ಕೋರಿದ್ದಾರೆ.

ವಿದ್ಯಾರ್ಥಿ ವೇತನ: ಅರ್ಜಿ ಆಹ್ವಾನ

ಬೆಂಗಳೂರು: ಯಲಹಂಕದ ವಿದ್ಯಾಪೋಷಕರ ಸಂಘವು ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಶೇ 90ಕ್ಕಿಂತ ಹೆಚ್ಚು ಅಂಕ ಪಡೆದ ಆರ್ಥಿಕವಾಗಿ ಹಿಂದುಳಿದ ಒಕ್ಕಲಿಗ ಸಮುದಾಯದ ವಿದ್ಯಾರ್ಥಿಗಳಿಂದ ವಿದ್ಯಾರ್ಥಿವೇತನಕ್ಕೆ ಅರ್ಜಿ ಆಹ್ವಾನಿಸಿದೆ.

ಬೆಂಗಳೂರು ಉತ್ತರ ಮತ್ತು ಗ್ರಾಮಾಂತರ ಜಿಲ್ಲೆಯ ವಿದ್ಯಾರ್ಥಿಗಳು ಕೈ ಬರಹದ ಅರ್ಜಿಯೊಂದಿಗೆ ಭಾವಚಿತ್ರ, ಜಾತಿ– ಆದಾಯ ಪ್ರಮಾಣಪತ್ರ, ಆಧಾರ್ ಕಾರ್ಡ್ ಪ್ರತಿ, ದೃಢೀಕೃತ ಅಂಕಪಟ್ಟಿ ಸೇರಿದಂತೆ ಅಗತ್ಯ ದಾಖಲೆಗಳನ್ನು ವಿ.ಜೆ.ಇಂಟರ್‌ನ್ಯಾಷನಲ್ ಸ್ಕೂಲ್, ಬಾಗಲೂರು, ಯಲಹಂಕ, ಬೆಂಗಳೂರು– 562149 ಇಲ್ಲಿಗೆ ಜುಲೈ 31ರ ಒಳಗೆ ಕಳುಹಿಸಬೇಕು.

ಹೆಚ್ಚಿನ ಮಾಹಿತಿಗೆ ಮೊ.90088 91539, 98450 48696 ಸಂಪರ್ಕಿಸಬಹುದು.

ಅರ್ಜಿ ಆಹ್ವಾನ

ಬೆಂಗಳೂರು: ನಗರದ 'ಡಾ. ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಯೂನಿವರ್ಸಿಟಿ'ಯು 2026–27ನೇ ಸಾಲಿನ ಸ್ನಾತಕೋತ್ತರ ಪದವಿಗಳ ಪ್ರವೇಶಾತಿಗೆ ಅರ್ಜಿ ಆಹ್ವಾನಿಸಿದೆ.

ಎಂ.ಎ ಮತ್ತು ಎಂ.ಎಸ್ಸಿ ಅರ್ಥಶಾಸ್ತ್ರ, ಹಣಕಾಸು ಶಾಸ್ತ್ರ, ಅಭಿವೃದ್ಧಿ ಅರ್ಥಶಾಸ್ತ್ರ, ದತ್ತಾಂಶ ವಿಶ್ಲೇಷಣೆ, ಸಾರ್ವಜನಿಕ ನೀತಿ ಕುರಿತ ಕೋರ್ಸ್‌ಗಳಿದ್ದು, ಆನ್‌ಲೈನ್ ಅರ್ಜಿಯನ್ನು ಜೂನ್ 30ರೊಳಗೆ ಸಲ್ಲಿಸಬೇಕು. ಹೆಚ್ಚಿನ ವಿವರಕ್ಕೆ http://base.ac.in ವೆಬ್‌ಸೈಟ್ ನೋಡಬಹುದು ಎಂದು ಕುಲಸಚಿವೆ ಜಿ.ಎಸ್.ಮಮತಾದೇವಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸೇತುಬಂಧ: ತಾರತಮ್ಯಕ್ಕೆ ವಿರೋಧ

ಬೆಂಗಳೂರು: ಸೇತುಬಂಧ ಪರೀಕ್ಷೆಯಲ್ಲಿ ಇಂಗ್ಲಿಷ್‌ನಲ್ಲಿ ಉತ್ತರಿಸಿದರೆ 'ಎ' ಗ್ರೇಡ್ ಮತ್ತು ಕನ್ನಡದಲ್ಲಿ ಬರೆದರೆ 'ಬಿ' ಗ್ರೇಡ್ ನೀಡಲಾಗುತ್ತಿದೆ. ಶಿಕ್ಷಣ ಇಲಾಖೆಯ ಈ ಕ್ರಮ ಕನ್ನಡ ಭಾಷಾ ವಿರೋಧಿ ಮತ್ತು ತಾರತಮ್ಯದಿಂದ ಕೂಡಿದೆ ಎಂದು ಅಖಿಲ ಭಾರತ ಶಿಕ್ಷಣ ಉಳಿಸಿ ಸಮಿತಿ ಖಂಡಿಸಿದೆ.

'ಸರ್ಕಾರವು ದಶಕಗಳಿಂದ ಐದನೇ ತರಗತಿಯಿಂದ ಇಂಗ್ಲಿಷ್ ಬೋಧಿಸುವ ನೀತಿ ಜಾರಿಯಲ್ಲಿಟ್ಟಿದೆ. ಇಂಗ್ಲಿಷ್ ಭಾಷೆ ಬಾರದ ವಿದ್ಯಾರ್ಥಿಗಳು ಕನ್ನಡದಲ್ಲಿ ಉತ್ತರಿಸಿದರೆ ಅಪರಾಧವೇ? ಮಕ್ಕಳು ಹಿಂದೆ ಬೀಳಲು ಕಾರಣ ಯಾರು? ಆಂಗ್ಲ ಭಾಷಾ ಶಿಕ್ಷಕರನ್ನು ನೇಮಕ ಮಾಡದ ಸರ್ಕಾರ, ತನ್ನ ವೈಫಲ್ಯದ ಹೊಣೆಯನ್ನು ಅಮಾಯಕ ವಿದ್ಯಾರ್ಥಿಗಳ ಮೇಲೆ ಹೊರಿಸಿ ಶಿಕ್ಷಿಸುತ್ತಿದೆ' ಎಂದು ಸಮಿತಿ ಅಧ್ಯಕ್ಷ ಅಲ್ಲಮಪ್ರಭು ಬೆಟ್ಟದೂರು ದೂರಿದ್ದಾರೆ.

'ಇಂತಹ ಅವೈಜ್ಞಾನಿಕ, ಶಿಕ್ಷಣ ವಿರೋಧಿ ತೀರ್ಮಾನಗಳನ್ನು ಕೈಗೊಳ್ಳುವ ಮೂಲಕ ಸರ್ಕಾರ, ವಿದ್ಯಾರ್ಥಿಗಳ ಭವಿಷ್ಯದೊಂದಿಗೆ ಚೆಲ್ಲಾಟವಾಡುತ್ತಿದೆ. ತಕ್ಷಣವೇ ಈ ತಾರತಮ್ಯದ ನೀತಿ ಹಿಂಪಡೆಯಬೇಕು' ಎಂದಿದ್ದಾರೆ.

'ಸಮಾಜ ಸೇವೆಯಿಂದ ತೃಪ್ತಿ'

ಪೀಣ್ಯ ದಾಸರಹಳ್ಳಿ: 'ಬಡಜನರಿಗೆ ನೆರವಾಗಲು ಮತ್ತು ಸಮಾಜ ಸೇವೆಗಾಗಿ ನೇಸರ ಫೌಂಡೇಷನ್ ಸ್ಥಾಪಿಸಿರುವುದು ಶ್ಲಾಘನೀಯ' ಎಂದು ಶಾಸಕ ಎಸ್. ಮುನಿರಾಜು ತಿಳಿಸಿದರು.

ನೇಸರ ಫೌಂಡೇಷನ್ ಕಚೇರಿ ಉದ್ಘಾಟಿಸಿ ಮಾತನಾಡಿದ ಅವರು, 'ಸಮಾಜದ ಏಳಿಗೆಗೆ ಮತ್ತು ಬಡಜನರ ಬಾಳಿಗೆ ಬೆಳಕಾಗಿ ಕೊಡುಗೆ ನೀಡಿದಾಗ ಸಿಗುವ ತೃಪ್ತಿ ತಮ್ಮ ಮನೆಗೆ ಮಾಡಿದ ಕಾರ್ಯದಲ್ಲಿ ಸಿಗುವುದಿಲ್ಲ. ಆದ್ದರಿಂದ, ಸಂಸ್ಥೆಯು ನಿಂತ ನೀರಾಗದೆ ಹರಿಯುವ ನೀರಿನಂತೆ ಕ್ರಿಯಾಶೀಲವಾಗಿ ಸಮಾಜ ಮುಖಿ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ಫೌಂಡೇಷನ್ ಸಂಸ್ಥಾಪಕ ಬಿ.ಎಸ್. ಅನಿಲ್ ಕುಮಾರ್ ಮಾತನಾಡಿದರು.

ಸುಜಾತಾ ಮುನಿರಾಜು, ಮಾಜಿ ಉಪ ಮೇಯರ್ ಹರೀಶ್ ಭಾಗವಹಿಸಿದ್ದರು.

ಎಸ್‌ಐಆರ್: ಅರ್ಹ ಮತದಾರರ ಹಕ್ಕು ರಕ್ಷಣೆಗೆ ಆಗ್ರಹ

ಆಯೋಗಕ್ಕೆ ಸಾಹಿತಿಗಳ ಬಹಿರಂಗ ಪತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆಯಲ್ಲಿ (ಎಸ್‌ಐಆರ್) ಒಬ್ಬ ಅರ್ಹರೂ, ತಮ್ಮ ಮತದಾನದ ಹಕ್ಕನ್ನು ಕಳೆದುಕೊಳ್ಳದೇ ಇರುವ ಹಾಗ ಎಚ್ಚರವಹಿಸಬೇಕು ಎಂದು ರಾಜ್ಯದ 18 ಸಾಹಿತಿಗಳು, ಕಲಾವಿದರು, ಸಾಮಾಜಿಕ ಕಾರ್ಯಕರ್ತರು ಚುನಾವಣಾ ಆಯೋಗ ಮತ್ತು ರಾಜ್ಯ ಸರ್ಕಾರಕ್ಕೆ ಬಹಿರಂಗ ಪತ್ರ ಬರೆದಿದ್ದಾರೆ.

ದೇಶದ ಬೇರೆ–ಬೇರೆ ರಾಜ್ಯಗಳಲ್ಲಿ ಎಸ್‌ಐಆರ್ ಮೂಲಕ 20 ಲಕ್ಷದಿಂದ 3 ಕೋಟಿಯವರೆಗೆ ಮತದಾರರನ್ನು ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ.

ಕಾಗುಣಿತ ದೋಷದಂತಹ ಸಣ್ಣ ಕಾರಣಗಳನ್ನು ಮುಂದೊಡ್ಡಿ, 'ತಾರ್ಕಿಕ ವ್ಯತ್ಯಾಸ' ಎಂದು ಮತದಾನದ ಹಕ್ಕನ್ನು ನಿರಾಕರಿಸುವುದು ಪ್ರಜಾಪ್ರಭುತ್ವದ ಕಗ್ಗೊಲೆ. ಕರ್ನಾಟಕದಲ್ಲಿ ಅಂತಹ ಸ್ಥಿತಿ ಎದುರಾಗಬಾರದು ಎಂದು ಪತ್ರದಲ್ಲಿ ಆಗ್ರಹಿಸಿದ್ದಾರೆ.

ರಾಜ್ಯದಲ್ಲಿ 'ತಾರ್ಕಿಕ ವ್ಯತ್ಯಾಸ' ವರ್ಗೀಕರಣವನ್ನು ಕೈಬಿಡಬೇಕು. ಕರಡು ಪಟ್ಟಿ ಸಿದ್ಧವಾದ ನಂತರ ಗ್ರಾಮ ಸಭೆಗಳನ್ನು ನಡೆಸಿ, ಸಾರ್ವಜನಿಕರ ಪರಿಶೀಲನೆಯೊಂದಿಗೆ ಪಟ್ಟಿಯನ್ನು ಅಂತಿಮಗೊಳಿಸಬೇಕು. ಆಕ್ಷೇಪ ಮತ್ತು ದಾಖಲೆಗಳನ್ನು ಸಲ್ಲಿಸಲು ಆರು ತಿಂಗಳು ಕಾಲಾವಕಾಶ ನೀಡಬೇಕು. ಮತದಾರರ ಪಟ್ಟಿಯನ್ನು 'ಮೆಷಿನ್ ರೀಡೇಬಲ್' ಸ್ವರೂಪದಲ್ಲಿ ನೀಡಬೇಕು ಎಂದು ಚುನಾವಣಾ ಆಯೋಗವನ್ನು ಒತ್ತಾಯಿಸಿದ್ದಾರೆ.

ಕೇಂದ್ರ ಚುನಾವಣಾ ಆಯೋಗದ ಪಟ್ಟಿಯಲ್ಲಿ ಇರುವಂತೆ ಗ್ರಾಮಸಭೆಗಳನ್ನು ನಡೆಸಿ, ಮತದಾರರ ಅಗತ್ಯ ದಾಖಲೆಗಳನ್ನು ಒದಗಿಸಿಕೊಳ್ಳುವಂತೆ ಎಚ್ಚರಿಕೆ ವಹಿಸಬೇಕು. ರಾಜ್ಯ ಚುನಾವಣಾ ಆಯೋಗದ ಮತದಾರರ ಪಟ್ಟಿಗೆ ಹೆಚ್ಚಿನ ಮಾನ್ಯತೆ ದೊರೆಯುವಂತೆ ಕ್ರಮ ತೆಗೆದುಕೊಳ್ಳಬೇಕು ಎಂದು ರಾಜ್ಯ ಸರ್ಕಾರವನ್ನು ಆಗ್ರಹಿಸಿದ್ದಾರೆ.

ಸಾಹಿತಿಗಳಾದ ವಿಜಯಾ, ರಹಮತ್ ತರೀಕೆರೆ, ಬಾನು ಮುಷ್ತಾಕ್, ರಾಜೇಂದ್ರ ಚೆನ್ನಿ, ಬಂಜಗೆರೆ ಜಯಪ್ರಕಾಶ್, ಬಿ.ಟಿ. ಲಲಿತಾನಾಯಕ್, ಮೂಡ್ನಾಕೂಡು ಚಿನ್ನಸ್ವಾಮಿ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ಕಲಾವಿದ ಪ್ರಕಾಶ್ ರಾಜ್, ಸಾಮಾಜಿಕ ಕಾರ್ಯಕರ್ತರಾದ ಶ್ರೀಪಾದ ಭಟ್, ಜಾಣಗೆರೆ ವೆಂಕಟರಾಮಯ್ಯ, ವಿ.ಎಸ್.ಶ್ರೀಧರ, ನಗರಗೆರೆ ರಮೇಶ್, ಕೆ.ಫಣಿರಾಜ್, ಎನ್.ಮುಕುಂದರಾವ್ ಅವರು ಪತ್ರಕ್ಕೆ ಸಹಿ ಮಾಡಿದ್ದಾರೆ.

ಯಕ್ಷಗಾನ ತರಬೇತಿ

ಬೆಂಗಳೂರು: ರಾಮಕೃಷ್ಣಹೆಗಡೆ ನಗರದ ಬಾಲಾಜಿ ಕೃಪಾ ಬಡಾವಣೆಯ ಅಭಯ ಆಂಜನೇಯ ಸ್ವಾಮಿ ದೇವಸ್ಥಾನದ ಆವರಣದಲ್ಲಿ ಯಕ್ಷಗಾನ ತರಬೇತಿ ನಡೆಯಲಿದೆ.

ಉಮೇಶ ರಾಜ್ ಮಂದಾರ್ತಿ ನೇತೃತ್ವದಲ್ಲಿ ಯಕ್ಷಕಲಾ ಕೌಸ್ತುಭ ತಂಡವು ತರಗತಿಗಳನ್ನು ನಡೆಸುತ್ತಿದ್ದು, ಜೂ.28ರಂದು 2ನೇ ಹಂತದ ತರಗತಿಗಳು ಆರಂಭವಾಗಲಿವೆ. ಪ್ರತಿ ಶನಿವಾರ ಸಂಜೆ ಮತ್ತು ಭಾನುವಾರ ಬೆಳಿಗ್ಗೆ ತರಗತಿಗಳು ನಡೆಯಲಿವೆ. ವಿವರಗಳಿಗೆ 96636 71591/96069 81591 ಸಂಪರ್ಕಿಸಬಹುದು.

ಡಿಎಸ್ ಮ್ಯಾಕ್ಸ್: ಸಂಸ್ಥಾಪನಾ ದಿನ ಇಂದು

ಬೆಂಗಳೂರು: 'ಡಿಎಸ್ ಮ್ಯಾಕ್ಸ್'–ರಿಯಲ್ ಎಸ್ಟೇಟ್ ಸಂಸ್ಥೆಯ 20ನೇ ವರ್ಷದ ಸಂಸ್ಥಾಪನಾ ದಿನಾಚರಣೆಯು ಇದೇ ಶುಕ್ರವಾರ ಸಂಜೆ 4ಕ್ಕೆ ಅರಮನೆ ಮೈದಾನದ ಗಾಯತ್ರಿ ವಿಹಾರದಲ್ಲಿ ನಡೆಯಲಿದೆ. ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಮುಖ್ಯ ಅತಿಥಿಯಾಗಿ ಆಗಮಿಸಲಿದ್ದು, ನಟಿ ಕಾಜಲ್ ಅಗರ್‌ವಾಲ್ ಭಾಗವಹಿಸುವರು. ಸಂಸ್ಥೆಯ ಮುಖ್ಯಸ್ಥ ಕೆ.ವಿ.ಸುರೇಶ್, ನಿರ್ದೇಶಕ ಎಸ್.ಪಿ.ದಯಾನಂದ ಪಾಲ್ಗೊಳ್ಳುವರು ಎಂದು ಪ್ರಕಟಣೆ ತಿಳಿಸಿದೆ.

ಕೇಂದ್ರ ಪರಿಹಾರ ಸಮಿತಿ
ಸಮಾಜ ಕಲ್ಯಾಣ ಇಲಾಖೆ
ಕರ್ನಾಟಕ ಸರ್ಕಾರ

ಡಾ. ಜಿ. ಪರಮೇಶ್ವರ
ಮಾನ್ಯ ಉಪ ಮುಖ್ಯಮಂತ್ರಿಗಳು

ಕರ್ನಾಟಕ ರಾಜ್ಯದ ನೂತನ ಸನ್ಮಾನ್ಯ ಮುಖ್ಯಮಂತ್ರಿಗಳಾದ
ಶ್ರೀ ಡಿ. ಕೆ. ಶಿವಕುಮಾರ್
ರವರಿಗೆ ಹೃದಯಪೂರ್ವಕ ಅಭಿನಂದನೆಗಳು.

ಕರ್ನಾಟಕ ರಾಜ್ಯದ ನೂತನ ಮಾನ್ಯ ಉಪ ಮುಖ್ಯಮಂತ್ರಿಗಳಾದ
ಡಾ. ಜಿ. ಪರಮೇಶ್ವರ
ರವರಿಗೆ ಹೃದಯಪೂರ್ವಕ ಅಭಿನಂದನೆಗಳು.

ನಿಮ್ಮ ಸಾರಥ್ಯದಲ್ಲಿ ಕರ್ನಾಟಕವು ಮತ್ತಷ್ಟು
ಅಭಿವೃದ್ಧಿ ಪಥದಲ್ಲಿ ಸಾಗಲಿ ಎಂದು ಹಾರೈಸುತ್ತೇವೆ.

ಕೇಂದ್ರ ಪರಿಹಾರ ಸಮಿತಿಯ ಗುರಿಗಳು:

" ಬೀದಿಯಿಂದ ಬಲವರ್ಧನೆಗೆ "

" ಭಿಕ್ಷುಕರ ಪುನರ್ವಸತಿ ಮತ್ತು ತರಬೇತಿ "

" ಭಿಕ್ಷಾಟನೆ ಮುಕ್ತ ಕರ್ನಾಟಕ "

ಸನ್ಮಾನ್ಯ ಮುಖ್ಯಮಂತ್ರಿಗಳಾದ
ಶ್ರೀ ಡಿ.ಕೆ ಶಿವಕುಮಾರ್ರವರನ್ನು ಹಾಗೂ
ಮಾನ್ಯ ಉಪಮುಖ್ಯಮಂತ್ರಿಗಳಾದ
ಡಾ. ಜಿ ಪರಮೇಶ್ವರರವರನ್ನು
ಕೇಂದ್ರ ಪರಿಹಾರ ಸಮಿತಿಯ ಮಾನ್ಯ ಅಧ್ಯಕ್ಷರಾದ
ಶ್ರೀ ಆಗಾ ಸುಲ್ತಾನ್ರವರು
ಸನ್ಮಾನಿಸಿ ಅಭಿನಂಧಿಸುತ್ತಿರುವುದು.

ಭಿಕ್ಷುಕರ ಸಹಾಯವಾಣಿ 24/7:
9482300400 / 10581

CRC ವೆಬ್‌ಸೈಟ್‌ಗೆ ಭೇಟಿ ನೀಡಿ
www.crcbng.karnataka.gov.in

@CRCGoK | @crcsecretary2 | Central Relief Committee | centralreliefcommittee

"ನಮ್ಮ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಗೌರವಿಸುವುದು ಮತ್ತು ಕಾಪಾಡುವುದು." -ಪ್ರತಿಯೊಬ್ಬ ಭಾರತೀಯನ ಸಂವಿಧಾನಬದ್ಧ ಮೂಲಭೂತ ಕರ್ತವ್ಯ

ಕಾರ್ಯದರ್ಶಿಗಳು
ಕೇಂದ್ರ ಪರಿಹಾರ ಸಮಿತಿ
ಬೆಂಗಳೂರು

ಸರ್ಕಾರದ ಕಾರ್ಯದರ್ಶಿಗಳು
ಸಮಾಜ ಕಲ್ಯಾಣ ಇಲಾಖೆ
ಕರ್ನಾಟಕ ಸರ್ಕಾರ

ಆಮಿಷ: ₹ 860 ಕೋಟಿ ವಂಚನೆ ಆರೋಪ

ಮನೆಯಿಂದಲೇ ಕೆಲಸ : ಜಾಲತಾಣದ ಜಾಹೀರಾತು ನಂಬಿ ಹಣ ಕಳೆದುಕೊಂಡರು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: 'ಎಸ್‌ಎಲ್‌ವಿ ಮಹಿಳಾ ಮಾರ್ಟ್ ಮತ್ತು ಮಾರ್ಕೆಟಿಂಗ್' ಹೆಸರಿನ ಕಂಪನಿ 'ಮನೆಯಿಂದಲೇ ಕೆಲಸ' ಮಾಡುವ ಆಮಿಷವೊಡ್ಡಿ ರಾಜ್ಯದ 10 ಜಿಲ್ಲೆಗಳಲ್ಲಿ ಜನರಿಂದ ₹860 ಕೋಟಿಯಷ್ಟು ಹಣ ಸಂಗ್ರಹಿಸಿ ವಂಚಿಸಿದೆ' ಎಂದು ಆರೋಪಿಸಿ ವಂಚನೆಗೊಳಗಾದವರು ಗುರುವಾರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗೆ ದೂರು ನೀಡಿದರು.

ಜಿಲ್ಲೆಯೊಂದರಲ್ಲೇ 400ಕ್ಕೂ ಹೆಚ್ಚು ಜನರು ₹70 ಕೋಟಿ ಕಳೆದುಕೊಂಡಿದ್ದಾರೆ. ಸಾಮಾಜಿಕ ಜಾಲತಾಣಗಳಲ್ಲಿ ಸಾರ್ವಜನಿಕರನ್ನು ಸೆಳೆಯುವ ಜಾಹೀರಾತು ಪ್ರಕಟಿಸಿ ವಂಚಿಸಲಾಗಿದೆ.

ಹಣ ಕಳೆದುಕೊಂಡವರು ನೀಡಿರುವ ದೂರಿನ ಅನ್ವಯ ಕಂಪನಿ ವಿರುದ್ಧ ಎಫ್‌ಐಆರ್ ದಾಖಲು ಮಾಡಲಾಗುವುದು. ಪ್ರಕರಣದ ತನಿಖೆಯನ್ನು ಸಿಐಡಿಗೆ ವಹಿಸಲು ಕ್ರಮ ವಹಿಸಲಾಗುವುದು
ರಂಜಿತ್ ಕುಮಾರ್ ಬಂಡಾರು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ

ಬೆಂಗಳೂರು, ತುಮಕೂರು, ಹಾವೇರಿ, ಹುಬ್ಬಳ್ಳಿ, ಶಿವಮೊಗ್ಗ, ರಾಯಚೂರು, ದಾವಣಗೆರೆ ಸೇರಿ 10 ಜಿಲ್ಲೆಗಳ ಸಾವಿರಾರು ಜನರು ಹೂಡಿಕೆ ಮಾಡಿದ್ದಾರೆ. ಆಂಧ್ರಪ್ರದೇಶ ಮೂಲದ ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ರಾಜೇಶ್ ಬೊಮ್ಮಲ ಈಗ ನಾಪತ್ತೆಯಾಗಿದ್ದು, ವಂಚನೆ ವಿಷಯ ಬೆಳಕಿಗೆ ಬಂದಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಮನೆಯಿಂದಲೇ ಅಗರಬತ್ತಿ, ಸೋಪ್ ಮುಂತಾದ ವಸ್ತುಗಳನ್ನು ಪ್ಯಾಕ್ ಮಾಡಿದರೆ, ಯಂತ್ರಗಳ ಸಹಾಯದಿಂದ ಗೃಹೋಪಯೋಗಿ ವಸ್ತುಗಳನ್ನು ತಯಾರಿಸಿದರೆ ವೇತನ ನೀಡುವುದಾಗಿ ಕಂಪನಿ ಭರವಸೆ ನೀಡಿತ್ತು. ಪ್ಯಾಕಿಂಗ್ ಮಾಡಿದ, ತಯಾರಿಸಿದ ವಸ್ತುಗಳನ್ನು ರಾಜ್ಯದ ವಿವಿಧೆಡೆ ಇರುವ ಎಸ್‌ಎಲ್‌ವಿ ಮಹಿಳಾ ಮಾರ್ಟ್‌ಗಳಲ್ಲಿ ಮಾರಾಟ ಮಾಡಲಾಗುತ್ತಿತ್ತು. ವೇತನಕ್ಕೆ ಅರ್ಹತೆ ಪಡೆಯಲು ಭದ್ರತಾ ಠೇವಣಿಯಾಗಿ ಹಣ ಹೂಡಿಕೆ ಮಾಡಬೇಕು ಎಂದು ಸೂಚಿಸಿ 18 ರೀತಿಯ ಹೂಡಿಕೆಯ ಅವಕಾಶ ನೀಡಿತ್ತು.

ಹಣ ಹೂಡಿಕೆ ಮಾಡಿದವರಿಗೆ ವೇತನದ ಜೊತೆಗೆ ಅಸಲು ಹಣವನ್ನೂ ಕಂತುಗಳಲ್ಲಿ ವಾಪಸ್ ನೀಡಲಾಗುತ್ತಿತ್ತು.

ಎಸ್‌ಎಲ್‌ವಿ ಮಹಿಳಾ ಮಾರ್ಟ್ ಮತ್ತು ಮಾರ್ಕೆಟಿಂಗ್ ಕಂಪನಿಯ ವಂಚನೆ ಬಗ್ಗೆ ಹಣ ಕಳೆದುಕೊಂಡವರು ಪೊಲೀಸರಿಗೆ ಮಾಹಿತಿ ನೀಡಿದರು

ಸಾಲ ಮಾಡಿ ಹಣ ಹಾಕಿದ್ದೆ...

'ಹೆಚ್ಚು ಹಣದಾಸೆಗೆ ಬೇರೆಡೆ ಸಾಲ ಪಡೆದು ಹೂಡಿಕೆ ಮಾಡಿದ್ದೆ. ದಿನಕ್ಕೆ 2 ಗಂಟೆ ಅಗರಬತ್ತಿ, ಕರ್ಪೂರ ಪ್ಯಾಕ್ ಮಾಡಿ ಕೊಡುತ್ತಿದ್ದೆ, ಒಂದು ವರ್ಷ ಎಲ್ಲವೂ ಸರಿಯಾಗಿತ್ತು. ಈಗ ಯಾರೂ ಸಂಪರ್ಕಕ್ಕೆ ಸಿಗುತ್ತಿಲ್ಲ. ಹೂಡಿಕೆ ಮಾಡಿದ ಹಣದ ಬಗ್ಗೆ ಮಾಹಿತಿಯೂ ಸಿಗುತ್ತಿಲ್ಲ' ಎಂದು ಮಹಿಳೆಯೊಬ್ಬರು ಹೇಳಿದರು.

'ಸಂಬಂಧಿಕರ ಮಾತು ಕೇಳಿ ನಾನು ಜಾನುವಾರುಗಳನ್ನು ಮಾರಾಟ ಮಾಡಿ ₹4 ಲಕ್ಷ ಹೂಡಿಕೆ ಮಾಡಿದ್ದೆ, 2 ತಿಂಗಳು ಮಾತ್ರ ವೇತನ ಪಡೆದಿದ್ದೆ, ಈಗ ಹಣ ಏನಾಯಿತು ಎಂದು ಹೇಳುವವರೇ ಇಲ್ಲವಾಗಿದ್ದಾರೆ' ಎಂದು ರೈತರೊಬ್ಬರು ನೋವು ತೋಡಿಕೊಂಡರು.

ಹೆಚ್ಚು ಹೂಡಿಕೆ ಮಾಡಿದವರಿಗೆ ಹೆಚ್ಚು ವೇತನ ನೀಡುತ್ತಿದ್ದರು. ಹೂಡಿಕೆ ಮಾಡಿದ ಹಣಕ್ಕೆ ರಸೀದಿ ನೀಡಲಾಗುತ್ತಿತ್ತು. ಆರಂಭದ ಕೆಲವು ತಿಂಗಳು ವೇತನ ಹಾಗೂ ಅಸಲು ವಾಪಸ್ ಬಂದಿದೆ. ಇದನ್ನು ನಂಬಿದ ಕೆಲವರು ಹೂಡಿಕೆ ಹಣವನ್ನು ದುಪ್ಪಟ್ಟು ಮಾಡಿದ್ದಾರೆ. ಹಲವು ಗ್ರಾಹಕರು ₹50 ಲಕ್ಷದವರೆಗೂ ಹಣ ತೊಡಗಿಸಿದ್ದರು.

3 ತಿಂಗಳಿಂದ ವೇತನವನ್ನೂ ನೀಡಿಲ್ಲ, ಅಸಲನ್ನೂ ವಾಪಸ್ ಕೊಟ್ಟಿಲ್ಲ. ವ್ಯವಸ್ಥಾಪಕ ನಿರ್ದೇಶಕ, ಜಿಲ್ಲಾ ವ್ಯವಸ್ಥಾಪಕರು ನಾಪತ್ತೆಯಾಗಿದ್ದಾರೆ. ವಿವಿಧೆಡೆ ಇದ್ದ ಮಹಿಳಾ ಮಾರ್ಟ್‌ಗಳು ಬಂದ್ ಆಗಿವೆ. ಹೂಡಿಕೆದಾರರಲ್ಲಿ ಬಹುತೇಕ ಮಂದಿ ಮಹಿಳೆಯರೇ ಇದ್ದು ಉಳಿತಾಯದ ಹಣ ಕಳೆದುಕೊಂಡಿದ್ದಾರೆ. ಕೆಲವರು ಮನೆಯವರಿಗೆ ತಿಳಿಸದೇ ಚಿನ್ನ ಅಡವಿಟ್ಟು ಹೂಡಿಕೆ ಮಾಡಿದ್ದು, ಹೂಡಿಕೆ ಹಣವನ್ನು ವಾಪಸ್ ಕೊಡಿಸಲು ಕ್ರಮ ವಹಿಸಬೇಕು ಎಂದು ದೂರಿನಲ್ಲಿ ಒತ್ತಾಯಿಸಿದ್ದಾರೆ.

ಡಿ.ವೀರೇಂದ್ರ ಹೆಗ್ಗಡೆಗೆ 'ಸಿದ್ಧಶ್ರೀ ಪ್ರಶಸ್ತಿ'

ಪ್ರಜಾವಾಣಿ ವಾರ್ತೆ

ಕೊರಟಗೆರೆ: ತಾಲ್ಲೂಕಿನ ಸಿದ್ಧರಬೆಟ್ಟದಲ್ಲಿರುವ ಬಾಳೆಹೊನ್ನೂರು ಶಾಖಾ ಮಠ ನೀಡುವ 'ಸಿದ್ಧಶ್ರೀ ಪ್ರಶಸ್ತಿ'ಗೆ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ಅವರನ್ನು ಆಯ್ಕೆ ಮಾಡಲಾಗಿದೆ.

ಜೂನ್ 21ರಂದು ನಡೆಯುವ ಶಾಖಾ ಮಠದ ಇಪ್ಪತ್ತನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು. ಪ್ರಶಸ್ತಿಯು ₹25 ಸಾವಿರ ನಗದು, ಪ್ರಶಸ್ತಿ ಪತ್ರ ಒಳಗೊಂಡಿದೆ ಎಂದು ಬಾಳೆಹೊನ್ನೂರು ಶಾಖಾ ಮಠದ ವೀರಭದ್ರ ಶಿವಾಚಾರ್ಯ ಸ್ವಾಮೀಜಿ ತಿಳಿಸಿದ್ದಾರೆ.

ಡಿ.ವೀರೇಂದ್ರ ಹೆಗ್ಗಡೆ

ಬೀದಿನಾಯಿ ದಾಳಿ: ಬಾಲಕನಿಗೆ ತೀವ್ರ ಗಾಯ

ಪ್ರಜಾವಾಣಿ ವಾರ್ತೆ

ಚಿಕ್ಕನಾಯಕನಹಳ್ಳಿ: ಪಟ್ಟಣದ ಜೋಗಿಹಳ್ಳಿಯ ಆದಿ ಆಂಜನೇಯ ಸ್ವಾಮಿ ದೇವಾಲಯದ ಸಮೀಪ ಗುರುವಾರ ಬೀದಿ ನಾಯಿಗಳ ಗುಂಪೊಂದು ಎಂಟು ವರ್ಷದ ಬಾಲಕನ ಮೇಲೆ ಎರಗಿ ತೀವ್ರವಾಗಿ ಗಾಯಗೊಳಿಸಿವೆ.

ಒಡಿಶಾದ ಬಾಲಕ ಅರುಣ್ ನಡೆದುಕೊಂಡು ಹೋಗುತ್ತಿದ್ದಾಗ ರಸ್ತೆಯಲ್ಲಿ ಗುಂಪುಗೂಡಿದ್ದ ಬೀದಿ ನಾಯಿಗಳು ಮುಗಿಬಿದ್ದಿವೆ. ಬಾಲಕನನ್ನು ಕಚ್ಚಿ, ನೆಲದ ಮೇಲೆ ಎಳೆದಾಡಿವೆ. ಕಿರುಚಾಟ ಕೇಳಿಸಿಕೊಂಡು ಸ್ಥಳಕ್ಕೆ ಬಂದ ಸಾರ್ವಜನಿಕರು ನಾಯಿಗಳನ್ನು ಓಡಿಸಿ ಬಾಲಕನನ್ನು ರಕ್ಷಿಸಿದ್ದಾರೆ. ತೀವ್ರವಾಗಿ ಗಾಯಗೊಂಡಿರುವ ಬಾಲಕನಿಗೆ ತಾಲ್ಲೂಕು ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

'ನಡೆದುಕೊಂಡು ಬರುತ್ತಿದ್ದ ಬಾಲಕನ ಮೇಲೆ ಬೀದಿ ನಾಯಿಗಳು ಒಮ್ಮೆಲೇ ದಾಳಿ ಮಾಡಿದವು. ಆತನನ್ನು ಕಚ್ಚಿಕೊಂಡು ಮುಳ್ಳುತಂತಿಯ ಮೇಲೆಯೇ ಎಳೆದುಕೊಂಡು ಹೋಗುತ್ತಿದ್ದವು. ನಾವು ದೂರದಿಂದ ಕಲ್ಲು ಎಸೆದರೂ ಹುಡುಗನನ್ನು ಬಿಡಲಿಲ್ಲ. ಗಾಬರಿಯಿಂದ ಜೋರಾಗಿ ಕಿರುಚಿಕೊಂಡಾಗ ಅಕ್ಕಪಕ್ಕದವರೆಲ್ಲರೂ ಓಡಿಬಂದು ಬಾಲಕನನ್ನು ರಕ್ಷಿಸಿದರು' ಎಂದು ಪ್ರತ್ಯಕ್ಷದರ್ಶಿ ವೃದ್ಧೆ ಗಿರಿಜಮ್ಮ ತಿಳಿಸಿದರು.

ಬೀದಿ ನಾಯಿಗಳ ದಾಳಿಯಿಂದ ಬಾಲಕ ಅರುಣ್ ತಲೆ ಹಾಗೂ ಕಿವಿಯಲ್ಲಿ ತೀವ್ರ ಗಾಯಗಳಾಗಿವೆ

ಬಾಲಕಿಯೊಂದಿಗೆ ಅಸಭ್ಯ ವರ್ತನೆ: ಪೋಕ್ಸೊ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಶೃಂಗೇರಿ (ಚಿಕ್ಕಮಗಳೂರು): ಬಾಲಕಿಯನ್ನು ಮುಟ್ಟಿ ಅಸಭ್ಯವಾಗಿ ವರ್ತಿಸಿದ ಆರೋಪದ ಮೇಲೆ ಯುವಕನ ವಿರುದ್ಧ ಪೋಕ್ಸೊ (ಲೈಂಗಿಕ ದೌರ್ಜನ್ಯದಿಂದ ಮಕ್ಕಳ ರಕ್ಷಣೆ) ಕಾಯ್ದೆ ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಮೇಲಿನ ದೌರ್ಜನ್ಯ ತಡೆ ಕಾಯ್ದೆಯಡಿ ಶೃಂಗೇರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸಂತ್ರಸ್ತ ಬಾಲಕಿಯ ತಾಯಿ ನೀಡಿರುವ ದೂರು ಆಧರಿಸಿ ಶಮೀರ್ ಎಂಬಾತನ ವಿರುದ್ಧ ಪೊಲೀಸರು ಎಫ್‌ಐಆರ್ ದಾಖಲಿಸಿದ್ದಾರೆ.

'ಬುಧವಾರ ಸಂಜೆ ಶಾಲೆ ಮುಗಿಸಿಕೊಂಡು ಮನೆಗೆ ಬಂದ ಮಗಳು ಪಕ್ಕದ ಮನೆಯ ಸ್ನೇಹಿತನೊಂದಿಗೆ ಆಟವಾಡುತ್ತಿದ್ದಳು. ಆಗ ಶಮೀರ್ ಎಂಬಾತ ಬಾಲಕಿಯನ್ನು ಬಳಿಗೆ ಕರೆದು, ಆಕೆಯ ಖಾಸಗಿ ಅಂಗ ಮುಟ್ಟಿದ್ದಾನೆ. ಈ ವಿಷಯವನ್ನು ಮಗಳು ತಿಳಿಸಿದಳು' ಎಂದು ಬಾಲಕಿಯ ತಾಯಿಯು ಠಾಣೆಗೆ ನೀಡಿರುವ ದೂರಿನಲ್ಲಿ ವಿವರಿಸಿದ್ದಾರೆ.

ಬುಧವಾರ ರಾತ್ರಿ ವಿಷಯ ತಿಳಿಯುತ್ತಿದ್ದಂತೆ ಪೊಲೀಸರು ಸ್ಥಳದಲ್ಲಿ ಹೆಚ್ಚಿನ ಸಿಬ್ಬಂದಿ ನಿಯೋಜಿಸಿ ಬಂದೋಬಸ್ತ್ ಕೈಗೊಂಡಿದ್ದರು.

ಕಾಯ್ದಿರಿಸಿದ ಆದೇಶ: ಜೂನ್ 30ಕ್ಕೆ ಮುಂದೂಡಿಕೆ

ದಾವಣಗೆರೆ: ಹರಿಹರದ ವೀರಶೈವ ಪಂಚಮಸಾಲಿ ಗುರುಪೀಠದ ವಚನಾನಂದ ಸ್ವಾಮೀಜಿಗೆ ಪೋಕ್ಸೊ ಪ್ರಕರಣದಲ್ಲಿ ನೀಡಿರುವ ನಿರೀಕ್ಷಣಾ ಜಾಮೀನು ರದ್ದುಗೊಳಿಸುವಂತೆ ಕೋರಿ ಪೊಲೀಸರು ಸಲ್ಲಿಸಿದ ಅರ್ಜಿಯ ವಿಚಾರಣೆ ನಡೆಸಿ ಜಿಲ್ಲಾ ವಿಶೇಷ ಪೋಕ್ಸೊ ನ್ಯಾಯಾಲಯ ಕಾಯ್ದಿರಿಸಿದ್ದ ಆದೇಶ ಪ್ರಕಟಿಸುವ ದಿನವನ್ನು ಇದೇ 30ಕ್ಕೆ ಮುಂದೂಡಿದೆ.

ವಚನಾನಂದ ಸ್ವಾಮೀಜಿ

ಜೂನ್ 11ರಂದು ವಾದ–ಪ್ರತಿವಾದ ಆಲಿಸಿದ್ದ ನ್ಯಾಯಾಲಯ ಜೂನ್ 18ಕ್ಕೆ ಆದೇಶ ಕಾಯ್ದಿರಿಸಿತ್ತು. ಈ ನಡುವೆ ನಿರೀಕ್ಷಣಾ ಜಾಮೀನು ರದ್ದು ಕೋರಿ ಸಂತ್ರಸ್ತ ಬಾಲಕನ ತಾಯಿ ಹೈಕೋರ್ಟ್ ಮೊರೆ ಹೋಗಿದ್ದಾರೆ.

ಎಫ್‌ಐಆರ್ ದಾಖಲಾಗುವುದಕ್ಕೂ ಮುನ್ನವೇ ಸ್ವಾಮೀಜಿ ಪಡೆದಿರುವ ನಿರೀಕ್ಷಣಾ ಜಾಮೀನು ರದ್ದು ಮಾಡುವಂತೆ ಹರಿಹರ ಗ್ರಾಮಾಂತರ ಠಾಣೆಯ ಪೊಲೀಸರು ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದರು. ಇದಕ್ಕೆ ಸ್ವಾಮೀಜಿ ಪರ ವಕೀಲ ಎಸ್.ವಿ. ಪಾಟೀಲ ತಕರಾರು ಸಲ್ಲಿಸಿದ್ದರು. 'ಪೊಲೀಸರು ಸಲ್ಲಿಸಿದ ಅರ್ಜಿಯ ವಿಚಾರಣೆಯನ್ನು ಜಿಲ್ಲಾ ನ್ಯಾಯಾಲಯ ನಡೆಸುತ್ತಿರುವಾಗಲೇ ಸಂತ್ರಸ್ತ ಬಾಲಕನ ತಾಯಿ ಹೈಕೋರ್ಟ್ ಮೊರೆ ಹೋಗಿದ್ದಾರೆ.

ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಭರವಸೆ

'ಹೂಳು: ಪರ್ಯಾಯಕ್ಕೆ ಚಿಂತನೆ'

ಪ್ರಜಾವಾಣಿ ವಾರ್ತೆ

ಕೊಪ್ಪಳ: 'ತುಂಗಭದ್ರಾ ಜಲಾಶಯದಲ್ಲಿ 31 ಟಿಎಂಸಿ ಅಡಿಯಷ್ಟು ಹೂಳು ತುಂಬಿಕೊಂಡಿದ್ದು ನೀರು ಸಂಗ್ರಹಿಸಲು ಪರ್ಯಾಯ ಯೋಜನೆಗಳ ಬಗ್ಗೆ ಆಂಧ್ರ ಹಾಗೂ ತೆಲಂಗಾಣ ರಾಜ್ಯಗಳ ಜೊತೆ ಚರ್ಚಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ' ಎಂದು ಜಲಸಂಪನ್ಮೂಲ ಸಚಿವ ರಾಮಲಿಂಗಾರೆಡ್ಡಿ ಹೇಳಿದರು.

ತಾಲ್ಲೂಕಿನ ಮುನಿರಾಬಾದ್‌ನಲ್ಲಿ ಗುರುವಾರ ಮಾಧ್ಯಮದವರ ಜೊತೆ ಮಾತನಾಡಿದ ಅವರು, 'ತುಂಗಭದ್ರಾ ಜಲಾಶಯಕ್ಕೆ ಹೊಸದಾಗಿ 33 ಕ್ರೆಸ್ಟ್‌ಗೇಟ್‌ಗಳನ್ನು ಅಳವಡಿಸಲಾಗಿದ್ದು, ಜೂ. 25ರಂದು ಲೋಕಾರ್ಪಣೆಯಾಗಲಿವೆ. ಕೇಂದ್ರದ ಜಲಶಕ್ತಿ ಖಾತೆ ಸಚಿವ, ಕರ್ನಾಟಕ, ಆಂಧ್ರ ಹಾಗೂ ತೆಲಂಗಾಣ ರಾಜ್ಯಗಳ ಮುಖ್ಯಮಂತ್ರಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಆ ವೇಳೆ ಜನರ ಹಲವು ವರ್ಷಗಳ ಬೇಡಿಕೆಯಾದ ನವಲಿ ಸಮಾನಾಂತರ ಜಲಾಶಯದ ಬಗ್ಗೆ ಚರ್ಚಿಸಲಾಗುವುದು' ಎಂದು ಭರವಸೆ ನೀಡಿದರು.

'ತುಂಗಭದ್ರಾ ಜಲಾಶಯದ ವಿಷಯ ಅಂತರರಾಜ್ಯಗಳಿಗೆ ಸಂಬಂಧಿಸಿದ ಕಾರಣ ಅನಗತ್ಯ ವಿವಾದಕ್ಕೆ ಅವಕಾಶ ಕೊಡದಂತೆ ಪರಸ್ಪರ ಮಾತುಕತೆಯ ಮೂಲಕ ಸಮಸ್ಯೆ ಪರಿಹರಿಸಿಕೊಳ್ಳಬೇಕು ಎನ್ನುವುದು ನಮ್ಮ ಮುಖ್ಯಮಂತ್ರಿಯವರ ಆಶಯ. ಆದ್ದರಿಂದ ಕೇಂದ್ರದ ಜಲಶಕ್ತಿ ಸಚಿವರ ಸಮ್ಮುಖದಲ್ಲಿ ಮಾತುಕತೆ ನಡೆಯಬೇಕಿದೆ' ಎಂದು ತಿಳಿಸಿದರು.

ಪ್ರಸ್ತುತ ರಾಜ್ಯದಲ್ಲಿ ಮಳೆಯ ಕೊರತೆ ಎದುರಾಗಿದ್ದು, ಕುಡಿಯುವ ನೀರಿಗೆ ಯಾವುದೇ ತೊಂದರೆಯಾಗುವುದಿಲ್ಲ. ಇದರ ಬಗ್ಗೆ ಮುನ್ನೆಚ್ಚರಿಕೆ ವಹಿಸಲಾಗಿದೆ
ರಾಮಲಿಂಗಾರೆಡ್ಡಿ
ಜಲಸಂಪನ್ಮೂಲ ಖಾತೆ ಸಚಿವ

ವಿದ್ಯಾರ್ಥಿನಿ 3 ತಿಂಗಳ ಗರ್ಭಿಣಿ

ಶಿಡ್ಲಘಟ್ಟ: ತಾಲ್ಲೂಕಿನ ಸರ್ಕಾರಿ ವಸತಿ ಶಾಲೆಯೊಂದರ ವಿದ್ಯಾರ್ಥಿನಿಯೊಬ್ಬಳು ಗರ್ಭಿಣಿಯಾಗಿದ್ದಾಳೆ.

ಬಾಲಕಿಯ ಆರೋಗ್ಯ ತಪಾಸಣೆಗಾಗಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದ ಸಮಯದಲ್ಲಿ ಬಾಲಕಿ ಗರ್ಭಿಣಿಯಾಗಿರುವುದು ಗೊತ್ತಾಗಿದೆ.

'ಬೇಸಿಗೆ ರಜೆ ಸಮಯದಲ್ಲಿ ಊರಿಗೆ ಹೋಗಿದ್ದಾಗ ಮನೆಯಲ್ಲಿ ಯಾರೂ ಇಲ್ಲದ ವೇಳೆ ಅದೇ ಊರಿನ ವ್ಯಕ್ತಿಯೊಬ್ಬ ಬಾಲಕಿ ಮೇಲೆ ಅತ್ಯಾಚಾರ ಎಸಗಿದ್ದಾನೆ. ಈ ವಿಷಯವನ್ನು ಮನೆಯವರು ಅಥವಾ ಯಾರಿಗಾದರೂ ತಿಳಿಸಿದರೆ, ಕೊಲೆ ಮಾಡುವುದಾಗಿ ಬೆದರಿಕೆ ಹಾಕಿದ್ದಾನೆ. ನಂತರ ಬೆದರಿಸಿ ಮೂರ್ನಾಲ್ಕು ಬಾರಿ ಅತ್ಯಾಚಾರ ಎಸಗಿದ್ದಾನೆ' ಎಂದು ತಿಳಿದುಬಂದಿದೆ. ಬೇಸಿಗೆ ರಜೆ ಮುಗಿದು ಶಾಲೆ ಆರಂಭವಾಗಿದ್ದು, ಬಾಲಕಿ ವಸತಿ ಶಾಲೆಗೆ ಬಂದಿದ್ದಾಳೆ. ಆರೋಗ್ಯ ತಪಾಸಣೆ ವೇಳೆ ಬಾಲಕಿ 3 ತಿಂಗಳ ಗರ್ಭಿಣಿ ಆಗಿರುವುದು ಗೊತ್ತಾಗಿದೆ. ಇದನ್ನು ವೈದ್ಯರು ಖಚಿತಪಡಿಸಿದ್ದಾರೆ. ಈ ಸಂಬಂಧ ದಿಬ್ಬೂರಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಾಮನ್ ಸಂಶೋಧನಾ ಸಂಸ್ಥೆ
ಬೆಂಗಳೂರು – 560080.

ತಿದ್ದುಪಡಿ ಪ್ರಕಟಣೆ
ಜಾಹೀರಾತು ಸಂಖ್ಯೆ 16/2026 ದಿನಾಂಕ 04.06.2026

ಜಾಹೀರಾತು **ಸಂಖ್ಯೆ 16/2026 ದಿನಾಂಕ 04.06.2026** ರ ಆಡಳಿತಾತ್ಮಕ ಹುದ್ದೆಗಳಿಗೆ ಸಂಬಂಧಿಸಿದಂತೆ ಆನ್‌ಲೈನ್ ಅರ್ಜಿಗಳನ್ನು ಸಲ್ಲಿಸಲು ಕೊನೆಯ **ದಿನಾಂಕವನ್ನು 13 ಜುಲೈ 2026, ರಾತ್ರಿ 11:59 ರವರೆಗೆ** ವಿಸ್ತರಿಸಲಾಗಿದೆ.
ಸಹಿ/–
ಆಡಳಿತಾಧಿಕಾರಿ

Government of Karnataka
DEPARTMENT OF YOUTH EMPOWERMENT AND SPORTS
Office of the Assistant Director, Bangalore Urban District, Sri Kanteerava Sports Complex-Bangalore-560001. Office Phone: 08022239771
Mobile:-9480886545, Email ID: adyssbangaloreurban12@gmail.com

No: AD/DYES/BU/2026-27/SEO314 **Date: 15-06-2026**

Short term tender (Through E-Procurement Portal Only)

Subject:- Tender invited for Maintenance of Swimming Pool, at Bangalore South Taluk, Honaganahatti
Particulars : Maintenance of Swimming Pool. Tender amount : **Rs.5.00 lakhs**, EMD : **Rs 50,000/-.**
The Tender shall be submitted through e-Procurement Portal **(https://kppp.karnataka.gov.in).** Vendors need to register in the e-Procurement Portal to submit their bids online. The tender document can be viewed free of cost from the e-Procurement Portal.
a) Last Date and Time for submission of Tender Documents through E-Procurement Portal: **04/07/2026 Till 4.00 pm. b)** Opening of technical Offers: **06/07/2026 at 04.00 pm.**

Sd/-
Assistant Director,
Youth Empowerment and sports,
Bangalore Urban District [TENDER INVITING AUTHORITY]
DIPR/CP/1189/Zen/2026-27

ಸಂಜಯ ಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ
(ಕರ್ನಾಟಕ ಸರ್ಕಾರದ ಸ್ವಾಯತ್ತ ಸಂಸ್ಥೆ)
ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು – 560 011.
ದೂ: 080–26564516,26562500, ಗ್ರಾಮ್ಸ್:SITO ಫ್ಯಾಕ್ಸ್:26565222
ಇ–ಮೇಲ್: sitodirector@gmail.com

No. SGITO/e-Tender/Instruments/ME/340/2026-27 **Date: 17-06-2026**

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ)

ಸಂಜಯಗಾಂಧಿ ಟ್ರಾಮ ಮತ್ತು ಅಸ್ಥಿ ಚಿಕಿತ್ಸಾ ಸಂಸ್ಥೆ, ಭೈರಸಂದ್ರ, ಜಯನಗರ ಪೂರ್ವ, ಬೆಂಗಳೂರು–11 ಇವರು ಅರ್ಹ ಟೆಂಡರುದಾರರಿಂದ ಕರ್ನಾಟಕ ಸರ್ಕಾರದ ಕೆಪಿಪಿ ಪೋರ್ಟಲ್ ಮೂಲಕ ಈ ಕೆಳಕಂಡ ವೈದ್ಯಕೀಯ ಉಪಕರಣಗಳನ್ನು ಪ್ರೊಕ್ಯೂರ್ ಮಾಡಲು ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

Sl No.	Description
1.	No. SGITO/e-Tender/ME/Hitachi/340/2026-27 **SUPPLY, INSTALLATION AND COMMISSIONING OF MEDICAL EQUIPMENTS ON TURNKEY BASIS**
2.	No. SGITO/e-Tender/Instruments/340/2026-27 **SUPPLY OF GENERAL AND AO INSTRUMENTS**

(1) ಟೆಂಡರ್ ದಾಖಲೆಗಳನ್ನು **https://kppp.karnataka.gov.in** ನಿಂದ ದಿನಾಂಕ **19–06–2026**ರಿಂದ ಅಥವಾ ನಂತರ ಡೌನ್‌ಲೋಡ್ ಮಾಡಿಕೊಳ್ಳಬಹುದು ಮತ್ತು ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪೋರ್ಟಲ್ ಮುಖಾಂತರ ದಿನಾಂಕ **04–07–2026**ರ ಸಂಜೆ **4:00** ಗಂಟೆಯೊಳಗಾಗಿ ಸಲ್ಲಿಸತಕ್ಕದ್ದು. (2) ಟೆಂಡರನ್ನು ಯಾವುದೇ ಕಾರಣ ನೀಡದೆ ಸ್ವೀಕರಿಸುವ/ತಿರಸ್ಕರಿಸುವ ಅಥವಾ ರದ್ದುಪಡಿಸುವ ಅಧಿಕಾರದ ಹಕ್ಕನ್ನು ಟೆಂಡರ್ ಅಂಗೀಕಾರ ಪ್ರಾಧಿಕಾರವು ಕಾಯ್ದಿರಿಸಿಕೊಂಡಿದೆ.
ಸಹಿ/– ನಿರ್ದೇಶಕರು
ಟೆಂಡರ್ ಆಹ್ವಾನ ಪ್ರಾಧಿಕಾರ
ಡಿಐಪಿಆರ್/ಎಸ್‌ಐ/1233/2026–27

ಕರ್ನಾಟಕ ಸರ್ಕಾರ
ತಾಲೂಕು ಸಾರ್ವಜನಿಕ ಆಸ್ಪತ್ರೆ, ಕೂಡ್ಲಿಗಿ, ವಿಜಯನಗರ ಜಿಲ್ಲೆ.
ಸಂಖ್ಯೆ:ಸಾಆಹೊ/ಹೊ.ಗು.ಟೆಂಡರು/08/2026–27 ದಿನಾಂಕ: 15/06/2026

ಇ–ಟೆಂಡರ್ ಪ್ರಕಟಣೆ

2026–27 ನೇ ಸಾಲಿಗಾಗಿ ತಾಲೂಕು ಸಾರ್ವಜನಿಕ ಆಸ್ಪತ್ರೆ, ಕೂಡ್ಲಿಗಿಯಲ್ಲಿ ಖಾಲಿ ಇರುವ 25 ಗ್ರೂಪ್ ಡಿ ಮತ್ತು 10 ನಾನ್ ಕ್ಲಿನಿಕ್ ಒಟ್ಟು 10 ಹುದ್ದೆಗಳಿಗೆ ಹೊರಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಲು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ದ್ವಿ–ಲಕೋಟೆ ಪದ್ಧತಿಯಲ್ಲಿ ಅಲ್ಪಾವಧಿ ಮರುಟೆಂಡರನ್ನು ಆಹ್ವಾನಿಸಲಾಗಿದೆ. ಇಚ್ಛೆಯುಳ್ಳ ಹಾಗೂ ಅರ್ಹವುಳ್ಳ ಟೆಂಡರುದಾರರು ನಿಗದಿತ ಸಮಯದೊಳಗೆ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ಟೆಂಡರುಗಳನ್ನು ಸಲ್ಲಿಸಲು ಕೋರಿದೆ.
e-Tender No.: **TGH/TENDER/08 /2026-27.** E-Procurement Tender No: **DHFWS/2026-27/SE2186.** Commencement of downloading of e-Tender forms from website http://kppp.karnataka.gov.in: ದಿನಾಂಕ:16–06–2026 ರಿಂದ 30–06–2026 ರಂದು ಸಂಜೆ 4.30 ಗಂಟೆಯವರೆಗೆ. Last Date for seeking clarification if any: ದಿನಾಂಕ: 29–06–2026 ರಂದು ಬೆಳಗ್ಗೆ 11.00 ಗಂಟೆಯವರೆಗೆ. Last date for uploading of Tender in e-procurement platform: ದಿನಾಂಕ:30–06–2026 ರಂದುಸಂಜೆ4.30 ಗಂಟೆಯವರೆಗೆ. Date, Time & Venue of Opening of Tenders: ದಿನಾಂಕ:02–07–2026 ರಂದು ಬೆಳಗ್ಗೆ11.30 ಗಂಟೆಗೆ, ಮುಖ್ಯವೈದ್ಯಾಧಿಕಾರಿಗಳು, ತಾಲೂಕು ಸಾರ್ವಜನಿಕ ಆಸ್ಪತ್ರೆ, ಕೂಡ್ಲಿಗಿ ಇವರ ಕಛೇರಿಯಲ್ಲಿ ಇ–ಪ್ರೊಕ್ಯೂರ್‌ಮೆಂಟ್ ವೇದಿಕೆ ಮೂಲಕ ತೆರೆಯಲಾಗುವುದು. Tender Value: **Rs.60,00,000/-.** EMD: **Rs.1,20,000/-**
ಇ–ಪ್ರೊಕ್ಯೂರ್‌ಮೆಂಟ್ ನಲ್ಲಿ ನೋಂದಾಯಿಸಿದ ಟೆಂಡರ್‌ದಾರರು ಟೆಂಡರ್ ಪ್ರೊಸೆಸಿಂಗ್ ಶುಲ್ಕ, ಇ.ಎಂ.ಡಿ, ಟೆಂಡರು ಫಾರಂ ಇತ್ಯಾದಿ ವಿವರಗಳಿಗೆ ಕರ್ನಾಟಕ ಸರ್ಕಾರದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್ ಸೈಟ್ **http://kppp.karnataka.gov.in** ಮೂಲಕ ಮಾಹಿತಿ ಪಡೆಯಬಹುದು ಅಥವಾ ಕಛೇರಿಯ ಸಮಯದಲ್ಲಿ ಈ ಕೆಳಗೆ ಸಹಿ ಮಾಡಿದವರನ್ನು ಸಂಪರ್ಕಿಸಲು ಕೋರಲಾಗಿದೆ.
ಸಹಿ/–ಮುಖ್ಯ ವೈದ್ಯಾಧಿಕಾರಿಗಳು
ತಾಲೂಕು ಸಾರ್ವಜನಿಕ ಆಸ್ಪತ್ರೆ ಕೂಡ್ಲಿಗಿ, ವಿಜಯನಗರಜಿಲ್ಲೆ
ವಾ.ಸಾ.ಸಂ.ಇ/ವಿಜಯನಗರ/2026–27/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/148

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ
(ಸಿಐಎನ್: ಯು40109ಕೆಎ1999ಎಸ್‌ಜಿಸಿ025521)
ಸಂ.:ಮುಇಂವಿ/ಟಿಮತ್ತುಪಿ/ಅಇಂ(ವಿ)–1/2026–27/2774-86 ದಿನಾಂಕ:18.06.2026

ಸಂಕ್ಷಿಪ್ತ ಟೆಂಡರ್ ಪ್ರಕಟಣೆ
(ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಮಾತ್ರ)

ಕವಿಪ್ರನಿನಿಯು ಈ ಕೆಳಕಂಡ ವಿಚಾರಣೆ ಸಂಖ್ಯೆ ಮೂಲಕ ಕೆಳಕಂಡ ಕಾಮಗಾರಿಗೆ **ಸಂಪೂರ್ಣ ಟರ್ನ್ ಕೀ ಆಧಾರದ ಮೇಲೆ** ಎಲೆಕ್ಟ್ರಾನಿಕ್ ವಿಧಾನದ ಮೂಲಕ ಬಿಡ್‌ಗಳನ್ನು ಆಹ್ವಾನಿಸಿದೆ:

ವಿಚಾರಣಾ ಸಂಖ್ಯೆ ಮತ್ತು ಕಾಮಗಾರಿಯ ವಿವರ
ಕೆಪಿಟಿಸಿಎಲ್/2026–27/ಯುಸಿ/ವರ್ಕ್_ಇಂಡೆಂಟ್3890
ಬೆಂಗಳೂರು ನಗರ ಜಿಲ್ಲೆ, ಬೆಂಗಳೂರು ಉತ್ತರ ತಾಲ್ಲೂಕಿನಲ್ಲಿರುವ 66/11ಕೆವಿ **ಟೆಲಿಕಾಂ ಲೇಔಟ್ ಉಪಕೇಂದ್ರಕ್ಕೆ ಪರ್ಯಾಯ ಪ್ರಸರಣ ಮಾರ್ಗ ಕಲ್ಪಿಸಲು, 66/11ಕೆವಿ ಚಂದ್ರ ಲೇಔಟ್** ಉಪಕೇಂದ್ರದಿಂದ **2.86 ಕಿಮೀಗಳ** 66ಕೆವಿ, 1000sqmm ಭೂಗತ ಕೇಬಲ್ ಅಳವಡಿಸಿ, 02 ಸಂಖ್ಯೆಯ 66ಕೆವಿ ಟರ್ಮಿನಲ್ ಬೇ ನಿರ್ಮಾಣದ ಕಾಮಗಾರಿ.

ಬಿಡ್‌ಗಳನ್ನು ಎಲೆಕ್ಟ್ರಾನಿಕ್ ಟೆಂಡರಿಂಗ್ ವಿಧಾನದ ಮೂಲಕ ಮಾತ್ರ ಸ್ವೀಕರಿಸಲಾಗುವುದು. ಇ–ಟೆಂಡರಿಂಗ್ ಪ್ರಕ್ರಿಯೆಯಲ್ಲಿ ಭಾಗವಹಿಸುವುದರ ಕುರಿತಾದ ವಿವರಗಳನ್ನು ಕವಿಪ್ರನಿನಿಯ ವೆಬ್‌ಸೈಟ್ **https://kptcl.karnataka.gov.in** ನ ಹೈಪರ್‌ಲಿಂಕ್ "ಇ ಪ್ರೊಕ್ಯೂರ್‌ಮೆಂಟ್ ಕವಿಪ್ರನಿನಿ" ಅಥವಾ **https://kppp.karnataka.gov.in** ನಲ್ಲಿ ಲಾಗಿನ್ ಆಗಿ **ದಿನಾಂಕ 19.06.2026 ರಂದು 15:00 ಗಂಟೆ** ಅಥವಾ ನಂತರದಿಂದ ಪಡೆಯಬಹುದು. **ಬಿಡ್ ಸಲ್ಲಿಕೆಯ ಕೊನೆಯ ದಿನಾಂಕ ಮತ್ತು ಬಿಡ್ ಸಲ್ಲಿಕೆಯ ದಿನಾಂಕವನ್ನು ವಿಸ್ತರಿಸಿದ್ದಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್‌ನಲ್ಲಿ ತಿಳಿಸಲಾಗುವುದು.** ಇದಕ್ಕೆ ಸಂಬಂಧಿಸಿದಂತೆ ಇತರೆ ಹೆಚ್ಚಿನ ಮಾಹಿತಿಗಳು ಬೇಕಾದಲ್ಲಿ ಕೆಳಸಹಿದಾರರ ಕಛೇರಿಯಿಂದ ಕಛೇರಿ ವೇಳೆಯಲ್ಲಿ ಸಂಪರ್ಕಿಸಿ ಪಡೆಯಬಹುದಾಗಿದೆ.
ಬಿಡ್ದುದಾರರು ಬಿಡ್‌ಗಳನ್ನು ಸಲ್ಲಿಸುವ ಕೊನೆಯ ದಿನಾಂಕದ ಮುನ್ನ ಪ್ರಕಟಿಸುವ ಎಲ್ಲಾ ತಿದ್ದುಪಡಿಗಳು / ಸೇರ್ಪಡೆಗಳನ್ನು ಗಮನಿಸತಕ್ಕದ್ದು.
ಸಹಿ/–, ಮುಖ್ಯಇಂಜಿನಿಯರ್ (ವಿದ್ಯುತ್)
ಟೆಂಡರಿಂಗ್ ಮತ್ತು ಪ್ರೊಕ್ಯೂರ್‌ಮೆಂಟ್, ಕವಿಪ್ರನಿನಿ, 9ನೇ ಮಹಡಿ,
ಇಂಧನ ಭವನ, ಆನಂದರಾವ್ ವೃತ್ತ, ಬೆಂಗಳೂರು–560 009.

ಗದಗ–ಬೆಟಗೇರಿ ನಗರಸಭೆ ಕಾರ್ಯಾಲಯ
ಜಿಲ್ಲಾ : ಗದಗ, ರಾಜ್ಯ : ಕರ್ನಾಟಕ, ದೂರವಾಣಿ : 08372–259932
ಇಮೇಲ್ : ka.gadag.betageri.cmc@gmail.com
ಸಂಖ್ಯೆ : ಗ.ಬೆ.ನ.ಸ./ತಾಂ.ವಿ./ವ.ಹಿ./ಟೆಂಡರ್/26–27 ದಿನಾಂಕ : 16–06–2026

ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯ ಪಾರದರ್ಶಕತೆ ಅಧಿನಿಯಮ 1999 – 2000 ರ ಪ್ರಕಾರ ಸ್ಟ್ಯಾಂಡರ್ಡ ಟೆಂಡರ್ ಡಾಕ್ಯೂಮೆಂಟ್ಸ್ ನಿಯಮದನ್ವಯ ಸನ್ **2026–27 ನೇ ಸಾಲಿನ ನಗರಸಭೆ ಅನುದಾನದಲ್ಲಿ ಒಟ್ಟು 04 ಕಾಮಗಾರಿಗಳಿಗೆ ಟೆಂಡರಗಿಟ್ಟ ಮೊತ್ತ ರೂ. 34.44 ಲಕ್ಷಗಳು** ಟೆಂಡರ್ ಆಹ್ವಾನಿಸಿದ್ದು, ಆಸಕ್ತರು ಇ–ಸಂಗ್ರಹಣಾ ವೇದಿಕೆಯಡಿ. **INDENT No. : 1) DMA/2026-27/OW/WORK_INDENT59832, 2) DMA/2026-27/OW/WORK_INDENT59833, 3) DMA/2026-27/OW/WORK_INDENT59834, 4) DMA/2026-27/EL/WORK_INDENT59814,**
ಗಳಿಗೆ **http://kppp.karnataka.gv.in** ರಲ್ಲಿ ಸಂಪರ್ಕಿಸಿ ಟೆಂಡರ್ ಸಲ್ಲಿಸಬಹುದಾಗಿದೆ. ಬಿಡ್‌ದಾರರು ಟೆಂಡರ್ ವಿವರಗಳನ್ನು ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪಡೆದು, ಸಂಬಂಧಿಸಿದ ಇ.ಎಂ.ಡಿ. ಟೆಂಡರ್ ಫೀಗಳನ್ನು ಇಲೆಕ್ಟ್ರಾನಿಕ್ ಪದ್ಧತಿಯಲ್ಲಿ ತುಂಬಿ ಈ ಕೆಳಗೆ ನಿಗಧಿ ಪಡಿಸಿದ ದಿನಾಂಕದೊಳಗಾಗಿ ಟೆಂಡರ್ ಸಲ್ಲಿಸಬಹುದಾಗಿದೆ.
1) ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ : 29–06–2026 ರ ಸಂಜೆ 4.00 ಗಂಟೆಗೆ, 2) ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ ಮತ್ತು ಸಮಯ : 30–06–2026 ರ ಸಂಜೆ 4.30 ಗಂಟೆಗೆ.
ಸದರಿ ಟೆಂಡರ್‌ಗೆ ಸಂಭಂಧಿಸಿದ ದಿನಾಂಕ ಹಾಗೂ ಇತರೆ ಬದಲಾವಣೆಗಳಾದಲ್ಲಿ ಕೆ.ಪಿ.ಪಿ. ಪೋರ್ಟಲ್‌ನಲ್ಲಿ ಪ್ರಕಟಿಸಲಾಗುವುದು, ಪತ್ರಿಕಾ ಪ್ರಕಟಣೆಯಲ್ಲಿ ಪ್ರಕಟಿಸಲಾಗುವುದಿಲ್ಲ.
ಸಹಿ/– ಪೌರಾಯುಕ್ತರು,
ನಗರಸಭೆ ಗದಗ – ಬೆಟಗೇರಿ.
ಡಿಐಪಿಆರ್/ಗದಗ/124/ಮಣಿಪಾಲ್/2026–27

ಫಾರಂ ಜಿ–ಬೆಂಗಳೂರಿನಲ್ಲಿ ಪ್ರಮುಖವಾಗಿ ಪುರುಷರ ಉಡುಪು ತಯಾರಿಕಾ ಕ್ಷೇತ್ರದ ವಾಯ್ ಜೀನ್ಸ್ ರಿಟೈಲ್ ಇಂಡಿಯಾ ಪ್ರೈವೇಟ್ ಲಿಮಿಟಡ್‌ಗೆ ಆಸಕ್ತಿಯ ಅಭಿವ್ಯಕ್ತಿಗೆ (EOI) ಆಹ್ವಾನ
[ಭಾರತೀಯ ದಿವಾಳಿತನ ಮತ್ತು ದಿವಾಳಿ ಘೋಷಣೆ ಮಂಡಲಿ (ಕಾರ್ಪೊರೇಟ್ ವ್ಯಕ್ತಿಗಳಿಗೆ ದಿವಾಳಿತನ ಪರಿಹಾರ ಪ್ರಕ್ರಿಯೆ) ವಿಧಾಯಕಗಳು, 2016ರ ವಿಧಾಯಕ 36ಎ(1)ರ ಅಡಿಯಲ್ಲಿ]

ಸಂಬಂಧಪಟ್ಟ ವಿವರಗಳು		
1.	ಕಾರ್ಪೊರೇಟ್ ಸಾಲಗಾರ ಸಂಸ್ಥೆಯ ಹೆಸರು ಮತ್ತು CIN	ವಾಯ್ ಜೀನ್ಸ್ ರಿಟೈಲ್ ಇಂಡಿಯಾ ಪ್ರೈ.ಲಿ. (CIN: U74999KA2016PTC097331)
2.	ನೋಂದಾಯಿತ ಕಛೇರಿ ವಿಳಾಸ	ನಂ. 5AC-722 & 724, 3ನೇ ಮಹಡಿ, HRBR ಬಡಾವಣೆ, 1ನೇ ಹಂತ, ಬೆಂಗಳೂರು–43
3.	ವೆಬ್‌ಸೈಟ್‌ನ URL	https://www.voijeans.online/
4.	ಬಹುಪಾಲು ಸ್ಥಿರಾಸ್ತಿಯನ್ನು ಹೊಂದಿರುವ ಸ್ಥಳದ ವಿವರಗಳು	ಬೆಂಗಳೂರು, ಕರ್ನಾಟಕ
5.	ಮುಖ್ಯ ಉತ್ಪನ್ನಗಳ ಸ್ಥಾಪಿತ (Installed) ಸಾಮರ್ಥ್ಯ (ವಾರ್ಷಿಕ ಉತ್ಪಾದನೆ ಮೆಟ್ರಿಕ್ ಟನ್‌ಗಳಲ್ಲಿ)	ಅನ್ವಯಿಸುವುದಿಲ್ಲ
6.	ಹಿಂದಿನ ವ್ಯಾ.ವ.ದಲ್ಲಿ ಮಾರಾಟವಾದ ಮುಖ್ಯ ಉತ್ಪನ್ನಗಳು/ ಸೇವೆಗಳ ಪ್ರಮಾಣ ಮತ್ತು ಮೌಲ್ಯ	ವ್ಯಾ.ವ. 2024–25ರಂತೆ, ಕಂಪನಿಯ ವಹಿವಾಟು ₹22.97 ಕೋಟಿ
7.	ಉದ್ಯೋಗಿಗಳ/ಕೆಲಸಗಾರರ ಸಂಖ್ಯೆ	CIRP ಪ್ರಾರಂಭವಾದ ದಿನಾಂಕದಂದು 109 ಉದ್ಯೋಗಿಗಳು ಹಾಜರಾತಿಯಲ್ಲಿದ್ದರು
8.	ಕೊನೆಯ ಎರಡು ವರ್ಷದಲ್ಲಿ ಲಭ್ಯವಿರುವ ಹಣಕಾಸು ಹೇಳಿಕೆಗಳು (ವೇಳಾಪಟ್ಟಿಗಳೊಂದಿಗೆ), ಸಾಲಗಾರರ ಪಟ್ಟಿಗಳು, ಪ್ರಕ್ರಿಯೆಯ ನಂತರದ ಘಟನೆಗಳಿಗೆ ಸಂಬಂಧಿಸಿದ ದಿನಾಂಕಗಳು ಒಳಗೊಂಡಂತೆ ಹೆಚ್ಚಿನ ವಿವರಗಳು ಇಲ್ಲಿ ಲಭ್ಯವಿದೆ:	ಈ ಕೆಳಗಿನ ಇಮೇಲ್ ವಿಳಾಸಕ್ಕೆ ಮಧ್ಯಂತರ ಪರಿಹಾರ ವೃತ್ತಿಪರರಿಗೆ (IRP) ವಿನಂತಿಯನ್ನು ಕಳುಹಿಸಿ ಮಾಹಿತಿಯನ್ನು ಕೋರಬಹುದು: **cirp-voijeans@beleyur.in**
9.	ಸಂಹಿತೆಯ ಕಲಮು 25(2)(ಎಚ್) ಅಡಿಯಲ್ಲಿ ರೆಸಲ್ಯೂಷನ್ ಅಪ್ಲಿಕೆಂಟ್ ಆಗಲು ಇರುವ ಅರ್ಹತೆಗಳನ್ನು ಪಡೆದುಕೊಳ್ಳಲು	ಈ ಕೆಳಗಿನ ಇಮೇಲ್ ವಿಳಾಸಕ್ಕೆ ಮಧ್ಯಂತರ ಪರಿಹಾರ ವೃತ್ತಿಪರರಿಗೆ (IRP) ವಿನಂತಿಯನ್ನು ಕಳುಹಿಸಿ ಮಾಹಿತಿಯನ್ನು ಕೋರಬಹುದು: **cirp-voijeans@beleyur.in**
10.	ಆಸಕ್ತಿಯ ಅಭಿವ್ಯಕ್ತಿಯನ್ನು (EOI) ಸ್ವೀಕರಿಸಲು ಕೊನೆಯ ದಿನಾಂಕ	04–07–2026
11.	ಸಂಭಾವ್ಯ ಪರಿಹಾರದ ಯೋಜನೆಯ ಅಭ್ಯರ್ಥಿಗಳ ಹಂಗಾಮಿ ಪಟ್ಟಿಯನ್ನು ಪ್ರಕಟಿಸುವ ದಿನಾಂಕ	11–07–2026
12.	ಸಂಭಾವ್ಯ ಪಟ್ಟಿಗೆ ಆಕ್ಷೇಪಗಳನ್ನು ಸಲ್ಲಿಸಲು ಕೊನೆಯ ದಿನಾಂಕ	16–07–2026
13.	ಸಂಭಾವ್ಯ ಪರಿಹಾರ ಅರ್ಜಿದಾರರ ಅಂತಿಮ ಪಟ್ಟಿಯ ವಿತರಣೆ ದಿನಾಂಕ	22–07–2026
14.	ಇನ್ಫರ್ಮೇಶನ್ ಮೆಮೊರಂಡಮ್ ಇವ್ಯಾಲ್ಯುಯೇಷನ್ ಮೆಟ್ರಿಕ್ ಮತ್ತು ಪರಿಹಾರ ಯೋಜನೆಗಳ ವಿನಂತಿಗಾಗಿ ನಿರೀಕ್ಷಿತ ಪರಿಹಾರ ಅರ್ಜಿದಾರರಿಗೆ ನೀಡಿದ ದಿನಾಂಕ	23–07–2026
15.	ಪರಿಹಾರ ಯೋಜನೆ ಸಲ್ಲಿಸಲು ಅಂತಿಮ ದಿನಾಂಕ	24–08–2026
16.	ಆಸಕ್ತಿಯ ಅಭಿವ್ಯಕ್ತಿಯನ್ನು (EOI) ಕಳುಹಿಸಲು ಇಮೇಲ್ ವಿಳಾಸ	**cirp-voijeans@beleyur.in**
17.	ಕಾರ್ಪೊರೇಟ್ ಸಾಲಗಾರ ಸಂಸ್ಥೆಯ MSME ನೋಂದಾವಣಿ ಸ್ಥಿತಿ	ಸಣ್ಣ ಉದ್ಯಮದಂತೆ ನೋಂದಾವಣಿಯಾಗಿದೆ UDYAM-KR-03-0187257

ಸಹಿ/– (ರಂಜನಾ ಸಿಂಗ್)
ಮಧ್ಯಂತರ ಪರಿಹಾರ ವೃತ್ತಿಪರರು (Interim Resolution Professional)
CIRP ಅಡಿಯಲ್ಲಿ ವಾಯ್ ಜೀನ್ಸ್ ರಿಟೈಲ್ ಇಂಡಿಯಾ ಪ್ರೈವೇಟ್ ಲಿಮಿಟಡ್
IBBI Reg. No.IBBI/IPA-002/IP-N01181/2021-2022/13968
ದಿನಾಂಕ: 17–06–2026
ಸ್ಥಳ: ಬೆಂಗಳೂರು

ಬೆಂಗಳೂರು ಕೇಂದ್ರ ನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರವರ ಕಛೇರಿ, ಚಿಕ್ಕಪೇಟೆ ವಿಭಾಗ 8ನೇ ಮೇನ್, 2ನೇ ಬ್ಲಾಕ್ ಜಯನಗರ, ಕನಕನಪಾಳ್ಯ, ಬೆಂಗಳೂರು–560011
ಟೆಂಡರ್ ಅಧಿಸೂಚನೆ ನಂ. ಕಾಅ/ಚಿಕ್ಕಪೇಟೆ/ಇ–ಪ್ರೊಕ್ಯೂರ್/02/2026–27 ದಿನಾಂಕ : 17.06.2026

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ
(ದ್ವಿಲಕೋಟೆ ಪದ್ಧತಿ)

(ಕೆಪಿಪಿ ಪೋರ್ಟಲ್ https://kppp.karnataka.gov.in ಮೂಲಕ ಮಾತ್ರ)
ಕಾರ್ಯಪಾಲಕ ಅಭಿಯಂತರರು, (ಚಿಕ್ಕಪೇಟೆ ವಿಭಾಗ), ಬೆಂ.ಕೇ.ನ.ಪಾಲಿಕೆ, ಬೆಂಗಳೂರು ರವರು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಲ್ಲಿ ನೋಂದಾಯಿಸಲ್ಪಟ್ಟ ಅರ್ಹ ಗುತ್ತಿಗೆದಾರರಿಂದ ಅಥವಾ ಸಿಪಿಡಬ್ಲ್ಯೂಡಿ/ ಕೆಪಿಡಬ್ಲ್ಯೂಡಿ/ ರೈಲ್ವೆಗಳು/ಎಂಇಎಸ್/ ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರಿ ಸಂಸ್ಥೆಗಳಲ್ಲಿ ಸಮಾನ ನೋಂದಣಿ ಹೊಂದಿರುವ ಅರ್ಹ ಗುತ್ತಿಗೆದಾರರಿಂದ ಕೆಳಗಿನ ಕೋಷ್ಟಕದಲ್ಲಿ ವಿವರಿಸಲಾದ ಕಾಮಗಾರಿಗಳ ನಿರ್ಮಾಣಕ್ಕಾಗಿ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

ಕ್ರ. ಸಂ.	ಕಾಮಗಾರಿ ವಿವರ
1.	ಚಿಕ್ಕಪೇಟೆ ಕ್ಷೇತ್ರದ ವಿವಿ ಪುರಂ ಉಪವಿಭಾಗದಲ್ಲಿ ರಸ್ತೆಗಳು, ಚರಂಡಿಗಳು, ಆರ್‌ಸಿಸಿ ಪ್ರಮುಖ ಕಲ್ವರ್ಟ್‌ಗಳು, ಮಳೆನೀರು ಚರಂಡಿಗಳು, ಸೇತುವೆಗಳು, ಆರ್‌ಸಿಸಿ ಚರಂಡಿ ಡಾಂಬರೀಕರಣ ಮತ್ತು ಕೆಟ್ಟ ಹಳ್ಳಗಳನ್ನು ಕಾಂಕ್ರೀಟ್ ಮಾಡುವಿಕೆಗಳ ಸಮಗ್ರ ಅಭಿವೃದ್ಧಿ. **ಟೆಂಡರ್‌ಗಿಟ್ಟ ಮೊತ್ತ : ರೂ. 300.00 ಲಕ್ಷಗಳು, ಇಎಂಡಿ : ಇ–ಸಂಗ್ರಹಣೆಯ ಮೂಲಕ ರೂ. 1.00 ಲಕ್ಷ ಮತ್ತು ಬಿಜಿ ಮೂಲಕ ರೂ. 3,50,000/–.**
2.	ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದಲ್ಲಿ ಉದ್ಯಾನವನಗಳ ಆಟದ ಮೈದಾನಗಳು ಮತ್ತು ಕಟ್ಟಡಗಳಿಗೆ ಮಾರ್ಗಗಳನ್ನು ಒದಗಿಸುವ ಮೂಲಕ ಉದ್ಯಾನವನಗಳ ಆಟದ ಮೈದಾನಗಳು ಮತ್ತು ಕಟ್ಟಡಗಳ ಸಮಗ್ರ ಅಭಿವೃದ್ಧಿ, ಅಲಂಕಾರಿಕ ಗ್ರಿಲ್ ಲೈಟಿಂಗ್ ಕೆಲಸಗಳು ಆಟದ ಉಪಕರಣಗಳು ಜಿಮ್ ಉಪಕರಣಗಳು tensile membrance ಮತ್ತು ಇತರ ಸಮತೋಲನ ಕೆಲಸಗಳನ್ನು ಒದಗಿಸುವುದು. **ಟೆಂಡರ್‌ಗಿಟ್ಟ ಮೊತ್ತ : ರೂ. 300.00 ಲಕ್ಷಗಳು, ಇಎಂಡಿ : ಇ–ಸಂಗ್ರಹಣೆಯ ಮೂಲಕ ರೂ. 1.00 ಲಕ್ಷ ಮತ್ತು ಬಿಜಿ ಮೂಲಕ ರೂ. 3,50,000/–.**

ಟೆಂಡರ್‌ನ ಕಾರ್ಯಸೂಚಿ: (1) ಬಿಡ್ ಪೂರ್ವ ಸಭೆಯು ನಡೆಯುವ ದಿನಾಂಕ, ಸಮಯ ಮತ್ತು ಸ್ಥಳ : **20.06.2026 ರಂದು ಮಧ್ಯಾಹ್ನ 15.00 ಗಂಟೆಗೆ** ಮುಖ್ಯ ಅಭಿಯಂತರರು, ವಲಯ–2, ಬೆಂಗಳೂರು ನಗರ ಕೇಂದ್ರ ಪಾಲಿಕೆ, ಅನುಬಂಧ–3, 46ನೇ ಮಹಡಿ, ಜಿಬಿಎ ಕಚೇರಿ ಕಾಂಪೌಂಡ್, ಎನ್ ಆರ್ ಚೌಕ, ಬೆಂಗಳೂರು (2) ಭರ್ತಿ ಮಾಡಿದ ಟೆಂಡರ್ ದಾಖಲೆಯನ್ನು ಅಪ್‌ಲೋಡ್ ಮಾಡಲು ಕೊನೆಯ ದಿನಾಂಕ ಮತ್ತು ಸಮಯ : **24.06.2026 ರಿಂದ 16.00 ರವರೆಗೆ.** (3) ಟೆಂಡರ್‌ಗಳ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ : **25.06.2026 ರಂದು 16.30 ರವರೆಗೆ (4) ಹಣಕಾಸು ಬಿಡ್ ದಿನಾಂಕ ತಾಂತ್ರಿಕ ಬಿಡ್ ಅನುಮೋದನೆಯ ನಂತರ ಟೆಂಡರ್‌ಗಳನ್ನು ತೆರೆಯಲಾಗುತ್ತದೆ.**
ಸಹಿ/– ಕಾರ್ಯಪಾಲಕ ಅಭಿಯಂತರರು, ಚಿಕ್ಕಪೇಟೆ ವಿಭಾಗ, ಬೆಂ.ಕೇಂ.ನ.ಪಾ

"KRISHNA BHAGYA JALA NIGAM LIMITED"
(A GOVT.OF KARNATAKA UNDERTAKING)
ಕಾರ್ಯಾಲಯ ಕಾರ್ಯಪಾಲಕ ಅಭಿಯಂತರರು ಕೃಭಾಜನಿನಿ,
ಆಬದಂಕಾ ವಿಭಾಗ, ಹುನಗುಂದ– 587 118.
Telephone NO. 08351-261110 e-mail : eearbcdivn@gmail.com
ಸಂ:ಕೃಭಾಜನಿ(ನಿ)/ಆಬದಂಕಾ/ವಿಹು/ಡಿಬಿ/2026–27/178 ದಿನಾಂಕ:17–06–2026

ಅಲ್ಪಾವಧಿ ಕೋಟೇಶನ್

ಈ ಕಛೇರಿಯ ಅಧೀನದಲ್ಲಿ ಬರುವ ರಾಮಥಾಳ ಮರೋಳ ಏತ ನೀರಾವರಿ ಯೋಜನೆಯ ಮೊದಲನೇ ಮತ್ತು 2ನೇ ಹಂತದ ಕಾಮಗಾರಿಗಳಿಗೆ ಅಲ್ಪಾವಧಿ ಕೊಟೇಶನ್ ಅಹ್ವಾನಿಸಲಾಗಿದೆ.
1)Major repairs/restoration of Electro-mechanical portion (providing earthing to sub station, Repairs to the diesel generators & overhauling of soft starters/VCB and EOT crane etc) Ramathal LIS stage-1 & 2. 2)Overhauling and Servicing of 6 nos (2+4) of vertical turbine pumps (1st stage motor capacity-1500kw & 2nd stage motor capacity-870kw/1st stage pump discharge-2.624cumecs & 2nd stage pump discharge 1.624cumecs) Ramathal LIS stage-1 & 2. 3)Design, Supply, Installation, Testing and Commissioning of New 1 x 10.00 and 5 MVA 110/6.6 KV step down Power Transformer with Buy Back System of Failed 10.00 and 5 MVA 110/6.6 KV of M/s Andrew make step down Power Transformer as is where is condition at Ramthal marol 1st and 2nd stage headwork with maintenance for a period of 2 years.
ಸದರಿ ಕಾಮಗಾರಿಗಳ ಕುರಿತು ಅಂದಾಜು ಪತ್ರಿಕೆ ತಯಾರಿಸಬೇಕಾಗಿದ್ದು, ಸ್ಥಳ ಪರಿಶೀಲನೆ ಮಾಡಿ ಈಗಿರುವ ಮಾರುಕಟ್ಟೆ ದರ (ಜಿ.ಎಸ್.ಟಿ. ಸಹಿತ)ಗಳನ್ನು ನೀಡಲು ಅಲ್ಪಾವಧಿ ಕೊಟೇಶನ್ ಅಹ್ವಾನಿಸಲಾಗಿದೆ. ಈ ಕಚೇರಿಗೆ ದಿನಾಂಕ: 24.06.2026 ರ ಸಾಯಂಕಾಲ 05.00 ಘಂಟೆಯೊಳಗೆ ಸಲ್ಲಿಸಬಹುದಾಗಿದೆ.
ಐಟಂಗಳ ಮಾಹಿತಿಗಾಗಿ ಹಾಗೂ ಹೆಚ್ಚಿನ ತಾಂತ್ರಿಕ ಮಾಹಿತಿಗಾಗಿ ಕಾರ್ಯಪಾಲಕ ಅಭಿಯಂತರರು ಕೃಭಾಜನಿ(ನಿ), ಆ.ಬ.ದಂ.ಕಾ. ವಿಭಾಗ ಹುನಗುಂದ ಇವರ ಕಛೇರಿಯನ್ನು ಸಂಪರ್ಕಿಸಬಹುದಾಗಿದೆ. ಸದರಿ ಕೊಟೇಶನ್ ಗಳನ್ನು ದಿನಾಂಕ:29.06.2026 ಬೆಳಿಗ್ಗೆ 11.45 ಘಂಟೆಗೆ ಕಾರ್ಯಪಾಲಕ ಅಭಿಯಂತರರು, ಕೃಬಾಜನಿ(ನಿ), ಆ.ಬ.ದಂ. ಕಾಲುವೆ ವಿಭಾಗ, ಹುನಗುಂದ ಕಛೇರಿಯಲ್ಲಿ ತೆರೆಯಲಾಗುವುದು.
ಸಂಪರ್ಕಿಸುವ ಈ–ಮೇಲ್ ವಿಳಾಸ. :eearbcdivn@gmail.com.
ಸಂಪರ್ಕಿಸುವ ದೂರವಾಣಿ ಸಂಖ್ಯೆ:.,M. No. 9741654272
ಸಹಿ/–ಕಾರ್ಯಪಾಲಕ ಅಭಿಯಂತರರು
ಕೃಭಾಜನಿನಿ, ಆಬದಂಕಾ ವಿಭಾಗ, ಹುನಗುಂದ.
DIPR/BGK/RO-NO-100/KSMCA/2026-27

ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ಲಿಮಿಟೆಡ್ B-Smile
ಯೋಜನಾ ಅಭಿಯಂತರರು–01 ರವರ ಕಛೇರಿ,
ನಂ. 30/1, 3ನೇ ಮಹಡಿ, ತಿಮ್ಮಯ್ಯ ರಸ್ತೆ, ಮಿಲ್ಲರ್ ಟ್ಯಾಂಕ್ ಬಂಡ್ ಏರಿಯಾ,
ವಸಂತನಗರ, ಬೆಂಗಳೂರು – 560051.
ಸಂಖ್ಯೆ: ಬಿ–ಸ್ಮೈಲ್/ಯೋಅ–01/ಟೆಂಡರ್/07/2026–27 ದಿನಾಂಕ: 18–06–2026

ಟೆಂಡರ್ ಪ್ರಕಟಣೆಗಾಗಿ ಆಹ್ವಾನ (ಎನ್‌ಐಟಿ) (ಅಲ್ಪಾವಧಿ)–(2ನೇ ಕರೆ)
(ಕೆಡಬ್ಲ್ಯೂ–4 ಅಡಿಯಲ್ಲಿ ಸ್ಪರ್ಧಾತ್ಮಕ ಬಿಡ್ಡಿಂಗ್ ದ್ವಿ–ಲಕೋಟೆ ಪದ್ಧತಿ)
(ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ)

ಯೋಜನಾ ಅಭಿಯಂತರರು–01, ಬಿ–ಸ್ಮೈಲ್, ಗ್ರೇಬೆಂಪ್ರಾ, ಬೆಂಗಳೂರು ಇವರು ಈ ಕೆಳಕಂಡ ಕಾಮಗಾರಿಗಳಿಗಾಗಿ ಸಿಪಿಡಬ್ಲ್ಯೂಡಿ / ಕೆಪಿಡಬ್ಲ್ಯೂಡಿ / ರೈಲ್ವೇಸ್ / ಎಂಇಎಸ್ / ರಾಷ್ಟ್ರೀಯ ಹೆದ್ದಾರಿ ಅಥವಾ ಯಾವುದೇ ರಾಜ್ಯ ಸರ್ಕಾರದ ಸಂಸ್ಥೆಗಳಲ್ಲಿ ನೋಂದಾಯಿಸಿರುವ ಅರ್ಹ ಗುತ್ತಿಗೆದಾರರಿಂದ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
1	ಹೊರ ವರ್ತುಲ ರಸ್ತೆಯ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್. ಪುರಂ ಮೆಟ್ರೋ ನಿಲ್ದಾಣದ ವರೆಗೆ ಜಾಗತಿಕ ಗುಣಮಟ್ಟದ ಸಮಗ್ರ ಅಭಿವೃದ್ಧಿ ಕಾಮಗಾರಿ. **ಪ್ಯಾಕೇಜ್–1: ಸಿಲ್ಕ್ ಬೋರ್ಡ್ ಜಂಕ್ಷನ್ ನಿಂದ ಇಬ್ಬಲೂರು ಜಂಕ್ಷನ್ ವರೆಗೆ. (ಉದ್ದ 5.44 ಕಿ.ಮೀ) – (2ನೇ ಕರೆ) – ಟೆಂಡರಿಗಿಟ್ಟ ಮೊತ್ತ (ರೂ. ಕೋಟಿಗಳಲ್ಲಿ): 81.67 (ಜಿ.ಎಸ್.ಟಿ ಹೊರತುಪಡಿಸಿ), ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): 82.00 (ರೂ. 1.00 ಲಕ್ಷ ಇ–ಪಾವತಿ ಮೂಲಕ ಮತ್ತು ಬಾಕಿ ರೂ. 81.00 ಲಕ್ಷಗಳು ಶ್ಯೂರಿಟಿ ಬಾಂಡ್ / ಇ–ಬ್ಯಾಂಕ್ ಗ್ಯಾರಂಟಿ ಮೂಲಕ ಸಲ್ಲಿಸಬೇಕು)**
2	ಹೊರ ವರ್ತುಲ ರಸ್ತೆಯ ಸಿಲ್ಕ್ ಬೋರ್ಡ್ ಜಂಕ್ಷನ್‌ನಿಂದ ಕೆ.ಆರ್. ಪುರಂ ಮೆಟ್ರೋ ನಿಲ್ದಾಣದ ವರೆಗೆ ಜಾಗತಿಕ ಗುಣಮಟ್ಟದ ಸಮಗ್ರ ಅಭಿವೃದ್ಧಿ ಕಾಮಗಾರಿ. **ಪ್ಯಾಕೇಜ್–2: ಇಬ್ಬಲೂರು ಜಂಕ್ಷನ್ ನಿಂದ ಕೆ.ಆರ್. ಪುರಂ ಮೆಟ್ರೋ ನಿಲ್ದಾಣದ ವರೆಗೆ. (ಉದ್ದ 11.57 ಕಿ.ಮೀ)–(2ನೇ ಕರೆ) – ಟೆಂಡರಿಗಿಟ್ಟ ಮೊತ್ತ (ರೂ. ಕೋಟಿಗಳಲ್ಲಿ): 184.49 (ಜಿ.ಎಸ್.ಟಿ ಹೊರತುಪಡಿಸಿ), ಇ.ಎಂ.ಡಿ ಮೊತ್ತ (ರೂ. ಲಕ್ಷಗಳಲ್ಲಿ): 184.50 (ರೂ. 1.00 ಲಕ್ಷ ಇ–ಪಾವತಿ ಮೂಲಕ ಮತ್ತು ಬಾಕಿ ರೂ. 183.50 ಲಕ್ಷಗಳು ಶ್ಯೂರಿಟಿ ಬಾಂಡ್ / ಇ–ಬ್ಯಾಂಕ್ ಗ್ಯಾರಂಟಿ ಮೂಲಕ ಸಲ್ಲಿಸಬೇಕು)**

ಟೆಂಡರ್ ವೇಳಾಪಟ್ಟಿ: 1) ಟೆಂಡರ್ ಡಾಕ್ಯೂಮೆಂಟ್‌ಗಳನ್ನು ಜಿಓಕೆ ಕರ್ನಾಟಕ ಪಬ್ಲಿಕ್ ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್: **https://kppp.karnataka.gov.in** ನಲ್ಲಿ ದಿನಾಂಕ: **19–06–2026 ರ 17.30 ಗಂಟೆಗೆ** ಡೌನ್‌ಲೋಡ್ ಮಾಡಿಕೊಳ್ಳಬಹುದು. **2)** ಬಿಡ್ ಪೂರ್ವಭಾವಿ ವಿಚಾರಣೆಗಳನ್ನು ಸಲ್ಲಿಸುವ ಕೊನೆಯ ದಿನಾಂಕ ಮತ್ತು ಸಮಯ: **24–06–2026 ರಂದು 13.00 ಗಂಟೆವರೆಗೆ. 3)** ಬಿಡ್ ಪೂರ್ವಭಾವಿ ಸಭೆಯ ದಿನಾಂಕ ಮತ್ತು ಸಮಯ: **25–06–2026 ರಂದು 15.00 ಗಂಟೆಗೆ ನಿರ್ದೇಶಕರು (ಟೆಕ್) ರವರ ಕಛೇರಿ, ಬಿ–ಸ್ಮೈಲ್, ಎನ್.ಆರ್. ಚೌಕ, ಬೆಂಗಳೂರು – 560002 ಇಲ್ಲಿ ನಡೆಯುವುದು. 4)** ಟೆಂಡರ್‌ಗಳನ್ನು ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ: **08–07–2026 ರಂದು 16.00 ಗಂಟೆವರೆಗೆ. 5)** ತಾಂತ್ರಿಕ ಬಿಡ್‌ನ್ನು ತೆರೆಯುವ ದಿನಾಂಕ ಮತ್ತು ಸಮಯ: **09–07–2026 ರಂದು 16.00 ಗಂಟೆಗೆ. 6)** ಆರ್ಥಿಕ ಬಿಡ್‌ನ್ನು ತೆರೆಯುವ ದಿನಾಂಕ: **ತಿಳಿಸಲಾಗುವುದು.** ಹೆಚ್ಚಿನ ವಿವರಗಳನ್ನು ಮೇಲ್ಕಂಡ ಕಛೇರಿಯಿಂದ ಪಡೆಯಬಹುದು.
ಸಹಿ/–
ಯೋಜನಾ ಅಭಿಯಂತರರು–01, ಬಿ–ಸ್ಮೈಲ್, ಗ್ರೇಬೆಂಪ್ರಾ.

ಲೋಕಾಯುಕ್ತ ಕಚೇರಿಗೆ ಮುತ್ತಿಗೆ ಯತ್ನ

ಬಿಟಿಡಿಎ ಭ್ರಷ್ಟಾಚಾರ ತನಿಖೆಗೆ ಆಗ್ರಹಿಸಿ ದಲಿತ ಸಂಘರ್ಷ ಸಮಿತಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ಬಾಗಲಕೋಟೆ: 'ಇಲ್ಲಿನ ಬಾಗಲಕೋಟೆ ಪಟ್ಟಣ ಅಭಿವೃದ್ಧಿ ಪ್ರಾಧಿಕಾರದಲ್ಲಿ (ಬಿಟಿಡಿಎ) ಭ್ರಷ್ಟಾಚಾರ ನಡೆದಿದ್ದು, ಭ್ರಷ್ಟಾಚಾರ ನಿರ್ಮೂಲನಾ ಕಾಯ್ದೆಯಡಿ ಪ್ರಕರಣ ದಾಖಲಿಸಬೇಕು' ಎಂದು ಆಗ್ರಹಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಭೀಮವಾದ) ಸದಸ್ಯರು ಗುರುವಾರ ಲೋಕಾಯುಕ್ತ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು.

ಮುತ್ತಿಗೆ ಹಿನ್ನೆಲೆಯಲ್ಲಿ ಲೋಕಾಯುಕ್ತ ಕಚೇರಿ ಸುತ್ತ–ಮುತ್ತಲಿನ ಪ್ರದೇಶದಲ್ಲಿ ಗುರುವಾರ ಬೆಳಿಗ್ಗೆ 6 ರಿಂದ ಶುಕ್ರವಾರ ಬೆಳಿಗ್ಗೆ 6ರವರೆಗೆ ಬಾಗಲಕೋಟೆ ಉಪವಿಭಾಗಾಧಿಕಾರಿ ಸಂತೋಷ ಜಗಲಾಸರ ನಿಷೇಧಾಜ್ಞೆ ವಿಧಿಸಿದ್ದರು. ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಮಾಡಲಾಗಿತ್ತು.

ಸಮಿತಿ ಮುಖಂಡರು, ಕಾರ್ಯಕರ್ತರು ಬ್ಯಾರಿಕೇಡ್ ದಾಟಿ, ಲೋಕಾಯುಕ್ತ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು. ಪೊಲೀಸರು ಅವರನ್ನು ತಡೆದರು. ಸ್ವಲ್ಪ ಹೊತ್ತಿನ ಬಳಿಕ ಮುಖಂಡರು ಅನುಮತಿ ಪಡೆದು, ಲೋಕಾಯುಕ್ತರ ಕಚೇರಿಗೆ ತೆರಳಿ ಮನವಿ ಸಲ್ಲಿಸಿದರು.

2025ರಲ್ಲಿ ಬಿಟಿಡಿಎ ಅಧಿಕಾರಿಗಳ ವಿರುದ್ಧ ಭ್ರಷ್ಟಾಚಾರ ಕಾಯ್ದೆಯಡಿ ಪ್ರಕರಣ ದಾಖಲಿಸಿಕೊಂಡು ತನಿಖೆ ನಡೆಸುವಂತೆ ಆಗ್ರಹಿಸಿ ಮನವಿ ನೀಡಿದರೂ ಕ್ರಮ ಕೈಗೊಂಡಿಲ್ಲ. ಮನೆ ಕಳೆದುಕೊಂಡ ಹಲವರಿಗೆ ಮನೆಗಳನ್ನು ನೀಡಿಲ್ಲ. ಅವರನ್ನು ಹಲವು ವರ್ಷಗಳಿಂದ ಅಲೆದಾಡಿಸಲಾಗುತ್ತಿದೆ' ಎಂದು ಸಮಿತಿಯ ರಾಜ್ಯ ಸಂಘಟನಾ ಸಂಚಾಲಕ ಪರಶುರಾಮ ನೀಲನಾಯಕ ದೂರಿದರು.

ನವನಗರದ ಯುನಿಟ್ 2ರ ಸೆಕ್ಟರ್ ನಂ.72ರಲ್ಲಿ ಕೋಟ್ಯಂತರ ರೂಪಾಯಿ ಖರ್ಚು ಮಾಡಿ ಸರ್ಕಾರಿ ಶಾಲೆ ಆರಂಭಿಸಲು ಕಟ್ಟಡ ನಿರ್ಮಿಸಲಾಗಿತ್ತು. ಅದನ್ನು ಖಾಸಗಿ ಸಂಸ್ಥೆಯವರಿಗೆ ಕಾನೂನುಬಾಹಿರವಾಗಿ ನೀಡಲಾಗಿದೆ ಎಂದು ಆರೋಪಿಸಿದರು.

ಸಮಿತಿಯ ಪಡಿಯಪ್ಪ ಕಳ್ಳಿಮನಿ, ಶ್ಯಾಮ ಕಾಳೆ, ಸಿದ್ದು ಮಾದರ, ತುಳಜಾರಾಮ, ಅಂಜು ಬಾನು, ಗಾಯತ್ರಿ ಪೂಜಾರಿ ಇದ್ದರು.

ಬಿಟಿಡಿಎ ಭ್ರಷ್ಟಾಚಾರ ತನಿಖೆ ಮಾಡಬೇಕು ಎಂದು ಆಗ್ರಹಿಸಿ ಬುಧವಾರ ಬಾಗಲಕೋಟೆಯಲ್ಲಿ ದಲಿತ ಸಂಘರ್ಷ ಸಮಿತಿ (ಭೀಮವಾದ) ಮುಖಂಡರು ಲೋಕಾಯುಕ್ತ ಕಚೇರಿಗೆ ಮುತ್ತಿಗೆ ಹಾಕಲು ಯತ್ನಿಸಿದರು

ಎಲ್‌ಐಸಿ ಎಫ್‌ಎಚ್‌ಎಲ್‌ಗೆ ದಂಡ

ಪ್ರಜಾವಾಣಿ ವಾರ್ತೆ

ಕಲಬುರಗಿ: ಗೃಹ ಸಾಲ ಪಡೆದ ಗ್ರಾಹಕನ ಪಾನ್ ಕಾರ್ಡ್ ಅನ್ನು ಬೇರೊಂದು ಖಾತೆಗೆ ಲಿಂಕ್ ಮಾಡುವ ಮೂಲಕ ಅವರ ಸಿಬಿಲ್ ಸ್ಕೋರ್ ಕಡಿಮೆಯಾಗಲು ಕಾರಣವಾದ ಎಲ್‌ಐಸಿ ಎಫ್‌ಎಚ್‌ಎಲ್ ಕಂಪನಿಗೆ ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗವು ₹40 ಸಾವಿರ ದಂಡ ವಿಧಿಸಿದೆ.

ನಗರದ ಆನಂದಪ್ರಭು ಕಾಶಪ್ಪಾ ಶೇರಿಕರ ಅವರು 2021ರ ಏಪ್ರಿಲ್ 26ರಂದು ಎಲ್‌ಐಸಿ ಎಫ್‌ಎಚ್‌ಎಲ್ ಕಂಪನಿಯಿಂದ ₹30 ಲಕ್ಷ ಗೃಹಸಾಲ ಪಡೆದಿದ್ದರು. ಎರಡು ವರ್ಷಗಳ ನಂತರ ಕಲಬುರಗಿಯ ಬ್ಯಾಂಕ್ ಆಫ್ ಬರೋಡಾ ಶಾಖೆಯಿಂದ ಸಾಲ ಪಡೆದು, ಗೃಹಸಾಲವನ್ನು ಮರುಪಾವತಿಸಿದ್ದರು. ಸಕಾಲಕ್ಕೆ ಸಾಲ ಮರುಪಾವತಿಸಿದ್ದರೂ ಸಿಬಿಲ್ ಸ್ಕೋರ್ ಏಕೆ ಕಡಿಮೆಯಾಗಿದೆ ಎಂದು ದಾಖಲೆಗಳನ್ನು ಪರಿಶೀಲಿಸಿದಾಗ ಇವರ ಪಾನ್ ಕಾರ್ಡ್ ಬೇರೊಬ್ಬರ ಖಾತೆಗೆ ಜೋಡಣೆಯಾಗಿರುವುದು ಗೊತ್ತಾಯಿತು. ಇದನ್ನು ಸರಿಪಡಿಸಿಕೊಡುವಂತೆ ಮನವಿ ಸಲ್ಲಿಸಿದರೂ ಕಂಪನಿ ಸ್ಪಂದಿಸಲಿಲ್ಲ. ಹೀಗಾಗಿ ಆನಂದಪ್ರಭು ಅವರು ಜೂನ್ 3ರಂದು ಜಿಲ್ಲಾ ಗ್ರಾಹಕರ ಆಯೋಗಕ್ಕೆ ದೂರು ನೀಡಿದ್ದರು.

ವಿಚಾರಣೆ ನಡೆಸಿದ ಆಯೋಗದ ಅಧ್ಯಕ್ಷೆ ಮಾಲತಿ ಗುರಣ್ಣ ಹಾಗೂ ಸದಸ್ಯ ಲೋಕೇಶ ಅವರು, 'ಅರ್ಜಿದಾರರಿಗೆ ಗೃಹ ಸಾಲದ ಬೇಬಾಕಿ ಪ್ರಮಾಣಪತ್ರ ನೀಡಬೇಕು. ಸೇವಾ ನ್ಯೂನತೆಗಾಗಿ ₹25 ಸಾವಿರ ದಂಡ, ಮಾನಸಿಕ ಕಿರುಕುಳ ನೀಡಿದ್ದಕ್ಕಾಗಿ ₹10 ಸಾವಿರ ಹಾಗೂ ದಾವೆ ಖರ್ಚು ₹5 ಸಾವಿರವನ್ನು ಎಲ್‌ಐಸಿ ಎಫ್‌ಎಚ್‌ಎಲ್ ಕಂಪನಿ ನೀಡಬೇಕು. ತಪ್ಪಾಗಿ ಬೇರೊಂದು ಖಾತೆಗೆ ಜೋಡಣೆಯಾದ ಪಾನ್ ಕಾರ್ಡನ್ನು 45 ದಿನಗಳ ಒಳಗೆ ಸರಿಪಡಿಸದಿದ್ದರೆ ಪ್ರತಿ ದಿನ ₹500 ದಂಡವನ್ನು ಗ್ರಾಹಕನಿಗೆ ಕೊಡಬೇಕು' ಎಂದು ಆದೇಶಿಸಿದ್ದಾರೆ.

ಅಡ್ಡಮತ: ಮಿತ್ರರಿಗೆ ಘಾತ

ಒಂದನೇ ಪುಟದಿಂದ...

ಆದರೆ, ಬಿಜೆಪಿ ನಾಯಕರು ಕನಸಿನಲ್ಲೂ ಯೋಚಿಸದ ರೀತಿಯಲ್ಲಿ 11 ಹೆಚ್ಚುವರಿ ಮತಗಳನ್ನು 'ಆಪರೇಷನ್ ಹಸ್ತ'ದ ಮೂಲಕ, ತಮ್ಮ ಪಕ್ಷಕ್ಕೆ ವರ್ಗಾವಣೆ ಮಾಡಿಸುವಲ್ಲಿ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಯಶಸ್ವಿಯಾಗಿದ್ದಾರೆ. ವಿನಯ್ ಕಾರ್ತಿಕ್ ಅವರು ಕಾಂಗ್ರೆಸ್‌ನ ಇತರ ಎಲ್ಲರಿಗಿಂತಲೂ ಅತ್ಯಧಿಕ ಮತಗಳನ್ನು ಪಡೆದು ಅಚ್ಚರಿ ಮೂಡಿಸಿದ್ದಾರೆ.

ತಮ್ಮ ಪಕ್ಷದ ಶಾಸಕರು ಅಡ್ಡ ಮತದಾನ ಮಾಡಬಹುದೆಂಬ ಅಂದಾಜು ಜೆಡಿಎಸ್ ನಾಯಕರಿಗೆ ಇತ್ತು. ಹಾಗಿದ್ದರೂ, ಬಿಜೆಪಿ ನಾಯಕರು ಹಾಗೂ ತಮ್ಮ ಪಕ್ಷದ ಶಾಸಕರ 'ವಿಶ್ವಾಸಾರ್ಹತೆ'ಯನ್ನು ಪರೀಕ್ಷೆಗೊಡ್ಡಲು 'ದಳಪತಿ'ಗಳು ಚುನಾವಣೆಯನ್ನು ಬಳಸಿಕೊಂಡರು. ಯಾರೆಲ್ಲ ಕೈಕೊಟ್ಟರು ಎಂಬುದು ಈಗ ಜೆಡಿಎಸ್‌ಗೆ ಖಚಿತವಾದಂತಿದೆ.

ಮತ ಲೆಕ್ಕಾಚಾರ: ಚಲಾವಣೆಯಾದ ಒಟ್ಟು 222 ಮತಗಳಲ್ಲಿ 1 ಮತ ಅಸಿಂಧುವಾದ ಕಾರಣ, 221 ಮತಗಳನ್ನು ಮಾತ್ರ ಎಣಿಕೆ ಮಾಡಲಾಯಿತು. ಇದರಲ್ಲಿ ಕಾಂಗ್ರೆಸ್ 151, ಬಿಜೆಪಿ 56 ಮತ್ತು ಜೆಡಿಎಸ್ 14 ಮತಗಳನ್ನು ಪಡೆದಿವೆ.

ಕಾಂಗ್ರೆಸ್‌ಗೆ ಅಧಿಕೃತವಾಗಿ 135, 2 ಸಹ ಸದಸ್ಯರು, 1 ಸರ್ವೋದಯ ಕರ್ನಾಟಕ ಹಾಗೂ ಬಿಜೆಪಿಯ ಉಚ್ಚಾಟಿತ ಇಬ್ಬರು ಶಾಸಕರ ಮತಗಳು ಸೇರಿ ಒಟ್ಟು 140 ಮತಗಳಷ್ಟೇ ಬೀಳಬೇಕಿತ್ತು. ಬಿಜೆಪಿಯ ಒಬ್ಬ ಶಾಸಕರ ಮತ ಅಸಿಂಧುವಾಗಿದೆ. ಈ ಲೆಕ್ಕಾಚಾರದ (ಅಸಿಂಧು ಬಿಟ್ಟು) ಪ್ರಕಾರ, ಕಾಂಗ್ರೆಸ್‌ಗೆ 10 ಹೆಚ್ಚುವರಿ ಮತ ಸಿಕ್ಕಂತಾಗುತ್ತದೆ. ಆದರೆ, ಕಾಂಗ್ರೆಸ್‌ಗೆ 11 ಹೆಚ್ಚುವರಿ ಮತ ಸಿಕ್ಕಿರುವುದರಿಂದ ಇನ್ನೂ ಒಂದು ಹೆಚ್ಚುವರಿ ಮತ ಬಿಜೆಪಿಯಿಂದ ಹೋಗಿದೆಯೇ ಅಥವಾ ಜೆಡಿಎಸ್‌ನಿಂದ ಹೋಗಿದೆಯೇ ಎಂಬ ಜಿಜ್ಞಾಸೆಯನ್ನೂ ಹುಟ್ಟುಹಾಕಿದೆ.

ಕಾಂಗ್ರೆಸ್ ಮತ್ತು ಜೆಡಿಎಸ್ ಎರಡೂ ಪಕ್ಷಗಳು ಅಡ್ಡ ಮತದಾನ ಆಗದಿರಲಿ ಎಂಬ ಕಾರಣಕ್ಕೆ ತಮ್ಮ ತಮ್ಮ ಶಾಸಕರನ್ನು ರೆಸಾರ್ಟ್‌ನಲ್ಲಿ ಇರಿಸಿದ್ದವು. ಕಾಂಗ್ರೆಸ್ ಪಕ್ಷ ತನ್ನ ಶಾಸಕರು ಯಾವ ರೀತಿ ಮತದಾನ ಮಾಡಬೇಕು ಎಂಬ ಬಗ್ಗೆ ಅಣಕು ಮತದಾನ ಪ್ರಕ್ರಿಯೆಯನ್ನು ಒಂದಲ್ಲ ಎರಡು ಬಾರಿ ನಡೆಸಿತ್ತು. ತಮ್ಮ ಇಬ್ಬರು ಅಭ್ಯರ್ಥಿಗಳ ಗೆಲುವು ಸುಲಭ ಎಂಬ ಆತ್ಮವಿಶ್ವಾಸದಲ್ಲಿದ್ದ ಬಿಜೆಪಿ ರೆಸಾರ್ಟ್‌ಗೆ ಶಾಸಕರನ್ನು ಕರೆದೊಯ್ಯುವ ಪ್ರಯತ್ನ ಮಾಡಲಿಲ್ಲ. ಬದಲಿಗೆ ಶಾಸಕಾಂಗ ಪಕ್ಷದ ಸಭೆ ನಡೆಸಿ, ಒಗ್ಗಟ್ಟಿನ ಮಂತ್ರ ಜಪಿಸಿತ್ತು. ಆದರೆ, ಅದು ಫಲ ನೀಡಲಿಲ್ಲ.

ಬಿಜೆಪಿ 62 ಶಾಸಕರನ್ನು ಹೊಂದಿದ್ದು, ಉಚ್ಚಾಟಿತ ಬಸನಗೌಡ ಪಾಟೀಲ ಯತ್ನಾಳ ಮತ್ತು ಜನಾರ್ದನ ರೆಡ್ಡಿ ಸೇರಿ ಒಟ್ಟು 64 ಮತಗಳ ಬೀಳಬೇಕಿತ್ತು. ಬಿಜೆಪಿ ತನ್ನ ಇಬ್ಬರು ಅಭ್ಯರ್ಥಿಗಳಿಗೆ ತಲಾ 30 ಹಂಚಿಕೆ ಮಾಡಿ 4 ಮತಗಳನ್ನು ಜೆಡಿಎಸ್‌ಗೆ ಹಂಚಿಕೆ ಮಾಡಿತ್ತು. ಆದರೆ, ರಘು ಕೌಟಿಲ್ಯ ಅವರಿಗೆ 29, ಲಿಂಗರಾಜ ಪಾಟೀಲ ಅವರಿಗೆ 27 ಮತಗಳು ಸಿಕ್ಕಿವೆ. ಅಂದರೆ, ಇಬ್ಬರಿಗೂ ನಿಗದಿತ ಮತಗಳು ಚಲಾವಣೆ ಆಗಿಲ್ಲ. ಒಬ್ಬ ಅಭ್ಯರ್ಥಿಯ ಗೆಲುವಿಗೆ 27.63 ಮತಗಳ ಅಗತ್ಯವಿತ್ತು. ಲಿಂಗರಾಜ ಪಾಟೀಲ ಅವರಿಗೆ ಅದಕ್ಕಿಂತಲೂ ಕಡಿಮೆ ಆಗಿತ್ತು. ಹೀಗಾಗಿ ಎಲಿಮಿನೇಷನ್ ಸುತ್ತಿನಲ್ಲಿ ಪ್ರಯಾಸದ ಗೆಲುವು ಸಾಧಿಸಿದರು. ರಘು ಅವರಿಗೆ ಚಲಾವಣೆಗೊಂಡ ಒಂದು ಮತ ಅಸಿಂಧುಗೊಂಡಿದೆ. ಆದರೆ, ಲಿಂಗರಾಜ ಅವರಿಗೆ ಸಿಗಬೇಕಿದ್ದ 3 ಮತಗಳು ಮತ್ತು ಜೆಡಿಎಸ್‌ಗೆ ಹಂಚಿಕೆ ಮಾಡಿದ್ದ 4 ಮತಗಳು ಏನಾದವು? ಅವು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಬಿದ್ದವೆ ಎಂಬ ಪ್ರಶ್ನೆ ಉದ್ಭವಿಸಿದೆ.

18 ಶಾಸಕರನ್ನು ಹೊಂದಿದ್ದ ಜೆಡಿಎಸ್‌ನ ಅಭ್ಯರ್ಥಿ ಗೋವಿಂದರಾಜ್ ಅವರಿಗೆ 14 ಮತಗಳು ಮಾತ್ರ ಸಿಕ್ಕಿವೆ. ನಾಲ್ಕು ಮತಗಳು ಕಾಂಗ್ರೆಸ್ ಅಭ್ಯರ್ಥಿಗಳಿಗೆ ಚಲಾವಣೆ ಆಗಿವೆ. 'ತನ್ನ ಕಡೆಯಿಂದ ಏಳು ಮತಗಳು ಕಾಂಗ್ರೆಸ್‌ಗೆ ಹೋಗಿಲ್ಲ, ಬಿಜೆಪಿಯಿಂದ ಚಲಾವಣೆ ಆಗಿದೆ' ಎಂದು ಜೆಡಿಎಸ್ ಹೇಳಿಕೊಂಡಿದೆ. 'ವಿಧಾನಪರಿಷತ್ ಚುನಾವಣೆಯಲ್ಲಿ ನಮ್ಮ ಅಭ್ಯರ್ಥಿ ಗೆಲ್ಲುವುದಿಲ್ಲ ಎಂದು ಗೊತ್ತಿದ್ದರೂ, ಶಾಸಕರ ಒಗ್ಗಟ್ಟು ಮತ್ತು ಪಕ್ಷ ನಿಷ್ಠೆಯ ಪರೀಕ್ಷೆಗೆಂದು ಅಭ್ಯರ್ಥಿಯನ್ನು ಕಣಕ್ಕೆ ಇಳಿಸಲಾಗಿದೆ' ಎಂದು ಎಚ್.ಡಿ. ಕುಮಾರಸ್ವಾಮಿ ಹೇಳಿದ್ದರು. ಅಲ್ಲದೇ, ಮಿತ್ರ ಪಕ್ಷ ಬಿಜೆಪಿ ತನ್ನ ಹೆಚ್ಚುವರಿ ಮತಗಳನ್ನು ಎಷ್ಟು ಪರಿಣಾಮಕಾರಿಯಾಗಿ ವರ್ಗಾಯಿಸುತ್ತದೆ ಎಂಬುದನ್ನು ತಿಳಿದುಕೊಳ್ಳುವ ಇಂಗಿತವೂ ಅವರಿಗಿತ್ತು ಎಂದು ಮೂಲಗಳು ಹೇಳಿವೆ.

'ಶಿಸ್ತಿ'ನ ಪಕ್ಷಕ್ಕೆ ಆಘಾತ

ಒಂದನೇ ಪುಟದಿಂದ...

ಆದರೆ, ಪ್ರಧಾನಿ ನರೇಂದ್ರ ಮೋದಿ ಹಾಗೂ ಗೃಹ ಸಚಿವ ಅಮಿತ್ ಶಾ ಅವರು ಪಕ್ಷದ ಮೇಲೆ ಹಿಡಿತ ಸಾಧಿಸಿದ ನಂತರ, ಪಕ್ಷದ 'ವಿಪ್' ಉಲ್ಲಂಘಿಸಿದ ನಿದರ್ಶನಗಳಿರಲಿಲ್ಲ. ದೇಶದ ಹಲವು ರಾಜ್ಯಗಳಲ್ಲಿ ಅನ್ಯ ಪಕ್ಷಗಳ ಸಂಸದರು, ರಾಜ್ಯಸಭಾ ಸದಸ್ಯರು ಬಿಜೆಪಿ ಸೇರುತ್ತಿದ್ದಾರೆ.

ಕರ್ನಾಟಕದಲ್ಲಿ ಇದಕ್ಕೆ ಭಿನ್ನವಾದ ಪರಿಸ್ಥಿತಿ ಸೃಷ್ಟಿಯಾದಂತಿದೆ. ಪರಿಷತ್ ಚುನಾವಣೆಯಲ್ಲಿ ಬಿಜೆಪಿಯ ಲಭ್ಯ ಮತ ಹಾಗೂ ಅಧಿಕೃತ ಅಭ್ಯರ್ಥಿಗಳು ಪಡೆದ ಮತಕ್ಕೆ ಹೋಲಿಸಿದರೆ, ಏಳು ಶಾಸಕರು ಕಾಂಗ್ರೆಸ್ ಅಭ್ಯರ್ಥಿಗೆ ಮತ ಹಾಕಿರುವುದು ಸ್ಪಷ್ಟವಾಗುತ್ತದೆ.

'ಚುನಾವಣಾ ತಂತ್ರಗಾರಿಕೆಯಲ್ಲಿ ನಿಪುಣರಾದ ಡಿ.ಕೆ. ಶಿವಕುಮಾರ್ ಮುಖ್ಯಮಂತ್ರಿಯಾದ ಬಳಿಕ ನಡೆದ ಮೊದಲ ಚುನಾವಣೆ ಇದಾಗಿದ್ದು, ಅನ್ಯರ ಮತ ಸೆಳೆದು, ಎದುರಾಳಿಗೆ ಏಟು ಕೊಡಲು ಅಣಿಯಾಗಿರುವುದನ್ನು ಪ್ರದರ್ಶಿಸಿ ದ್ದಾರೆ. ಪಕ್ಷದ ಶಾಸಕರನ್ನು ಹಿಡಿದಿಟ್ಟುಕೊಳ್ಳಲು ನಾಯಕರು ವಿಫಲರಾಗಿದ್ದಾರೆ. ಮುಂದಿನ ದಿನಗಳಲ್ಲಿ ಶಿವಕುಮಾರ್ ಅವರ ಈ ಮಾದರಿಯ ಹೊಡೆತಗಳನ್ನು ಪಕ್ಷದ ನಾಯಕರು ಹೇಗೆ ಎದುರಿಸಲಿದ್ದಾರೆ ಎಂಬ ಚರ್ಚೆ ಶುರುವಾಗಿದೆ' ಎಂದು ಬಿಜೆಪಿ ನಾಯಕರೊಬ್ಬರು ಹೇಳಿದರು.

ಸ್ಟಾರ್ಟ್‌ಅಪ್ ಜಿನೋಮ್ ಸಂಸ್ಥೆಯ ವರದಿಯಲ್ಲಿ ಉಲ್ಲೇಖ

ಎಐ ಆವಿಷ್ಕಾರ: ಬೆಂಗಳೂರಿಗೆ 2ನೇ ಸ್ಥಾನ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಜಾಗತಿಕ ಮಟ್ಟದಲ್ಲಿ ಗಮನ ಸೆಳೆದ ಕರ್ನಾಟಕ
- ಏರಿಳಿತಗಳ ಹಾದಿಯಲ್ಲಿ ಬೆಂಗಳೂರು ನವೋದ್ಯಮ

ಬೆಂಗಳೂರು: ನವೋದ್ಯಮಗಳ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆಯನ್ನು ಆವಿಷ್ಕರಿಸುವಲ್ಲಿ ಇಡೀ ಏಷ್ಯಾದಲ್ಲೇ ಬೆಂಗಳೂರು 2ನೇ ಸ್ಥಾನ ಗಳಿಸಿದೆ. ನವೋದ್ಯಮ ಕ್ಷೇತ್ರದಲ್ಲಿ ಅತ್ಯುತ್ತಮ ಸಾಧನೆ ಮಾಡಿದ 40 ರಾಷ್ಟ್ರಗಳ ಪಟ್ಟಿಯಲ್ಲಿ ನಗರವು 15ನೇ ಸ್ಥಾನ ಪಡೆದಿದೆ.

ಏಷ್ಯಾ ಖಂಡದ ರಾಷ್ಟ್ರಗಳನ್ನೊಳಗೊಂಡ ಪ್ರಾದೇಶಿಕ ಪಟ್ಟಿಯಲ್ಲಿ 6ನೇ ಸ್ಥಾನ ಗಳಿಸಿದೆ. ದೆಹಲಿ, ಮುಂಬೈ, ಚೆನ್ನೈ, ಪುಣೆ ಮತ್ತು ಹೈದರಾಬಾದ್ –ಈ ಪಟ್ಟಿಯಲ್ಲಿ ಸ್ಥಾನ ಪಡೆದಿರುವ ದೇಶದ ಇತರೆ ನಗರಗಳು.

80ಕ್ಕೂ ಹೆಚ್ಚು ದೇಶಗಳ, ಜಾಗತಿಕ ಮಟ್ಟದ 350ಕ್ಕೂ ಹೆಚ್ಚು ನವೋದ್ಯಮಗಳ ಕುರಿತು ದಶಕಕ್ಕೂ ಹೆಚ್ಚು ಕಾಲದಿಂದ ಅಧ್ಯಯನ ಮಾಡಿ ರುವ ಜಿನೋಮ್ ಸಂಸ್ಥೆಯು ಬಿಡುಗಡೆ ಮಾಡಿರುವ ಜಾಗತಿಕ ನವೋದ್ಯಮಗಳ ಸ್ಥಿತಿ–ಗತಿ (ಜಿಎಸ್‌ಇಆರ್) ವರದಿ–2026ರಲ್ಲಿ ಈ ಅಂಶಗಳುಗಮನಸೆಳೆಯುತ್ತವೆ.

ಪ್ರಿಯಾಂಕ್ ಖರ್ಗೆ

ನವೋದ್ಯಮ ಕ್ಷೇತ್ರದಲ್ಲಿ ತೋರಿರುವ ಕಾರ್ಯದಕ್ಷತೆ, ಹೂಡಿಕೆ, ಮಾರುಕಟ್ಟೆ ಸಾಮರ್ಥ್ಯ, ಪ್ರತಿಭೆ ಮತ್ತು ಅನುಭವ, ಕೃತಕ ಬುದ್ಧಿಮತ್ತೆ ಆಧಾರಿತ ಕ್ಲಸ್ಟರ್, ಸಂಶೋಧನೆ ಮತ್ತು ಅಭಿವೃದ್ಧಿಯ ಅಂಶಗಳಲ್ಲಿ ಕರ್ನಾಟಕವು ತೋರಿರುವ ಸಾಧನೆ ಪರಿಗಣಿಸಿ ಈ ಶ್ರೇಯಾಂಕ ನೀಡಲಾಗಿದೆ.

ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ), ಸ್ಟಾರ್ಟ್ ಅಪ್ ಜಿನೋಮ್ ಸಂಸ್ಥೆಯ ಸಹಭಾಗಿತ್ವದಲ್ಲಿ ಪ್ಯಾರಿಸ್‌ನ ವಿವಾಟೆಕ್‌ನಲ್ಲಿ ಈ ವರದಿಯನ್ನು ಬಿಡುಗಡೆ ಮಾಡಲಾಗಿದೆ.

ನವೋದ್ಯಮಗಳ ಕಾರ್ಯದಕ್ಷತೆಯ ವಿಷಯದಲ್ಲಿ ಬೆಂಗಳೂರು 10ಕ್ಕೆ 10 ಅಂಕಗಳನ್ನು ಗಳಿಸಿದೆ. ಸಂಶೋಧನೆಯನ್ನು ಅಭಿವೃದ್ಧಿಗೆ ಪೂರಕವಾಗಿ ನವೋದ್ಯಮದಲ್ಲಿ ಸಮರ್ಪಕವಾಗಿ ಬಳಸಿಕೊಂಡು ಪೇಟೆಂಟ್‌ಗಳನ್ನು ಅಭಿವೃದ್ಧಿಪಡಿಸುವಲ್ಲಿ 9 ಅಂಕ ಗಳಿಸಿದೆ ಎಂದು ವರದಿ ತಿಳಿಸಿದೆ.

ನವೋದ್ಯಮ ಕ್ಷೇತ್ರದಲ್ಲಿ ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಮತ್ತು ಗಣಿತ ವಿದ್ಯಾರ್ಥಿಗಳನ್ನು ತಲುಪುವಲ್ಲಿ ಪೂರ್ಣಾಂಕ ಪಡೆದಿರುವ ಬೆಂಗಳೂರು, ಮಾನವಿಕ ವಿಜ್ಞಾನ ಆಧರಿಸಿದ ವಿಶ್ವವಿದ್ಯಾಲಯ ಹಾಗೂ ಪದವಿ ಕೋರ್ಸ್‌ಗಳನ್ನು ತಲುಪುವಲ್ಲಿ ಅತಿ ಹಿಂದುಳಿದಿದೆ.

ಇಂಗ್ಲಿಷ್ ಪ್ರಾವೀಣ್ಯದಲ್ಲಿ ಹಿಂದೆ

ಈ ಸಾಧನೆಗಳ ನಡುವೆ, ತಂತ್ರಜ್ಞಾನ ಕ್ಷೇತ್ರದ ಪ್ರತಿಭೆ ಮತ್ತು ಅನುಭವದ ವಿಷಯದಲ್ಲಿ ಬೆಂಗಳೂರಿನ ಸಾಧನೆ ನಿರಾಶಾದಾಯಕವಾಗಿದೆ.

ಪ್ರತಿಭೆ ಮತ್ತು ಅನುಭವದ ವಿಷಯದಲ್ಲಿ 10ಕ್ಕೆ 4 ಅಂಕ ಗಳಿಸಿದೆ. ಇಂಗ್ಲಿಷ್ ಪ್ರಾವೀಣ್ಯತೆ, ನವೋದ್ಯಮಗಳ ಸ್ಥಾಪನೆ–ಖರೀದಿ ವಹಿವಾಟು, ಜಿಟ್ ಹಬ್‌ನಲ್ಲಿ (GitHub) ಹೂಡಿಕೆದಾರರ ಪ್ರಮಾಣ ಹಾಗೂ ನವೋದ್ಯಮಗಳಿಗೆ ಅಗತ್ಯ ಸೌಕರ್ಯ ಒದಗಿಸುವ ವಿಷಯದಲ್ಲಿ ಕೇವಲ 1 ಅಂಕ ಗಳಿಸಿದೆ. ಜಾಗತಿಕ ಮಟ್ಟಕ್ಕೆ ಹೋಲಿಸಿದರೆ, ಸಾಫ್ಟ್‌ವೇರ್ ಎಂಜಿನಿಯರುಗಳ ವೇತನ ಪ್ರಮಾಣ ಕಡಿಮೆಯಾಗಿದೆ. ಜಾಗತಿಕ ಮಾರುಕಟ್ಟೆಯನ್ನು ತಲುಪುವಲ್ಲಿ ಸಾಧಿಸಿದ ದಕ್ಷತೆಯು (7) ಸ್ಥಳೀಯ ಮಾರುಕಟ್ಟೆಯನ್ನು ತಲುಪುವಲ್ಲಿ (4) ಕಡಿಮೆಯಾಗಿದೆ.

> ಸ್ಟಾರ್ಟ್ ಅಪ್ ಜಿನೋಮ್ ನೀಡಿರುವ ಈ ಮನ್ನಣೆಯು ಪ್ರತಿಭೆ, ಸಂಶೋಧನೆ, ಉದ್ಯಮಶೀಲತೆ ಮತ್ತು ಉದಯೋನ್ಮುಖ ತಂತ್ರಜ್ಞಾನಗಳಲ್ಲಿ ನಾವು ನಡೆಸಿರುವ ದೀರ್ಘಕಾಲೀನ ಹೂಡಿಕೆಗಳಿಗೆ ಸಂದ ಗೆಲುವು
> **ಪ್ರಿಯಾಂಕ್ ಖರ್ಗೆ,** ಐಟಿ ಮತ್ತು ಬಿಟಿ ಸಚಿವ

ಅರ್ಚಕ ಸೇರಿ ಐವರು ಅಮಾನತು

ಮೇಲುಕೋಟೆ (ಮಂಡ್ಯ): ಇಲ್ಲಿಯ ಯೋಗಾನರಸಿಂಹಸ್ವಾಮಿ ಬೆಟ್ಟದ ದೇವಾಲಯ ಹುಂಡಿ ಹಣ ಮತ್ತು ಚಿನ್ನಾಭರಣ ಕಳ್ಳತನದ ಶಂಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪ್ರಧಾನ ಅರ್ಚಕ ಸೇರಿದಂತೆ ಐವರನ್ನು ಕರ್ತವ್ಯ ಲೋಪ ಆರೋಪದ ಮೇರೆಗೆ ಅಮಾನತು ಮಾಡಲಾಗಿದೆ.

ಇದೇ ಜ.11ರಂದು ದೇವಾಲಯದಲ್ಲಿ ಸಿಸಿಟಿವಿ ಕ್ಯಾಮೆರಾ ಹಾಗೂ ರಹಸ್ಯ ಕ್ಯಾಮೆರಾದ ಡಿವಿಆರ್ ನಾಶಪಡಿಸಿ ಹುಂಡಿ ಹಣ ಕಳುವು ಮಾಡಲಾಗಿದೆ ಎಂಬ ಶಂಕೆ ವ್ಯಕ್ತವಾಗಿತ್ತು. ದೇವಾಲಯದ ಅರ್ಚಕ, ಪಾರುಪತ್ತೆಗಾರ, ಮಣೆಗಾರ ಹಾಗೂ ಇಬ್ಬರು ಕಾವಲುಗಾರರು ಸೇರಿದಂತೆ ಒಟ್ಟು ಆರು ಸಿಬ್ಬಂದಿ ವಿರುದ್ಧ ದೇವಾಲಯದ ಕಾರ್ಯನಿರ್ವಾಹಕಾಧಿಕಾರಿ ಶೀಲಾ ಮೇಲುಕೋಟೆಯ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಶಾಸಕ ದರ್ಶನ್ ಪುಟ್ಟಣ್ಣಯ್ಯ ನೇತೃತ್ವದಲ್ಲಿ ಬುಧವಾರ ದೇವಾಲಯದ ಆಡಳಿತ ಮಂಡಳಿ ಸಭೆ ನಡೆಸಲಾಗಿತ್ತು. ಘಟನೆ ಸಂಬಂಧ ಜಿಲ್ಲಾಧಿಕಾರಿ ನೇತೃತ್ವದಲ್ಲಿ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವಂತೆ ಸೂಚನೆ ನೀಡಲಾಗಿತ್ತು. ಜಿಲ್ಲಾಧಿಕಾರಿ ಆದೇಶದ ಮೇರೆಗೆ ಆರು ಮಂದಿಯನ್ನು ಅಮಾನತು ಮಾಡಲಾಗಿದೆ. ಈ ಹುದ್ದೆಗಳಿಗೆ ಬೇರೆ ಸಿಬ್ಬಂದಿಯನ್ನು ನೇಮಿಸಿ ಆದೇಶ ಹೊರಡಿಸಲಾಗಿದೆ ಎಂದು ಶೀಲಾ ತಿಳಿಸಿದ್ದಾರೆ.

ಲೋಕಾಯುಕ್ತ ಬಲೆಗೆ ಬಿದ್ದ ಪಿಎಸ್‌ಐ, ಕಾನ್‌ಸ್ಟೆಬಲ್

ಕಲಬುರಗಿ: ಜಿಲ್ಲೆಯ ಯಡ್ರಾಮಿಯ ಪೊಲೀಸ್ ಠಾಣೆ ಎದುರು ಅಕ್ಕಿ ವ್ಯಾಪಾರಿಯಿಂದ ಗುರುವಾರ ₹20 ಸಾವಿರ ಲಂಚ ಪಡೆಯುವಾಗ ಪಿಎಸ್‌ಐ ವಿಶ್ವನಾಥ ಎಂ.ಮುದರಡ್ಡಿ ಹಾಗೂ ಕಾನ್‌ಸ್ಟೆಬಲ್ ಸಿದ್ದಣ್ಣ ಬಿರಾದಾರ ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಬಿದ್ದಿದ್ದಾರೆ.

ವಿಶ್ವನಾಥ

ಯಡ್ರಾಮಿ ಪಟ್ಟಣದ ಅಕ್ಕಿ ವ್ಯಾಪಾರಿ ಆನಂದ ಕುಸ್ತಿ ಅವರಿಂದ ಜೂನ್ 12ರಂದು ಪೊಲೀಸರು ಯುಪಿಐ ಮೂಲಕ ₹20 ಸಾವಿರ ಲಂಚವನ್ನು ಪಡೆದಿದ್ದರು. ಬಳಿಕ ಮತ್ತೆ ₹30 ಸಾವಿರ ನೀಡುವಂತೆ ಬೇಡಿಕೆ ಇಟ್ಟಿದ್ದರು. ₹20 ಸಾವಿರ ನೀಡುವುದಾಗಿ ಹೇಳಿದ್ದ ವ್ಯಾಪಾರಿ, ನಂತರ ಲೋಕಾಯುಕ್ತ ಠಾಣೆಗೆ ದೂರು ನೀಡಿದ್ದರು.

ಗುರುವಾರ ಠಾಣೆ ಎದುರು ಪೊಲೀಸರು ಹಣ ಪಡೆಯುವಾಗ ಲೋಕಾಯುಕ್ತ ಅಧಿಕಾರಿಗಳು ದಾಳಿ ನಡೆಸಿ, ಆರೋಪಿಗಳನ್ನು ವಶಕ್ಕೆ ಪಡೆದಿದ್ದಾರೆ.

ಲೋಕಾಯುಕ್ತ ಎಸ್ಪಿ ಸಿ.ಸಿದ್ದರಾಜು ಮಾರ್ಗದರ್ಶನದಲ್ಲಿ ಲೋಕಾಯುಕ್ತ ಪೊಲೀಸರು ದಾಳಿ ನಡೆಸಿದ್ದಾರೆ.

ಬಾಲಕಿ ಮೇಲೆ ಅತ್ಯಾಚಾರ ಮಲತಂದೆಗೆ 20 ವರ್ಷ ಜೈಲು

ಪ್ರಜಾವಾಣಿ ವಾರ್ತೆ

ಕಲಬುರಗಿ: 13 ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ ಮಲತಂದೆಗೆ ನಗರದ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ (ವಿಶೇಷ ಪೋಕ್ಸೊ) ನ್ಯಾಯಾಲಯವು 20 ವರ್ಷ ಕಠಿಣ ಜೈಲು ಶಿಕ್ಷೆ ಹಾಗೂ ₹25 ಸಾವಿರ ದಂಡ ವಿಧಿಸಿದೆ.

ನಗರದ ಸಬರ್ಬನ್ ಪೊಲೀಸ್ ಠಾಣೆ ವ್ಯಾಪ್ತಿಯ ಬಡಾವಣೆಯೊಂದರಲ್ಲಿ 2025ರ ಜೂನ್ 14ರಂದು ರಾತ್ರಿ ಹೆಂಡತಿ ನಿದ್ರೆ ಮಾಡಿದ ಬಳಿಕ ಮಲತಂದೆಯು ಮಗಳನ್ನು ಬೇರೆ ಕೋಣೆಗೆ ಕರೆದೊಯ್ದು ಅತ್ಯಾಚಾರ ಎಸಗಿದ್ದ. ಹೆಂಡತಿ ಎದ್ದು ನೋಡಿದಾಗ ಮಗಳು ಪತಿಯ ಕೊಠಡಿಯಲ್ಲಿದ್ದಳು. ತಾಯಿ ವಿಚಾರಿಸಿದಾಗ, 'ನೀನು ಇಲ್ಲದ ವೇಳೆ ಮಲತಂದೆ ಐದಾರು ಬಾರಿ ಅತ್ಯಾಚಾರ ಮಾಡಿದ್ದಾನೆ' ಎಂದು ಮಗಳು ತಿಳಿಸಿದ್ದಾಳೆ. ಬಳಿಕ ತಾಯಿಯು ಪತಿಯ ವಿರುದ್ಧ ಸಬರ್ಬನ್ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಪೋಕ್ಸೊ ಕಾಯ್ದೆಯಡಿ ಪ್ರಕರಣ ದಾಖಲಾಗಿತ್ತು.

ತನಿಖೆ ನಡೆಸಿದ ಪೊಲೀಸ್ ಇನ್‌ಸ್ಪೆಕ್ಟರ್ ಸಂತೋಷ ಎಲ್. ತಟ್ಟೆಪಳ್ಳಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು. ವಿಚಾರಣೆ ನಡೆಸಿದ ವಿಶೇಷ ಪೋಕ್ಸೊ ನ್ಯಾಯಾಲಯದ ನ್ಯಾಯಾಧೀಶ ಎಸ್.ಎಲ್. ಚವ್ಹಾಣ್ ಅವರು ಅಪರಾಧಿಗೆ ಶಿಕ್ಷೆ ವಿಧಿಸಿದ್ದಾರೆ. ನೊಂದ ಬಾಲಕಿಗೆ ಕಾನೂನು ಸೇವಾ ಪ್ರಾಧಿಕಾರದಿಂದ ತಿಂಗಳೊಳಗೆ ₹5 ಲಕ್ಷ ಪರಿಹಾರ ನೀಡಬೇಕು ಎಂದು ಆದೇಶಿಸಿದ್ದಾರೆ. ವಿಶೇಷ ಸರ್ಕಾರಿ ಅಭಿಯೋಜಕ ಶಾಂತವೀರ ಬಿ. ತುಪ್ಪದ ವಾದ ಮಂಡಿಸಿದ್ದರು.

'ಹೈಕೋರ್ಟ್‌ನ ಸಂಚಾರಿ ಪೀಠ ಸ್ಥಾಪಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿವಮೊಗ್ಗದಲ್ಲಿ ಹೈಕೋರ್ಟ್‌ನ ಸಂಚಾರಿ ಪೀಠ ಸ್ಥಾಪಿಸು ವಂತೆ ಅಲ್ಲಿನ ವಕೀಲರ ಸಂಘ ಸೇರಿ ವಿವಿಧ ಸಂಘ ಸಂಸ್ಥೆಗಳನ್ನು ಒಳಗೊಂಡ ಹೋರಾಟ ಸಮಿತಿಯು ಆಗ್ರಹಿಸಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಹೋರಾಟ ಸಮಿತಿ ಗೌರವಾಧ್ಯಕ್ಷ ಕೆ.ಬಸಪ್ಪ ಗೌಡ ಹಾಗೂ ಶಿವಮೊಗ್ಗದ ವಕೀಲರ ಸಂಘದ ಅಧ್ಯಕ್ಷ ಜಿ.ಆರ್. ರಾಘವೇಂದ್ರ ಸ್ವಾಮಿ, 'ಮಧ್ಯ ಕರ್ನಾಟಕದ ಜಿಲ್ಲೆಗಳಾದ ಶಿವಮೊಗ್ಗ, ಚಿಕ್ಕಮಗಳೂರು, ದಾವಣಗೆರೆ ಮತ್ತು ಚಿತ್ರದುರ್ಗ ಜಿಲ್ಲೆಯನ್ನು ಒಳಗೊಂಡು ಹೈಕೋರ್ಟ್‌ನ ಸಂಚಾರಿ ಪೀಠವನ್ನು ಸ್ಥಾಪಿಸಬೇಕು. ಈ ಜಿಲ್ಲೆಗಳು ಭೌಗೋಳಿಕವಾಗಿ ಹೊಂದಿಕೊಂಡಿವೆ. ಶಿವಮೊಗ್ಗ ಕೇಂದ್ರಸ್ಥಾನವಾಗಿದೆ' ಎಂದರು.

'ಹೈದರಾಬಾದ್ ಕರ್ನಾಟಕ, ಉತ್ತರ ಕರ್ನಾಟಕ ಭಾಗದಲ್ಲಿ ಸಂಚಾರಿ ಪೀಠವನ್ನು ಸ್ಥಾಪಿಸಲಾಗಿದೆ. ಅದೇ ರೀತಿ, ಮಧ್ಯ ಕರ್ನಾಟಕ ಭಾಗಕ್ಕೂ ಒಂದು ಸಂಚಾರಿ ಪೀಠವನ್ನು ನೀಡಬೇಕು. ಈ ಬಗ್ಗೆ ಈಗಾಗಲೇ ರಾಜ್ಯ ಸರ್ಕಾರ ಹಾಗೂ ಹೈಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಅವರಿಗೆ ಮನವಿ ಸಲ್ಲಿಸಲಾಗಿದೆ. ಮಂಗಳೂರಿನಿಂದಲೂ ಈ ಪೀಠ ಸ್ಥಾಪನೆಗೆ ಬೇಡಿಕೆ ಬರುತ್ತಿದ್ದು, ನಮ್ಮ ಬೇಡಿಕೆ ನ್ಯಾಯಯುತವಾಗಿದೆ. ಸಂಚಾರಿ ಪೀಠ ಸ್ಥಾಪನೆಗೆ ಶಿವಮೊಗ್ಗವನ್ನೇ ಪರಿಗಣಿಸಬೇಕು' ಎಂದು ಒತ್ತಾಯಿಸಿದರು.

22–23ಕ್ಕೆ ಅಂತರರಾಷ್ಟ್ರೀಯ ವಿಚಾರಸಂಕಿರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯದ ನಾಗಮಂಗಲದಲ್ಲಿರುವ ಆದಿಚುಂಚನಗಿರಿ ವಿಶ್ವವಿದ್ಯಾಲಯದ ಆದಿಚುಂಚನಗಿರಿ ಇನ್‌ಸ್ಟಿಟ್ಯೂಟ್ ಆಫ್ ಮಾಲಿಕ್ಯೂಲರ್ ಮೆಡಿಸಿನ್ ಕಾಲೇಜಿನಲ್ಲಿ ಇದೇ 22 ಮತ್ತು 23ರಂದು ಅಂತರರಾಷ್ಟ್ರೀಯ ವಿಚಾರಸಂಕಿರಣ ಹಮ್ಮಿಕೊಂಡಿದೆ.

ಗುರುವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ವಿಶ್ವವಿದ್ಯಾಲಯದ ಕುಲಸಚಿವ ಸಿ.ಕೆ. ಸುಬ್ಬರಾಯ, 'ಕಾಲೇಜಿನ ದಶಮಾನೋತ್ಸವ ಪ್ರಯುಕ್ತ ಈ ವಿಚಾರಸಂಕಿರಣ ಹಮ್ಮಿಕೊಳ್ಳಲಾಗಿದೆ. ಇದೇ 22ರ ಬೆಳಿಗ್ಗೆ 11 ಗಂಟೆಗೆ ವಿವಿಯ ಬಿಜಿಎಸ್ ಸಭಾಂಗಣದಲ್ಲಿ ಉದ್ಘಾಟನಾ ಸಮಾರಂಭ ನಡೆಯಲಿದೆ. 'ಇಂಟರ್ ಡಿಸಿಪ್ಲಿನರಿ ಅಪ್ರೋಚಸ್ ಇನ್ ಹೆಲ್ತ್ ಸೈನ್ಸಸ್ ಫಾರ್ ಟ್ರಾನ್ಸ್‌ಲೇಶನಲ್ ರಿಸರ್ಚ್' ಎಂಬ ವಿಷಯದ ಮೇಲೆ ಈ ವಿಚಾರಸಂಕಿರಣ ನಡೆಯಲಿದೆ. ವಿಶ್ವವಿದ್ಯಾಲಯದ ಕುಲಾಧಿಪತಿ ನಿರ್ಮಲಾನಂದನಾಥ ಸ್ವಾಮೀಜಿ ಅವರು ಅಧ್ಯಕ್ಷತೆ ವಹಿಸುತ್ತಾರೆ. ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು ಸಮಾರಂಭ ಉದ್ಘಾಟಿಸುತ್ತಾರೆ' ಎಂದು ಹೇಳಿದರು.

'ಈ ವಿಚಾರ ಸಂಕಿರಣದಲ್ಲಿ ಜಪಾನ್, ಇಥಿಯೋಪಿಯಾ ಸೇರಿ ವಿವಿಧ ದೇಶಗಳ ವಿಷಯ ತಜ್ಞರು ಸಂಶೋಧನಾ ಪ್ರಬಂಧಗಳನ್ನು ಮಂಡಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

ಕರ್ನಾಟಕ ಗೃಹ ಮಂಡಳಿ
3ನೇ ಮಹಡಿ, ಕಾವೇರಿ ಭವನ, ಬೆಂಗಳೂರು.

ಟೆಂಡರ್ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿಯಲ್ಲಿ ಕರ್ನಾಟಕ ಸಾರ್ವಜನಿಕ ಸಂಗ್ರಹಣಾ ಪೋರ್ಟಲ್ ಮೂಲಕ ಈ ಕೆಳಕಂಡ ಕಾಮಗಾರಿಗೆ ಟೆಂಡರ್‌ನ್ನು ಕರೆಯಲಾಗಿದೆ. ವಿವರಗಳು ಕೆಳಕಂಡಂತಿವೆ.

ಕ್ರ. ಸಂ.	ಕಾಮಗಾರಿಯ ಹೆಸರು	ವರ್ಕ್ ಇಂಡೆಂಟ್ ಮತ್ತು ಐಎಫ್‌ಟಿ ಸಂಖ್ಯೆ	ಟೆಂಡರ್‌ಗಿಟ್ಟ ಮೊತ್ತ	ಬಿಡ್ ಸಲ್ಲಿಸಲು ಕೊನೆಯ ದಿನಾಂಕ ಮತ್ತು ವೇಳೆ
1.	ಕರ್ನಾಟಕ ಗೃಹ ಮಂಡಳಿ ಕಾವೇರಿ ಭವನದ ಹಿಂಭಾಗದಲ್ಲಿ ಶಿಥಿಲಾವಸ್ಥೆಯಲ್ಲಿರುವ ಹಳೆಯ ಕಾರ್ ಶೆಡ್ ಅನ್ನು ತೆರವುಗೊಳಿಸಿ, ಹೊಸದಾಗಿ ಕಾರ್‌ಪಾರ್ಕಿಂಗ್, ಕಛೇರಿ ಕಟ್ಟಡ ನಿರ್ಮಾಣ ಹಾಗೂ ಅಭಿಲೇಖಾಲಯಕ್ಕೆ ಹೆಚ್ಚುವರಿ ಸ್ಥಳಾವಕಾಶಕ್ಕಾಗಿ ಅಗ್ನಿನಿರೋಧಕ ಯಂತ್ರೋಪಕರಣಗಳ ಕಟ್ಟಡದ ಮೊದಲನೇ ಮಹಡಿ ಕಟ್ಟಡ ನಿರ್ಮಾಣ ಕಾಮಗಾರಿ.	Tender Reference Number: KHB/2026-27/BD /WORK_INDENT 759 & IFT No.26/2026-27 Date: 16.06.2026	1,88,96,914/-	30.06.2026 ಸಂಜೆ 4.00 ಗಂಟೆಗೆ
2	ಕರ್ನಾಟಕ ಗೃಹ ಮಂಡಳಿ ಕೇಂದ್ರ ಕಛೇರಿ ಬೆಂಗಳೂರು ಕಾವೇರಿ ಭವನದ ಹಿಂಭಾಗದಲ್ಲಿ ನಿರ್ಮಿಸುತ್ತಿರುವ ಕಾರ್‌ಪಾರ್ಕಿಂಗ್ ಕಟ್ಟಡದಲ್ಲಿ 4ನೇ ಮಹಡಿಯ ನಿರ್ಮಾಣ ಕಾಮಗಾರಿ.	Tender Reference Number: KHB/2026-27/BD /WORK_INDENT 760 & IFT No.27/2026-27 Date: 16.06.2026	1,91,71,027/-	30.06.2026 ಸಂಜೆ 4.00 ಗಂಟೆಗೆ
3	ಕರ್ನಾಟಕ ಗೃಹ ಮಂಡಳಿ ಕಾವೇರಿ ಭವನದ ಹಿಂಭಾಗದಲ್ಲಿ ನಿರ್ಮಿಸುತ್ತಿರುವ ಕಾರ್ ಪಾರ್ಕಿಂಗ್ ಹಾಗೂ ಕಛೇರಿ ಕಟ್ಟಡಕ್ಕೆ ಕಾವೇರಿ ಭವನ ಮುಖ್ಯ ಕಟ್ಟಡದಿಂದ ಸಂಪರ್ಕ ಕಲ್ಪಿಸಲು "CONNECTING BRIDGE' ನಿರ್ಮಾಣ ಹಾಗೂ ಕಾರ್‌ಪಾರ್ಕಿಂಗ್ ಕಟ್ಟಡಕ್ಕೆ ಒಳವಿನ್ಯಾಸ ಕಾಮಗಾರಿ.	Tender Reference Number: KHB/2026-27/BD /WORK_INDENT 761 & IFT No.28/2026-27 Date: 16.06.2026	1,93,26,834/-	30.06.2026 ಸಂಜೆ 4.00 ಗಂಟೆಗೆ

ಕಾಮಗಾರಿಯ ಬಗ್ಗೆ ಹಾಗೂ ಇನ್ನಿತರೆ ವಿವರಗಳಿಗೆ ಈ ಕೆಳಕಂಡ ವಿಳಾಸದಲ್ಲಿ ಕಚೇರಿಯ ವೇಳೆಯಲ್ಲಿ ಪಡೆಯಬಹುದಾಗಿದೆ:
ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ಗೃಹ ಮಂಡಳಿ, ಕಾವೇರಿ ಭವನ, ಬೆಂಗಳೂರು.
ದೂರವಾಣಿ: 080-22273511 Website: https://kppp.karnataka.gov.in

DIPR/CP/YC/1223/2026-27

ಸಹಿ/– ಕಾರ್ಯಪಾಲಕ ಅಭಿಯಂತರರು, ಕಗೃಮಂ, ಬೆಂಗಳೂರು

ಕರ್ನಾಟಕ ಗೃಹ ಮಂಡಳಿ
3ನೇ ಮತ್ತು 4ನೇ ಮಹಡಿ, ಕಾವೇರಿ ಭವನ, ಕೆ.ಜಿ. ರಸ್ತೆ, ಬೆಂಗಳೂರು–560001.

ಸಂಖ್ಯೆ: ಕಗೃಮಂ/ಕಾ/ಹಂಚಿಕೆ/ಲಾಟರಿ/2026–27/66 ದಿನಾಂಕ: 18.06.2026

ಸಾರ್ವಜನಿಕ ಪ್ರಕಟಣೆ

ಕರ್ನಾಟಕ ಗೃಹ ಮಂಡಳಿ ವತಿಯಿಂದ ಚಿಕ್ಕಮಗಳೂರು ಜಿಲ್ಲೆಯ ಮೂಡಿಗೆರೆ ತಾಲ್ಲೂಕು ಮೂಡಿಗೆರೆ ಬಡಾವಣೆಯಲ್ಲಿ ಲಭ್ಯವಿರುವ ವಿವಿಧ ವರ್ಗದ ನಿವೇಶನಗಳನ್ನು ಹಂಚಿಕೆ ಮಾಡುವ ಸಲುವಾಗಿ **ದಿನಾಂಕ: 29.06.2009 ಮತ್ತು 08.09.2017 ರಂದು** ಪತ್ರಿಕಾ ಪ್ರಕಟಣೆ ನೀಡಿ ಸಾರ್ವಜನಿಕರಿಂದ ಅರ್ಜಿಗಳನ್ನು ಆಹ್ವಾನಿಸಿದ್ದು, ಸದರಿ ಪ್ರಕಟಣೆಗೆ ಅನುಗುಣವಾಗಿ ನಿಗಧಿತ ಆರಂಭಿಕ ಠೇವಣಿಯೊಂದಿಗೆ ಅರ್ಜಿ ಸಲ್ಲಿಸಿದ ಅರ್ಜಿದಾರರಿಗೆ ಕರ್ನಾಟಕ ಗೃಹ ಮಂಡಳಿ ಹಂಚಿಕೆ ನಿಯಮಾವಳಿ 1983ರ ನಿಯಮ 6ರ ಅನ್ವಯ ತಾತ್ಕಾಲಿಕ & ಅಂತಿಮ ಅರ್ಹ/ಅನರ್ಹ ಅರ್ಜಿದಾರರ ಪಟ್ಟಿಯನ್ನು ಪ್ರಕಟಿಸಿ ಇ–ಲಾಟರಿ ಮೂಲಕ ಹಂಚಿಕೆ ಮಾಡಲು ಈ ಕೆಳಕಂಡಂತೆ ವೇಳಾಪಟ್ಟಿಯನ್ನು ನಿಗಧಿಪಡಿಸಲಾಗಿದೆ.

ಇ–ಲಾಟರಿ ನಡೆಯುವ ಸ್ಥಳ: ಕರ್ನಾಟಕ ಗೃಹ ಮಂಡಳಿ ಸಭಾಂಗಣ, 4ನೇ ಮಹಡಿ, ಕೇಂದ್ರ ಕಛೇರಿ, ಕಾವೇರಿ ಭವನ, ಕೆ.ಜಿ ರಸ್ತೆ, ಬೆಂಗಳೂರು.

ಬಡಾವಣೆ	ಅರ್ಹ/ಅನರ್ಹ ಅರ್ಜಿದಾರರ ತಾತ್ಕಾಲಿಕ ಪಟ್ಟಿ ಪ್ರಕಟಣೆ ದಿನಾಂಕ	ಆಕ್ಷೇಪಣೆ ಸಲ್ಲಿಸಲು ಕೊನೆಯ ದಿನಾಂಕ	ಅರ್ಹ/ಅನರ್ಹ ಅರ್ಜಿದಾರರ ಅಂತಿಮ ಪಟ್ಟಿ ಪ್ರಕಟಣೆ ದಿನಾಂಕ	ಇ–ಲಾಟರಿ ದಿನಾಂಕ ಮತ್ತು ಸಮಯ	ಮಂಡಳಿಯ ಪ್ರಸ್ತುತ ದರ
ಚಿಕ್ಕಮಗಳೂರು ಜಿಲ್ಲೆ ಮೂಡಿಗೆರೆ	23.06.2026	10.07.2026	16.07.2026	22.07.2026 ಬೆಳಿಗ್ಗೆ 11:00 ಗಂಟೆಗೆ	ರೂ. 1300/–ಗಳು (EWS ನಿವೇಶನಗಳಿಗೆ ರೂ. 650/–)

ವಿಶೇಷ ಸೂಚನೆ:– ಅರ್ಜಿದಾರರ ತಾತ್ಕಾಲಿಕ ಮತ್ತು ಅಂತಿಮ ಅರ್ಹ/ಅನರ್ಹ ಅರ್ಜಿಗಳ ವಿವರಗಳನ್ನು ಮಂಡಳಿಯ ವೆಬ್‌ಸೈಟ್, ಕೇಂದ್ರ ಕಛೇರಿಯ ಸೂಚನಾಫಲಕದಲ್ಲಿ ಹಾಗೂ ಚಿಕ್ಕಮಗಳೂರು ಜಿಲ್ಲಾ ಯೋಜನಾ ಕಛೇರಿಯಲ್ಲಿ ಮೇಲೆ ತಿಳಿಸಿರುವ ಆಯಾ ದಿನಾಂಕಗಳಂದು ಪ್ರಕಟಿಸಲಾಗುವುದು. ಅನರ್ಹ ಅರ್ಜಿದಾರರು ಆಕ್ಷೇಪಣೆ ಸಲ್ಲಿಸಲು ತಿಳಿಸಿರುವ ಕೊನೆಯ ದಿನಾಂಕದೊಳಗೆ ಮಾಹಿತಿ/ದಾಖಲೆಯನ್ನು ಸಲ್ಲಿಸಲು ಕೋರಲಾಗಿದೆ. ಇಲ್ಲವಾದಲ್ಲಿ ತಮ್ಮ ಅರ್ಜಿಗಳನ್ನು ಅಂತಿಮ ಅರ್ಹ ಅರ್ಜಿದಾರರ ಪಟ್ಟಿಗೆ ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಚಿಕ್ಕಮಗಳೂರು ಜಿಲ್ಲಾ ಯೋಜನಾ ಕಛೇರಿ, ಸಹಾಯಕ ಕಂದಾಯ ಅಧಿಕಾರಿ ಮೊಬೈಲ್ ಸಂಖ್ಯೆ: 9972040603, ಹಾಗೂ ಸಹಾಯಕ ಕಾರ್ಯಪಾಲಕ ಅಭಿಯಂತರರು ಮೊಬೈಲ್ ಸಂಖ್ಯೆ: 9945496117 ಅಥವಾ ಕೇಂದ್ರ ಕಛೇರಿ ಹಂಚಿಕೆ ಶಾಖೆಯ ದೂರವಾಣಿ ಸಂಖ್ಯೆ: 080–22273511 Ext:307/309 ಸಂಪರ್ಕಿಸಿ ಮಾಹಿತಿ ಪಡೆಯಬಹುದಾಗಿರುತ್ತದೆ ಹಾಗೂ ಮಂಡಳಿ ವೆಬ್‌ಸೈಟ್ **www.khb.karnataka.gov.in** ಯಿಂದ ಮಾಹಿತಿ ಪಡೆಯಬಹುದು.

ಸಹಿ/– ಗೃಹ ಆಯುಕ್ತರು, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು.

ವಾಸಾಸಂಇ/ವಾಪ್ರ/ಜಿಎ/1219/2026–27

ಮೈಸೂರು ಮಹಾನಗರ ಪಾಲಿಕೆ, ಮೈಸೂರು
ಆಡಳಿತ ವಿಭಾಗ

ನಂ. ಸಿಇಎಸ್‌ಟಿ (4) : ಸಿಆರ್ : 08 : 2026–27 ದಿನಾಂಕ : 16–06–2026

ಅಧಿಸೂಚನೆ

ಕರ್ನಾಟಕ ಮಹಾನಗರ ಪಾಲಿಕೆಗಳು (ಅಧಿಕಾರಿಗಳು ಮತ್ತು ಸಿಬ್ಬಂದಿಗಳ ಸಾಮಾನ್ಯ ನೇಮಕಾತಿ) ನಿಯಮಗಳು, 2011 ರ ರೀತ್ಯಾ ಮೈಸೂರು ಮಹಾನಗರ ಪಾಲಿಕೆಗೆ ಮಂಜೂರಾಗಿರುವ "**ಪೌರಕಾರ್ಮಿಕರ ಹುದ್ದೆ**" ಗಳ ಪೈಕಿ ನೇರ ನೇಮಕಾತಿಯಡಿ ಖಾಲಿ ಇರುವ "**ಪೌರಕಾರ್ಮಿಕ**" ಹುದ್ದೆಗಳಿಗೆ ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ (ರಾಜ್ಯದ ಪಾಲಿಕೆಗಳ ಪೌರಕಾರ್ಮಿಕರ ನೇಮಕಾತಿ) (ವಿಶೇಷ) ನಿಯಮಗಳು 2022 ರ ರೀತ್ಯಾ "**ಪೌರಕಾರ್ಮಿಕ**" ಹುದ್ದೆಗಳನ್ನು ವಿಶೇಷ ನೇಮಕಾತಿ ಮೂಲಕ ಭರ್ತಿ ಮಾಡಲು ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ, ಬೆಂಗಳೂರು ರವರ ಆದೇಶ ಸಂಖ್ಯೆ : 1572124/ಡಿಎಂಎ/ಇಎಸ್‌ಟಿ3/ಜಿಆರ್‌ಪಿಡಿ/5/2024, ದಿನಾಂಕ : 13–01–2026 ರಲ್ಲಿ ಮೈಸೂರು ಮಹಾನಗರ ಪಾಲಿಕೆಗೆ 50 ಪೌರಕಾರ್ಮಿಕರ ಹುದ್ದೆಗಳನ್ನು ಹಂಚಿಕೆ ಮಾಡಿ ಆದೇಶ ಹೊರಡಿಸಿರುತ್ತಾರೆ. ಅದರಂತೆ ಮೈಸೂರು ಮಹಾನಗರ ಪಾಲಿಕೆಯಲ್ಲಿ ದಿನಾಂಕ : 07–08–2017 ರ ಪೂರ್ವದಲ್ಲಿ ನೇಮಕಾತಿ ಹೊಂದಿ ಪ್ರಸ್ತುತ ನೇರ ಪಾವತಿಯಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೌರಕಾರ್ಮಿಕರಿಂದ ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ವಿವರ	ದಿನಾಂಕ	ಅರ್ಜಿ ನಮೂನೆ ಪಡೆಯುವ ವಿಳಾಸ
ಅರ್ಜಿ ಸಲ್ಲಿಸಲು ನಿಗಧಿಪಡಿಸಿರುವ ಪ್ರಾರಂಭಿಕ ದಿನಾಂಕ	22–06–2026	ಮೈಸೂರು ಮಹಾನಗರ ಪಾಲಿಕೆ ಕೇಂದ್ರ ಕಚೇರಿ, ಸಯ್ಯಾಜಿರಾವ್ ರಸ್ತೆ, ಮೈಸೂರು–570004
ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ	21–07–2026	

ನಗರ ಸ್ಥಳೀಯ ಸಂಸ್ಥೆಯ ಹೆಸರು	ಹುದ್ದೆಯ ಹೆಸರು ಹಾಗೂ ವೇತನ ಶ್ರೇಣಿ	ಭರ್ತಿ ಮಾಡಲು ಒಟ್ಟು ಖಾಲಿ ಇರುವ ಹುದ್ದೆಗಳ ಸಂಖ್ಯೆ	ನಿಗಧಿಪಡಿಸಲಾದ ಕನಿಷ್ಠ ವಿದ್ಯಾರ್ಹತೆ / ಅರ್ಹತೆಗಳು
ಮೈಸೂರು ಮಹಾನಗರ ಪಾಲಿಕೆ	ಪೌರಕಾರ್ಮಿಕ (ರೂ. 27000–46675)	50	* ವಿದ್ಯಾರ್ಹತೆ ಅನ್ವಯಿಸುವುದಿಲ್ಲ. * ಕನ್ನಡ ಮಾತನಾಡಲು ಬಲ್ಲವರಾಗಿರಬೇಕು. * ಮೈಸೂರು ಮಹಾನಗರ ಪಾಲಿಕೆಯಲ್ಲಿ ದಿನಾಂಕ : 07–08–2017 ರ ಪೂರ್ವದಲ್ಲಿ ನೇಮಕಾತಿ ಹೊಂದಿ ಪ್ರಸ್ತುತ ನೇರಪಾವತಿಯುಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪೌರಕಾರ್ಮಿಕರು ಮಾತ್ರ ಅರ್ಹರಿರುತ್ತಾರೆ. * ಅರ್ಜಿ ಸಲ್ಲಿಸಲು ಸರ್ಕಾರ ಅಧಿಸೂಚನೆ ಹೊರಡಿಸಿದ ದಿನಾಂಕಕ್ಕೆ 18 ವರ್ಷ ಪೂರ್ಣಗೊಂಡಿದ್ದು, ಗರಿಷ್ಠ ವಯೋಮಿತಿ 55 ವರ್ಷ.

ಮೈಸೂರು ಮಹಾನಗರ ಪಾಲಿಕೆಯಲ್ಲಿ ನೇರ ನೇಮಕಾತಿಯಡಿ ಖಾಲಿ ಇರುವ ಪೌರಕಾರ್ಮಿಕರ ಹುದ್ದೆಗಳನ್ನು ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಇಲಾಖೆಯು ಹೊರಡಿಸಿರುವ ಆದೇಶ ಸಂಖ್ಯೆ ಸಿಆಸುಇ : 02 : ಸೆಹಿಮ : 2023, ಬೆಂಗಳೂರು, ದಿನಾಂಕ : 08–03–2023 ರನ್ವಯ ಸಮತಳ ಮೀಸಲಾತಿಯನ್ನು ಹಾಗೂ ಸರ್ಕಾರದ ಆದೇಶ ಸಂಖ್ಯೆ : ಸಿಆಸುಇ : 02 : ಸೆಹಿಮ : 2026, ದಿನಾಂಕ : 13–05–2026 ರನ್ವಯ ಲಂಬ ಹಾಗೂ ಒಳ ಮೀಸಲಾತಿ ಅನುಸರಿಸಿ ರೋಸ್ಟರ್ ಬಿಂದುಗಳನ್ನು ವರ್ಗೀಕರಿಸಿರುವ ವಿವರ ಈ ಕೆಳಕಂಡಂತಿದೆ.

ಮೀಸಲಾತಿ		ಇತರೆ	ಮಹಿಳೆ	ಗ್ರಾಮೀಣ	ಮಾ.ಸೈ.	ಯೋ.ನಿ.	ಕ.ಮಾ.ಅ.	ಅಂ.ವಿ.	ತೃ.ಲಿಂ.	ಒಟ್ಟು
ಪ.ಜಾ.	ಪ್ರ. ಎ	02	–	01	–	–	–	–	–	03
	ಪ್ರ. ಬಿ	01	–	02	–	–	–	–	–	03
	ಪ್ರ. ಸಿ	–	01	01	–	–	–	–	–	02
ಪ.ಪಂ.		01	–	01	–	–	–	–	–	02
ಪ್ರ.–1		01	01	–	–	–	–	–	–	02
ಪ್ರ–2(ಎ)		02	02	02	–	01	–	–	–	07
ಪ್ರ–2(ಬಿ)		–	02	–	–	–	–	–	–	02
ಪ್ರ–3(ಎ)		01	–	–	–	01	–	–	–	02
ಪ್ರ–3(ಬಿ)		–	–	01	–	–	–	–	01	02
ಸಾ.ಅ.		–	10	05	05	–	02	03	–	25
ಒಟ್ಟು		08	16	13	05	02	02	03	01	50

ಅಧಿಸೂಚನೆಯ ಪ್ರತಿಯನ್ನು ಹಾಗೂ ನಿಗಧಿತ ಅರ್ಜಿ ನಮೂನೆಯನ್ನು ಮೈಸೂರು ಮಹಾನಗರ ಪಾಲಿಕೆಯ ಕೇಂದ್ರ ಕಛೇರಿಯಿಂದ ಪಡೆದು, ತಮಗೆ ಅನ್ವಯಿಸುವ ಎಲ್ಲಾ ಅಂಕಣಗಳನ್ನು ಭರ್ತಿ ಮಾಡುವುದು. ಅಭ್ಯರ್ಥಿಯು ತನ್ನ ಇತ್ತೀಚಿನ ಪಾಸ್‌ಪೋರ್ಟ್ ಅಳತೆಯ ಭಾವಚಿತ್ರವನ್ನು ಅರ್ಜಿಯ ಮೇಲೆ ಅಂಟಿಸಿ, ಅದರ ಮೇಲೆ ಸಹಿ ಅಥವಾ ಎಡಗೈ ಹೆಬ್ಬೆಟ್ಟಿನ ಗುರುತು ಮಾಡುವುದು ಹಾಗೂ ಅರ್ಜಿಯ ನಮೂನೆಯ ಕೊನೆಯಲ್ಲಿ ಘೋಷಣೆಯ ನಂತರ ಸಹಿ/ಹೆಬ್ಬೆಟ್ಟಿನ ಗುರುತು ಮಾಡುವುದು. ಹುದ್ದೆಗೆ ಸಂಬಂಧಿಸಿದ ವಿದ್ಯಾರ್ಹತೆ, ವಯಸ್ಸು ಮತ್ತು ಕೋರಿರುವ ಮೀಸಲಾತಿಗೆ ಸಂಬಂಧಿಸಿದಂತೆ ಪ್ರಮಾಣ ಪತ್ರಗಳನ್ನು ಸಕ್ಷಮ ಪ್ರಾಧಿಕಾರಿಗಳಿಂದ ಪಡೆದು, ಅವುಗಳ ನಕಲು ಪ್ರತಿಗಳನ್ನು ಸಂಬಂಧಪಟ್ಟ ಶಾಖಾ ಮುಖ್ಯಸ್ಥರಿಂದ ದೃಢೀಕರಿಸಿ ಅರ್ಜಿಯೊಂದಿಗೆ ಲಗತ್ತಿಸಿ ಅರ್ಜಿಯನ್ನು ಅಧ್ಯಕ್ಷರು, ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ ಹಾಗೂ ಆಯುಕ್ತರು ಮೈಸೂರು ಮಹಾನಗರ ಪಾಲಿಕೆ ಮೈಸೂರು ಇವರಿಗೆ ದಿನಾಂಕ : 21–07–2026 ರ ಸಂಜೆ 5–30 ಗಂಟೆಯೊಳಗೆ ನೇರವಾಗಿ ಸಲ್ಲಿಸಿ ಸ್ವೀಕೃತಿ ಪಡೆಯತಕ್ಕದ್ದು. ಅಂಚೆ ಮೂಲಕ ಅಥವಾ ಪ್ರತ್ಯೇಕವಾಗಿ ಸಲ್ಲಿಸಲು ಅವಕಾಶವಿರುವುದಿಲ್ಲ. ಅವಧಿ / ಸಮಯ ಮೀರಿ ಬಂದ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಸೂಚನೆ : ನೇಮಕಾತಿಗೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿಯನ್ನು ಪಾಲಿಕೆ ವೆಬ್‌ಸೈಟ್ http://www.mysurucity.mrc.gov.in ಅಥವಾ ಮೈಸೂರು ಮಹಾನಗರ ಪಾಲಿಕೆ ಕೇಂದ್ರ ಕಚೇರಿಯಿಂದ ಪಡೆಯಬಹುದಾಗಿದೆ.

ಸ್ಥಳ : ಮೈಸೂರು
ದಿನಾಂಕ : 16–06–2026

ಸಹಿ/– ಅಧ್ಯಕ್ಷರು
ಆಯ್ಕೆ ಮತ್ತು ನೇರ ನೇಮಕಾತಿ ಪ್ರಾಧಿಕಾರ ಹಾಗೂ ಆಯುಕ್ತರು
ಮೈಸೂರು ಮಹಾನಗರ ಪಾಲಿಕೆ, ಮೈಸೂರು

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ನಮ್ಮ ಬದುಕು ದೊಡ್ಡದಾಗದೆ ನಮ್ಮ ಸಾಹಿತ್ಯ ಎಂದೂ ದೊಡ್ಡದಾಗದು.

-ಶಿವರಾಮ ಕಾರಂತ

ಸಂಪಾದಕೀಯ

ಎನ್‌ಟಿಎ ಲೋಪ, ಟೆಲಿಗ್ರಾಮ್‌ಗೆ ಬರೆ ಮಾಧ್ಯಮ–ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಪೆಟ್ಟು

ನೀಟ್–ಯುಜಿ 2026 ಮರುಪರೀಕ್ಷೆ ಹಿನ್ನೆಲೆಯಲ್ಲಿ ‘ಟೆಲಿಗ್ರಾಮ್’ ಮೆಸೇಜಿಂಗ್ ಆ್ಯಪ್ ಬಳಕೆಯನ್ನು ಜೂನ್ 22ರವರೆಗೆ ನಿರ್ಬಂಧಿಸಿರುವ ಕೇಂದ್ರ ಸರ್ಕಾರದ ಕ್ರಮ ಪೂರ್ವಗ್ರಹದಿಂದ ಕೂಡಿದೆ ಹಾಗೂ ವಿವೇಚನಾರಹಿತವಾದ ನಿರ್ಧಾರವಾಗಿದೆ. ಜೂನ್ 21ರಂದು ಪರೀಕ್ಷೆ ನಡೆಯಲಿದ್ದು, ವಂಚನೆ ಜಾಲಕ್ಕೆ ಕಡಿವಾಣ ಹಾಕುವ ಹಾಗೂ ಸುಳ್ಳು ಸುದ್ದಿಗಳನ್ನು ತಡೆಗಟ್ಟುವ ಉದ್ದೇಶದಿಂದ ಜೂನ್ 22ರವರೆಗೂ ಆ್ಯಪ್ ಬಳಕೆಯನ್ನು ನಿರ್ಬಂಧಿಸಿ ಸರ್ಕಾರ ಆದೇಶ ಹೊರಡಿಸಿದೆ. ಮೇ 3ರಂದು ‘ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ’ (ಎನ್‌ಟಿಎ) ನಡೆಸಿದ ‘ನೀಟ್–ಯುಜಿ’ ಪರೀಕ್ಷೆಯಲ್ಲಿ ಪ್ರಶ್ನೆಪತ್ರಿಕೆ ಸೋರಿಕೆಯಾಗಿತ್ತು. ಮುಕ್ತ ಹಾಗೂ ನ್ಯಾಯಬದ್ಧ ಪರೀಕ್ಷೆ ನಡೆಸುವ ಹೊಣೆಗಾರಿಕೆ ನಿರ್ವಹಿಸುವಲ್ಲಿ ಎನ್‌ಟಿಎ ವಿಫಲವಾಗಿದ್ದು, ಆ ವೈಫಲ್ಯದಿಂದ ಜನರ ಗಮನವನ್ನು ಬೇರೆಡೆ ಸೆಳೆಯುವ ಪ್ರಯತ್ನದ ರೂಪದಲ್ಲಿ ಆ್ಯಪ್ ನಿರ್ಬಂಧದ ಕ್ರಮವನ್ನು ನೋಡಬಹುದಾಗಿದೆ. ಈಗಾಗಲೇ ಪೋಸ್ಟ್ ಮಾಡಿರುವ ಸಂದೇಶಗಳನ್ನು ಎಡಿಟ್ ಮಾಡುವ ಅವಕಾಶವನ್ನು ಭಾರತದಲ್ಲಿ ಜೂನ್ 30ರವರೆಗೆ ನಿಷ್ಕ್ರಿಯಗೊಳಿಸುವಂತೆ ಟೆಲಿಗ್ರಾಮ್ ಸಂಸ್ಥೆಗೆ ಸರ್ಕಾರ ನಿರ್ದೇಶಿಸಿದೆ. ಟೆಲಿಗ್ರಾಮ್ ಆ್ಯಪ್ ಮೂಲಕ ಪ್ರಶ್ನೆಪತ್ರಿಕೆ ಸೋರಿಕೆ ಆಗಿರುವ ಅನುಮಾನ ತನಿಖೆಯಲ್ಲಿ ವ್ಯಕ್ತವಾಗಿದ್ದು, ಮತ್ತೊಮ್ಮೆ ಅಂಥ ಅಚಾತುರ್ಯ ಸಂಭವಿಸುವುದನ್ನು ತಡೆಗಟ್ಟುವ ಮುನ್ನೆಚ್ಚರಿಕೆಯ ರೂಪದಲ್ಲಿ ಸರ್ಕಾರ ನಿರ್ಬಂಧದ ಕ್ರಮ ಕೈಗೊಂಡಂತಿದೆ. ಆದರೆ, ಸರ್ಕಾರದ ಕ್ರಮವು ಸಂದೇಶವಾಹಕವನ್ನೇ ಬಲಿಪಶು ಮಾಡುವಂತಿದ್ದು, ‘ಎನ್‌ಟಿಎ’ ವೈಫಲ್ಯವನ್ನು ಬೇರೆಯವರ ತಲೆಗೆ ಕಟ್ಟುವ ಹುನ್ನಾರದಂತಿದೆ; ಸಮಾಜ ಘಾತುಕ ಶಕ್ತಿಗಳು ಬಳಸಬಹುದೆನ್ನುವ ಅನುಮಾನದಲ್ಲಿ ಸಾರ್ವಜನಿಕ ಸಾರಿಗೆಯನ್ನೇ ನಿರ್ಬಂಧಿಸುವ ಪ್ರಹಸನದಂತಿದೆ.

ಟೆಲಿಗ್ರಾಮ್ ಆ್ಯಪ್‌ಗೆ ಸರ್ಕಾರ ವಿಧಿಸಿರುವ ನಿರ್ಬಂಧ, ಪ್ರಶ್ನೆಪತ್ರಿಕೆ ಸೋರಿಕೆಯ ಹೊಣೆ ಹೊರಬೇಕಾದವರನ್ನು ರಕ್ಷಿಸುವ ಪ್ರಯತ್ನದಂತಿದೆ ಹಾಗೂ ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ವಿರುದ್ಧವಾಗಿದೆ.

ಪ್ರಶ್ನೆಪತ್ರಿಕೆ ಸೋರಿಕೆ ಸಮಸ್ಯೆಯು ತಂತ್ರಜ್ಞಾನಕ್ಕೆ ಸಂಬಂಧಿಸಿದ್ದಾಗಿರಲಿಲ್ಲ. ಅದು ಮಾಹಿತಿ ಪ್ರಸಾರ ಮತ್ತು ವಿತರಣೆ ಕುರಿತಾದ ತೊಡಕೂ ಆಗಿರಲಿಲ್ಲ. ಆಡಳಿತಾತ್ಮಕ ವೈಫಲ್ಯದ ಫಲವಾದ ಪ್ರಶ್ನೆಪತ್ರಿಕೆ ಸೋರಿಕೆಯು, ಪರೀಕ್ಷೆ ನಡೆಸಿದ ‘ಎನ್‌ಟಿಎ’ ವೈಫಲ್ಯ, ಅದಕ್ಷತೆ ಹಾಗೂ ನಿರ್ಲಕ್ಷ್ಯವನ್ನು ಬೆಳಕಿಗೆ ತಂದಿದೆ. ಈ ಗುರುತರ ವೈಫಲ್ಯದ ಹೊಣೆಗಾರಿಕೆಯನ್ನು ನಿಗದಿಪಡಿಸುವ ನಿಟ್ಟಿನಲ್ಲಿ ಸರ್ಕಾರ ಯಾವುದೇ ಮಹತ್ವದ ಕ್ರಮ ಕೈಗೊಂಡಿಲ್ಲ. ಪರೀಕ್ಷಾ ಏಜೆನ್ಸಿಯ ಉನ್ನತ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. ಆದರೆ, ವರ್ಗಾವಣೆಯು ಯಾವುದೇ ಲೋಪಕ್ಕೆ ದಂಡನೆಯಾಗುವುದಿಲ್ಲ. ನೀಟ್ ಮತ್ತು ಇತರ ಪರೀಕ್ಷೆಗಳ ನಿರ್ವಹಣೆಯ ಹೊಣೆಗಾರಿಕೆ ಹೊತ್ತಿರುವ ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಅವರು ಘಟನೆಯ ನೈತಿಕ ಹೊಣೆ ಹೊರದೆ, ತಮ್ಮ ಹುದ್ದೆಯಲ್ಲಿ ಮುಂದುವರಿದಿದ್ದಾರೆ.

‘ಟೆಲಿಗ್ರಾಮ್’ ನಿರ್ಬಂಧಿಸಲು ಸರ್ಕಾರ ‘ಮಾಹಿತಿ ತಂತ್ರಜ್ಞಾನ ಕಾಯ್ದೆ–2000, ಸೆಕ್ಷನ್ 69ಎ’ ಬಳಸಿಕೊಂಡಿದೆ. ಈ ಕಾಯ್ದೆಯು, ದೇಶದ ಸಾರ್ವಭೌಮತ್ವ, ಅಖಂಡತೆ ಮತ್ತು ಸುರಕ್ಷತೆಗೆ ಬೆದರಿಕೆ ಉಂಟಾದ ಸಂದರ್ಭದಲ್ಲಿ ಹಾಗೂ ಶಿಕ್ಷಾರ್ಹ ಅಪರಾಧಗಳಿಗೆ ಪ್ರಚೋದನೆ ನೀಡುವುದನ್ನು ತಡೆಯುವ ನಿಟ್ಟಿನಲ್ಲಿ ಕ್ರಮ ಕೈಗೊಳ್ಳಲು ಅವಕಾಶ ಕಲ್ಪಿಸುತ್ತದೆ. ಈ ಕಾಯ್ದೆಯ ಆಧಾರದಲ್ಲಿ ಟೆಲಿಗ್ರಾಮ್ ವಿರುದ್ಧ ಕೈಗೊಂಡಿರುವ ಕ್ರಮವನ್ನು ಸಮರ್ಥಿಸಿಕೊಳ್ಳುವುದು ಕಷ್ಟ. ಸಮರ್ಪಕ ಕಾರಣಗಳನ್ನು ನೀಡದೆ, ಸಾಮಾಜಿಕ ಮಾಧ್ಯಮಗಳ ವಿರುದ್ಧ ಸರ್ಕಾರ ಬೇಕಾಬಿಟ್ಟಿ ಕ್ರಮ ಕೈಗೊಳ್ಳುತ್ತಿರುವಂತಿದೆ. ನಂಬಲರ್ಹ ಕಾರಣಗಳಿಲ್ಲದೆಯೂ ದೇಶದ ಕೆಲವು ಪ್ರದೇಶಗಳಲ್ಲಿ ಇಂಟರ್ನೆಟ್ ಸೇವೆಯನ್ನು ಸರ್ಕಾರ ಸ್ಥಗಿತಗೊಳಿಸಿರುವ ಉದಾಹರಣೆಗಳಿವೆ. ಈ ಮೂಲಕ, ಇಂಟರ್ನೆಟ್ ಸ್ಥಗಿತಗೊಳಿಸುವಲ್ಲಿ ಜಗತ್ತಿನಲ್ಲೇ ಮುಂಚೂಣಿಯಲ್ಲಿರುವ ದೇಶ ಎನ್ನುವ ಸಂಶಯಾಸ್ಪದ ಕುಖ್ಯಾತಿ ಭಾರತಕ್ಕೆ ದೊರೆಯುವಂತಾಗಿದೆ. ಟೆಲಿಗ್ರಾಮ್ ವಿರುದ್ಧದ ಕ್ರಮವನ್ನು ‘ಇಂಟರ್ನೆಟ್ ಫ್ರೀಡಮ್ ಫೌಂಡೇಶನ್’ ಹಾಗೂ ಇತರ ಡಿಜಿಟಲ್ ಹಕ್ಕುಗಳ ಸಂಘಟನೆಗಳು ಅಸಾಂವಿಧಾನಿಕ ಹಾಗೂ ಅತಿರೇಕದ ಕ್ರಮ ಎಂದು ಟೀಕಿಸಿವೆ. ಸರ್ಕಾರದ ಕ್ರಮವನ್ನು ಪ್ರಶ್ನಿಸಿ ಕೋರ್ಟ್ ಮೊರೆ ಹೋಗಿರುವ ‘ಟೆಲಿಗ್ರಾಮ್’, ಸಂವಿಧಾನ ನೀಡಿರುವ ಅಭಿವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆಯನ್ನು ನಿರ್ಬಂಧವು ಗಾಸಿಗೊಳಿಸುತ್ತದೆ ಎಂದು ವಾದಿಸಿದೆ. ಊಹೆಗಳ ಆಧಾರದಲ್ಲಿ ಸರ್ಕಾರವು ತನ್ನ ವೇದಿಕೆಯ 15 ಕೋಟಿ ಬಳಕೆದಾರರನ್ನು ಅನ್ಯಾಯವಾಗಿ ಶಿಕ್ಷೆಗೊಳಪಡಿಸಿದೆ ಎಂದೂ ಹೇಳಿದೆ. ನಿಜವಾದ ಸಮಸ್ಯೆ ಸರ್ಕಾರದ ಪರೀಕ್ಷಾ ವ್ಯವಸ್ಥೆಯೊಳಗೇ ಇದೆ. ಆ ಸಮಸ್ಯೆಯನ್ನು ನಿರ್ಲಕ್ಷಿಸಿ, ಗಮನವನ್ನು ತಪ್ಪಿತಸ್ಥರಿಂದ ಬೇರೆಯವರ ಕಡೆಗೆ ತಿರುಗಿಸಲು ಸರ್ಕಾರ ಪ್ರಯತ್ನಿಸುತ್ತಿದೆ. ಈ ಮೂಲಕ ಮಾಧ್ಯಮ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಕುರಿತಾದ ಸರ್ಕಾರದ ನಿರ್ಲಕ್ಷ್ಯ ಮುಂದುವರಿದಿದೆ; ನಿರ್ಲಕ್ಷಿಸಬಹುದಾದ ಅಥವಾ ಅಸ್ತಿತ್ವದಲ್ಲೇ ಇಲ್ಲದ ಕಾರಣಗಳಿಗಾಗಿ ಮಾಧ್ಯಮ–ಅಭಿವ್ಯಕ್ತಿ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಧೋರಣೆ ಮತ್ತೆ ಪ್ರದರ್ಶನಗೊಂಡಿದೆ.

ಜಾಲತಾಣ

ಮುಖ್ಯಮಂತ್ರಿ ಯೋಚಿಸಲಿ

ಕನ್ನಡದ ರೈತರನ್ನು ತಮ್ಮ ಜಾಗದಿಂದ ಒಕ್ಕಲೆಬ್ಬಿಸಿ ಅನ್ಯ ರಾಜ್ಯದವರಿಗೆ ವಸತಿ ಸೌಲಭ್ಯ ಕಲ್ಪಿಸುವ ಪ್ರಕ್ರಿಯೆಯೇ ಬಿಡದಿ ಟೌನ್‌ಶಿಪ್ ಯೋಜನೆ. ರೈತರ ಫಲವತ್ತಾದ ಭೂಮಿ ಬಿಟ್ಟು ಸರ್ಕಾರಿ ಭೂಮಿಯಲ್ಲಿ ಟೌನ್‌ಶಿಪ್ ಏಕೆ ಮಾಡಬಾರದು? ಅಷ್ಟು ಪ್ರಮಾಣದಲ್ಲಿ ಮತ್ತೆ ತೆಂಗು ಬೆಳೆಯಲು ಎಷ್ಟು ವರ್ಷ ಬೇಕು?

ರೋಹಿತ್ ಸಿಂಹ, ಎಂಜಿನಿಯರ್, ‘ಎಕ್ಸ್’ನಿಂದ

ಕಿಡಿನುಡಿ

ಗ್ಯಾರಂಟಿ ಯೋಜನೆಗಳಿಗೆ ಹಣ ಹೊಂದಿಸಲು ರಾಜ್ಯ ಸರ್ಕಾರಕ್ಕೆ ಸಾಧ್ಯವಾಗುತ್ತಿಲ್ಲ. ಹಾಗಾಗಿಯೇ, ಬರೋಬ್ಬರಿ 16 ಲಕ್ಷಕ್ಕೂ ಹೆಚ್ಚು ಬಡಜನರ ಸಾಮಾಜಿಕ ಭದ್ರತಾ ಪಿಂಚಣಿಯನ್ನು ಸ್ಥಗಿತಗೊಳಿಸಿದೆ. ಬಡ ವೃದ್ಧರ, ವಿಧವೆಯರ, ಅಂಗವಿಕಲರ ಹೊಟ್ಟೆಗೆ ಹೊಡೆಯುವುದು ಸರಿಯೆ?

ಆರ್. ಅಶೋಕ, ಬಿಜೆಪಿ ಶಾಸಕ

25 ವರ್ಷಗಳ ಹಿಂದೆ

ಮಂಗಳವಾರ, 19-6-2001

• **ಜುಲೈ 14ರಂದು ಮುಷರಫ್ ಭೇಟಿ: ಆಗ್ರಾದಲ್ಲಿ ಶೃಂಗಸಭೆ?**

ಇಸ್ಲಾಮಾಬಾದ್, ಜೂನ್ 18 (ಎಎಫ್‌ಪಿ)– ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಅವರ ಜತೆಗಿನ ಮಹತ್ವದ ಶೃಂಗಸಭೆಗಾಗಿ ಪಾಕಿಸ್ತಾನಿ ಮಿಲಿಟರಿ ಆಡಳಿತಗಾರ ಜನರಲ್ ಪರ್ವೆಜ್ ಮುಷರಫ್ ಅವರು ನವದೆಹಲಿಗೆ ಜುಲೈ 14ರಂದು ಪ್ರಯಾಣಿಸುವ ನಿರೀಕ್ಷೆ ಇದೆ ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮುಷರಫ್ ಅವರು ರಾಷ್ಟ್ರಪತಿ ಕೆ.ಆರ್. ನಾರಾಯಣನ್ ಅವರನ್ನೂ ಭೇಟಿ ಮಾಡುವರು. ಶೃಂಗಸಭೆಯು ಆಗ್ರಾದಲ್ಲಿ ನಡೆಯುವ ಸಾಧ್ಯತೆ ಇದೆ ಎಂದು ಈ ಹಿರಿಯ ಅಧಿಕಾರಿ ತಿಳಿಸಿದ್ದಾರೆ.

ಅಲ್ಲದೆ, ಜುಲೈ 14ರಿಂದ 15ರವರೆಗಿನ ಈ ಭೇಟಿಯ ಸಂದರ್ಭದಲ್ಲಿ ಮುಷರಫ್ ಅವರು ಕೆಲವು ಚಾರಿತ್ರಿಕ ಪ್ರದೇಶಗಳಿಗೂ ಭೇಟಿ ನೀಡಲಿದ್ದಾರೆ.

75 ವರ್ಷಗಳ ಹಿಂದೆ

ಮಂಗಳವಾರ, 19-6-1951

• **ಕನ್ನಡ ಶಿಕ್ಷಣ ಮಾಧ್ಯಮ**

ಬೆಂಗಳೂರು, ಜೂನ್ 18– ಹೈಸ್ಕೂಲುಗಳಲ್ಲಿ ಇಂಗ್ಲಿಷ್ ಶಿಕ್ಷಣ ಮಾಧ್ಯಮ ಸೌಕರ್ಯದ ಮೇಲೆ ಸರಕಾರ ಹೆಚ್ಚಿನ ಹಿಡಿತ ಸಾಧಿಸಿದೆ.

ಈ ಸಂಬಂಧ ಸರಕಾರ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಸ್ಥಾಯಿ ಸಮಿತಿಯ ಶಿಫಾರಸನ್ನು ಒಪ್ಪಿ ಒಂದೇ ತರಗತಿಯಿರುವ ಹೈಸ್ಕೂಲುಗಳಲ್ಲಿ ತಮ್ಮ ಇಚ್ಛೆಯಂತೆ ಇಂಗ್ಲಿಷ್ ಅಥವಾ ಕನ್ನಡ ಶಿಕ್ಷಣ ಮಾಧ್ಯಮ ಆರಿಸಿಕೊಳ್ಳುವ ಅವಕಾಶಬೇಕೆಂದು, ಒಂದಕ್ಕಿಂತ ಹೆಚ್ಚಿಗೆ ತರಗತಿಗಳಿದ್ದಲ್ಲಿ ಒಂದರಲ್ಲಿ ಇಂಗ್ಲಿಷ್ ಶಿಕ್ಷಣ ಮಾಧ್ಯಮವಿರಬಹುದೆಂದೂ ಉಳಿದವುಗಳಲ್ಲಿ ಕನ್ನಡ ಶಿಕ್ಷಣ ಮಾಧ್ಯಮವಿರಬೇಕೆಂದೂ ಮಾಧ್ಯಮಿಕ ಶಾಲೆಯಲ್ಲಿ ಕನ್ನಡ ಓದದಿರುವ, ಅಥವಾ ಕನ್ನಡ ಮಾತೃಭಾಷೆಯಾಗದಿರುವ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಒಂದಕ್ಕಿಂತ ಹೆಚ್ಚಿನ ಇಂಗ್ಲಿಷ್ ಶಿಕ್ಷಣ ಮಾಧ್ಯಮ ತರಗತಿಗಳ ಅವಕಾಶವನ್ನು ಏರ್ಪಡಿಸಬೇಕಾದರೆ ಶಿಕ್ಷಣ ಇಲಾಖಾ ಮುಖ್ಯಾಧಿಕಾರಿಗಳ ಅನುಮತಿಯನ್ನು ಪಡೆಯಬೇಕೆಂದೂ ಸರ್ಕಾರ ಸೂಚನೆಯನ್ನು ನೀಡಿದೆ.

ಉನ್ನತ ಶಿಕ್ಷಣ: ಏನೆಲ್ಲ ತಲ್ಲಣ?

ವಿಶ್ಲೇಷಣೆ

ಅರವಿಂದ ಚೊಕ್ಕಾಡಿ

ಉನ್ನತ ಶಿಕ್ಷಣ ಕ್ಷೇತ್ರ ಕಳೆಗುಂದುತ್ತಿರುವುದಕ್ಕೆ ಅನೇಕ ಕಾರಣಗಳಿವೆ. ಮುಖ್ಯವಾಗಿ ನಾವು ಗಮನಹರಿಸಬೇಕಾದುದು, ಉನ್ನತ ಶಿಕ್ಷಣಕ್ಕೂ ಔದ್ಯೋಗಿಕ ಮಾರುಕಟ್ಟೆಗೂ ಇರುವ ಸಂಬಂಧದ ಬಗ್ಗೆ. ಆ ಸಂಬಂಧ ಅರ್ಥವಾದರೆ, ಶೈಕ್ಷಣಿಕ ದುರವಸ್ಥೆ ಸ್ಪಷ್ಟವಾಗುತ್ತದೆ ಹಾಗೂ ಪರಿಹಾರದ ಸಾಧ್ಯತೆಗಳು ಗೋಚರಿಸುತ್ತವೆ.

ಉನ್ನತ ಶಿಕ್ಷಣ ಕ್ಷೇತ್ರ ದುರ್ಬಲವಾಗುತ್ತಿದೆ, ಸ್ಥಾಪಿತ ಕೋರ್ಸ್‌ಗಳಿಗೆ ವಿದ್ಯಾರ್ಥಿಗಳು ಬರುತ್ತಿಲ್ಲ ಎನ್ನುವ ಅಳಲು ಕರ್ನಾಟಕ ಸೇರಿದಂತೆ ವಿಶ್ವದೆಲ್ಲೆಡೆ ಇದೆ.

ಪ್ರಾಧ್ಯಾಪಕರು ಸರಿಯಿಲ್ಲ, ವಿದ್ಯಾರ್ಥಿಗಳಿಗೆ ಆಸಕ್ತಿ ಇಲ್ಲ, ಸಂಶೋಧಕರಿಗೆ ಡಾಕ್ಟರೇಟ್ ದೊರೆಯುವುದರ ಹೊರತು ಆ ಸಂಶೋಧನೆಗಳಿಂದ ಸಮಾಜಕ್ಕೆ ಯಾವ ಉಪಯೋಗವೂ ಇಲ್ಲ ಎಂದೆಲ್ಲ ಉನ್ನತ ಶಿಕ್ಷಣ ದುರ್ಬಲಗೊಳ್ಳುತ್ತಿರುವುದಕ್ಕೆ ಕಾರಣಗಳನ್ನು ಚರ್ಚಿಸಬಹುದು ಮತ್ತು ಅವೆಲ್ಲವೂ ಸರಿಯೂ ಆಗಿರಬಹುದು. ಆದರೆ, ಆ ಕಾರಣದಿಂದಲೇ ಉನ್ನತ ಶಿಕ್ಷಣ ದುರ್ಬಲವಾಗುತ್ತಿರುವುದಂತೂ ಖಂಡಿತಾ ಅಲ್ಲ. ಕಲಿಕೆ ಜ್ಞಾನಕ್ಕಾಗಿ ನಡೆಯಬೇಕು ಎಂದು ಎಷ್ಟೇ ಸೈದ್ಧಾಂತಿಕ ವಿಚಾರವನ್ನು ಚರ್ಚಿಸಿದರೂ, ವಿದ್ಯಾರ್ಥಿಗಳಾಗಿ ಯೋಚಿಸಿದಾಗ ಕಲಿಕೆಯ ಉದ್ದೇಶ ಉದ್ಯೋಗ ಪಡೆದು ಆದಾಯವನ್ನು ಗಳಿಸುವುದೇ ಆಗಿರುತ್ತದೆ. ಭಾರತದಂತಹ ಜನಸಂಖ್ಯಾ ಬಾಹುಳ್ಯದ ದೇಶದಲ್ಲಿ ಕಲಿಕೆ ಮತ್ತು ಉದ್ಯೋಗಕ್ಕಿರುವ ಸಂಬಂಧ ನಿರಾಕರಿಸಿ ಮುಂದೆ ಸಾಗಲು ಸಾಧ್ಯವಿಲ್ಲ. ಸೈದ್ಧಾಂತಿಕವಾಗಿಯೂ ಕಲಿಕೆಯ ಉದ್ದೇಶ ಉದ್ಯೋಗ ಗಳಿಕೆ ಮಾತ್ರವಲ್ಲದೆ ಇದ್ದರೂ, ಉದ್ಯೋಗ ಗಳಿಕೆಯೂ ಕಲಿಕೆಯ ಮುಖ್ಯ ಉದ್ದೇಶಗಳಲ್ಲಿ ಒಂದಾಗಿದೆ.

ಸರ್ಕಾರಿ ನೇಮಕಾತಿಗಳು ಔದ್ಯೋಗಿಕ ಮಾರುಕಟ್ಟೆಯನ್ನು ಆಳುತ್ತಿದ್ದ ಕಾಲದಲ್ಲಿ ಉದ್ಯೋಗಕ್ಕೆ ನಿರ್ದಿಷ್ಟ ಶೈಕ್ಷಣಿಕ ಅರ್ಹತೆಯ ಪ್ರಮಾಣ ಪತ್ರ ಅನಿವಾರ್ಯವಾಗಿತ್ತು. ಆಗ ಪ್ರಮಾಣ ಪತ್ರ ಅರ್ಹತೆಯ ಮಾನದಂಡವೆ ಎಂಬ ಪ್ರಶ್ನೆ ಕಾಡುತ್ತಿತ್ತು. ಬರೀ ಪ್ರಮಾಣ ಪತ್ರವೇ ಅರ್ಹತೆಯ ಮಾನದಂಡ ಅಲ್ಲದೆ ಇರಬಹುದಾದರೂ, ಪ್ರಮಾಣ ಪತ್ರವೂ ಅರ್ಹತೆಯ ಒಂದು ಮಾನದಂಡವೇ ಆಗಿರುತ್ತದೆ. ಪ್ರಮಾಣ ಪತ್ರ ಆಧಾರಿತ ನೇಮಕಾತಿ ಪದ್ಧತಿಯು, ಸ್ಥಾಪಿತ ಶೈಕ್ಷಣಿಕ ವ್ಯವಸ್ಥೆಯನ್ನು ರಕ್ಷಿಸುತ್ತಲೂ ಸಾಗಿತ್ತು. ಏಕೆಂದರೆ, ಸ್ಥಾಪಿತ ಕೋರ್ಸ್ ಮಾಡದೆ ಪ್ರಮಾಣ ಪತ್ರ ದೊರೆಯುವುದಿಲ್ಲ. ಪ್ರಮಾಣ ಪತ್ರ ದೊರೆಯದೆ ನೇಮಕಾತಿ ಆಗುವುದಿಲ್ಲ.

ಪ್ರಮಾಣ ಪತ್ರ ಆಧಾರಿತ ಪದ್ಧತಿಯಿಂದ ಆದ ನೇಮಕಾತಿಯ ಪರಿಣಾಮಗಳನ್ನು ಸಿನಿಕರಾಗಿ ಅರ್ಥೈಸುವ ಪದ್ಧತಿ ನಮ್ಮಲ್ಲಿದೆಯೇ ಹೊರತು, ಯೋಚಿಸಿ ಪ್ರತಿಕ್ರಿಯಿಸುವ ಪದ್ಧತಿ ಕಡಿಮೆ. ಉದಾಹರಣೆಗೆ, ಅಧ್ಯಾಪಕರ ನೇಮಕಾತಿ ಗಮನಿಸಬಹುದು. ಬಹುತೇಕ ಅಧ್ಯಾಪಕರ ನೇಮಕಾತಿ ಇಂದಿಗೂ ಪ್ರಮಾಣ ಪತ್ರ ಆಧಾರಿತವೇ ಆಗಿದೆ. ಕೋರ್ಸ್ ಮುಗಿಸಿದ ಪ್ರಮಾಣ ಪತ್ರದ ಅರ್ಹತೆಯಿಂದ ಯೋಗ್ಯ ಅಭ್ಯರ್ಥಿಗಳು ದೊರೆಯುತ್ತಿಲ್ಲ ಎಂದು ಸಿಇಟಿ ಮಾಡಿ, ಅದರಲ್ಲಿ ಆಯ್ಕೆಯಾದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಲಾಯಿತು. ಆಗಲೂ ಯೋಗ್ಯ ಅಭ್ಯರ್ಥಿಗಳು ದೊರೆಯುತ್ತಿಲ್ಲವೆಂದು ಟಿಇಟಿ ಎಂದು ಮತ್ತೊಂದು ಪರೀಕ್ಷೆ ಮಾಡಲಾಯಿತು. ಇಷ್ಟು ಮಾಡಿಯೂ ಅಧ್ಯಾಪಕರು ಸರಿ ಇಲ್ಲ ಎನ್ನುವ ಆಪಾದನೆಯಲ್ಲಿ ವ್ಯತ್ಯಾಸ ಆಗಿಲ್ಲ. ಮೂರು ಪರೀಕ್ಷೆಗಳನ್ನು ಯಶಸ್ವಿಯಾಗಿ ಹಾದುಬಂದ ಮೇಲೆಯೂ ಅಧ್ಯಾಪಕರು ಸರಿ ಇಲ್ಲ ಎನ್ನುವುದಾದರೆ, ಅಧ್ಯಾಪಕರ ಅರ್ಹತೆಗೆ ಸಂಬಂಧಪಡದ ಬೇರಾವುದೋ ಕಾರಣಗಳು ಇರಲು ಸಾಧ್ಯವಿದೆ ಎಂದು ಯೋಚಿಸುವುದಿಲ್ಲ.

ಸರ್ಕಾರಿ ಶಾಲೆಗಳಲ್ಲಿ ಅಧ್ಯಾಪಕರು ಚೆನ್ನಾಗಿಲ್ಲ, ಕೆಲಸ ಮಾಡುವುದಿಲ್ಲ ಎನ್ನುವುದು ಸಾರ್ವಜನಿಕ ಬೇಜವಾಬ್ದಾರಿಯ ಚಿಂತನೆಯೂ ಹೌದು. ಸಾರ್ವಜನಿಕ ಒಡೆತನ ಇದ್ದಾಗ ಸಾರ್ವಜನಿಕ ಜವಾಬ್ದಾರಿಯೂ ಇರುತ್ತದೆ. ಒಡೆಯ ತನ್ನ ಒಡೆತನದ ವ್ಯವಸ್ಥೆ ಸರಿಯಿಲ್ಲ ಎಂದು ಎಲ್ಲೆಂದರಲ್ಲಿ ಪ್ರಚಾರ ಮಾಡುತ್ತಾ ಇರುವುದರ ಬದಲು, ತನ್ನ ಒಡೆತನದ ಘಟಕ ಯಾಕೆ ಸರಿ ಇಲ್ಲ ಎಂದು ಯೋಚನೆ ಮಾಡುತ್ತಾನೆ. ಹೀಗೆ ಯೋಚನೆ ಮಾಡಿದರೆ ನಮ್ಮ ಸಾರ್ವಜನಿಕ ವ್ಯವಸ್ಥೆ ಯಾವ ಪ್ರಮಾಣದಲ್ಲಿ ಉದ್ಯೋಗಿಸ್ನೇಹಿ ಆಗಿಲ್ಲ ಎಂಬುದು ಗೊತ್ತಾಗುತ್ತದೆ. ಖಾಸಗಿ ಘಟಕಗಳ ಆಡಳಿತ ಹಾಗಿರುವುದಿಲ್ಲ. ಘಟಕದ ಹಿತದೃಷ್ಟಿಯಿಂದ ಇಂತಹ ಸಮಸ್ಯೆ ಇದೆ ಎಂದು ನೌಕರ ಹೇಳಿದಾಗ, ಅದನ್ನು ತಾನು ಕೇಳಿಸಿಕೊಳ್ಳಲಿಕ್ಕೇ ತಯಾರಿಲ್ಲ ಎಂಬಂತೆ ಖಾಸಗಿ ಘಟಕದ ಒಡೆಯ ವರ್ತಿಸುವುದಿಲ್ಲ. ಏಕೆಂದರೆ, ಸಮಸ್ಯೆಗೆ ಒಡೆಯ ಸ್ಪಂದಿಸದೆ ಇದ್ದರೆ ಘಟಕವನ್ನು ಮುಚ್ಚಬೇಕಾಗುತ್ತದೆ. ಇದಕ್ಕೆ ಹೋಲಿಸಿದಾಗ ಸಾರ್ವಜನಿಕ ವ್ಯವಸ್ಥೆ ಖಂಡಿತವಾಗಿಯೂ ಇಂದಿಗೂ ಬಹಳ ಉದಾರವಾದಿಯೇ ಆಗಿದೆ.

ಸಾರ್ವಜನಿಕ ವ್ಯವಸ್ಥೆಯಲ್ಲಿ ಬಹುಮಟ್ಟಿಗೆ ನೌಕರ ತನ್ನ ಕೆಲಸದಲ್ಲಿರುವ ಸಮಸ್ಯೆಯನ್ನು ಹೇಳುವುದನ್ನು ಅಶಿಸ್ತು ಎಂಬರ್ಥದಲ್ಲಿ ಪರಿಗಣಿಸಲಾಗುತ್ತದೆ. ಏಕೆಂದರೆ, ಸಮಸ್ಯೆಯನ್ನು ಪರಿಹರಿಸುವುದು ಅದನ್ನು ಕೇಳಿಸಿಕೊಳ್ಳಬೇಕಾದವನ ನಿಯಂತ್ರಣದಲ್ಲಿ ಇರುವುದಿಲ್ಲ. ಪರಿಹಾರಕ್ಕೆ ಮತ್ತೊಬ್ಬನನ್ನು ಸಂಪರ್ಕಿಸಬೇಕು, ಅವನು ಮಗದೊಬ್ಬನನ್ನು ಸಂಪರ್ಕಿಸಬೇಕು; ಹೀಗೆ ಸಮಸ್ಯೆ ಬೆಳೆಯುತ್ತಾ ಹೋದಂತೆಲ್ಲ ಕೆಲಸಗಾರ ಹೇಳಿದ ಸಮಸ್ಯೆ ಬೃಹತ್ ಸಮಸ್ಯೆಯೊಂದರ ಭಾಗವಾಗಿರುವುದು ಅರಿವಿಗೆ ಬರುತ್ತದೆ. ಅದನ್ನು ಪರಿಹರಿಸಬೇಕಾದರೆ ಪಟ್ಟು ಹಿಡಿದು ಸಾಧಿಸುವ ರಾಜಕೀಯ ಕಾರ್ಯಾಂಗ ಬೇಕು. ವಾಸ್ತವದಲ್ಲಿ ಶೈಕ್ಷಣಿಕ ಸಮಸ್ಯೆಗಳು ಯಾಂತ್ರಿಕ ರೀತಿಯ ಸಮಸ್ಯೆಗಳಾಗಿರುವುದಿಲ್ಲ. ಸಂವೇದನಾಶೀಲ ಸಮಸ್ಯೆಗಳಾಗಿರುತ್ತವೆ. ಸನ್ನಿವೇಶದಿಂದ ಸನ್ನಿವೇಶಕ್ಕೆ ಅವುಗಳ ಸ್ವರೂಪ ಬದಲಾವಣೆಯಾಗುತ್ತದೆ. ಅಂತಹದ್ದಕ್ಕೆ ಸ್ಥಳೀಯ ಆಡಳಿತ ಮಾತ್ರ ಸ್ಪಂದಿಸಲು ಸಾಧ್ಯವಾಗುವುದು. ಅಂದರೆ ಶಾಲೆಗಳು ದುರ್ಬಲವಾಗುವುದರ ಹಿಂದೆ ಸ್ಥಳೀಯ ಆಡಳಿತ ದುರ್ಬಲಗೊಂಡಿರುವುದರ ಕಾರಣಗಳಿವೆ.

ಖಾಸಗಿ ಶಾಲೆಗಳಿಗೆ ಬರುವ ವಿದ್ಯಾರ್ಥಿಗಳಿಗೆ ಅವರ ಕುಟುಂಬ ಕೊಡುವ ಶೈಕ್ಷಣಿಕ ಬೆಂಬಲ, ಕುಟುಂಬಕ್ಕಿರುವ ಶೈಕ್ಷಣಿಕ ದೃಷ್ಟಿಕೋನ, ಕುಟುಂಬವು ಮಕ್ಕಳಿಗೆ ಕೊಡುವ ಸಮಯದೊಂದಿಗೆ ಸರ್ಕಾರಿ ಶಾಲೆಗಳಿಗೆ ಬರುವ ಮಕ್ಕಳಿಗೆ ಕುಟುಂಬವು ಕೊಡುವ ಬೆಂಬಲ, ಆ ಕುಟುಂಬದ ಶೈಕ್ಷಣಿಕ ದೃಷ್ಟಿಕೋನ ಮತ್ತು ಮಕ್ಕಳಿಗೆ ಕೊಡುವ ಸಮಯಗಳನ್ನು ತುಲನೆ ಮಾಡಬೇಕಾಗುತ್ತದೆ. ಏಕೆಂದರೆ, ವ್ಯಕ್ತಿತ್ವ ಮತ್ತು ಮಕ್ಕಳ ಕಲಿಕೆಯ ಆಸಕ್ತಿ ನಿರ್ಧಾರದ ಮೇಲೆ ಕುಟುಂಬದ ಪ್ರಭಾವ ಹೆಚ್ಚಾಗಿರುತ್ತದೆ. ಸರ್ಕಾರಿ ಶಾಲೆಯ ವಿದ್ಯಾರ್ಥಿಗಳ ಕುಟುಂಬ ದುರ್ಬಲವಿದ್ದಾಗ ಕಲಿಕಾ ಸಾಧನೆಗೆ ಖಾಸಗಿ ಶಾಲೆಗಳನ್ನು ಹೋಲಿಸಿ ತೀರ್ಮಾನಿಸಲು ಬರುವುದಿಲ್ಲ. ಸರ್ಕಾರಿ ಶಾಲೆಗಳಿಲ್ಲದೆ ಹೋದರೆ ಆ ಮಗುವಿಗೆ ಓದಲು ಬರೆಯಲು ಕೂಡ ಬರುತ್ತಿರಲಿಲ್ಲ. ಅಂದರೆ, ಓದಲು ಬರೆಯಲು ಬರುವ ಹಾಗೆ ಮಾಡಿದ್ದೂ ಸಾಧನೆಯೇ ಅಲ್ಲವೆ? ಮಕ್ಕಳ ಕುಟುಂಬದ ಪಾತ್ರವನ್ನು ಪರಿಗಣನೆಗೇ ತೆಗೆದುಕೊಳ್ಳದೆ, ಸರ್ಕಾರಿ ಶಾಲೆಗಳ ಅಧ್ಯಾಪಕರ ಗುಣಮಟ್ಟ ಹೆಚ್ಚಳಕ್ಕಾಗಿ ಈಗಿರುವ ಪರೀಕ್ಷೆಗಳಿಗೆ ಬದಲಿಯಾಗಿ ನಾಲ್ಕನೆಯ ಪರೀಕ್ಷೆಯನ್ನೂ ಮಾಡಿ ಆಯ್ಕೆ ಮಾಡಿ ಎಂದರೆ ಉಪಯೋಗ ಆದೀತೆ?

ಇವತ್ತಿನ ಔದ್ಯೋಗಿಕ ಮಾರುಕಟ್ಟೆಯು ಬಹುಮಟ್ಟಿಗೆ ಕೌಶಲ ಆಧಾರಿತವಾಗಿದೆ. ಪತ್ರಕರ್ತ ಆಗಬೇಕಾದರೆ ಪತ್ರಿಕೋದ್ಯಮದಲ್ಲಿನ ಪದವಿ ಮುಖ್ಯ ಮಾನದಂಡ ಅಲ್ಲ. ಅಭ್ಯರ್ಥಿಗೆ ಪತ್ರಿಕೆ ಬಯಸುವುದನ್ನು ಈಡೇರಿಸುವ ಸಾಮರ್ಥ್ಯವಿದೆಯೇ ಎನ್ನುವುದಷ್ಟೇ ಆದ್ಯತೆ. ಪತ್ರಿಕೋದ್ಯಮ ಪದವಿ ಮಾಡದೆಯೂ ಅದನ್ನು ಸಾಧಿಸಬಲ್ಲವನಿಗೆ ಪದವಿ ಅನಿವಾರ್ಯ ಆಗಿರುವುದಿಲ್ಲ. ಹಿಂದೆಲ್ಲ ಖಾಸಗಿ ಘಟಕಗಳಲ್ಲಿ ಸರ್ಕಾರಿ ಘಟಕಕ್ಕಿಂತ ಕಡಿಮೆ ವೇತನವು ಸಾಮಾನ್ಯ ಲಕ್ಷಣವಾಗಿತ್ತು. ಈಗ ಖಾಸಗಿ ಘಟಕಗಳಲ್ಲಿ ಮೂರು ಸ್ವರೂಪದ ‘ಸೌಲಭ್ಯ ವ್ಯವಸ್ಥೆ’ಗಳಿವೆ. ಸರ್ಕಾರಿ ಘಟಕಕ್ಕಿಂತ ಕಡಿಮೆ ವೇತನವನ್ನಷ್ಟೆ ಕೊಡಬಲ್ಲ ಸಾಂಪ್ರದಾಯಿಕ ಮಾದರಿಯ ಘಟಕಗಳು; ಎರಡನೆಯದು, ಸರ್ಕಾರಿ ಘಟಕದಷ್ಟೇ ವೇತನ ಮತ್ತಿತರೆ ಸೌಲಭ್ಯಗಳನ್ನು ಕೊಡಬಲ್ಲ ಘಟಕಗಳು; ಮೂರನೆಯದು, ಅರ್ಹ ಪ್ರತಿಭಾವಂತನಿಗೆ ಸರ್ಕಾರಿ ಘಟಕಗಳಿಗಿಂತ ಜಾಸ್ತಿ ವೇತನ ಮತ್ತು ಸೌಲಭ್ಯಗಳನ್ನು ಕೊಡಬಲ್ಲ ಸಂಸ್ಥೆಗಳು. ಕೆಲವು ಖಾಸಗಿ ಕಾಲೇಜುಗಳಲ್ಲಿ ಪ್ರತಿಭಾವಂತ ಉದ್ಯೋಗಿಗಳು ಉದ್ಯೋಗ ಬಿಟ್ಟು ಹೋಗಬಾರದೆಂದು ಯುಜಿಸಿ ವೇತನ ಕೊಡುವ ಪದ್ಧತಿಯಿದೆ.

ಸರ್ಕಾರಿ ವ್ಯವಸ್ಥೆಯಂತೆ ಖಾಸಗಿಯಲ್ಲಿ ನಿಯಮಗಳು ಉದಾರವಾಗಿಲ್ಲ. ನಿಯಮಗಳು ಕಟ್ಟುನಿಟ್ಟಾಗಿಯೇ ಇರುತ್ತವೆ. ಆದರೆ, ಒಡನಾಟದಲ್ಲಿ ಉದ್ಯೋಗಿಗಳಿಗೆ ಬೈಯುತ್ತಾ ಇರುವುದು, ಬೆದರಿಸುತ್ತಾ ಇರುವುದು ಮುಂತಾದ ಹಳೆಯ ಪದ್ಧತಿಗಳು ಹೊರಟು ಹೋಗುತ್ತಿವೆ. ಈಗಿನ ಪೀಳಿಗೆ ಬೈಗುಳವನ್ನು ಕೇಳಿಸಿಕೊಂಡು, ವ್ಯಕ್ತಿ ಘನತೆಯನ್ನು ಕಳೆದುಕೊಂಡು ಇರಲು ಬಯಸುವುದಿಲ್ಲ ಎಂಬ ಅರಿವು ಉದ್ಯೋಗದಾತರಲ್ಲೂ ಬರತೊಡಗಿದೆ. ಸಾರ್ವಜನಿಕ ವ್ಯವಸ್ಥೆಯಲ್ಲಿ ಆ ಅರಿವು ಇನ್ನು ಬರಬೇಕಷ್ಟೆ. ಆದರೆ, ಸಾರ್ವಜನಿಕ ವ್ಯವಸ್ಥೆಯಲ್ಲಿ ಆ ಅರಿವು ಹಿಂದೆ ಇತ್ತು. ದೇವರಾಜ ಅರಸು ಅವರು ಮೊರಾರ್ಜಿ ದೇಸಾಯಿಯವರಿಗೆ ಅವರ ಕಾರ್ಯದರ್ಶಿಗಳನ್ನು ಪರಿಚಯಿಸುವಾಗ, ‘ನನ್ನೆಲ್ಲ ಯಶಸ್ಸಿನ ರೂವಾರಿಗಳು’ ಎಂದು ಪರಿಚಯಿಸಿದ್ದರಂತೆ. ಒಬ್ಬ ಮಾತ್ರ ಕುಳಿತುಕೊಳ್ಳಬಹುದಾದ ಕೋಣೆಯಲ್ಲಿ ಕೆಲಸ ಮಾಡುವಾಗ ಲಾಲ್ ಬಹದ್ದೂರ್ ಶಾಸ್ತ್ರಿ ತಮ್ಮ ಆಪ್ತ ಕಾರ್ಯದರ್ಶಿ ನಿಂತಿರುವುದನ್ನು ನೋಡಿ ತಾವೂ ನಿಂತುಕೊಂಡೇ ಕಡತಗಳ ವಿಲೇವಾರಿ ಮಾಡಿದ್ದರಂತೆ. ಈ ಮಾದರಿಯ ನಡೆಗಳನ್ನು ಇವತ್ತು ಸಾರ್ವಜನಿಕ ವ್ಯವಸ್ಥೆಯಲ್ಲಿ ಕಾಣುವುದು ಕಷ್ಟ.

ಔದ್ಯೋಗಿಕ ಪರಿಸರ ಹಾಗೂ ಸೌಲಭ್ಯಗಳು ಉತ್ತಮಗೊಳ್ಳುತ್ತಾ ಹೋದ ಹಾಗೆ ಯುವಜನರ ಒಲವು ಖಾಸಗಿ ಘಟಕಗಳ ಕಡೆಗೆ ಜಾಸ್ತಿಯಾಗುತ್ತದೆ. ಜೊತೆಗೆ ಕ್ಯಾಂಪಸ್ ಸೆಲೆಕ್ಷನ್‌ಗಳು ನೇಮಕಾತಿ ಪ್ರಕ್ರಿಯೆಯನ್ನು ಸುಲಭಗೊಳಿಸಿವೆ. ಖಾಸಗಿ ಘಟಕದವರಿಗೆ ಬೇಕಾದ್ದು ಪ್ರತಿಭೆ ಮತ್ತು ಕೌಶಲ, ಪ್ರಮಾಣ ಪತ್ರಗಳಲ್ಲ. ಆಗ ಸಾಂಪ್ರದಾಯಿಕ ಪದವಿಗಳ ಬಗ್ಗೆ ಯುವಕ, ಯುವತಿಯರ ಆಸಕ್ತಿ ಕಡಿಮೆಯಾಗಿ, ಉನ್ನತ ಶಿಕ್ಷಣದ ಸಾಂಪ್ರದಾಯಿಕ ವ್ಯವಸ್ಥೆಗೆ ಪ್ರವೇಶವೇ ಕಡಿಮೆಯಾಗುತ್ತದೆ. ವರ್ತಮಾನದ ಈ ಔದ್ಯೋಗಿಕ ಮಾರುಕಟ್ಟೆಯ ಚಲನಶೀಲತೆಯ ಆಧಾರದಲ್ಲಿ ಉನ್ನತ ಶಿಕ್ಷಣದ ಮರು ರಚನೆ ಮಾಡದ ಹೊರತು ಅದರ ಸಬಲೀಕರಣ ಸಾಧ್ಯವಾಗಲಾರದು.

ಚುರುಮುರಿ

ಪ್ರಶ್ನೆ–ಉತ್ತರ!

• ಬಿ.ಎನ್. ಮಲ್ಲೇಶ್

‘ಮಂಜಮ್ಮ, ನಿನ್ ಚಾದಂಗಡಿಗೆ ಲೈಸೆನ್ಸ್ ತಗಂಡಿದೀಯ?’ ಹರಟೆಕಟ್ಟೆಯಲ್ಲಿ ಚಾ ಕುಡಿಯುತ್ತ ಗುಡ್ಡೆ ಕೇಳಿದ.

‘ಅದ್ನ ಕೇಳಾಕೆ ನೀನ್ಯಾರು? ತಗಂಡಿಲ್ಲ, ಏನೀಗ?’ ಮಂಜಮ್ಮಗೆ ಸಿಟ್ಟು ಬಂತು.

‘ನಾನು ಈ ದೇಶದ ಪ್ರಜೆ... ಪ್ರಶ್ನೆ ಕೇಳಾಕೆ ನಂಗೆ ರೈಟೈತೆ. ಅಲ್ಲ, ನೀನೂ ಲೈಸೆನ್ಸ್ ತಗಂಡಿಲ್ಲ, ನಿಮ್ಮ ‘ಸಂಘ’ದೋರೂ ತಗಂಡಿಲ್ಲ, ಅಂದ್ರೆ ಏನ್ಕತೆ?’

‘ಅದು ನಮ್ಮಿಷ್ಟ, ನೀವು ಲೈಸೆನ್ಸ್ ತಗಂಡಿದೀರಲ್ಲಪ್ಪ, ಗ್ಯಾರಂಟಿ ಲೆಕ್ಕ ಕೊಟ್ಟಿದ್ದೀರಾ? ಎರಡು ತಿಂಗಳದು ಗೃಹಲಕ್ಷ್ಮಿ ಬಂದಿಲ್ಲ, ಈಗ ಪರಿಷ್ಕರಣೆ ಮಾಡಾಕೆ ಹೊಂಟಿದೀರಿ?’

‘ಹೌದು, ಮಾಡ್ತೀವಿ, ಇನ್ಮುಂದೆ ಬಿಜೆಪಿಯೋರಿಗೆ ಗ್ಯಾರಂಟಿಗಳನ್ನ ಕೊಡಲ್ಲ ಅಂತೀವಿ, ಏನ್ಮಾಡ್ತೀರಿ?’

‘ಏನು ಸರ್ಕಾರನೇ ನಿನ್ ಕೈಯಾಗೆ ಐತಿ ಅನ್ನಂಗೆ ಮಾತಾಡ್ತಿಯಲ್ಲೋ... ಬಾಯಿ ಐತಿ ಅಂತ ಎಲ್ಲರಿಗೂ ಪ್ರಶ್ನೆ ಕೇಳಿದ್ರೆ ಹೆಂಗೆ?’ ದುಬ್ಬೀರ ಆಕ್ಷೇಪಿಸಿದ.

‘ಕೇಳ್ತೀನಿ, ನೀಟ್ ಸೋರಿಕೆ ಹೆಂಗಾತು? ಸಿಲಿಂಡರ್ ಏರಿಕೆ ಯಾಕಾತು? ಅಬ್ ಕೀ ಬಾರ್ ಟ್ರಂಪ್ ಸರ್ಕಾರ್ ಅಂದ್ರಲ್ಲ, ಟ್ರಂಪಿಂದ ನಮಿಗೆ ಏನು ಉಪಯೋಗ ಆತು? ಎಲ್ಲ ಕೇಳ್ತೀನಿ...’

‘ನಾನೂ ಕೇಳ್ತೀನಿ, ನಿಮ್ ಪಕ್ಷದಲ್ಲಿ ಹೈಕಮಾಂಡ್ ಯಾರು? ನಿಮ್ ಸರ್ಕಾರ ನಡೆಸ್ತಿರೋದು ದೇವರೋ ಜ್ಯೋತಿಷಿಗಳೋ? ನಿಮ್ ಮಂತ್ರಿಗಳಿಗೆ ಇಂಥದ್ದೇ ಖಾತೆ ಅಂತ ಯಾಕೆ ಬೇಕು? ಉತ್ತರ ಕೊಡ್ತೀಯ?’ ಮಂಜಮ್ಮ ತಿರುಗೇಟು ಕೊಟ್ಟಳು.

‘ಕೊಡ್ತೀನಿ, ಇನ್ನೂ ಏನರೆ ಇದ್ರೆ ಕೇಳು, ಎಲ್ಲಕ್ಕೂ ಉತ್ತರ ಕೊಡ್ತೀನಿ...’ ಗುಡ್ಡೆ ಸವಾಲು ಸ್ವೀಕರಿಸಿದ.

‘ಅದಿರ್ಲಿ, ನಿನ್ನೆ ರಾತ್ರಿ ನಿನ್ನೆಂಡ್ತಿ ಬಾಳ ಪ್ರಶ್ನೆ ಕೇಳಿದ್ಲಂತಲ್ಲ, ಯಾಕೆ ಲೇಟು? ಎಲ್ಲಿಗೆ ಹೋಗಿದ್ರಿ? ಯಾರ್ಯಾರ್ ಹೋಗಿದ್ರಿ? ಮನಿಗೆ ಬಿಟ್ಹೋಗಿದ್ದು ಯಾರು? ಸಂಬಳ ಏನಾತು? ಇದಕ್ಕೆಲ್ಲ ಉತ್ತರ ಕೊಟ್ಯಾ?’

‘ಅದೂ...’ ಗುಡ್ಡೆ ತಡವರಿಸಿದ.

‘ನೋಡಿದ್ಯಾ? ಹೆಂಡ್ತಿ ಪ್ರಶ್ನೆಗೆ ಉತ್ತರ ಕೊಡೋ ತಾಕತ್ತಿಲ್ಲ, ಮತ್ತೆ ಪ್ರಶ್ನೆ ಕೇಳ್ತಾನಂತೆ ಪ್ರಶ್ನೆ...’ ಗುಡ್ಡೆ ಮೂತಿ ತಿವಿದ ದುಬ್ಬೀರ.

ಎಲ್ಲರೂ ಗೊಳ್ಳಂತ ನಕ್ಕರು.

ಸಂಗತ

ನೈತಿಕತೆಗೆ ಏದುಸಿರು! ನಮಗದು ಬೇಡವೆ?

ನೈತಿಕತೆ ಮೌಲ್ಯ ಮಾತ್ರವಲ್ಲ; ಸಮಾಜದ ಆರೋಗ್ಯಕ್ಕೆ ಅತ್ಯವಶ್ಯ ಜೀವದ್ರವ್ಯವೂ ಹೌದು. ನೈತಿಕತೆಯಿಂದ ವಿಮುಖವಾದಷ್ಟೂ ವಿನಾಶಕ್ಕೆ ಸಮೀಪ ಆಗುತ್ತಿರುತ್ತೇವೆ.

• ರವಿ ಚೊಟ್ಟನಹಳ್ಳಿ

ಸಮಾಜದಲ್ಲಿನ ಶಿಸ್ತು, ವಿಶ್ವಾಸ ಮತ್ತು ಕಾನೂನು–ಸುವ್ಯವಸ್ಥೆಯ ಅಡಿಪಾಯದ ರೂಪದಲ್ಲಿ ನೈತಿಕತೆಯನ್ನು ನೋಡುವ ಕಾಲಘಟ್ಟ ಈಗಿಲ್ಲ. ಸಮಕಾಲೀನ ವಿದ್ಯಮಾನಗಳನ್ನು ಗಮನಿಸಿದರೆ, ‘ನೈತಿಕತೆ’ ಎಂಬ ಮೌಲ್ಯ ಅಳಿವಿನ ಅಂಚಿನಲ್ಲಿದೆಯೇ ಎಂಬ ಅನುಮಾನ ಎದುರಾಗುತ್ತದೆ.

ನೀಟ್ ಮರುಪರೀಕ್ಷೆಯ ಪೂರ್ವ ತಯಾರಿ ಪ್ರಕ್ರಿಯೆಯನ್ನು ಗಮನಿಸಿ: ದೇಶದ ಇತಿಹಾಸದಲ್ಲೇ ಕಾಣದಷ್ಟು ಕಠಿಣ ಭದ್ರತಾ ಕ್ರಮಗಳನ್ನು ಜಾರಿಗೊಳಿಸಲಾಗಿದೆ. ಪ್ರಶ್ನೆಪತ್ರಿಕೆ ಸೋರಿಕೆ ಮತ್ತು ಡಿಜಿಟಲ್ ವಂಚನೆ ನಡೆಯದಂತೆ ಕಟ್ಟುನಿಟ್ಟಿನ ನಿಗಾ ವಹಿಸಲಾಗಿದೆ. ಪ್ರಶ್ನೆಪತ್ರಿಕೆ ರಚಿಸಿದ ಶಿಕ್ಷಕರು, ತಜ್ಞರು ಮತ್ತು ಸಂಬಂಧಿಸಿದ ಸಿಬ್ಬಂದಿಯನ್ನು ಮೊಬೈಲ್ ಹಾಗೂ ಇಂಟರ್ನೆಟ್ ಸಂಪರ್ಕವಿಲ್ಲದ ರಹಸ್ಯ ಸ್ಥಳಗಳಲ್ಲಿ ಪ್ರತ್ಯೇಕವಾಗಿ ಇರಿಸಲಾಗಿದೆ ಎಂದು ವರದಿಗಳು ಪ್ರಕಟವಾಗಿವೆ. ಈ ಎಲ್ಲ ಸುರಕ್ಷತಾ ಕ್ರಮಗಳ ಹಿನ್ನೆಲೆಯಲ್ಲಿ, ಶಿಕ್ಷಕರ ಮೇಲಿನ ವಿಶ್ವಾಸಾರ್ಹತೆಗೆ ಭಂಗ ಬಂದಿದೆಯೇ ಎನ್ನುವ ಗಂಭೀರ ಪ್ರಶ್ನೆಯೊಂದನ್ನು ಕೇಳಿಕೊಳ್ಳಬೇಕು.

ಶಿಕ್ಷಕರು ಮಾತ್ರವಲ್ಲ, ವಿದ್ಯಾರ್ಥಿಗಳ ಮೇಲಿನ ವಿಶ್ವಾಸವೂ ಕುಸಿದಿದೆ. ಶಿಕ್ಷಕರು ಹಾಗೂ ವಿದ್ಯಾರ್ಥಿಗಳನ್ನು ಅಪನಂಬಿಕೆಯಿಂದ ನೋಡುತ್ತಿರುವ ವ್ಯವಸ್ಥೆ ಕೂಡ ವಿಶ್ವಾಸಾರ್ಹವಾದುದಲ್ಲ. ಈ ಅವಿಶ್ವಾಸದಿಂದಲೇ ತಂತ್ರಜ್ಞಾನದ ಮೇಲೆ ಕಣ್ಗಾವಲು ವಿಧಿಸುವ ಅವಮಾನಕರ ಪರಿಸ್ಥಿತಿ ನಿರ್ಮಾಣವಾಗಿದೆ. ಭೌತಿಕ ಭದ್ರತೆ ಹೆಚ್ಚುತ್ತಿದೆ, ನೈತಿಕ ಭದ್ರತೆ ಕುಸಿಯುತ್ತಿದೆ.



ನೈತಿಕತೆಯ ಕೊರತೆಗೆ ಸಂಬಂಧಿಸಿದಂತೆ ‘ನೀಟ್’ಗಿಂತಲೂ ಹೆಚ್ಚು ಗಂಭೀರ ಹಾಗೂ ಸಂಕೀರ್ಣವಾದ ವಿದ್ಯಮಾನ, ಅಯೋಧ್ಯೆಯ ರಾಮ ಮಂದಿರಕ್ಕೆ ಭಕ್ತರು ಅರ್ಪಿಸಿದ ಕಾಣಿಕೆ ಹಣದ ದುರ್ಬಳಕೆ ಮತ್ತು ಹಣಕಾಸು ಅಕ್ರಮಗಳ ಕುರಿತಾದ ಆರೋಪಗಳು. ಆಧ್ಯಾತ್ಮಿಕ ಕೇಂದ್ರಗಳ ನಿರ್ವಹಣೆಯಲ್ಲಿಯೇ ನೈತಿಕತೆ ಇಲ್ಲ ಎನ್ನುವುದಾದರೆ ಮೌಲ್ಯಗಳನ್ನು ಇನ್ನೆಲ್ಲಿ ಅಪೇಕ್ಷಿಸುವುದು?

ಶೈಕ್ಷಣಿಕ ವ್ಯವಸ್ಥೆಯಲ್ಲಿ ನೈತಿಕತೆ ಇಲ್ಲದೆ ಹೋದಾಗ ಪ್ರಶ್ನೆಪತ್ರಿಕೆ ಸೋರಿಕೆಯಾಗುತ್ತದೆ. ವಿದ್ಯಾರ್ಥಿಗಳಲ್ಲಿ ನೈತಿಕತೆ ಕ್ಷೀಣಿಸಿದಾಗ ಪರೀಕ್ಷಾ ಪ್ರಕ್ರಿಯೆಯೇ ಮೋಸದಿಂದ ಕೂಡಿರುತ್ತದೆ. ಮಂದಿರದಂತಹ ಪವಿತ್ರ ಕ್ಷೇತ್ರಗಳ ಆಡಳಿತದಲ್ಲಿ ಇರುವವರಲ್ಲೇ ನೈತಿಕತೆಯ ಕೊರತೆಯಿದ್ದರೆ, ಭಕ್ತರ ಕಾಣಿಕೆ ಸುರಕ್ಷಿತವಾಗಿರುವುದಿಲ್ಲ. ‘ಬೇಲಿಯೇ ಎದ್ದು ಹೊಲ ಮೇಯುವುದು’ ಎಂದರೆ ಇದೇ ಅಲ್ಲವೇ?

ಮಹಾತ್ಮ ಗಾಂಧೀಜಿ ಅವರ ಸರಳ ಹಾಗೂ ಪಾರದರ್ಶಕ ಜೀವನ ನೈತಿಕತೆಯ ಅತ್ಯುತ್ತಮ ಮಾದರಿಗಳಲ್ಲೊಂದು. ‘ನನ್ನ ದೇಶದ ಅತ್ಯಂತ ಬಡ ವ್ಯಕ್ತಿಗೆ ದೇಹ ಮುಚ್ಚಲು ಬಟ್ಟೆ ಸಿಗದಿರುವಾಗ, ಐಷಾರಾಮಿ ಉಡುಪು ಧರಿಸುವ ಹಕ್ಕು ನನಗಿಲ್ಲ’ ಎನ್ನುವ ಮನೋಧರ್ಮದಿಂದ ಅವರು ಸರಳ ಹಾಗೂ ಸ್ವದೇಶಿ ಖಾದಿ ವಸ್ತ್ರವನ್ನು ತಮ್ಮ ಆಯ್ಕೆಯಾಗಿಸಿಕೊಂಡರು. ಅವರ ಪಾಲಿಗೆ ಉಡುಪು ಪ್ರತಿಷ್ಠೆಯ ಸಂಕೇತವಾಗಿರಲಿಲ್ಲ; ಅದು ಸಮಾಜದ ಕೊನೆಯ ವ್ಯಕ್ತಿಯೊಂದಿಗಿನ ನೈತಿಕ ಬಾಂಧವ್ಯದ ಪ್ರತೀಕವಾಗಿತ್ತು. ಇಂದು ಪರಿಸ್ಥಿತಿ ತಲೆಕೆಳಗಾಗಿದೆ. ಹೇಗೆ ಗಳಿಸಿದೆ ಎನ್ನುವುದಕ್ಕಿಂತ, ‘ಎಷ್ಟು ಗಳಿಸಿದೆ?’ ಎನ್ನುವುದು ಯಶಸ್ಸಿನ ಮಾನದಂಡವಾಗಿದೆ. ಯಾವ ಮಾರ್ಗದಿಂದಾದರೂ ಸಂಪತ್ತು ಕೂಡಿಸಿ ಅದನ್ನು ಪ್ರದರ್ಶಿಸುವುದು ಪ್ರತಿಷ್ಠೆಯ ಸಂಕೇತವಾಗಿದೆ.

ಸಾರ್ವಜನಿಕ ಜೀವನದಲ್ಲೂ ಇದೇ ಬದಲಾವಣೆ ಗೋಚರಿಸುತ್ತಿದೆ. ಭೀಕರ ರೈಲು ದುರಂತದ ನೈತಿಕ ಹೊಣೆಯನ್ನು ಹೊತ್ತು ತಮ್ಮ ಸಚಿವ ಸ್ಥಾನಕ್ಕೆ ರಾಜೀನಾಮೆ ನೀಡಿದ ಲಾಲ್ ಬಹದ್ದೂರ್ ಶಾಸ್ತ್ರಿ ಅವರಂಥ ಮಹಾನ್ ನಾಯಕರ ರಾಜಕೀಯ ಪರಂಪರೆ ನಮ್ಮದು. ಆದರೆ, ತಮ್ಮ ಇಲಾಖೆಯಲ್ಲಿ ಸಂಭವಿಸುವ ವೈಫಲ್ಯಗಳನ್ನು ಒಪ್ಪಿಕೊಳ್ಳುವ ಬದಲು, ವಿತಂಡವಾದದ ಮೂಲಕ ಸಮರ್ಥಿಸಿಕೊಳ್ಳುವ ಪ್ರವೃತ್ತಿ ಇಂದಿನ ಸಚಿವರಲ್ಲಿ ಹೆಚ್ಚುತ್ತಿದೆ.

ಜೈಲಿಗೆ ಹೋಗಿ ಬಂದ ಅಪ್ರಾಮಾಣಿಕರನ್ನು ಸ್ವಾತಂತ್ರ್ಯ ಹೋರಾಟಗಾರರಂತೆ ಸ್ವಾಗತಿಸುವ ಪ್ರವೃತ್ತಿಯನ್ನು ಪ್ರಶ್ನಿಸಿದರೆ, ‘ಗಾಂಧೀಜಿಯವರೂ ಜೈಲಿಗೆ ಹೋಗಿರಲಿಲ್ಲವೆ?’ ಎಂಬ ವಿತಂಡವಾದದ ಪ್ರಶ್ನೆಗಳು ಎದುರಾಗುತ್ತವೆ ಎಂದು ನಿವೃತ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ ಸಂದರ್ಶನವೊಂದರಲ್ಲಿ ವಿಷಾದ ವ್ಯಕ್ತಪಡಿಸಿದ್ದರು. ಅವರ ಮಾತನ್ನು ಸಮಾಜದಲ್ಲಿ ಆಗಿರುವ ನೈತಿಕ ಪಲ್ಲಟಗಳ ಹಿನ್ನೆಲೆಯಲ್ಲಿ ಗಮನಿಸಬೇಕು. ತ್ಯಾಗ ಮತ್ತು ಅಪರಾಧದ ನಡುವಿನ ವ್ಯತ್ಯಾಸವನ್ನೇ ಮರೆಮಾಚುವ ವಾದಗಳು ಸಮಾಜದ ನೈತಿಕ ದಿಕ್ಕನ್ನು ದುರ್ಬಲಗೊಳಿಸುತ್ತಿವೆ.

ಮಕ್ಕಳು ಅಂಕಗಳಿಗಾಗಿ, ಯುವಕರು ಉದ್ಯೋಗ ಮತ್ತು ಸಂಪತ್ತಿಗಾಗಿ, ಹಿರಿಯರು ಪ್ರತಿಷ್ಠೆಗಾಗಿ ಓಡುತ್ತಿದ್ದಾರೆ. ಎಲ್ಲ ವಯೋಮಾನದವರೂ ಸ್ಪರ್ಧೆಯಲ್ಲಿ ತೊಡಗಿರುವಾಗ, ನೈತಿಕತೆಯು ‘ಪ್ರಗತಿಗೆ ಅಡ್ಡಿಯಾಗುವ ಗುಣ’ ಎಂಬ ತಪ್ಪು ಕಲ್ಪನೆ ಸಮಾಜದಲ್ಲಿ ಬಲವಾಗುತ್ತಿದೆ. ಇದಕ್ಕೆ ಪರಿಹಾರದ ರೂಪದಲ್ಲಿ ಕಠಿಣ ಕಾನೂನುಗಳಷ್ಟೇ ಸಾಕಾಗುವುದಿಲ್ಲ. ‘ಗೆಲ್ಲುವುದಕ್ಕಿಂತ ಸರಿಯಾದ ಮಾರ್ಗದಲ್ಲಿ ಗೆಲ್ಲುವುದು ಮುಖ್ಯ’ ಎಂಬ ಮೌಲ್ಯವನ್ನು ಮಕ್ಕಳಿಗೆ ಕಲಿಸಬೇಕು.

ಶಾಲೆಗಳಲ್ಲಿ ನೈತಿಕ ಶಿಕ್ಷಣವು ಪಠ್ಯಪುಸ್ತಕದ ಅಧ್ಯಾಯವಾಗಿ ಅಲ್ಲ, ಜೀವನ ಕೌಶಲವಾಗಿ ರೂಪುಗೊಳ್ಳಬೇಕು. ಸಮಾಜವು ಪ್ರಾಮಾಣಿಕರನ್ನು ಗೌರವಿಸುವ ಸಂಸ್ಕೃತಿಯನ್ನು ಬೆಳೆಸಬೇಕು. ಸಾಮಾಜಿಕ ಜಾಲತಾಣಗಳಲ್ಲಿ ಸಂಪತ್ತಿನ ಪ್ರದರ್ಶನಕ್ಕಿಂತ ಸರಳ ಜೀವನ, ಸೇವೆ ಮತ್ತು ಸತ್ಯನಿಷ್ಠೆಗೆ ಹೆಚ್ಚಿನ ಸ್ಥಾನ ಸಿಗಬೇಕು. ಯಶಸ್ಸಿನ ವ್ಯಾಖ್ಯಾನ ಬದಲಾಗಬೇಕು.

ಸಮಾಜವನ್ನು ಅಂತಿಮವಾಗಿ ರಕ್ಷಿಸುವುದು ಪೊಲೀಸ್ ಪಡೆಗಳಲ್ಲ, ಕಣ್ಗಾವಲಿನ ಕ್ಯಾಮೆರಾಗಳಲ್ಲ, ಆ್ಯಪ್ ನಿಷೇಧಗಳಲ್ಲ... ವ್ಯಕ್ತಿ ಹಾಗೂ ಸಮಷ್ಟಿಯ ಅಂತರಂಗದಲ್ಲಿನ ಮೌಲ್ಯಗಳೇ ಸಮಾಜದ ನಿಜವಾದ ಭದ್ರತಾ ವ್ಯವಸ್ಥೆ.

ವಾಚಕರ ವಾಣಿ

ರೈಲ್ವೆ ವಿನಾಯಿತಿ: ಅಂಗವಿಕಲರ ಅಲೆದಾಟ

ಕೇಂದ್ರ ಅಂಗವಿಕಲರ ಸಬಲೀಕರಣ ಇಲಾಖೆಯು ಕಟ್ಟುನಿಟ್ಟಿನ ವೈದ್ಯಕೀಯ ತಪಾಸಣೆಯ ಬಳಿಕ ಅಂಗವಿಕಲರಿಗೆ ಯುಡಿಐಡಿ ಕಾರ್ಡ್ ವಿತರಿಸುತ್ತಿದೆ. ಇದರಲ್ಲಿ ವ್ಯಕ್ತಿಯ ಅಂಗವೈಕಲ್ಯದ ಸ್ವರೂಪ, ಶೇಕಡಾವಾರು ಪ್ರಮಾಣ ಕುರಿತು ನುರಿತ ವೈದ್ಯಾಧಿಕಾರಿಗಳು ಪ್ರಮಾಣೀಕರಿಸಿರುತ್ತಾರೆ. ಹೀಗಿದ್ದರೂ, ಅಂಗವಿಕಲರು ರೈಲ್ವೆ ಟಿಕೆಟ್ ದರದ ವಿನಾಯಿತಿ ಪಡೆಯಲು ರೈಲ್ವೆ ಸಚಿವಾಲಯದಿಂದ ಪ್ರತ್ಯೇಕ ಅರ್ಜಿ ಪಡೆಯಬೇಕಿದೆ. ಅದಕ್ಕೆ ಸ್ಥಳೀಯ ಸರ್ಕಾರಿ ವೈದ್ಯರಿಂದ ಸಹಿ ಮಾಡಿಸಿಕೊಂಡು ಬರಬೇಕೆಂಬ ನಿಯಮವಿದೆ. ತೀವ್ರ ತರಹದ ಅಂಗವೈಕಲ್ಯ ಹೊಂದಿದವರು ಮತ್ತೊಬ್ಬರ ಸಹಾಯವಿಲ್ಲದೆ ಹೋಗಲು ಸಾಧ್ಯವಿಲ್ಲ. ಯುಡಿಐಡಿ ಕಾರ್ಡ್ ಚಾಲ್ತಿಯಲ್ಲಿರುವಾಗ ಮತ್ತೆ ಪರಿಶೀಲನೆಗೆ ಒಳಪಡಿಸುವುದು ನಿಯಮಗಳ ಪುನರಾವರ್ತನೆಯಷ್ಟೇ. ಪ್ರತ್ಯೇಕ ಅರ್ಜಿ ತುಂಬುವ ಪದ್ಧತಿಯನ್ನು ಕೈಬಿಡಬೇಕಿದೆ.

ಶಶಿಧರ್ ಎಂ.ಜೆ., ಬೆಂಗಳೂರು

ರೈಲ್ವೆ ಘೋಷಣೆ: ಕನ್ನಡದ ತಾತ್ಸಾರವೇಕೆ?

ಬೆಂಗಳೂರಿನಿಂದ ಕಲಬುರಗಿಗೆ ಇತ್ತೀಚೆಗೆ ವಂದೇ ಭಾರತ್ ರೈಲಿನಲ್ಲಿ ಪ್ರಯಾಣಿಸಿದೆ. ಬೋಗಿಗಳಲ್ಲಿ ಬಿತ್ತರಗೊಂಡ ಕನ್ನಡದಲ್ಲಿನ ಘೋಷಣೆಗಳು ತೀವ್ರ ಮುಜುಗರ ಉಂಟು ಮಾಡಿದವು. ಪ್ರತಿ ಘೋಷಣೆಯೂ ನಾಲ್ಕು ಭಾಷೆಗಳಲ್ಲಿ ಹೊರಡುತ್ತದೆ: ಇಂಗ್ಲಿಷ್, ಹಿಂದಿ, ಕನ್ನಡ ಮತ್ತು ತೆಲುಗು. ಇಂಗ್ಲಿಷ್‌ನಲ್ಲಿ ಹೇಳುವ ಹೆಣ್ಣುಧ್ವನಿಯು ಮಧುರವಾಗಿರುತ್ತದೆ; ಯಾವ ತಪ್ಪುಗಳೂ ಇರುವುದಿಲ್ಲ. ಹಿಂದಿಯೂ ಅಷ್ಟೇ. ತೆಲುಗು ಕೂಡ ತೆಲುಗಿನವರೇ ಹೇಳುವುದರಿಂದ ಯಾವ ಆಭಾಸವೂ ಅಲ್ಲಿರುವುದಿಲ್ಲ. ಆದರೆ, ಕನ್ನಡದ ವಿಷಯದಲ್ಲಿ ಇದು ಹಾಗಿಲ್ಲ ಎಂಬುದೇ ನೋವಿನ ಸಂಗತಿ. ಕನ್ನಡದಲ್ಲಿ ಘೋಷಿಸುವಾಗ ಇಂಗ್ಲಿಷ್‌ನಲ್ಲಿ ಹೇಳಿದ ಹೆಣ್ಣುಧ್ವನಿಯನ್ನೇ ಕನ್ನಡಕ್ಕೂ ಉಪಯೋಗಿಸಲಾಗಿದೆ. ಪದಗಳು ಹಲವಾರು ಬಾರಿ ಅಪಭ್ರಂಶಗೊಂಡು ಮುಜುಗರ ತರುತ್ತದೆ. ರೈಲ್ವೆ ಖಾತೆ ರಾಜ್ಯ ಸಚಿವರಾದ ವಿ. ಸೋಮಣ್ಣ ಕನ್ನಡಿಗರೇ ಆಗಿದ್ದಾರೆ. ಅವರು ಈ ಬಗ್ಗೆ ಲಕ್ಷ್ಯವಹಿಸಬೇಕಿದೆ.

ಮನು ಬಳಿಗಾರ್, ಬೆಂಗಳೂರು

ರೈಲ್ವೆ ಬಡ್ತಿ ಪರೀಕ್ಷೆ: ಕನ್ನಡಕ್ಕೆ ಅನ್ಯಾಯ

ಕನ್ನಡದಲ್ಲಿಯೇ ರೈಲ್ವೆ ಬಡ್ತಿ ಪರೀಕ್ಷೆ ನಡೆಸುತ್ತೇವೆಂದು ಸುಳ್ಳು ಹೇಳಿ ಮತ್ತೆ ಹಿಂದಿ ಮತ್ತು ಇಂಗ್ಲಿಷ್‌ನಲ್ಲಿ ನಡೆಸುತ್ತಿರುವುದು ಸರಿಯಲ್ಲ. ಇದೊಂದೇ ಪರೀಕ್ಷೆಯಲ್ಲ; ಒಕ್ಕೂಟ ಭಾರತ ನಡೆಸುವ ಎಲ್ಲಾ ಸ್ಪರ್ಧಾತ್ಮಕ ಪರೀಕ್ಷೆಗಳನ್ನೂ ಹಿಂದಿಯಲ್ಲಿ ಕೊಟ್ಟಂತೆ ಕನ್ನಡದಲ್ಲಿ ಕೊಡುವುದು ಒಕ್ಕೂಟದ ಧರ್ಮವಾಗಿದೆ. ಹಾಗೆ ಕೊಟ್ಟಾಗಷ್ಟೇ ಹಿಂದಿಯೇತರ ಭಾಷಿಕರಿಗೆ ಸ್ವಾತಂತ್ರ್ಯ ಸಿಕ್ಕಿದಂತಾಗುತ್ತದೆ. ಭಾಷಾವಾರು ರಾಜ್ಯಗಳಿಂದ ಆಗಿರುವ ಒಕ್ಕೂಟ ಭಾರತದಲ್ಲಿ ಇದಕ್ಕಾಗಿ ಕಾಡಿಬೇಡುವಂತೆ ಮಾಡಿರುವುದು ಅಸಹ್ಯ. ಇಂದಿಗೂ ಪ್ರಾದೇಶಿಕ ಭಾಷೆಗಳನ್ನು ಹೆಚ್ಚು ಅವಲಂಬಿಸಿರುವುದು ಶೋಷಿತ ಜಾತಿ ಸಮುದಾಯಗಳು ಮತ್ತು ಕಡುಬಡವರು ಎಂಬುದು ನಮಗೆಲ್ಲರಿಗೂ ನೆನಪಿರಬೇಕು. ಸಂವಿಧಾನದ ಮೂಲ ಆಶಯವಾದ ಸಮಾನತೆಯ ಹಕ್ಕಿನ ಉಲ್ಲಂಘನೆ ಸರಿಯಲ್ಲ. ‘ಒಂದು ದೇಶ ಒಂದು ಭಾಷೆ’ ಎಂದು ಹೋದರೆ ಅದು ಕೊನೆಗೆ, ‘ಒಂದು ಭಾಷೆ ಒಂದು ದೇಶ’ ಎನ್ನುವ ತರ್ಕಕ್ಕೆ ಬಂದು ನಿಲ್ಲುತ್ತದೆ.

ಗಿರೀಶ್ ಮತ್ತೇರ, ಚನ್ನಗಿರಿ

ಜನರ ಹೋರಾಟಕ್ಕೆ ‘ಕೈ’ ಸರ್ಕಾರ ಕಿವುಡು

ಬಿಡದಿ ಟೌನ್‌ಶಿಪ್ ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆ ಸ್ಥಳೀಯರ ಕಳವಳ ಮತ್ತು ಆತಂಕವನ್ನು ಪ್ರತಿಬಿಂಬಿಸುತ್ತದೆ. ಅಭಿವೃದ್ಧಿ ಯೋಜನೆಯನ್ನು ಜಾರಿಗೊಳಿಸುವಾಗ ಜನರ ಅಭಿಪ್ರಾಯ, ಹಿತಾಸಕ್ತಿ ಹಾಗೂ ಜೀವನೋಪಾಯಕ್ಕೆ ಆದ್ಯತೆ ನೀಡಬೇಕು. ಸಾರ್ವಜನಿಕರ ಬೇಡಿಕೆಗಳು ಮತ್ತು ಆತಂಕಗಳನ್ನು ಸರ್ಕಾರ ನಿರ್ಲಕ್ಷಿಸದೆ ಗಂಭೀರವಾಗಿ ಪರಿಗಣಿಸಬೇಕು. ಸಮಸ್ಯೆಯನ್ನು ಸಂವಾದದ ಮೂಲಕ ಪರಿಹರಿಸಲು ಪ್ರಯತ್ನಿಸಿದರೆ ಅನಗತ್ಯ ಸಂಘರ್ಷ ತಪ್ಪಲಿದೆ. ಜನರೊಂದಿಗೆ ಚರ್ಚೆ ನಡೆಸಿ ಎಲ್ಲರಿಗೂ ಒಪ್ಪಿಗೆಯಾಗುವ ಕ್ರಮ ಕೈಗೊಂಡರೆ ಜನರ ವಿಶ್ವಾಸ ಹೆಚ್ಚುತ್ತದೆ. ನಾಗರಿಕರ ನೋವು– ಭಾವನೆಗಳನ್ನು ಗೌರವಿಸುವುದು ಉತ್ತಮ ಆಡಳಿತದ ಲಕ್ಷಣ.

ಯಶವಂತ ಸಿ., ಶಿರಾ

ಯುದ್ಧ ಕರಾರು: ಸಮಾಧಾನದ ನಿಟ್ಟುಸಿರು

ಇಡೀ ವಿಶ್ವದ ಆರ್ಥಿಕತೆಗೆ ಮಾಯದಂತಹ ಗಾಯ ಮಾಡಿ ಯುದ್ಧದಿಂದ ದಣಿದ ಎರಡೂ ದೇಶಗಳು ಈಗ ಸ್ವಂತ ಲಾಭದ ಕರಾರುಗಳನ್ನು ಸೇರಿಸಿ ಒಪ್ಪಂದ ಮಾಡಿಕೊಳ್ಳುತ್ತಿವೆ. ಪರಿತಪ್ತ ದೇಶಗಳು ಸ್ವಲ್ಪ ಸಮಾಧಾನದ ನಿಟ್ಟುಸಿರು ಬಿಡುತ್ತಿವೆಯಾದರೂ, ಈ ಒಪ್ಪಂದವೂ ತಲೆಯ ಮೇಲೆ ತೂಗುವ ಕತ್ತಿಯಾಗದೆ ದೃಢವಾಗಿ ನಿಲ್ಲಲಿ ಎಂಬ ಆಶಯ ಹೊತ್ತಿವೆ. ಕಳೆದ ಮೂರೂವರೆ ತಿಂಗಳಲ್ಲಿ ನಡೆದ ನಾಯಕರ ಅರ್ಥವಿಲ್ಲದ ಜಿದ್ದಾಜಿದ್ದಿನ ಯುದ್ಧದಲ್ಲಿ ಸಾವಿರಾರು ಅಮಾಯಕರು ಜೀವ ಕಳೆದುಕೊಂಡಿದ್ದಾರೆ. ಇದಕ್ಕೆ ಹೊಣೆ ಯಾರು?

ಆರ್.ಟಿ. ಶರಣ್, ಕಲಬುರಗಿ

ಸಿಬಿಎಸ್‌ಇ: ಒಎಸ್‌ಎಂ ತಂತ್ರಾಂಶ ವಿಫಲ

ಸಿಬಿಎಸ್‌ಇ 12ನೇ ತರಗತಿಯ ಒಎಸ್‌ಎಂ ಮೌಲ್ಯಮಾಪನ ತಂತ್ರಾಂಶದ ವೈಫಲ್ಯ ಸಂಪೂರ್ಣವಾಗಿ ಸಿಬಿಎಸ್‌ಇ ವೆಬ್‌ಸೈಟನ್ನು ಸ್ಥಗಿತಗೊಳಿಸಿದೆ. ಕಳೆದ ಒಂದು ತಿಂಗಳಿಂದ ಸಿಬಿಎಸ್‌ಇ ಟ್ರೈನಿಂಗ್ ಪೋರ್ಟಲ್, ಸ್ಪೋರ್ಟ್ಸ್ ಪೋರ್ಟಲ್, ಒಯಸಿಸ್ ಪೋರ್ಟಲ್ ಸೇರಿ ಎಲ್ಲವೂ ನಿಷ್ಕ್ರಿಯಗೊಂಡಿವೆ. ಇದರ ಪರಿಣಾಮ ಸಿಬಿಎಸ್‌ಇ ಶಾಲೆಯ ಎಲ್ಲಾ ಶೈಕ್ಷಣಿಕ ಕೆಲಸ ನಿಂತುಹೋಗಿದೆ. ಪ್ರಸ್ತುತ ಪ್ರತಿಯೊಂದು ಕೆಲಸವನ್ನು ಡಿಜಿಟಲೀಕರಣ ಮಾಡಿರುವ ಕೇಂದ್ರಕ್ಕೆ ಇದೊಂದು ಎಚ್ಚರಿಕೆಯ ಪಾಠವಾಗಬೇಕಿದೆ. ಅತಿಯಾದ ಡಿಜಿಟಲ್ ಮೋಹ ಹಾಗೂ ಅವಲಂಬನೆ ಎಷ್ಟು ಹಾನಿಕಾರಕ ಎಂಬುದಕ್ಕೆ ಇದು ನಿದರ್ಶನ. ಇನ್ನಾದರೂ ಕೇಂದ್ರ ಹಾಗೂ ರಾಜ್ಯ ಸರ್ಕಾರವು ಸರ್ಕಾರಿ ದಾಖಲೆ, ಜನರ ಮಾಹಿತಿಯನ್ನು ಡಿಜಿಟಲೀಕರಣಗೊಳಿಸುವ ಮುನ್ನ ಸೂಕ್ತ ಭದ್ರತಾ ವ್ಯವಸ್ಥೆ ಅಳವಡಿಸಿಕೊಳ್ಳಬೇಕಿದೆ.

ಸುರೇಂದ್ರ ಪೈ, ಭಟ್ಕಳ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.
All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಭಾರತದ ಆಹಾರ ಉತ್ಪನ್ನ ವಿದೇಶಗಳಲ್ಲೇಕೆ ನಿಷೇಧ?

ಹಣ್ಣು, ತರಕಾರಿ, ದವಸ- ಧಾನ್ಯಗಳಲ್ಲಿ ಕೀಟನಾಶಕಗಳ ವಿಷದ ಅಂಶ ಪತ್ತೆ

ಪ್ರಜಾವಾಣಿ ವಾರ್ತೆ

ಇದು ಮಾವಿನ ಹಂಗಾಮು. ಭಾರತದಲ್ಲಿ ಜಗತ್ತಿನಲ್ಲಿಯೇ ಅತಿ ಹೆಚ್ಚು (ವಾರ್ಷಿಕ 2.8 ಕೋಟಿ ಟನ್) ಮಾವು ಬೆಳೆಯಲಾಗುತ್ತಿದ್ದು, ಹಲವು ದೇಶಗಳಿಗೆ ರಫ್ತು ಮಾಡಲಾಗುತ್ತಿದೆ. ಕಳೆದ ತಿಂಗಳು ಭಾರತದ ಮಾವನ್ನು ಜಪಾನ್ ತಿರಸ್ಕರಿಸಿತ್ತು. ಮಾವಿನಲ್ಲಿ ವಿಷಕಾರಿ ಅಂಶಗಳು ಪತ್ತೆಯಾಗಿದ್ದು, ಅವು ತಿನ್ನಲು ಯೋಗ್ಯವಲ್ಲ ಎಂದು ಜಪಾನ್ ಹೇಳಿದೆ. ಇದೇ ವೇಳೆ, ಚೀನಾದಿಂದಲೂ ಇಂಥದ್ದೇ ಸುದ್ದಿ ಬಂದಿದೆ. ಮೆಥಾಮೈಡೋಪಾಸ್ ಅಂಶವು ಮಿತಿಮೀರಿದ ಪ್ರಮಾಣದಲ್ಲಿದೆ ಎಂದು ಭಾರತದ ಕೆಂಪು ಮೆಣಸಿನಕಾಯಿಯನ್ನು ಚೀನಾ ತಿರಿಸ್ಕರಿಸಿದೆ. ಚೀನಾ, ಭಾರತದ ಕೆಂಪು ಮೆಣಸಿನಕಾಯಿಯ ದೊಡ್ಡ ಆಮದುದಾರ ದೇಶವಾಗಿದೆ. ನೇಪಾಳವೂ ಭಾರತದ ಮಾವನ್ನು ಇದೇ ಕಾರಣಕ್ಕೆ ತಿರಸ್ಕರಿಸಿದೆ ಎಂದು ವರದಿಯಾಗಿದೆ (ಆದರೆ, ಕೇಂದ್ರ ಸರ್ಕಾರ ನೇಪಾಳಕ್ಕೆ ಸಂಬಂಧಿಸಿದ ಸುದ್ದಿಯನ್ನು ತಳ್ಳಿಹಾಕಿದೆ).

ಈ ವರದಿಗಳು ಭಾರತದ ಹಣ್ಣು, ತರಕಾರಿ, ಆಹಾರ ಉತ್ಪನ್ನಗಳ ಗುಣಮಟ್ಟದ ಬಗ್ಗೆ ಕಳವಳ ಉಂಟುಮಾಡಿವೆ. 2024ರ ಮೇ 1 ಮತ್ತು 2026ರ ಮೇ 30ರ ನಡುವೆ ಭಾರತದ 450 ಉತ್ಪನ್ನಗಳನ್ನು ಐರೋಪ್ಯ ಆಹಾರ ಸುರಕ್ಷತೆ ಸಂಸ್ಥೆಯು ತಿರಸ್ಕರಿಸಿದೆ. ಈ ಪೈಕಿ 365 ಉತ್ಪನ್ನಗಳು ಕೀಟನಾಶಕದ ಮತ್ತು ಭಾರಲೋಹದ ಅಂಶ ಹೊಂದಿದ್ದರೆ, 50 ಉತ್ಪನ್ನಗಳು ಸಾಲ್‌ಮೊನೆಲ್ಲಾ, ಅಫ್ಲಟಾಕ್ಸಿನ್ ಬಿ1 ಮತ್ತು ಅಚ್ರಟಾಕ್ಸಿನ್‌ನಂಥ ರೋಗಕಾರಕಗಳನ್ನು ಒಳಗೊಂಡಿದೆ. ಗಿಡಮೂಲಿಕೆ, ಸಂಬಾರ ಪದಾರ್ಥಗಳು, ಹಣ್ಣುಗಳು, ಒಣಹಣ್ಣು, ಕಾಳು, ಬೀಜಗಳು, ಧಾನ್ಯಗಳು, ಬೇಕರಿ ಉತ್ಪನ್ನಗಳು ಮತ್ತು ಇತರೆ ಆಹಾರ ಉತ್ಪನ್ನಗಳು ಈ ಪಟ್ಟಿಯಲ್ಲಿವೆ. ಕ್ಲೋರೊಪೈರಿಫೋಸ್, ಎಥಿಲೀನ್ ಆಕ್ಸೈಡ್, ಕ್ಯಾಡ್ಮಿಯಂ, ಸೀಸ, ಮತ್ತು ಪಾದರಸದಂಥ ಅಪಾಯಕಾರಿ ವಸ್ತುಗಳ ಅಂಶಗಳು ಆಹಾರ ಉತ್ಪನ್ನಗಳಲ್ಲಿ ಪತ್ತೆಯಾಗಿವೆ.

ಉತ್ಪನ್ನಗಳಿಗೆ ವಿಷ ಸೇರುತ್ತಿರುವುದು ಹೇಗೆ?: ಹಣ್ಣು, ತರಕಾರಿ, ಆಹಾರ ಉತ್ಪನ್ನಗಳಲ್ಲಿ ವಿಷಕಾರಿ ಅಂಶ ಸೇರಲು ಹಲವು ಕಾರಣಗಳಿವೆ. ಹಲವು ಹಂತಗಳಲ್ಲಿ ಇದು ನಡೆಯುತ್ತಿದೆ. ಉತ್ಪಾದನೆಗೆ ಬೀಜಗಳನ್ನು ಸಿದ್ಧಪಡಿಸುವ ಹಂತದಿಂದಲೇ ಇದು ಆರಂಭವಾಗುತ್ತದೆ. ಬೀಜಗಳು ಕೆಡದಂತೆ ಸಂಗ್ರಹಿಸಿಡಲು ಕಂಪನಿಗಳು ರಾಸಾಯನಿಕಗಳನ್ನು ಬಳಸುತ್ತವೆ. ಇದೇ ರೀತಿ, ಹಸಿರು ಕ್ರಾಂತಿಯ ನಂತರ ದೇಶದಲ್ಲಿ ಉತ್ತಮ ಇಳುವರಿ ಪಡೆಯುವ ಸಲುವಾಗಿ ರೈತರು ಮಿತಿಮೀರಿ ಕೀಟನಾಶಕ, ಕಳೆನಾಶಕಗಳನ್ನು ಬಳಸುತ್ತಿದ್ದಾರೆ. ಹಣ್ಣು, ತರಕಾರಿ ಕೊಯ್ಲಾದ ನಂತರ ದಾಸ್ತಾನು ಹಂತದಲ್ಲಿಯೂ ಕೆಡದಂತೆ ರಾಸಾಯನಿಕಗಳನ್ನು ಸಿಂಪಡಿಸಲಾಗುತ್ತದೆ. ನಂತರ ಕಾಯಿಗಳು ಬೇಗ ಹಣ್ಣಾಗಲೂ ರಾಸಾಯನಿಕಗಳನ್ನು ಉಪಯೋಗಿಸಲಾಗುತ್ತಿದೆ. ವಿದೇಶಗಳಲ್ಲಿ ನಿರ್ಬಂಧಿಸಲಾದ ಹಲವು ಅಪಾಯಕಾರಿ ಕೀಟನಾಶಕಗಳನ್ನು ಭಾರತದಲ್ಲಿ ಮುಕ್ತ ಮಾರುಕಟ್ಟೆಯಲ್ಲಿ ಮಾರಲಾಗುತ್ತಿದ್ದು, ಅವುಗಳನ್ನು ರೈತರು, ವ್ಯಾಪಾರಿಗಳು ಬಳಸುತ್ತಿದ್ದಾರೆ. ಈ ಎಲ್ಲ ಹಂತಗಳಲ್ಲಿ ಮಿತಿಮೀರಿದ, ವಿವೇಚನಾರಹಿತ ರೀತಿಯಲ್ಲಿ ಅಪಾಯಕಾರಿ ರಾಸಾಯನಿಕಗಳನ್ನು ಬಳಸುತ್ತಿದ್ದು, ಅವು ಬಳಕೆದಾರರ ದೇಹ ಸೇರುತ್ತಿವೆ; ಕ್ಯಾನ್ಸರ್‌ನಂಥ ಗಂಭೀರ ಕಾಯಿಲೆಗಳಿಗೆ ಕಾರಣವಾಗುತ್ತಿವೆ.

ಭಾರತದಲ್ಲಿ ಮಾವು, ಸೇಬು, ದ್ರಾಕ್ಷಿ, ದಾಳಿಂಬೆ, ಬಾಳೆಹಣ್ಣು ಮುಂತಾದ ಹಣ್ಣುಗಳು, ಟೊಮೆಟೊ, ಕ್ಯಾರೆಟ್, ಬೀನ್ಸ್, ಕೋಸು ಮುಂತಾದ ತರಕಾರಿಗಳು; ಕೊನೆಗೆ ಟೀ ಪುಡಿ, ಮಸಾಲೆ ಪುಡಿಯಂಥ ಪದಾರ್ಥಗಳಲ್ಲೂ ಅಪಾಯಕಾರಿ ರಾಸಾಯನಿಕಗಳ ಅಂಶಗಳಿರುವುದು ಪತ್ತೆಯಾಗಿದೆ. ಜಾಗತಿಕ ಮಾರುಕಟ್ಟೆಯಲ್ಲಿ ಪದೇ ಪದೇ ಭಾರತದ ಆಹಾರ ಉತ್ಪನ್ನಗಳ ಗುಣಮಟ್ಟದ ಬಗ್ಗೆ ವ್ಯತಿರಿಕ್ತ ವರದಿಗಳು ಬರುತ್ತಲೇ ಇವೆ.

ಮಿತಿಮೀರಿದ ರಾಸಾಯನಿಕಗಳು ಪತ್ತೆ: ಭಾರತದಲ್ಲಿ ಆಹಾರ ಉತ್ಪನ್ನಗಳು ವಿಷಮಯವಾಗುತ್ತಿರುವುದರ ಬಗ್ಗೆ ಹಲವು ದಶಕಗಳಿಂದಲೂ ದೂರುಗಳು ಕೇಳಿಬರುತ್ತಲೇ ಇವೆ.

‘ಭಾರತದಲ್ಲಿ ಆಹಾರ ಸಾಮಗ್ರಿಗಳಲ್ಲಿ ಕೀಟನಾಶಕಗಳ ಉಳಿಕೆ: ಒಂದು ಅವಲೋಕನ’ ಎಂಬ ಅಧ್ಯಯನದ ವರದಿ 2024ರಲ್ಲಿ ಪ್ರಕಟವಾಗಿದೆ. ಕೇಂದ್ರ ಕೃಷಿ ಸಚಿವಾಲಯದ ಯೋಜನೆಯ ಅಡಿಯಲ್ಲಿ ಮೂವರು ಅಧ್ಯಯನಕಾರರು ನಡೆಸಿದ್ದು, 2018–23ರ ನಡುವೆ 1.30 ಲಕ್ಷದಷ್ಟು ಆಹಾರ ಮಾದರಿಗಳನ್ನು ಸಂಗ್ರಹಿಸಿ, ಅದರಲ್ಲಿರುವ ವಿಷಕಾರಿ ಅಂಶಗಳ ಉಳಿಕೆಯ (pesticide residue) ಪ್ರಮಾಣವನ್ನು ವಿಶ್ಲೇಷಣೆಗೆ ಒಳಪಡಿಸಿದ್ದರು. ಒಟ್ಟು ಮಾದರಿಗಳ ಪೈಕಿ, ಶೇ 28ರಲ್ಲಿ ಕೀಟನಾಶಕಗಳ ಉಳಿಕೆ ಅಂಶಗಳು ಕಂಡುಬಂದಿದ್ದವು. ಶೇ 3.5ರಷ್ಟು ಮಾದರಿಗಳಲ್ಲಿ ಭಾರತದ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಸಂಸ್ಥೆಯು (ಎಫ್‌ಎಸ್‌ಎಸ್‌ಎಐ) ನಿಗದಿಪಡಿಸಿದ್ದಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ (ಎಂಆರ್‌ಎಲ್) ರಾಸಾಯನಿಕಗಳ ಉಳಿಕೆ ಅಂಶಗಳು ಇರುವುದು ಪತ್ತೆಯಾಗಿತ್ತು.

ಈ ಅಧ್ಯಯನದ ವಿವರಗಳನ್ನು ಕೇಂದ್ರ ಸರ್ಕಾರ ರಾಜ್ಯ ಸರ್ಕಾರಗಳೊಂದಿಗೆ ಹಂಚಿಕೊಂಡು, ಕೀಟನಾಶಕಗಳು ಮತ್ತು ರಾಸಾಯನಿಕಗಳ ಬಳಕೆಗೆ ಅಂಕುಶ ಹಾಕುವಂತೆ, ಸಮಗ್ರ ಕೀಟ ನಿರ್ವಹಣೆ (ಐಪಿಎಂ) ಕ್ರಮಗಳನ್ನು ಅಳವಡಿಸಿಕೊಳ್ಳುವಂತೆ ರೈತರನ್ನು ಪ್ರೇರೇಪಿಸಲು ಸೂಚಿಸಿತ್ತು.

2024ರ ಏ.24ರಂದು ಐರೋಪ್ಯ ಒಕ್ಕೂಟವು ಭಾರತದ ಉತ್ಪನ್ನಗಳಲ್ಲಿ ವಿಷಕಾರಿ ಅಂಶ ಇದೆ ಎಂದು 527 ಉತ್ಪನ್ನಗಳನ್ನು ಒಕ್ಕೂಟದ 27 ಸದಸ್ಯ ರಾಷ್ಟ್ರಗಳಲ್ಲಿ ಮಾರಬಾರದೆಂದು ನಿರ್ಬಂಧ ವಿಧಿಸಿದೆ ಎಂದು ವರದಿಯಾಗಿತ್ತು. ನಂತರ ಕೇಂದ್ರ ಸರ್ಕಾರ ಈ ಬಗ್ಗೆ ಕಠಿಣ ಕ್ರಮ ಕೈಗೊಳ್ಳುವುದಾಗಿ ಭರವಸೆ ನೀಡಿತ್ತು. ಆದರೆ, ಇದು ಈ ವರ್ಷವೂ ಮುಂದುವರಿದಿದೆ.

ಭಾರತದ ಕೆಲವು ಆಹಾರ ಉತ್ಪನ್ನಗಳನ್ನು ವಿದೇಶಗಳಲ್ಲಿ ತಿರಸ್ಕರಿಸಲಾಗಿದೆ. ಅದರಿಂದ ಭಾರತದ ರೈತರು, ವ್ಯಾಪಾರಸ್ಥರು ನಷ್ಟ ಅನುಭವಿಸವಂತಾಗಿದೆ ಎನ್ನುವುದು ಒಂದೆಡೆ. ಅದಕ್ಕಿಂತಲೂ ಮುಖ್ಯವಾದ ವಿಚಾರ ಎಂದರೆ, ಅಪಾಯಕಾರಿಯಾದ ಆಹಾರ ಉತ್ಪನ್ನಗಳನ್ನು ಭಾರತದಲ್ಲಿ ಬೆಳೆಯಲಾಗುತ್ತಿದ್ದು, ಅವುಗಳನ್ನು ದೇಶದಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ. ದೇಶದಲ್ಲಿ ಕ್ಯಾನ್ಸರ್ ಸೇರಿದಂತೆ ಇತರೆ ಹಲವು ಕಾಯಿಲೆಗಳು ಹೆಚ್ಚಾಗುತ್ತಿದ್ದು, ಆಹಾರ ಪದಾರ್ಥಗಳು ವಿಷಮಯವಾಗುತ್ತಿರುವುದೂ ಅದಕ್ಕೆ ಒಂದು ಕಾರಣ ಎನ್ನಲಾಗುತ್ತಿದೆ. ಈ ದಿಸೆಯಲ್ಲಿ ಸರ್ಕಾರ, ರೈತರು, ವ್ಯಾಪಾರಸ್ಥರು ಮತ್ತು ಗ್ರಾಹಕರು ಎಚ್ಚೆತ್ತುಕೊಳ್ಳಬೇಕಿದೆ. ಇಲ್ಲದಿದ್ದರೆ ಬದುಕಲು ಸೇವಿಸುವ ಆಹಾರ ಉತ್ಪನ್ನಗಳೇ ಬದುಕನ್ನು ಕಸಿಯುತ್ತವೆ ಎನ್ನುತ್ತಾರೆ ತಜ್ಞರು.

ಆಧಾರ: ಇಂಡಿಯನ್ ಜರ್ನಲ್ ಆಫ್ ಪ್ಲಾಂಟ್ ಪ್ರೊಟೆಕ್ಷನ್, ಸೆಂಟರ್ ಫಾರ್ ಸೈನ್ಸ್ ಆ್ಯಂಡ್ ಎನ್ವಿರಾನ್‌ಮೆಂಟ್, ಡೌನ್ ಟು ಅರ್ಥ್, ಸಂಸತ್ತಿನಲ್ಲಿ ಸಚಿವರ ಉತ್ತರಗಳು, ಮಾಧ್ಯಮ ವರದಿಗಳು

ಭಾರತದಲ್ಲಿ ಅಂದಾಜು ಶೇ 20ರಿಂದ ಶೇ 30ರಷ್ಟು ಬೆಳೆ ಕ್ರಿಮಿ-ಕೀಟಗಳು, ರೋಗಗಳು, ಕಳೆಗಳು ಮತ್ತು ಇಲಿಗಳಂತಹ ಪ್ರಾಣಿಗಳಿಂದ ನಾಶವಾಗುತ್ತದೆ ಎಂದು ಅಂದಾಜಿಸಲಾಗಿದೆ. ಕೀಟಗಳಿಂದ ಬೆಳೆಯನ್ನು ರಕ್ಷಿಸಲು ಕೀಟನಾಶಕಗಳನ್ನು ಹೆಚ್ಚು ಬಳಸಲಾಗುತ್ತದೆ. ಆದರೆ, ಇವುಗಳ ಮಿತಿ ಮೀರಿದ ಬಳಕೆಯು ಕೊಯ್ಲು ಮಾಡಿದ ಆಹಾರ ಉತ್ಪನ್ನಗಳಲ್ಲಿ ಆ ಕೀಟನಾಶಕದ ವಿಷಕಾರಿ ಅಂಶ ಉಳಿಯುವಂತೆ ಮಾಡುತ್ತದೆ ಎಂಬುದು ತಜ್ಞರ ಅಭಿಪ್ರಾಯ.

ಭಾರತದ ಹಣ್ಣು, ತರಕಾರಿ, ಆಹಾರ ಉತ್ಪನ್ನಗಳು ಜಾಗತಿಕ ಮಟ್ಟದಲ್ಲಿ ಮತ್ತೊಮ್ಮೆ ನಿರಾಕರಣೆಗೆ ಒಳಗಾಗಿವೆ. ಅವುಗಳಲ್ಲಿ ಕ್ಯಾನ್ಸರ್‌ಕಾರಕ ಕೀಟನಾಶಕಗಳು ಮತ್ತು ಭಾರ ಲೋಹದ ಅಂಶಗಳು ನಿಗದಿತ ಮಿತಿಗಿಂತ ಹೆಚ್ಚಾಗಿವೆ ಎಂದು ಐರೋಪ್ಯ ಒಕ್ಕೂಟ, ಜಪಾನ್, ಚೀನಾವು ಭಾರತದ ಕೆಲವು ಉತ್ಪನ್ನಗಳನ್ನು ತಿರಸ್ಕರಿಸಿವೆ. ಕಳೆದ ವರ್ಷವೂ ಇದೇ ರೀತಿ ನಡೆದಿತ್ತು. ಆಹಾರ ಉತ್ಪನ್ನಗಳ ಸುರಕ್ಷತೆ ಖಾತ್ರಿಪಡಿಸಲು ಕಠಿಣ ನಿಯಮಾವಳಿ ರೂಪಿಸುವುದಾಗಿ ಕೇಂದ್ರ ಸರ್ಕಾರ ಆಗ ಹೇಳಿತ್ತು. ಆದರೆ, ಈ ವರ್ಷವೂ ಅದೇ ಪುನರಾವರ್ತನೆಯಾಗಿದೆ. ವಿದೇಶಗಳು ಅಪಾಯಕಾರಿ ಎಂದು ನಿರಾಕರಿಸುತ್ತಿರುವ ಆಹಾರ ಉತ್ಪನ್ನಗಳನ್ನು ಭಾರತದಲ್ಲಿ ವ್ಯಾಪಕವಾಗಿ ಬಳಸಲಾಗುತ್ತಿದೆ

ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ನೆರವು ನಿಧಿ

ಎಸ್‌ಎಸ್‌ಎಲ್‌ಸಿಯಲ್ಲಿ ಉನ್ನತ ಶ್ರೇಣಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ದಾನಿಗಳ ನೆರವಿನಿಂದ ಪ್ರಜಾವಾಣಿ- ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಆನ್‌ಲೈನ್ ಮೂಲಕ ಹಣವನ್ನು 'Deccan Herald- Prajavani Relief Trust'ಗೆ ಕಳುಹಿಸಬಹುದು.

₹ 5,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ದಾನ ನೀಡಿದ ಹಣಕ್ಕೆ ಆದಾಯ ತೆರಿಗೆ ಕಾಯ್ದೆಯ ಸೆಕ್ಷನ್ 133ರ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಪಕ್ಕದಲ್ಲಿರುವ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ. ಚೆಕ್, ನಗದು ಮತ್ತು ಡಿ.ಡಿ ಸ್ವೀಕರಿಸುವುದಿಲ್ಲ.

https://bit.ly/3xFpoz4

ಅರ್ಹ ವಿದ್ಯಾರ್ಥಿಗಳಿಂದ ಅರ್ಜಿ ಆಹ್ವಾನ

2026ನೇ ಸಾಲಿನ ಎಸ್‌ಎಸ್‌ಎಲ್‌ಸಿಯಲ್ಲಿ ಹೆಚ್ಚು ಅಂಕ ಗಳಿಸಿದ ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಅರ್ಜಿಯ ಜತೆಗೆ ಅರ್ಜಿದಾರರ ಆಧಾರ್, ಮೊಬೈಲ್ ಸಂಖ್ಯೆ, ಬ್ಯಾಂಕ್ ವಿಳಾಸ ಮತ್ತು ಐಎಫ್‌ಎಸ್‌ಸಿ ನಂಬರ್ ಇರುವ ಬ್ಯಾಂಕ್ ಪಾಸ್‌ಬುಕ್ ಪುಟದ ಪ್ರತಿ ಮತ್ತು ಚೆಕ್ ಹಾಳೆಯ ಪ್ರತಿಯನ್ನು ಕಡ್ಡಾಯವಾಗಿ ಸಲ್ಲಿಸಬೇಕು. ಲಕೋಟೆಯ ಮೇಲೆ **‘ಶೈಕ್ಷಣಿಕ ನೆರವಿಗೆ ಅರ್ಜಿ’** ಎಂದು ಬರೆಯಬೇಕು.

ಯಾವ ಕಾರಣಕ್ಕೆ ತಮಗೆ ಶೈಕ್ಷಣಿಕ ನಿಧಿಯ ಅವಶ್ಯಕತೆಯಿದೆ ಎಂದು ವಿದ್ಯಾರ್ಥಿಯು ವಿವರವನ್ನು ಸ್ವಬರಹದಲ್ಲಿ ವಿವರವಾಗಿ ನೀಡಬೇಕು.

ವಿಳಾಸ

ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್– ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು – 560001

ಕೇಂದ್ರ ಸರ್ಕಾರ ಹೇಳುವುದೇನು?

- ಆಹಾರ ಉತ್ಪನ್ನಗಳಲ್ಲಿ ಕೀಟನಾಶಕ ಪ್ರಮಾಣದ ಮೇಲೆ ನಿಗಾ ಇಡಲು ಮತ್ತು ವಿಷಕಾರಿ ಅಂಶದ ಪ್ರಮಾಣ ಎಷ್ಟಿದೆ ಎಂಬುದನ್ನು ಪತ್ತೆಹಚ್ಚಲು 2005–26ರಿಂದಲೂ ‘ರಾಷ್ಟ್ರೀಯ ಮಟ್ಟದಲ್ಲಿ ಕೀಟನಾಶಕದ ಉಳಿಕೆ ಅಂಶದ ಮೇಲ್ವಿಚಾರಣೆ’ (ಎಂಪಿಆರ್‌ಎನ್‌ಎಲ್) ಕಾರ್ಯಕ್ರಮ ಜಾರಿಯಲ್ಲಿದೆ
- ಈ ಕಾರ್ಯಕ್ರಮದ ಅಡಿಯಲ್ಲಿ ತರಕಾರಿಗಳು, ಹಣ್ಣುಗಳು, ಮಸಾಲೆ ಪದಾರ್ಥಗಳು, ಧಾನ್ಯಗಳು, ಬೇಳೆಕಾಳುಗಳು, ಗಿಡಮೂಲಿಕೆಗಳು, ಮೀನು, ಮಾಂಸ, ಮೊಟ್ಟೆ, ಚಹಾ, ಹಾಲು ಸೇರಿದಂತೆ ಎಲ್ಲ ಆಹಾರ ವಸ್ತುಗಳ ಮಾದರಿಗಳನ್ನು ದೇಶದ ವಿವಿಧ ಭಾಗಗಳಿಂದ ಸಂಗ್ರಹಿಸಿ, ಪರೀಕ್ಷೆ ಮತ್ತು ಮಾಪನಾಂಕ ಪ್ರಯೋಗಾಲಯಗಳ ರಾಷ್ಟ್ರೀಯ ಮಾನ್ಯತಾ ಮಂಡಳಿಯು ವಿಶ್ಲೇಷಣೆಗೆ ಒಳಪಡಿಸುತ್ತದೆ
- ಕೀಟನಾಶಕಗಳ ಬಳಕೆ ಮತ್ತು ಸುರಕ್ಷಿತ ನಿರ್ವಹಣೆ ಬಗ್ಗೆ ರೈತರು, ರಾಜ್ಯ ಕೃಷಿ ವಿಸ್ತರಣೆ ಅಧಿಕಾರಿಗಳು, ಕ್ರಿಮಿನಾಶಕಗಳ ಮಾರಾಟಗಾರರಲ್ಲಿ ಜಾಗೃತಿ ಮೂಡಿಸಲು ಮತ್ತು ತರಬೇತಿ ನೀಡಲು ಕೃಷಿ ಸಚಿವಾಲಯವು ಕೇಂದ್ರ ಸಂಯೋಜಿತ ಕ್ರಿಮಿನಾಶಕ ನಿರ್ವಹಣಾ ಕೇಂದ್ರಗಳು, ಕೃಷಿ ವಿಜ್ಞಾನ ಕೇಂದ್ರಗಳು ಮತ್ತು ರಾಜ್ಯ ಕೃಷಿ ಇಲಾಖೆಗಳ ಮೂಲಕ ವಿವಿಧ ರೀತಿಯ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತದೆ. ಕೃಷಿ ಚಟುವಟಿಕೆಗಳಲ್ಲಿ ರಾಸಾಯನಿಕ ಕೀಟನಾಶಕಗಳ ಬಳಕೆ ಕೊನೆಯ ಆಯ್ಕೆಯಾಗಬೇಕು ಎಂಬುದನ್ನು ಪ್ರಚಾರ ಮಾಡಲಾಗುತ್ತಿದೆ
- ಕೀಟನಾಶಕ ಅಂಶಗಳ ಉಳಿಕೆ ಪ್ರಮಾಣವನ್ನು ಪರೀಕ್ಷಿಸುವುದಕ್ಕಾಗಿ ಎಫ್‌ಎಸ್‌ಎಸ್‌ಎಐ ಹಲವು ಕ್ರಮಗಳನ್ನು ಕೈಗೊಂಡಿದೆ

(1). ಈ ಪರೀಕ್ಷೆ ಮಾಡುವ ಸಾಮರ್ಥ್ಯವಿರುವ ಎಫ್‌ಎಸ್‌ಎಸ್‌ಎಐ ಅಧಿಸೂಚಿತ 159 ಪ್ರಯೋಗಾಲಯಗಳು ದೇಶದಲ್ಲಿವೆ

(2). ಪರೀಕ್ಷೆ ನಡೆಸಲು ಅನುಕೂಲವಾಗುವಂತೆ ಪ್ರಯೋಗಾಲಯಗಳಿಗೆ ಅತ್ಯಾಧುನಿಕ ಸಲಕರಣೆಗಳನ್ನು ಖರೀದಿ ಮಾಡುವುದಕ್ಕೆ ನೆರವಾಗಿದೆ

(3). ಹೆಚ್ಚುವರಿಯಾಗಿ ದೇಶದ 35 ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಆಹಾರ ಉತ್ಪನ್ನಗಳ ಪರೀಕ್ಷೆಗಾಗಿ ಸಂಚಾರಿ ಪರೀಕ್ಷಾ ಪ್ರಯೋಗಾಲಯಗಳನ್ನು ನಿಯೋಜಿಸಲಾಗಿದೆ

- ರೈತರಿಗೆ ಗುಣಮಟ್ಟದ ಕೀಟನಾಶಕಗಳನ್ನು ಪೂರೈಸಲು ಕೃಷಿ ಸಚಿವಾಲಯವು 1968ರ ಕೀಟನಾಶಕಗಳ ಕಾಯ್ದೆಯ ವಿವಿಧ ನಿಯಮಗಳನ್ನು ಜಾರಿಗೆ ತರಲಾಗಿದೆ. 1971ರ ಕೀಟನಾಶಕಗಳ ನಿಯಮಾವಳಿಗಳ ಅಡಿ ರಾಜ್ಯ ಸರ್ಕಾರಗಳ ಪರವಾನಗಿ ಇಲ್ಲದೇ ಯಾವುದೇ ಕೀಟ ನಾಶಕದ ತಯಾರಿಕೆ, ದಾಸ್ತಾನು, ಮಾರಾಟ ಮಾಡುವಂತಿಲ್ಲ. ಅಧಿಕಾರಿಗಳು ನಿಯಮಿತವಾಗಿ ಕೀಟನಾಶಕ ತಯಾರಿಕಾ ಕಂಪನಿಗಳು, ಡೀಲರ್‌ಗಳು/ಮಾರಾಟಗಾರರ ಸ್ಥಳಗಳಲ್ಲಿ ಪರಿಶೀಲನೆ ನಡೆಸುತ್ತಿರುತ್ತಾರೆ. ಗುಣಮಟ್ಟ ವಿಶ್ಲೇಷಣೆಗಾಗಿ ಕೀಟನಾಶಕಗಳ ಮಾದರಿ ಸಂಗ್ರಹಿಸಲಾಗುತ್ತದೆ. ಒಂದು ವೇಳೆ ಪರೀಕ್ಷೆಯಲ್ಲಿ ಕೀಟನಾಶಕದ ಮಾದರಿ ವಿಫಲವಾದರೆ ತಯಾರಕರು ಅಥವಾ ಡೀಲರ್‌ಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ. ಮಾರುಕಟ್ಟೆಯಲ್ಲಿ ಗುಣಮಟ್ಟದ ಕೀಟನಾಶಕಗಳು ಸಿಗುವಂತೆ ಮಾಡಲು ಕಾಯ್ದೆಯ 1968ರ ಸೆಕ್ಷನ್ 20 ಅಡಿಯಲ್ಲಿ ಸಂಬಂಧಿಸಿದ ಅಧಿಕಾರಿಗಳು ದಿಢೀರ್ ತಪಾಸಣೆ, ನಡೆಸುತ್ತಾರೆ. ಒಂದು ವೇಳೆ ಅಕ್ರಮ ಕಂಡು ಬಂದರೆ, ಕಾನೂನು ಕ್ರಮ ಕೈಗೊಳ್ಳಲಾಗುತ್ತದೆ
- ಸುಸ್ಥಿರ ಕೃಷಿಗೆ ಮತ್ತು ಸಮಗ್ರ ಕೀಟ ನಿರ್ವಹಣೆ ಕ್ರಮಗಳಿಗೆ ಉತ್ತೇಜನ ನೀಡಲಾಗುತ್ತಿದೆ. ಜೈವಿಕ ಕೀಟನಾಶಕಗಳು ಮತ್ತು ಜೈವಿಕ ನಿಯಂತ್ರಣ ಏಜೆಂಟ್‌ಗಳ ಬಳಕೆಯನ್ನು ಪ್ರೋತ್ಸಾಹಿಸುತ್ತಿದೆ

ನಿಯಮ ಜಾರಿ: ವಾಸ್ತವ ಭಿನ್ನ

ಸರ್ಕಾರ ಕಾನೂನು ಮತ್ತು ನಿಯಮಗಳ ಅಡಿಯಲ್ಲಿ ಅತಿಯಾದ ರಾಸಾಯನಿಕ, ಕೀಟನಾಶಕಗಳ ಬಳಕೆಯನ್ನು ನಿಯಂತ್ರಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಎಂದು ಹೇಳುತ್ತದೆ. ಆದರೆ, ವಾಸ್ತವದಲ್ಲಿ ಅದು ಪೂರ್ಣ ಪ್ರಮಾಣದಲ್ಲಿ ಜಾರಿಗೆ ಬರುತ್ತಿಲ್ಲ.

ರೈತರು, ಮಧ್ಯವರ್ತಿಗಳು, ಡೀಲರ್‌ಗಳು ಆಹಾರ ಉತ್ಪನ್ನಗಳ ರಕ್ಷಣೆಗೆ ವಿಷಕಾರಿ ಅಂಶಗಳನ್ನು ಮಿತಿಮೀರಿದ ಪ್ರಮಾಣಗಳಲ್ಲಿ ಬಳಸುತ್ತಾರೆ. ಇದರ ಮೇಲ್ವಿಚಾರಣೆ ಪರಿಣಾಮಕಾರಿಯಾಗಿ ನಡೆಯುವುದಿಲ್ಲ.

ಕೀಟನಾಶಕ ಎಂದ ಕೂಡಲೇ ಎಲ್ಲರೂ ರೈತರತ್ತ ಬೊಟ್ಟು ಮಾಡುತ್ತಾರೆ. ಆದರೆ ಎಲ್ಲವನ್ನೂ ರೈತರೇ ಬಳಸುತ್ತಾರೆ ಎಂದಲ್ಲ. ರೈತರು ಬಳಸದಿರುವ ಕೆಲವು ರಾಸಾಯನಿಕಗಳ ಅಂಶಗಳೂ ಆಹಾರ ಉತ್ಪನ್ನಗಳಲ್ಲಿ ಪತ್ತೆಯಾಗುತ್ತಿವೆ. ಉದಾಹರಣೆಗೆ, ಎಥಿಲೀನ್ ಆಕ್ಸೈಡ್‌ನಂತಹ ರಾಸಾಯನಿಕಗಳನ್ನು ರೈತರು ಬಳಸುವುದಿಲ್ಲ. ಇವುಗಳು ದಾಸ್ತಾನು ಮಾಡುವಾಗ ಹೆಚ್ಚು ಬಳಕೆಯಾಗುತ್ತವೆ. ಆದರೆ, ಪ್ರತಿ ಹಂತದಲ್ಲೂ ಪರಿಶೀಲನೆ ನಡೆಸುವ ವ್ಯವಸ್ಥೆ ದೇಶದಲ್ಲಿಲ್ಲ ಎಂಬುದು ತಜ್ಞರ ಮಾತು.

ಮುಂದುವರಿದ ದೇಶಗಳಲ್ಲಿ ನಿಷೇಧ ಹೇರಲಾಗಿರುವ ರಾಸಾಯನಿಕಗಳು, ಕೀಟನಾಶಕಗಳು ಭಾರತದ ಮಾರುಕಟ್ಟೆಯಲ್ಲಿ ಲಭ್ಯವಿವೆ. ಅವುಗಳನ್ನು ನಿಷೇಧಿಸಲು ಕೇಂದ್ರ ಸರ್ಕಾರ ಕ್ರಮ ಕೈಗೊಂಡಿಲ್ಲ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಕೋತಿಯೊಂದು ಶಿವನ ಚಿತ್ರ ರಚಿಸುವ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಕೋತಿಯು ಮನೆಯೊಂದರ ಗೋಡೆ ಮೇಲೆ ಶಿವನ ಸುಂದರವಾದ ಚಿತ್ರ ಬಿಡಿಸಿತು, ಸುತ್ತ ನೆರೆದಿದ್ದ ಜನ ಅದನ್ನು ತಮ್ಮ ಮೊಬೈಲ್ ಫೋನ್‌ಗಳಲ್ಲಿ ರೆಕಾರ್ಡ್ ಮಾಡಿಕೊಂಡರು ಎಂದು ಪೋಸ್ಟ್ ಅನ್ನು ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ, ಆದರೆ, ಇದು ಸುಳ್ಳು.

ಇನ್‌ವಿಡ್ ಟೂಲ್ ಮೂಲಕ ವಿಡಿಯೊದ ಕೀಫ್ರೇಮ್‌ಗಳನ್ನು ಪ್ರತ್ಯೇಕಿಸಿ, ಗೂಗಲ್ ಲೆನ್ಸ್ ಮೂಲಕ ಅವುಗಳನ್ನು ಪರಿಶೀಲಿಸಿದಾಗ, ಇದೇ ವಿಡಿಯೊ ಅನ್ನು ಹಲವರು ಇದೇ ಪ್ರತಿಪಾದನೆಯೊಂದಿಗೆ ಹಂಚಿಕೊಂಡಿರುವುದು ಕಂಡಿತು. ಜತೆಗೆ, ಗೂಗಲ್ ಲೆನ್ಸ್ ಹುಡುಕಾಟವು ‘ವೈರಲಿಸಂ.ಎಐ’ ಎನ್ನುವ ಇನ್‌ಸ್ಟಾಗ್ರಾಂ ಖಾತೆಯಲ್ಲಿ ಅಪ್‌ಲೋಡ್ ಮಾಡಲಾಗಿದ್ದ ವಿಡಿಯೊಗೆ ಸಂಪರ್ಕ ಕಲ್ಪಿಸಿತು. ಈ ವಿಡಿಯೊ ಹಾಗೂ ಜಾಲತಾಣಗಳಲ್ಲಿ ಹರಿದಾಡುತ್ತಿರುವ ವಿಡಿಯೊ ಎರಡೂ ಒಂದೇ ಆಗಿವೆ. ಇದು ಎಐ ಬಳಸಿ ರೂಪಿಸಲಾಗಿರುವ ವಿಡಿಯೊ ಎನ್ನುವುದು ಮತ್ತು 2026 ಏ.30ರಂದು ವಿಡಿಯೊ ಅಪ್‌ಲೋಡ್ ಮಾಡಲಾಗಿದೆ ಎಂದು ಇನ್‌ಸ್ಟಾಗ್ರಾಂ ಖಾತೆಯಲ್ಲಿ ಉಲ್ಲೇಖಿಸಲಾಗಿದೆ. ಆ ಖಾತೆಯನ್ನು ಮತ್ತಷ್ಟು ಪರಿಶೀಲಿಸಿದಾಗ, ಅದರಲ್ಲಿ ಇಂಥವೇ ಅನೇಕ ಎಐ ನಿರ್ಮಿತ ವಿಡಿಯೊಗಳನ್ನು ಹಂಚಿಕೊಂಡಿರುವುದು ಕಂಡಿತು. ಹೈವ್ ಮಾಡರೇಷನ್ ಎಐ ಪತ್ತೆ ಸಾಧನದ ಮೂಲಕ ವಿಡಿಯೊ ಅನ್ನು ಪರೀಕ್ಷೆಗೊಡ್ಡಿದಾಗ, ಅದು ಎಐ ನಿರ್ಮಿತ ಎನ್ನುವುದು ಖಚಿತವಾಯಿತು ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗಾಳಿ ಬೀಸುವಾಗ ನಿದ್ರೆ ಮಾಡುತ್ತೇನೆ

ನುಡಿ ಬೆಳಗು

ರೇಣುಕಾ ನಿಡಗುಂದಿ

ಬಹಳ ವರ್ಷಗಳ ಹಿಂದೆ ಐಸ್‌ಲ್ಯಾಂಡ್‌ನ ಉತ್ತರ ಭಾಗದಲ್ಲಿ ಒಬ್ಬ ರೈತ ವಾಸಿಸುತ್ತಿದ್ದನು. ಆ ಪ್ರದೇಶದಲ್ಲಿ ಆಗಾಗ್ಗೆ ಭಾರಿ ಗಾಳಿ ಮತ್ತು ಚಂಡಮಾರುತ ಬರುತ್ತಿದ್ದುದರಿಂದ, ಅವನ ಹೊಲದಲ್ಲಿ ಕೆಲಸ ಮಾಡಲು ಯಾರೂ ಮುಂದೆ ಬರುತ್ತಿರಲಿಲ್ಲ.

ಒಂದು ದಿನ ರೈತನು ಕೆಲಸಗಾರರಿಗಾಗಿ ಜಾಹೀರಾತು ಕೊಟ್ಟನು. ಹಲವರು ಬಂದರು. ಆದರೆ ಆ ಸ್ಥಳದ ಅಪಾಯದ ಬಗ್ಗೆ ಕೇಳುತ್ತಿದ್ದಂತೆಯೇ ಹಿಂದಿರುಗಿದರು. ಕೊನೆಗೆ ಒಬ್ಬ ಸಣ್ಣ ದೇಹದ ಮಧ್ಯವಯಸ್ಕ ವ್ಯಕ್ತಿ ಬಂದನು. ರೈತನು ಕೇಳಿದನು:

‘ಈ ರೀತಿಯ ಕಠಿಣ ಪರಿಸ್ಥಿತಿಯಲ್ಲಿ ಕೆಲಸ ಮಾಡಬಲ್ಲೆಯಾ?’

ಆ ವ್ಯಕ್ತಿ ಶಾಂತವಾಗಿ ಉತ್ತರಿಸಿದನು:

‘ಗಾಳಿ ಬೀಸುವಾಗ ನಾನು ನಿದ್ರೆ ಮಾಡುತ್ತೇನೆ’.

ರೈತನಿಗೆ ಈ ಮಾತು ವಿಚಿತ್ರವಾಗಿ ಅನಿಸಿತು. ಆದರೆ, ಬೇರೆ ಯಾರೂ ಸಿಗದ ಕಾರಣ ಅವನನ್ನು ಕೆಲಸಕ್ಕೆ ತೆಗೆದುಕೊಂಡನು. ಆ ಕೆಲಸಗಾರ ಬಹಳ ಪರಿಶ್ರಮಿ. ಬೆಳಗ್ಗಿನಿಂದ ಸಂಜೆವರೆಗೆ ಹೊಲದಲ್ಲಿ ಶ್ರಮಿಸುತ್ತಿದ್ದನು. ರೈತನು ಕೂಡ ಅವನ ಕೆಲಸದಿಂದ ಸಂತೋಷವಾಗಿದ್ದನು.

ಕೆಲವು ದಿನಗಳ ನಂತರ, ಒಂದು ರಾತ್ರಿ ಭಾರಿ ಗಾಳಿ ಬೀಸತೊಡಗಿತು. ರೈತನು ಅನುಭವದಿಂದ ದೊಡ್ಡ ಚಂಡಮಾರುತ ಬರುತ್ತಿದೆ ಎಂದು ತಿಳಿದನು. ಅವನು ತಕ್ಷಣ ಕಂದೀಲು ಹಿಡಿದು ಕೆಲಸಗಾರನ ಗುಡಿಸಲು ಕಡೆ ಓಡಿದನು.

‘ಬೇಗ ಎದ್ದೇಳು. ಚಂಡಮಾರುತ ಬರುತ್ತಿದೆ. ಬೆಳೆಗಳನ್ನು ಕಟ್ಟಿಹಾಕು, ತಾರ್ಪಾಲಿನಿಂದ ಮುಚ್ಚು, ಗೋಶಾಲೆಯ ಬಾಗಿಲುಗಳನ್ನು ಬಿಗಿಯಾಗಿ ಕಟ್ಟು’ ಎಂದು ಕೂಗಿದನು.

ಆದರೆ ಕೆಲಸಗಾರ ಆರಾಮವಾಗಿ ಮಲಗಿದ್ದ ಹಾಗೆ ಹೇಳಿದನು: ‘ನಾನು ಈ ಮೊದಲೇ ಹೇಳಿದ್ದೆ ಸಾರ್... ಗಾಳಿ ಬೀಸುವಾಗ ನಾನು ನಿದ್ರೆ ಮಾಡುತ್ತೇನೆ’.

ಇದನ್ನು ಕೇಳಿ ರೈತನಿಗೆ ಬಹಳ ಕೋಪ ಬಂತು. ಆದರೆ ಆತ ತಕ್ಷಣ ಹೊಲದ ಕಡೆ ಓಡಿದನು.

ಅಲ್ಲಿ ಹೋಗಿ ನೋಡಿದಾಗ ಅವನು ಆಶ್ಚರ್ಯಗೊಂಡನು. ಎಲ್ಲಾ ಬೆಳೆಗಳು ಸುರಕ್ಷಿತವಾಗಿ ಕಟ್ಟಲ್ಪಟ್ಟಿದ್ದವು. ತಾರ್ಪಾಲು ಸರಿಯಾಗಿ ಹಾಕಲಾಗಿತ್ತು. ಗೋವುಗಳು, ಎತ್ತುಗಳು ಸುರಕ್ಷಿತವಾಗಿದ್ದವು. ಕೋಳಿಗಳು ಕೂಡ ತಮ್ಮ ಗೂಡಿನಲ್ಲಿ ಇದ್ದವು.

ಎಲ್ಲಾ ಬಾಗಿಲುಗಳು ಬಿಗಿಯಾಗಿ ಕಟ್ಟಲ್ಪಟ್ಟಿದ್ದವು. ಎಲ್ಲವೂ ಸರಿಯಾದ ರೀತಿಯಲ್ಲಿ ಸುರಕ್ಷಿತವಾಗಿದ್ದವು. ಯಾವುದೇ ನಷ್ಟವಾಗುವ ಸಾಧ್ಯತೆ ಇರಲಿಲ್ಲ. ಆಗ ರೈತನಿಗೆ ಕೆಲಸಗಾರನ ಮಾತಿನ ಅರ್ಥ ತಿಳಿಯಿತು: ‘ಸಮಸ್ಯೆ ಬರುವ ಮುಂಚೆಯೇ ಸಿದ್ಧತೆ ಮಾಡಿಕೊಂಡಿದ್ದರೆ, ಕಷ್ಟ ಬಂದಾಗ ಭಯವಿಲ್ಲದೆ ನೆಮ್ಮದಿಯಿಂದ ನಿದ್ರೆ ಮಾಡಬಹುದು’.

ಇದನ್ನೇ ಸಂತ ಕಬೀರರು ‘ನಾಳೆ ಮಾಡುವ ಕೆಲಸವನ್ನು ಇಂದು ಮಾಡು, ಇಂದು ಮಾಡುವ ಕೆಲಸವನ್ನು ಈಗಲೇ ಮಾಡು. ಕ್ಷಣದಲ್ಲೇ ವಿಪತ್ತು ಬರಬಹುದು; ಮತ್ತೆ ಮಾಡಲು ಸಮಯ ಸಿಗದೇ ಹೋಗಬಹುದು’ ಎಂದಿರುವರು. ಸಮಯವಿರುವಾಗಲೇ ಮಾಡಬೇಕಾದ ಕೆಲಸವನ್ನು ಮಾಡುವುದೊಳಿತು. ಯಾಕೆಂದರೆ ಸಮಯ ಯಾವಾಗ ಬದಲಾಗುತ್ತದೆ ಎಂದು ಯಾರಿಗೂ ಗೊತ್ತಿಲ್ಲ.

ಗುಂಡಣ್ಣ



ಪದಬಂಧ 6438

ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಗುರಿ ತಲುಪಿರುವ ನಿಶ್ಚಿತ ಉದ್ದೇಶ (4)
3.ರವಿ ಮೂಡಿದಾಗ ಹಾರಿದ ಗುಬ್ಬಚ್ಚಿ (3)
5.ಸಂಗೀತ ವಿದ್ಯೆಯಿದು (4)
7.ನಕ್ಷೆ ಅಥವಾ ಚಿತ್ರವನ್ನು ಹೀಗೆನ್ನುವರು (3)
8.ಬೇರೆ ಬೇರೆ ದೇಶಗಳಿಗೆ ಪರಸ್ಪರ ಸಂಬಂಧಿಸಿದ್ದು (5)
12.ಉತ್ಸವಗಳಲ್ಲಿ ಎರಚುವ ಕೆಂಪು ಬಣ್ಣದ ಪುಡಿ (3)
13.ನಿಸ್ಸಾರವಾದುದನ್ನು ಹೀಗೆ ಹೇಳಿ (4)
15.ಬೆಳಕು ಬರುವುದಕ್ಕಾಗಿ ಮಾಡಿರುವ ಕಂಡಿ (3)
16.ಅನಿರೀಕ್ಷಿತವಾಗಿ ತಗಲಿದ ಪೆಟ್ಟು (4)

ಮೇಲಿಂದ ಕೆಳಕ್ಕೆ

1.ಅಸಮಾಧಾನದ ಮಾತು (4)
2.ಗುಣಿಸುವ ಸಂಖ್ಯೆ (3)
4.ನಾಶ ಮಾಡುವವನು ಇಲ್ಲಿದ್ದಾನೆ (4)
6.ತಲೆಯಲ್ಲಿನ ಅನ್ನದಪಾತ್ರೆ ಬೋರಲಾಗಿದೆಯಲ್ಲಾ? (3)
7.ಗೆಲುವು ಈ ರೀತಿ ಬಂದಿದೆ (3)
8.ಹೆಜ್ಜೆಯ ಕೆಳಭಾಗ (3)
9.ಕೈ ಕೊನೆಗಿಟ್ಟರೆ ತುಂತುರು ಕಾಣಿಸುತ್ತದೆ (3)
10.ಹಸನ್ಮುಖವಾದ ವದನ (4)
11.ಮಂದಿಯ ಒಳಿತು (4)
14.ಸರಸದ ಮಾತುಕತೆ (3)



6437ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಮಕ್ಷಿಕ 4.ವಾಮನ 5.ಅಂಜುಕುಳಿ 6.ವನ್ಯಮೃಗ 7.ಕೆರ 9.ಗವಿ 13.ಮನ್ವಂತರ 14.ಅಪವ್ಯಯ 15.ವಂಚನೆ 16.ಮಹಂತ

ಮೇಲಿಂದ ಕೆಳಕ್ಕೆ:
1.ಕವಾಡಿಗ 2.ಮನವರಿಕೆ 3.ಮಕುಟ 5.ಅಂಗರಾಗ 8.ರಸಮಯ 10.ವಿಚಾರವಂತ 11.ಕುಂಟುನೆಪ 12.ಚಪಲ

ಸುಡೊಕು 6821

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

1			4		2		7	
3		6				2		5
	2			5			8	
8		5						1
	6				3		2	
7		2		6		5		4
				2		8		7
2		7						
6			7		9	4		2

6820 ಸುಡೊಕು

5	3	4	9	8	2	1	7	6
1	7	6	3	4	5	9	8	2
9	8	2	1	6	7	3	4	5
7	2	3	5	9	8	6	1	4
6	5	9	7	1	4	2	3	8
4	1	8	2	3	6	5	9	7
2	9	5	8	7	1	4	6	3
3	6	7	4	2	9	8	5	1
8	4	1	6	5	3	7	2	9

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

19 ಜೂನ್ 2026 ಶುಕ್ರವಾರ, ಶ್ರೀ ಪರಾಭವ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ನಿಜ ಜ್ಯೇಷ್ಠ ಶುಕ್ಲ ಪಂಚಮಿ ಗಂ. 17-00 ನಕ್ಷತ್ರ: ಆಶ್ಲೇಷ ಗಂ. 10-07 ಯೋಗ: ಹರ್ಷಣ ಗಂ. 14-54 ಕರಣ: ಬವ ಗಂ. 5-54 ಬಾಲವ ಗಂ. 17-00, ಮಿಥುನ ಮಾಸದ 04 ನೇ ದಿನ. ಮಳೆ ನಕ್ಷತ್ರ : ಮೃಗಶಿರ 4 ನೇ ಪಾದ. ರಾಹುಕಾಲ : ಬೆಳಿಗ್ಗೆ 10-30 - 12-00, ಸೂರ್ಯೋದಯ : 06-08 ಸೂರ್ಯಾಸ್ತ : 06-56, ಮುಸ್ಲಿಂ ದಿನಾಂಕ : 03 ಮೊಹರಂ , ಅದೃಷ್ಟ ಸಂಖ್ಯೆ : 8, 1

ಮೇಷ: ಧಾರ್ಮಿಕ ವ್ಯಕ್ತಿಯ ಭೇಟಿ ಬದುಕಿನಲ್ಲಿ ಆಶ್ಚರ್ಯಕರ ಬದಲಾವಣೆ ತರಲಿದೆ. ಧ್ಯಾನ ಹಾಗೂ ಭಜನೆಯಿಂದ ಮನಸ್ಸಿಗೆ ನೆಮ್ಮದಿ. ತಾಳ್ಮೆ ಇದ್ದಲ್ಲಿ ಅಭಿಲಾಷೆಗಳು ಈಡೇರಲಿವೆ.

ವೃಷಭ: ಹಾಲು ಹಾಗೂ ಅದರ ಉತ್ಪನ್ನಗಳನ್ನು ಹೆಚ್ಚು ಉಪಯೋಗಿಸಿ. ಅಕ್ಕ ತಂಗಿಯರ ಸಹಾಯದಿಂದಾಗಿ ಸಂಗೀತ ಕಲೆಗೆ ವೇದಿಕೆ ಪ್ರಾಪ್ತಿ. ಮಕ್ಕಳ ಖುಷಿಗಾಗಿ ಆಟಿಕೆಯ ವಸ್ತು ಕೊಳ್ಳುವಿರಿ.

ಮಿಥುನ: ಒದಗಿ ಬರಲಿರುವ ಅವಕಾಶ ತಪ್ಪಿ ಹೋಗದಂತೆ ನೋಡಿಕೊಳ್ಳಿ. ಷೇರು ಮಾರುಕಟ್ಟೆಯಲ್ಲಿ ಎಣಿಕೆಗಿಂತ ಭಿನ್ನವಾದ ವಿದ್ಯಮಾನಗಳು ನಡೆಯಲಿವೆ.

ಕರ್ಕಾಟಕ: ಸಂಬಂಧ ಪಡದ ವಿಚಾರಗಳ ಬಗ್ಗೆ ತಲೆ ಕೆಡಿಸಿಕೊಳ್ಳದೆ ಮನಸ್ಸಿನ ಭಾರ ಕಡಿಮೆ ಮಾಡಿಕೊಳ್ಳಿ. ವಿದ್ಯಾರ್ಥಿಗಳು ಕೇವಲ ಶೈಕ್ಷಣಿಕ ಪಾಠವಲ್ಲದೇ, ಪಠ್ಯೇತರ ಚಟುವಟಿಕೆಗಳಿಗೂ ಅಲ್ಪ ಸಮಯ ನೀಡಿ.

ಸಿಂಹ: ಮನೆಯವರ ಒಳಿತಿಗೆ ಆದಾಯದ ಹೊಸ ಮಾರ್ಗಗಳನ್ನು ಕಂಡುಕೊಳ್ಳಬಹುದು. ಸಾಲದ ಹಣ ಹಿಂತಿರುಗಿ ಕೈಸೇರುವುದರಿಂದ ಮನೆಯ ರಿಪೇರಿಗೆ ಹಣ ಖರ್ಚು ಮಾಡುವಿರಿ. ದೈವಾನುಗ್ರಹದಿಂದ ಅಭೀಷ್ಟ ನೆರವೇರಲಿದೆ.

ಕನ್ಯಾ: ಸ್ವತ್ತಿನ ವಿಚಾರವಾಗಿ ಸಿಗುವ ಸಲಹೆ ಸ್ವೀಕರಿಸಿ. ಸಹೋದರನ ಮಾತಿನಂತೆ ನಡೆಯುವುದು ಉತ್ತಮ. ದಾಂಪತ್ಯ ಜೀವನದಲ್ಲಿ ತಾಳ್ಮೆ, ಹೊಂದಾಣಿಕೆ ಮುಂದುವರಿಯುವುದು.

ತುಲಾ: ವ್ಯವಹಾರಗಳ ಕ್ಷೇತ್ರ ವಿಸ್ತರಿಸಿದಷ್ಟು ಲಾಭವಾದರೂ ಕುಟುಂಬದೊಂದಿಗೆ ಸಮಯ ಕಳೆಯುವುದು ಅಪರೂಪದ ಸಂಗತಿ. ಮಕ್ಕಳಲ್ಲಿ ಪಕ್ಷಪಾತ ಮಾಡುವ ಗುಣವನ್ನು ಬದಲಿಸಿಕೊಳ್ಳಿರಿ.

ವೃಶ್ಚಿಕ: ಮನಸ್ಸಿನ ಅವ್ಯಕ್ತ ಭಾವನೆಗಳನ್ನು ಆತ್ಮೀಯರೊಡನೆ ವ್ಯಕ್ತಪಡಿಸಲು ಈ ದಿನ ಸೂಕ್ತ. ಬಹಳ ದಿನಗಳ ಸಾಲ ಮರುಪಾವತಿ ಮಾಡಲು ಕಾಲ ಕೂಡಿಬರಲಿದೆ. ಸ್ವಂತ ಉದ್ಯೋಗಸ್ಥರಿಗೆ ಹೆಚ್ಚಿನ ಗಳಿಕೆಯಾಗಲಿದೆ.

ಧನು: ಅಪರಿಚಿತರೇ ತುಂಬಿರುವ ಸ್ಥಳದಲ್ಲಿ ಸ್ಥಾನಮಾನ ಹಾಗೂ ಗೌರವ ಸಂಪಾದಿಸುವುದು ಸವಾಲಿನ ವಿಷಯವಾದರೂ ಯಶಸ್ವಿಯಾಗುವಿರಿ. ಸಂಸ್ಕರಿತ ಆಹಾರ ಪದಾರ್ಥಗಳ, ಬೇಳೆಕಾಳುಗಳ ಮಾರಾಟದಿಂದ ಲಾಭ.

ಮಕರ: ನೂತನ ಮನೆ ಖರೀದಿಯ ಅಥವಾ ನಿವೇಶನಗಳ ಖರೀದಿಯ ಆಲೋಚನೆಗಳಿಗೆ ಪೂರಕ ವಾತಾವರಣ ಸ್ನೇಹಿತರಿಂದ ಸಿಗಲಿದೆ. ಕಾಲೇಜು ದಿನಗಳ ಗೆಳೆಯರ ಭೇಟಿ ಸಂಭ್ರಮವನ್ನು ಉಂಟುಮಾಡುವುದು.

ಕುಂಭ: ಪರಿಸರಪ್ರೇಮದ ಕಾರಣದಿಂದ ಕೆಲವು ವಿರೋಧಗಳನ್ನು ಅನುಭವಿಸಬೇಕಾಗುತ್ತದೆ. ಆರೋಗ್ಯದ ವಿಚಾರದಲ್ಲಿ ಗಮನ ಹರಿಸುವುದು ಅನಿವಾರ್ಯ. ಈ ದಿನ ಅನಿರೀಕ್ಷಿತ ಸುತ್ತಾಟದಿಂದ ಆಯಾಸ ತೋರಿಬರಲಿದೆ.

ಮೀನ: ಕಾರ್ಯಕ್ಷೇತ್ರದಲ್ಲಿ ಅತಿ ಚಾಣಾಕ್ಷ ವರ್ತನೆ ತೋರಿಸುವುದರಿಂದ ಊರಿನಲ್ಲಿ ಅಥವಾ ವಂಶದಲ್ಲಿ ಮುಖ್ಯಸ್ಥರಾಗುವ ಯೋಗವಿದೆ. ಹೊಸದಾಗಿ ನಿರ್ಮಾಣ ಮಾಡಿದ ಮನೆಯಲ್ಲಿ ಶಾಂತಿ ನೆಲೆಸಲಿದೆ.

ಷೇರುಪೇಟೆ ವಹಿವಾಟು: ಹಿಂದಿನ ಅಂತ್ಯ 77,155 | 254 | ಇಂದಿನ ಅಂತ್ಯ 77,409

ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	24,085
ಇಂದಿನ ಅಂತ್ಯ:	24,168
ದಿನದ ಗರಿಷ್ಠ:	24,189
	82

ಮೊಟ್ಟೆ ಧಾರಣೆ (ಎನ್‌ಇಸಿಸಿ) ಬೆಂಗಳೂರು	
100 ಕ್ಕೆ	₹705
12 ಕ್ಕೆ	₹94
ಮೈಸೂರು: 100 ಕ್ಕೆ	₹720

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)	
ಆರ್‌ಎಸ್‌ಎಸ್-4	₹271
ಆರ್‌ಎಸ್‌ಎಸ್-5	₹265
ಗುಡ್ ಲಾಟ್	₹231

ರಾಮನಗರ ರೇಷ್ಮೆಗೂಡು	
ಮಿಶ್ರತಳಿ(ಸಿ.ಬಿ)	₹420-696
ದ್ವಿತಳಿ (ಬಿ.ವಿ)	₹509-850

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ) (10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1590 (1570)
ಸೋಯಾ (ರಿಫೈನ್ಡ್)	₹1460 (1460)
ಸೂರ್ಯಕಾಂತಿ (ರಿಫೈನ್ಡ್)	₹1650 (1650)
ಪಾಮೋಲಿನ್	₹1460 (1470)

ಮುದ್ರೆಮನೆ ಕಾಫಿ (50 ಕೆ.ಜಿಗೆ)	
ಎಪಿ	₹23500
ಎಸಿ	₹14000
ಆರ್‌ಪಿ	₹18600
ಆರ್‌ಸಿ	₹9950

ಬಿಡದಿಯಲ್ಲಿ ಟೌನ್‌ಶಿಪ್ ಬೇಕೇ ಬೇಡವೇ?
ಬೇಕು ಬೇಡ
ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಶಾಂತಿ ಒಪ್ಪಂದ, ಭಾರತಕ್ಕೆ ಸಮಾಧಾನ

ರಫ್ತು ನೆಚ್ಚಿಕೊಂಡಿರುವ ದೇಶದ ಉದ್ದಿಮೆಗಳಿಗೆ ಹೆಚ್ಚಿನ ಅನುಕೂಲದ ನಿರೀಕ್ಷೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಅಮೆರಿಕ ಮತ್ತು ಇರಾನ್ ನಡುವೆ ಶಾಂತಿ ಒಪ್ಪಂದ ಮೂಡಿರುವುದು ಭಾರತದ ಅರ್ಥ ವ್ಯವಸ್ಥೆಗೆ ಸಮಾಧಾನ ತಂದಿದೆ. ಇಂಧನ ಆಮದು ವೆಚ್ಚ ಕಡಿಮೆ ಆಗಲಿದೆ, ರೂಪಾಯಿ ಮೇಲಿನ ಒತ್ತಡವು ತಗ್ಗಲಿದೆ ಹಾಗೂ ಭಾರತದ ರಫ್ತುದಾರರು ಮತ್ತು ಉದ್ದಿಮೆಗಳಿಗೆ ಪಶ್ಚಿಮ ಏಷ್ಯಾ ಭಾಗದಲ್ಲಿ ಹೊಸದಾಗಿ ಬೇಡಿಕೆಗಳು ಬರಲಿವೆ.

‘ವೈಷಮ್ಯ ಕಡಿಮೆ ಆಗಿ ಇರಾನ್‌ನ ಆರ್ಥಿಕತೆಯು ಜಗದ ಇತರ ಅರ್ಥ ವ್ಯವಸ್ಥೆಗಳ ಜೊತೆ ಮತ್ತೆ ಸಂಪರ್ಕ ಸಾಧಿಸುವಂತಾದಾಗ ನಮಗೆ ಹೊಸ ಕಾರ್ಯಾದೇಶಗಳು ತ್ವರಿತವಾಗಿ ಲಭ್ಯವಾಗಬಹುದು ಎಂಬ ನಿರೀಕ್ಷೆ ಇದೆ’ ಎಂದು ಭಾರತೀಯ ರಫ್ತು ಸಂಘಟನೆಗಳ ಒಕ್ಕೂಟದ (ಎಫ್‌ಐಇಒ) ಅಧ್ಯಕ್ಷ ಎಸ್‌.ಸಿ. ರಲ್ಹಾನ್ ಹೇಳಿದ್ದಾರೆ.

‘ಪಶ್ಚಿಮ ಏಷ್ಯಾದಲ್ಲಿ ಸ್ಥಿರತೆ ಸಾಧ್ಯವಾದರೆ ಗ್ರಾಹಕರಿಂದ ಹಾಗೂ ಕೈಗಾರಿಕೆಗಳಿಂದ ಹೆಚ್ಚು ಬೇಡಿಕೆ ಬರುತ್ತದೆ. ಇದರಿಂದಾಗಿ ಭಾರತದ ರಫ್ತುದಾರರಿಗೆ ತಮ್ಮ ಇರುವಿಕೆಯನ್ನು ಹೆಚ್ಚಿಸಲು ಮತ್ತು ಮುಂದಿನ ಕೆಲವು ತ್ರೈಮಾಸಿಕಗಳ ಅವಧಿಯಲ್ಲಿ ರಫ್ತು ಹೆಚ್ಚು ಮಾಡಲು ಅವಕಾಶ ಆಗುತ್ತದೆ’ ಎಂದು ಅವರು ಹೇಳಿದ್ದಾರೆ.

ಅಮೆರಿಕ ಮತ್ತು ಇರಾನ್ ನಡುವೆ ಏರ್ಪಟ್ಟಿರುವ ಒಪ್ಪಂದವು, ಹೊರ್ಮುಜ್ ಜಲಸಂಧಿಯಲ್ಲಿ ಸರಕು ಸಾಗಣೆಯನ್ನು ಮೂವತ್ತು ದಿನಗಳಲ್ಲಿ ಸಹಜ ಸ್ಥಿತಿಗೆ ತರುವ ಅಂಶವನ್ನು ಕೂಡ ಒಳಗೊಂಡಿದೆ.

ಈ ಒಪ್ಪಂದ ಏರ್ಪಟ್ಟ ಪರಿಣಾಮವಾಗಿ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಗಣನೀಯವಾಗಿ ತಗ್ಗಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆಯು ಬ್ಯಾರಲ್‌ಗೆ 77.40 ಡಾಲರ್‌ಗೆ ಇಳಿಕೆ ಆಗಿದೆ.

ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು ಸತತ ಐದನೆಯ ದಿನವೂ ಏರಿಕೆ ದಾಖಲಿಸಿದೆ. ಒಂದು ವರ್ಷದ ಅವಧಿಯಲ್ಲಿ ರೂಪಾಯಿ ಮೌಲ್ಯವು ಇಷ್ಟು ದಿನ ಸತತವಾಗಿ ಏರಿಕೆ ಕಂಡಿದ್ದು ಇದೇ ಮೊದಲು. ಗುರುವಾರದ ವಹಿವಾಟಿನಲ್ಲಿ ರೂಪಾಯಿ ಮೌಲ್ಯವು 20 ಪೈಸೆಯಷ್ಟು ಹೆಚ್ಚಳ ಕಂಡಿದೆ.

ಷೇರುಪೇಟೆಯಲ್ಲಿ ಗುರುವಾರ ಕೂಡ ತೇಜಿ ವಹಿವಾಟು ನಡೆದಿದೆ. ದೇಶದ ಷೇರು ಮಾರುಕಟ್ಟೆಗಳು ಸತತ ಐದು ದಿನಗಳಿಂದ ಏರುಗತಿಯ ವಹಿವಾಟು ನಡೆಸಿವೆ. ಸೆನ್ಸೆಕ್ಸ್ ಮತ್ತು ನಿಫ್ಟಿ ಸೂಚ್ಯಂಕಗಳು ಸರಿಸುಮಾರು ಶೇ 0.3ಕ್ಕಿಂತ ಹೆಚ್ಚು ಏರಿಕೆಯನ್ನು ಗುರುವಾರ ದಾಖಲಿಸಿವೆ.

‘ಹೊರ್ಮುಜ್ ಜಲಸಂಧಿಯಲ್ಲಿ ಸರಕು ಸಾಗಣೆ ಸುಗಮವಾಗಿ ಸಾಧ್ಯವಾದಾಗ ಐರೋಪ್ಯ ಒಕ್ಕೂಟ, ಅಮೆರಿಕ ಮತ್ತು ಪಶ್ಚಿಮ ಏಷ್ಯಾಕ್ಕೆ ಆಗುವ ನಮ್ಮ ರಫ್ತು ಹೆಚ್ಚು ಸ್ಪರ್ಧಾತ್ಮಕವಾಗುತ್ತದೆ’ ಎಂದು ರಲ್ಹಾನ್ ಹೇಳಿದ್ದಾರೆ.

> **ಕಚ್ಚಾ ತೈಲದ ಬೆಲೆಯು ಕಡಿಮೆ ಆಗುತ್ತಿರುವುದು ಷೇರುಪೇಟೆಗಳಲ್ಲಿ ಆಶಾದಾಯಕ ವಹಿವಾಟು ನಡೆಯಲು ನೆರವಾಗಿದೆ**
> **ಅಜಿತ್ ಮಿಶ್ರಾ,** ರೆಲಿಗೇರ್ ಬ್ರೋಕಿಂಗ್‌ನ ಹಿರಿಯ ಉಪಾಧ್ಯಕ್ಷ

ಮುಖ್ಯಾಂಶಗಳು
- ಬ್ಯಾರಲ್‌ಗೆ 77 ಡಾಲರ್‌ಗೆ ತಗ್ಗಿದ ಬ್ರೆಂಟ್ ಕಚ್ಚಾ ತೈಲ ದರ
- ಸತತ ಐದು ದಿನಗಳಿಂದ ರೂಪಾಯಿ ಮೌಲ್ಯ ಚೇತರಿಕೆ
- ಸರಕು ಸಾಗಣೆ ಸಂಬಂಧಿತ ಸಮಸ್ಯೆಗಳ ನಿವಾರಣೆ ನಿರೀಕ್ಷೆ

ಸುದ್ದಿ 2 ನಿಮಿಷ

ಚಿನ್ನದ ಆಮದು ಶೇ 70ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಆಮದು ಸುಂಕ ಹೆಚ್ಚಳದ ಬಳಿಕ ಚಿನ್ನದ ಆಮದು ಪ್ರಮಾಣವು ಶೇ 70ರಷ್ಟು ಇಳಿಕೆಯಾಗಿದೆ ಎಂದು ಕೇಂದ್ರ ಸರ್ಕಾರದ ಅಧಿಕಾರಿಯೊಬ್ಬರು ಗುರುವಾರ ತಿಳಿಸಿದ್ದಾರೆ.

ಕೇಂದ್ರವು ಈ ವರ್ಷದ ಮೇ ತಿಂಗಳ 13ರಂದು ಚಿನ್ನ ಮತ್ತು ಬೆಳ್ಳಿ ಮೇಲಿನ ಆಮದು ಸುಂಕವನ್ನು ಶೇ 6ರಿಂದ ಶೇ 15ಕ್ಕೆ ಹೆಚ್ಚಿಸಿದೆ.

ಈ ಮೊದಲು ತಿಂಗಳಿಗೆ 75ರಿಂದ 100 ಟನ್‌ನಷ್ಟು ಚಿನ್ನ ಆಮದಾಗುತ್ತಿತ್ತು. ಸುಂಕ ಹೆಚ್ಚಿಸಿದ ಬಳಿಕ ಚಿನ್ನದ ಆಮದು 25ರಿಂದ 30 ಟನ್‌ಗೆ ಇಳಿದಿದೆ. ಆದರೆ, ಹಣಕಾಸಿನ ಲೆಕ್ಕದಲ್ಲಿ ಶೇ 34ರಷ್ಟು ಏರಿಕೆಯಾಗಿದ್ದು, ₹32,178 ಕೋಟಿಯಷ್ಟಾಗಿದೆ.

ಏಪ್ರಿಲ್ ಮತ್ತು ಮೇ ತಿಂಗಳಿನಲ್ಲಿ ಚಿನ್ನದ ಆಮದು, ಮೌಲ್ಯದ ಲೆಕ್ಕದಲ್ಲಿ ಶೇ 60ರಷ್ಟು ಹೆಚ್ಚಳವಾಗಿದ್ದು, ₹85,325 ಕೋಟಿಯಾಗಿದೆ. ಕಳೆದ ಆರ್ಥಿಕ ವರ್ಷದಲ್ಲಿ ₹6.79 ಲಕ್ಷ ಕೋಟಿಯಷ್ಟು ಚಿನ್ನ ಆಮದಾಗಿದ್ದು, 2024–25ಕ್ಕೆ ಹೋಲಿಸಿದರೆ ಶೇ 24ರಷ್ಟು ಏರಿಕೆ ಕಂಡಿದೆ. ಪ್ರಮಾಣದ ಲೆಕ್ಕದಲ್ಲಿ ಶೇ 4.76ರಷ್ಟು ಕಡಿಮೆ ಆಗಿದ್ದು, 721.03 ಟನ್‌ಗೆ ಇಳಿದಿದೆ.

ವಿದೇಶಿ ವಿನಿಮಯ ಮೀಸಲಿಗೆ ಸಂಬಂಧಿಸಿ ವೆಚ್ಚ ಕಡಿಮೆ



ಮಾಡುವಂತೆ ಮತ್ತು ಒಂದು ವರ್ಷ ಚಿನ್ನದ ಖರೀದಿಯನ್ನು ಮುಂದೂಡುವಂತೆ ದೇಶದ ಜನರಿಗೆ ಪ್ರಧಾನಿ ನರೇಂದ್ರ ಮೋದಿ ಅವರು ಕರೆ ನೀಡಿದ್ದರು. ಆ ಬಳಿಕ ಚಿನ್ನದ ಮೇಲಿನ ಸುಂಕವನ್ನು ಹೆಚ್ಚಿಸಲಾಗಿತ್ತು.

ವಾಹನ ಬೆಲೆ ಹೆಚ್ಚಿಸಿದ ಟಾಟಾ, ಕಿಯಾ

ನವದೆಹಲಿ (ಪಿಟಿಐ): ವಾಹನ ತಯಾರಿಕಾ ಕಂಪನಿ ಟಾಟಾ ಮೋಟರ್ಸ್, ತನ್ನ ವಾಣಿಜ್ಯ ವಾಹನಗಳ ಬೆಲೆಯನ್ನು ಶೇ 2.5ರವರೆಗೆ ಹೆಚ್ಚಿಸಲಿದೆ. ಪರಿಷ್ಕೃತ ದರವು ಜುಲೈ 1ರಿಂದ ಜಾರಿಗೆ ಬರಲಿದೆ.

ಸರಕುಗಳು ಬೆಲೆ ಮತ್ತು ತಯಾರಿಕಾ ವೆಚ್ಚ ಹೆಚ್ಚಳವಾಗಿದೆ. ಹೀಗಾಗಿ ಬೆಲೆ ಏರಿಕೆ ಮಾಡಲಾಗುತ್ತಿದೆ. ವಾಹನದ ಮಾದರಿ ಮತ್ತು ವೇರಿಯೆಂಟ್ ಆಧರಿಸಿ ಬೆಲೆ ಹೆಚ್ಚಳ ಇರಲಿದೆ ಎಂದು ಕಂಪನಿ ಗುರುವಾರ ತಿಳಿಸಿದೆ.

ಕಿಯಾ: ದೇಶದ ಪ್ರಮುಖ ಕಾರು ತಯಾರಿಕಾ ಕಂಪನಿಗಳ ಪೈಕಿ ಒಂದಾಗಿರುವ ಕಿಯಾ ಇಂಡಿಯಾ ತನ್ನ ಎಲ್ಲಾ ಮಾದರಿಗಳ ವಾಹನ ಬೆಲೆ ಗರಿಷ್ಠ ಶೇ 2ರವರೆಗೆ ಹೆಚ್ಚಳ ಆಗಲಿದೆ ಎಂದು ತಿಳಿಸಿದೆ.

ಬೆಲೆ ಏರಿಕೆಯು ಜುಲೈ 1ರಿಂದ ಜಾರಿಗೆ ಬರಲಿದೆ. ಉತ್ಪಾದನಾ ವೆಚ್ಚ ಏರಿಕೆ ಹಾಗೂ ಒಟ್ಟಾರೆ ಕಾರ್ಯಾಚರಣಾ ವೆಚ್ಚ ಹೆಚ್ಚಳದ ಹಿನ್ನೆಲೆಯಲ್ಲಿ ವಾಹನಗಳ ಬೆಲೆ ಏರಿಕೆ ಅನಿವಾರ್ಯ ಎಂದು ಕಂಪನಿಯು ಪ್ರಕಟಣೆಯಲ್ಲಿ ಹೇಳಿದೆ.

ವೆಚ್ಚ ಹೆಚ್ಚಳದ ಗಮನಾರ್ಹ ಭಾಗವನ್ನು ಕಂಪನಿಯು ತಾನೇ ನಿಭಾಯಿಸಲಿದೆ. ಬೆಲೆ ಏರಿಕೆಯ ಒಂದು ಭಾಗವನ್ನು ಮಾತ್ರ ಗ್ರಾಹಕರಿಗೆ ವರ್ಗಾವಣೆ ಮಾಡಲಾಗುತ್ತಿದೆ ಎಂದು ತಿಳಿಸಿದೆ. ಬೆಲೆ ಏರಿಕೆಯ ಪ್ರಮಾಣದಲ್ಲಿ ಮಾದರಿಯಿಂದ ಮಾದರಿಗೆ ವ್ಯತ್ಯಾಸ ಇರಲಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಸವಿನೆನಪು



ಆರ್. ಸುಬ್ಬರಾಜು
ನಿಧನ: 19-06-2005
ನೀವು ನಮ್ಮನ್ನಗಲಿ ಇಂದಿಗೆ ಇಪ್ಪತ್ತೊಂದು ವರ್ಷಗಳು ನಿಮ್ಮ ನೆನಪು ಸದಾ ಹಸಿರು. ನಿಮ್ಮ ತಾಳ್ಮೆ, ತ್ಯಾಗ, ಪ್ರೀತಿ, ಆದರ್ಶಮಯ ಜೀವನ ನಮಗೆ ದಾರಿದೀಪ... ಪ್ರತಿ ದಿನವೂ ಪ್ರತಿ ಕ್ಷಣವೂ ಹೆಮ್ಮೆಯಿಂದ ಸ್ಮರಿಸುವ..
ಮಗ ಬಿ.ಎಸ್. ಕೃಷ್ಣ ಮತ್ತು ಕುಟುಂಬವರ್ಗ
ಸಿಬ್ಬಂದಿ ವರ್ಗ, ಬನಶಂಕರಿ ಗ್ಲಾಸ್ ಅಂಡ್ ಪ್ಲೈವುಡ್ಸ್

ಬೆಳ್ಳಿ ದರ ₹6,660 ಇಳಿಕೆ

ನವದೆಹಲಿ (ಪಿಟಿಐ): ಸತತ ಮೂರನೇ ವಹಿವಾಟಿನ ದಿನವಾದ ಗುರುವಾರವೂ ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ ಮತ್ತು ಬೆಳ್ಳಿ ಧಾರಣೆ ಇಳಿದಿದೆ.

ಶೇ 99.9ರಷ್ಟು ಪರಿ ಶುದ್ಧತೆಯ ಚಿನ್ನದ ದರವು 10 ಗ್ರಾಂ ಗೆ ₹960 ಕಡಿಮೆ ಆಗಿ, ₹1,53,440ಕ್ಕೆ ಇಳಿದಿದೆ. ಬೆಳ್ಳಿ ಬೆಲೆಯು ಕೆ.ಜಿಗೆ ₹6,660 ಇಳಿಕೆ ಯಾಗಿ, ₹2,48,740ರಂತೆ ಮಾರಾಟ ವಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ದಾಖಲೆಯಿದ್ದರೂ ಮಹಾರಾಷ್ಟ್ರದಲ್ಲಿ ಅಡಿಕೆ ಲಾರಿಗಳಿಗೆ ತಡೆ

ಅಡಿಕೆ ಧಾರಣೆ ಕುಸಿತದ ಆತಂಕ

ಪ್ರಜಾವಾಣಿ ವಾರ್ತೆ

ಶಿರಸಿ: ಕರ್ನಾಟಕದ ಅಡಿಕೆ ತುಂಬಿದ ಲಾರಿಗಳನ್ನು ಮಹಾರಾಷ್ಟ್ರದಲ್ಲಿ ಜಪ್ತಿ ಮಾಡಲಾಗುತ್ತಿದ್ದು, ಆರ್ಥಿಕ ನಷ್ಟ ಮತ್ತು ಕಾನೂನು ಪ್ರಕ್ರಿಯೆಗೆ ಹೆದರಿ ವರ್ತಕರು ಅಡಿಕೆ ಸಾಗಣೆಯನ್ನು ಗಣನೀಯವಾಗಿ ಕಡಿಮೆ ಮಾಡಿದ್ದಾರೆ. ಇದರಿಂದ ಸ್ಥಳೀಯ ಮಾರುಕಟ್ಟೆಗಳಲ್ಲಿ ಅಡಿಕೆ ಧಾರಣೆ ಕುಸಿಯುವ ಆತಂಕ ಬೆಳೆಗಾರರನ್ನು ಕಾಡುತ್ತಿದೆ.

ಕೆಲವು ತಿಂಗಳುಗಳಿಂದ ಕ್ಯಾಂಪ್ಕೊ, ಆಪ್ಕೋಸ್ ಮತ್ತು ಶಿರಸಿ ಭಾಗದ ಖಾಸಗಿ ವರ್ತಕರಿಂದ ಮಹಾರಾಷ್ಟ್ರದ ಪ್ರಮುಖ ನಗರಗಳಿಗೆ ಅಡಿಕೆ ಸಾಗಣೆ ಮಾಡುತ್ತಿದ್ದ ಲಾರಿಗಳನ್ನು ಅಲ್ಲಿನ ಆಹಾರ ಮತ್ತು ಔಷಧ ಆಡಳಿತ (ಎಫ್‌ಡಿಎ) ಅಧಿಕಾರಿಗಳು ತಡೆದು ಜಪ್ತಿ ಮಾಡುವ ಕ್ರಿಯೆಯಲ್ಲಿ ತೊಡಗಿದ್ದಾರೆ.

‘ಅಡಿಕೆಯಲ್ಲಿ ತೇವಾಂಶ ನಿಗದಿತ ಪ್ರಮಾಣದಲ್ಲಿ ಇಲ್ಲ ಮತ್ತು ರೆಡ್ ಆಕ್ಸೈಡ್ ಮಿಶ್ರಣವಿದೆ. ಇದು ಆರೋಗ್ಯಕ್ಕೆ ಹಾನಿಕರ ಮತ್ತು ಆಹಾರ ಸುರಕ್ಷತೆ ಕಾಯ್ದೆಯ ಸ್ಪಷ್ಟ ಉಲ್ಲಂಘನೆ. ವಿದೇಶಿ ಕಳಪೆ ಅಡಿಕೆ ಮಿಶ್ರಣದ ಶಂಕೆಯೂ ಇದೆ’ ಎಂಬುದು ಅಲ್ಲಿನ ಅಧಿಕಾರಿಗಳ ವಾದ.

‘ಲಾರಿಗಳನ್ನು ತಡೆಯುವ ಅಧಿಕಾರಿಗಳು, ಅಡಿಕೆಯನ್ನು ಪ್ರಯೋಗಾಲಯಕ್ಕೆ ಕಳುಹಿಸುತ್ತಾರೆ. ಅದರ ವರದಿ ಬರಲು ಒಂದು ವಾರ ಬೇಕು. ಇದರಿಂದ ಲಾರಿ ಚಾಲಕರು ರಸ್ತೆಯಲ್ಲೇ ಉಳಿಯುವಂತಾಗಿ, ವ್ಯಾಪಾರಿಗಳು ತೊಡಗಿಸುವ ಕೋಟ್ಯಂತರ ರೂಪಾಯಿ ಬಂಡವಾಳಕ್ಕೆ ಸಮಸ್ಯೆ ಆಗಿದೆ. ಅಂದಾಜು ₹1.10 ಕೋಟಿಯಿಂದ ₹1.70 ಕೋಟಿ ಮೌಲ್ಯದ, 24 ಟನ್‌ನಿಂದ 30 ಟನ್ ತೂಕದ ಅಡಿಕೆ ಲಾರಿಗಳನ್ನು ಹೆಚ್ಚು ಜಪ್ತು ಮಾಡಲಾಗುತ್ತಿದೆ. ಕೆಲವು ಪ್ರಕರಣಗಳು ಈಗಾಗಲೇ ಕೋರ್ಟ್ ಮೆಟ್ಟಿಲೇರಿವೆ. ಕಾನೂನು ಪ್ರಕ್ರಿಯೆ ಮುಗಿಯುವವರೆಗೂ ವಾಹನದ ಜತೆ ಅಡಿಕೆಯೂ ಕೈಸೇರದ ಪರಿಸ್ಥಿತಿಯಿದೆ’ ಎಂದು ವರ್ತಕರೊಬ್ಬರು ತಿಳಿಸಿದರು.

‘ಅಡಿಕೆಯು ಒಂದು ಕಚ್ಚಾ ಕೃಷಿ ಉತ್ಪನ್ನವಾಗಿದ್ದು, ಇದನ್ನು ಗ್ರಾಹಕರು ನೇರವಾಗಿ ತಿನ್ನುವುದಿಲ್ಲ. ಜಿಎಸ್‌ಟಿ, ಇ-ವೇ ಬಿಲ್ ಸೇರಿ ಎಲ್ಲಾ ಸೂಕ್ತ ದಾಖಲೆಗಳಿದ್ದರೂ ಕೇವಲ ತೇವಾಂಶ ಹಾಗೂ ಅಡಿಕೆ ಹಾಳಾಗದಂತೆ ದುವಾ ಬಳಸುತ್ತಾರೆಂಬ ನೆಪ ಒಡ್ಡಿ ವಾರಗಳ ಕಾಲ ಲಾರಿಗಳನ್ನು ತಡೆಯುತ್ತಿರುವುದು ವ್ಯವಸ್ಥಿತ ಕಿರುಕುಳ’ ಎಂದು ಅವರು ದೂರಿದರು.

‘ಮಹಾರಾಷ್ಟ್ರ ಮತ್ತು ಉತ್ತರ ಪ್ರದೇಶ ಸರ್ಕಾರದ ಜೊತೆ ಪ್ರಮುಖ ಸಹಕಾರ ಸಂಸ್ಥೆಗಳ ಮುಖ್ಯಸ್ಥರು ಈಗಾಲೇ ಮಾತುಕತೆ ನಡೆಸಿದ್ದಾರೆ. ಅಡಿಕೆ ತೇವಾಂಶ ಸಂಬಂಧ ನಿಯಮಾವಳಿ ಸರಳೀಕರಣದ ಬಗ್ಗೆ ತಿಳಿಸಲಾಗಿದ್ದು, ಆ ಬಗ್ಗೆ ಕ್ರಮ ಆಗಬೇಕಿದೆ. ಶೀಘ್ರವೇ ಮತ್ತೊಮ್ಮೆ ಸಂಬಂಧಪಟ್ಟ ಸರ್ಕಾರಗಳ ಸಚಿವರ ಬಳಿ ನಿಯೋಗ ತೆರಳಿ, ಸಭೆ ನಡೆಸಲು ತೀರ್ಮಾನಿಸಲಾಗಿದೆ’ ಎಂದು ಶಿರಸಿಯ ತೋಟಗಾರ್ಸ್ ಸೇಲ್ ಸೊಸೈಟಿ (ಟಿಎಸ್‌ಎಸ್) ಅಧ್ಯಕ್ಷ ಗೋಪಾಲಕೃಷ್ಣ ವೈದ್ಯ ತಿಳಿಸಿದರು.

ಮುಖ್ಯಾಂಶಗಳು
- ಜನವರಿಯಿಂದ ಅಡಿಕೆ ಸಾಗಣೆಗೆ ಸಮಸ್ಯೆ
- ಪ್ರಯೋಗಾಲಯಗಳಲ್ಲಿ ಅಡಿಕೆ ಪರಿಶೀಲನೆ
- ಅಧಿಕಾರಿಗಳಿಂದ ಕಿರಿಕಿರಿ: ವರ್ತಕರ ಆರೋಪ

ಶಿರಸಿ ಅಡಿಕೆ ಮಾರುಕಟ್ಟೆಗೆ ಮಾರಾಟಕ್ಕೆ ಬಂದಿರುವ ಅಡಿಕೆ

> **ಮಾರುಕಟ್ಟೆಯಲ್ಲಿ ವ್ಯಾಪಾರಿಗಳು ಖರೀದಿಗೆ ಹಿಂದೇಟು ಹಾಕುತ್ತಿದ್ದಾರೆ. ಕಾರಣ ದರ ಇಳಿಯುವ ಆತಂಕವಿದ್ದು, ನೇರವಾಗಿ ಬೆಳೆಗಾರರ ಮೇಲೆ ಪರಿಣಾಮ ಬೀರುವ ಸಾಧ್ಯತೆಯಿದೆ**
> **ಗೋಪಾಲಕೃಷ್ಣ ವೈದ್ಯ,** ಟಿಎಸ್‌ಎಸ್ ಅಧ್ಯಕ್ಷ

> **ಮಹಾರಾಷ್ಟ್ರ ಮತ್ತು ಇತರ ರಾಜ್ಯಗಳಿಗೆ ನಿತ್ಯ 5 ರಿಂದ 10 ಭಾರಿ ವಾಹನಗಳ ಮೂಲಕ ಅಡಿಕೆ ಪೂರೈಕೆ ಆಗುತ್ತಿತ್ತು. ಈ ವರ್ಷದ ಜನವರಿಯಿಂದಲೇ ಇಂಥ ಜಪ್ತಿಗಳು ನಡೆಯುತ್ತಿದ್ದು, ಇದರ ತೀವ್ರತೆ ಮತ್ತಷ್ಟು ಹೆಚ್ಚಾಗಿದೆ**
> **ಸಯ್ಯದ್ ಮುಜೀಬ್,** ಅಡಿಕೆ ವರ್ತಕ

ಅಡಿಕೆ ಧಾರಣೆ

ಚಿತ್ರದುರ್ಗ	
ಆಪಿ	52739-53169
ಬೆಟ್ಟೆ	39619-40059
ಕೆಂಪುಗೋಟು	32600-33000
ರಾಶಿ	52229-52699
ಕುಮಟಾ	
ಚಿಪ್ಪು	28100-37390
ಕೋಕ	19122-33229
ಹಳೆಚಾಲಿ	46798-48598
ಹೊಸಚಾಲಿ	34001-46029
ಪುತ್ತೂರು	
ಕೋಕ	20000-33500
ಹೊಸತು	30000-47000
ಸಾಗರ	
ಬಿಳಿಗೋಟು	10666-31599
ಚಾಲಿ	33899-41319
ಕೋಕ	14699-34101
ಕೆಂಪುಗೋಟು	30999-40899
ರಾಶಿ	36999-59670
ಸಿಪ್ಪೆಗೋಟು	9569-21889
ಶಿವಮೊಗ್ಗ	
ಸರಕು	56109-86299
ಬೆಟ್ಟೆ	51009-60859
ರಾಶಿ	45099-53819
ಗೊರಬಲು	19010-41889
ಸಿದ್ದಾಪುರ	
ಬಿಳಿಗೋಟು	26099-35599
ಚಾಲಿ	38869-47439
ಕೋಕ	21600-32099
ಕೆಂಪುಗೋಟು	29300-36000
ರಾಶಿ	47899-50599
ತಟ್ಟಿಬೆಟ್ಟೆ	38000-46589
ಶಿರಸಿ	
ಬೆಟ್ಟೆ	35099-45199
ಬಿಳಿಗೋಟು	26011-34449
ಚಾಲಿ	44000-48699
ಕೆಂಪುಗೋಟು	30611-34699
ರಾಶಿ	49299-52200
ಯಲ್ಲಾಪುರ	
ಆಪಿ	54479-58919
ಬಿಳಿಗೋಟು	17699-34395
ಚಾಲಿ	35689-47399
ಕೋಕ	17109-26899
ಕೆಂಪುಗೋಟು	22699-34899
ರಾಶಿ	49619-53299
ತಟ್ಟಿಬೆಟ್ಟೆ	36709-46869

ಸದಾ ನಿಮ್ಮ ನೆನಪಿನಲ್ಲಿ



ಪ್ರೊಫೆಸರ್ ಜಿ. ಹಾಲಪ್ಪ
ರಿಟೈರ್ಡ್ ಪ್ರಿನ್ಸಿಪಾಲ್
1921 – 2021
ಶ್ರೀಮತಿ ಅನ್ನಪೂರ್ಣಮ್ಮ ಹಾಲಪ್ಪ
1929 – 2014
ಒಲುಮೆಯ ಅಮ್ಮ, ಅಪ್ಪಾಜಿ
ಅಗಾಧ ದೈವಭಕ್ತಿ, ಶ್ರದ್ಧೆ, ಶ್ರಮ ಮತ್ತು ಧೈರ್ಯದಿಂದ ತುಂಬಿದ ನಿಮ್ಮ ಜೀವನ ನಮಗೆ ದಿನ ನಿತ್ಯವೂ ಮಾದರಿ. ನೀವು ನಮ್ಮ ಮನೆ, ಮನಗಳಲ್ಲಿ, ನಿತ್ಯ ನೂತನ, ನಿರಂತರ ಹಾಗೂ ಅಮರ.
ಸದಾ ನಿಮ್ಮ ನೆನಪಿನಲ್ಲಿ:
ಮಕ್ಕಳು, ಅಳಿಯಂದಿರು, ಸೊಸೆ, ಮೊಮ್ಮಕ್ಕಳು, ಮರಿಮಕ್ಕಳು, ಶ್ರೀ ಗೌರಯ್ಯನವರ ವಂಶಸ್ಥರು, ಶಿವಪುರ ಮತ್ತು ಕೋಡಿಹಳ್ಳಿ ವಂಶಸ್ಥರು, ಬೀರೂರು, ಚಿಕ್ಕಮಗಳೂರು ಜಿಲ್ಲೆ.

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹18000-20000
ಹೊಸದುರ್ಗ	₹22000-22000
ತಿಪಟೂರು	₹30000-32000

ಸುದ್ದಿ ವೈವಿಧ್ಯಕ್ಕೆ prajavani.netಗೆ ಭೇಟಿ ಮಾಡಿ

₹5.21 ಲಕ್ಷ ಕೋಟಿ ನೇರ ತೆರಿಗೆ ಸಂಗ್ರಹ

ನವದೆಹಲಿ (ಪಿಟಿಐ): ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್ 1ರಿಂದ ಜೂನ್ 17ರವರೆಗೆ ₹5.21 ಲಕ್ಷ ಕೋಟಿಯಷ್ಟು ನಿವ್ವಳ ನೇರ ತೆರಿಗೆ ಸಂಗ್ರಹವಾಗಿದೆ. ಇದು ಕಳೆದ ಆರ್ಥಿಕ ವರ್ಷದ ಇದೇ ಅವಧಿಗೆ ಹೋಲಿಸಿದರೆ ಶೇ 14.64ರಷ್ಟು ಹೆಚ್ಚು ಎಂದು ಕೇಂದ್ರ ಸರ್ಕಾರ ಗುರುವಾರ ತಿಳಿಸಿದೆ.

ನಿವ್ವಳ ಕಾರ್ಪೊರೇಟ್ ತೆರಿಗೆ ಸಂಗ್ರಹದಲ್ಲಿ ಶೇ 22ರಷ್ಟು ಏರಿಕೆಯಾಗಿದ್ದು, ₹2.08 ಲಕ್ಷ ಕೋಟಿಯಾಗಿದೆ. ವೈಯಕ್ತಿಕ ಆದಾಯ ತೆರಿಗೆಯನ್ನು ಒಳಗೊಂಡಿರುವ ಕಾರ್ಪೊರೇಟ್ ಹೊರತುಪಡಿಸಿದ ತೆರಿಗೆ ಸಂಗ್ರಹವು ₹2.94 ಲಕ್ಷ ಕೋಟಿಯಾಗಿದೆ.

₹89,026 ಕೋಟಿ ಮರುಪಾವತಿ (ರೀಫಂಡ್) ಮಾಡಲಾಗಿದೆ. ಮರುಪಾವತಿಯನ್ನು ಸರಿಹೊಂದಿಸುವ ಮೊದಲು ಒಟ್ಟು ನೇರ ತೆರಿಗೆ ಸಂಗ್ರಹವು ₹6.10 ಲಕ್ಷ ಕೋಟಿಯಾಗಿದ್ದು, ಶೇ 12ರಷ್ಟು ಏರಿಕೆಯಾಗಿದೆ. ಇದರಲ್ಲಿ ₹2.76 ಲಕ್ಷ ಕೋಟಿ ಕಾರ್ಪೊರೇಟ್ ತೆರಿಗೆ ಮತ್ತು ₹3.15 ಲಕ್ಷ ಕೋಟಿ ಕಾರ್ಪೊರೇಟ್ ಹೊರತಾಗಿನ ತೆರಿಗೆ ಇದೆ.

ಪ್ರಸಕ್ತ ಆರ್ಥಿಕ ವರ್ಷದಲ್ಲಿ ಕೇಂದ್ರ ಸರ್ಕಾರವು ನೇರ ತೆರಿಗೆ ಮೂಲಕ ₹26.97 ಲಕ್ಷ ಕೋಟಿ ಸಂಗ್ರಹಿಸುವ ಗುರಿ ಹೊಂದಿದೆ. ಇದು ಕಳೆದ ಆರ್ಥಿಕ ವರ್ಷಕ್ಕೆ ಹೋಲಿಸಿದರೆ ಶೇ 15ರಷ್ಟು ಹೆಚ್ಚಳ (₹23.40 ಲಕ್ಷ ಕೋಟಿ) ಆಗಿದೆ ಎಂದು ತಿಳಿಸಿದೆ.

ಮುಂಬೈ ಧಾರಣೆ (ಶೇಂಗಾ) 18-06-2026

ಜಾವಾ 70/80(ಹೊಸ)	11000-11100
ಜಾವಾ 80/90(ಹೊಸ)	10300-10400
ದಪ್ಪ ಮಧ್ಯಪ್ರದೇಶ (ಹೊಸ)	8400-8500
ದಪ್ಪ ಗುಜರಾತ್ (ಹೊಸ)	9100-9200
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1600 (1580)
ಒಂದು ವಾರದ ಡೆಲಿವರಿ	1595 (1575)
ಪಾಮ್ ವಾರದ ಡೆಲಿವರಿ	1458 (1468)
ಸೂರ್ಯಕಾಂತಿ ಎಣ್ಣೆ ಕಚ್ಚಾ	1575 (1570)
ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,48,000 (1,49,700)
ಬೆಳ್ಳಿ ಕೆ.ಜಿಗೆ	2,40,500 (2,48,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

3 ಕೋಟಿ ಪಡಿತರ ಚೀಟಿ ನೀಡಲು ಅವಕಾಶ: ಜೋಶಿ

ನವದೆಹಲಿ (ಪಿಟಿಐ): ರಾಜ್ಯ ಸರ್ಕಾರಗಳು ಒಟ್ಟು 2.21 ಕೋಟಿ ಅನರ್ಹರ ಹೆಸರನ್ನು ಪಡಿತರ ಪಟ್ಟಿಯಿಂದ ಅಳಿಸಿರುವ ಕಾರಣದಿಂದಾಗಿ, ಇನ್ನೂ ಮೂರು ಕೋಟಿ ಅರ್ಹರಿಗೆ ಪಡಿತರ ಚೀಟಿ ವಿತರಣೆ ಮಾಡಲು ಅವಕಾಶ ಇದೆ ಎಂದು ಕೇಂದ್ರ ಆಹಾರ ಸಚಿವ ಪ್ರಲ್ಹಾದ ಜೋಶಿ ಹೇಳಿದ್ದಾರೆ.

ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಅವರು, ‘ರಾಜ್ಯ ಸರ್ಕಾರಗಳು ತಮ್ಮದೇ ಮಾನದಂಡ ಬಳಸಿ ಅನರ್ಹರ ಹೆಸರನ್ನು ತೆಗೆದಿವೆ. ಇದನ್ನು ಕೇಂದ್ರ ಮಾಡಿಲ್ಲ’ ಎಂದು ತಿಳಿಸಿದ್ದಾರೆ.

ಕೇಂದ್ರ ಆಹಾರ ಸಚಿವಾಲಯವು ಮೃತರು, ಆದಾಯ ತೆರಿಗೆ ಪಾವತಿದಾರರು, ನಾಲ್ಕು ಚಕ್ರಗಳ ವಾಹನ ಹೊಂದಿರುವವರು ಸೇರಿದಂತೆ ಒಟ್ಟು 8.51 ಕೋಟಿ ಅನರ್ಹರ ಹೆಸರು ಗುರುತಿಸಿತ್ತು. ಆ ಪಟ್ಟಿಯನ್ನು ರಾಜ್ಯಗಳಿಗೆ ಕ್ರಮ ಕೈಗೊಳ್ಳಲು ರವಾನಿಸಿತ್ತು.

‘ಈ ಪೈಕಿ ರಾಜ್ಯಗಳು 2.21 ಕೋಟಿ ಪಡಿತರ ಚೀಟಿಗಳನ್ನು ರದ್ದುಪಡಿಸಿವೆ. ಸಾರ್ವಜನಿಕ ಪಡಿತರ ವ್ಯವಸ್ಥೆಯ ಡಿಜಿಟಲೀಕರಣದ ಕಾರಣದಿಂದಾಗಿ ಈ ಪ್ರಕ್ರಿಯೆ ಸಾಧ್ಯವಾಗಿದೆ’ ಎಂದು ಜೋಶಿ ಅವರು ಹೇಳಿದ್ದಾರೆ.

ಅರ್ಹ ಫಲಾನುಭವಿಗಳನ್ನು ಹೊಸದಾಗಿ ಸೇರಿಸಲು ರಾಜ್ಯಗಳಿಗೆ ಅನುಮತಿ ನೀಡಲಾಗಿದೆ ಎಂದು ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದ್ದಾರೆ.

‘ಈಗ ದೇಶದಲ್ಲಿ 79 ಕೋಟಿ ಫಲಾನುಭವಿಗಳು ಇದ್ದಾರೆ. ಕೇಂದ್ರದ ಉದ್ದೇಶ ಉಳಿತಾಯ ಮಾಡುವುದಲ್ಲ. ಬದಲಿಗೆ, ಆಹಾರ ಧಾನ್ಯಗಳು ಅರ್ಹರಿಗೆ ತಲುಪುವಂತೆ ಮಾಡುವುದು ನಮ್ಮ ಉದ್ದೇಶ’ ಎಂದಿದ್ದಾರೆ.

ಈ ತಿಂಗಳಲ್ಲೇ ಪಿಎಫ್ ಬಡ್ಡಿ ಜಮಾ?

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿಗೆ (ಇಪಿಎಫ್) 2025–26ನೇ ಸಾಲಿಗೆ ಶೇ 8.25ರಷ್ಟು ಬಡ್ಡಿ ಪಾವತಿಸಲು ಕೇಂದ್ರ ಹಣಕಾಸು ಸಚಿವಾಲಯವು ಸಮ್ಮತಿ ಸೂಚಿಸಿದೆ. ಬಡ್ಡಿ ಮೊತ್ತವು ಇಪಿಎಫ್ ಚಂದಾದಾರರ ಖಾತೆಗೆ ಇದೇ ತಿಂಗಳಲ್ಲಿ ಜಮಾ ಆಗುವ ಸಾಧ್ಯತೆ ಇದೆ ಎಂದು ಮೂಲಗಳು ಗುರುವಾರ ತಿಳಿಸಿವೆ.

ಹಣಕಾಸು ಸಚಿವಾಲಯದಿಂದ ಸಮ್ಮತಿ ದೊರೆತ ನಂತರ ಇಪಿಎಫ್‌ಒ ಸಂಘಟನೆಯು ತನ್ನ ಚಂದಾದಾರರಿಗೆ ಬಡ್ಡಿ ಮೊತ್ತವನ್ನು ಪಾವತಿಸುವುದು ವಾಡಿಕೆ.

ಇಪಿಎಫ್‌ಒ ಸಂಘಟನೆಯ ಕೇಂದ್ರ ಧರ್ಮದರ್ಶಿಗಳ ಮಂಡಳಿಯು (ಸಿಬಿಟಿ) ಮಾರ್ಚ್ 2ರಂದು ನಡೆದ ಸಭೆಯಲ್ಲಿ ಶೇ 8.25ರಷ್ಟು ಬಡ್ಡಿ ನಿಗದಿ ಮಾಡಿತ್ತು. ಕೇಂದ್ರ ಕಾರ್ಮಿಕ ಸಚಿವ ಮನಸುಖ್ ಮಾಂಡವೀಯ ಅವರು ಸಿಬಿಟಿ ಅಧ್ಯಕ್ಷರು.

ತೈಲ ಸಂಸ್ಕರಣಾ ಘಟಕದ ಮೇಲೆ ಉಕ್ರೇನ್ ದಾಳಿ

ಮಾಸ್ಕೊ (ಎಎಫ್‌ಪಿ): ರಷ್ಯಾದ ರಾಜಧಾನಿ ಮಾಸ್ಕೊ ನಗರದ ಮೇಲೆ ಇಲ್ಲಿಯವರೆಗಿನ ಅತ್ಯಂತ ದೊಡ್ಡ ಮಟ್ಟದ ಡ್ರೋನ್ ದಾಳಿಯನ್ನು ಉಕ್ರೇನ್ ಗುರುವಾರ ನಡೆಸಿದೆ. ನಗರದಲ್ಲಿರುವ ಅತ್ಯಂತ ಪ್ರಮುಖ ತೈಲ ಸಂಸ್ಕರಣಾ ಘಟಕದ ಮೇಲೆ ದಾಳಿ ನಡೆಸಲಾಗಿದೆ. ದಾಳಿಯಲ್ಲಿ 17 ಮಂದಿಗೆ ಗಾಯಗಳಾಗಿವೆ.

‘ತೈಲ ಸಂಸ್ಕರಣಾ ಘಟಕದ ಜೊತೆ ನಗರದ ಶಾಪಿಂಗ್ ಕೇಂದ್ರ ಮತ್ತು ವಸತಿ ಸಮುಚ್ಚಯದಲ್ಲಿ ಬೆಂಕಿ ಕಾಣಿಸಿಕೊಂಡಿದೆ’ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಕಜಾನ್ ನಗರದಲ್ಲಿ ಆಗ್ನೇಯ ಏಷ್ಯಾ ದೇಶಗಳ ನಾಯಕರ ಶೃಂಗಸಭೆಯನ್ನು ರಷ್ಯಾ ಅಧ್ಯಕ್ಷ ಪುಟಿನ್ ಅವರು ಆಯೋಜಿಸಿದ್ದರು. ಸಭೆ ವೇಳೆಯೇ ದಾಳಿ ನಡೆಸಲಾಗಿದೆ. ಶೃಂಗವನ್ನು ಉದ್ದೇಶಿಸಿ ಪುಟಿನ್ ಅವರು ಮಾತನಾಡಿದರಾದರೂ, ಉಕ್ರೇನ್ ದಾಳಿಯ ಕುರಿತು ಪ್ರಸ್ತಾಪ ಮಾಡಲಿಲ್ಲ.

‘ಯುನೆಸ್ಕೊ ಸಂರಕ್ಷಿತ 11ನೇ ಶತಮಾನದ ಉಕ್ರೇನ್‌ನ ಚರ್ಚ್‌ವೊಂದರ ಮೇಲೆ ರಷ್ಯಾವು ವಾರದ ಹಿಂದೆ ದಾಳಿ ನಡೆಸಿತ್ತು. ಜೊತೆಗೆ ಕೀವ್ ನಗರದ ಮೇಲೆಯೂ ದಾಳಿ ನಡೆಸಿತ್ತು. ಇವಕ್ಕೆ ಪ್ರತಿಯಾಗಿ ದಾಳಿ ಮಾಡಿದ್ದೇವೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಹೇಳಿದ್ದಾರೆ.

ಮೃತದೇಹ ವಾಪಸ್: ಉಕ್ರೇನ್‌ನ 522 ಮಂದಿಯ ಮೃತದೇಹಗಳನ್ನು ರಷ್ಯಾ ಗುರುವಾರ ವಾಪಸು ಮಾಡಿದೆ. ಇವರು ಸಾಮಾನ್ಯ ನಾಗರಿಕರು ಎಂದು ರಷ್ಯಾ ಹೇಳಿದೆ. ಆದರೆ, ಇವರು ಸೈನಿಕರು ಎಂದು ಉಕ್ರೇನ್ ಅಧಿಕಾರಿಗಳು ಹೇಳಿದ್ದಾರೆ.

ಶಾಂತಿ ಒಪ್ಪಂದಕ್ಕೆ ಟ್ರಂಪ್, ಪೆಜೆಶ್ಕಿಯಾನ್ ಸಹಿ

‘ಟೀಕಾಕಾರರು ಮೂರ್ಖರು’

ವಾಷಿಂಗ್ಟನ್/ ಇಸ್ಲಾಮಾಬಾದ್ (ಎಎಫ್‌ಪಿ/ ಪಿಟಿಐ): ಇರಾನ್ ಜತೆಗಿನ ಶಾಂತಿ ಒಪ್ಪಂದವನ್ನು ಟೀಕಿಸುವವರ ವಿರುದ್ಧ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಕಿಡಿ ಕಾರಿದ್ದು, ಇರಾನ್‌ಗೆ ವಿನಾಯಿತಿಗಳನ್ನು ನೀಡಲಾಗುತ್ತಿದೆ ಎಂದು ಆರೋಪಿಸುವವರನ್ನು ‘ಮೂರ್ಖರು’ ಎಂದು ಕರೆದಿದ್ದಾರೆ.

ಶಾಂತಿ ಒಪ್ಪಂದಕ್ಕೆ ಅಮೆರಿಕ ಹಾಗೂ ಇರಾನ್ ಪ್ರತ್ಯೇಕವಾಗಿ ಸಹಿ ಹಾಕಿವೆ.

‘ಷೇರು ಮಾರುಕಟ್ಟೆಯಲ್ಲಿ ಸೂಚ್ಯಂಕವು ದಾಖಲೆಯ ಏರಿಕೆ ಕಂಡಿದ್ದು, ಕಚ್ಚಾ ತೈಲದ ಬೆಲೆ ಇಳಿಕೆಯಾಗಿದೆ. ಆದರೂ ‘ಇರಾನ್‌ಗೆ ಸಂಬಂಧಿಸಿದಂತೆ ನಾನು ಕಠಿಣ ನಿಲುವು ತೆಗೆದುಕೊಂಡಿಲ್ಲ’ ಎಂದು ಕೆಲವರು ಭಾವಿಸುತ್ತಿದ್ದಾರೆ. ಅವರು ಅಸೂಯೆಪಟ್ಟವರು, ಕೆಟ್ಟ ಜನರು ಅಥವಾ ಮೂರ್ಖರು’ ಎಂದು ಶಾಂತಿ ಒಪ್ಪಂದಕ್ಕೆ ಸಹಿ ಹಾಕಿದ ಬೆನ್ನಲ್ಲೇ ಸಾಮಾಜಿಕ ಮಾಧ್ಯಮದಲ್ಲಿ ಮಾಡಿದ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಟೀಕೆ: ಇರಾನ್ ಜತೆ ಒಪ್ಪಂದ ಮಾಡಿಕೊಳ್ಳುವ ಟ್ರಂಪ್ ಅವರ ನಿರ್ಧಾರವನ್ನು ಅಮೆರಿಕದ ಕೆಲವು ಮಾಧ್ಯಮಗಳು ಟೀಕಿಸಿವೆ. ಟ್ರಂಪ್ ಸ್ನೇಹಿ ಸುದ್ದಿ ವಾಹಿನಿ ಎನಿಸಿಕೊಂಡಿರುವ ‘ಫಾಕ್ಸ್ ನ್ಯೂಸ್’ ಕೂಡ, ‘ಒಪ್ಪಂದವು ಇರಾನ್‌ಗೆ ಭಾರಿ ಆರ್ಥಿಕ ಪ್ರಯೋಜನಗಳನ್ನು ನೀಡಿದೆ’ ಎಂಬ ಟೀಕಾಕಾರರ ಹೇಳಿಕೆಗಳನ್ನು ಉಲ್ಲೇಖಿಸಿ ವರದಿ ಬಿತ್ತರಿಸಿದೆ.

‘ಇರಾನ್‌ನ ಪರಮಾಣು ಯೋಜನೆಗಳನ್ನು ತಡೆಯಲು ಸಾಧ್ಯವಾಗದ ಈ ಒಪ್ಪಂದವು, ಅಮೆರಿಕದ ವಿದೇಶಾಂಗ ನೀತಿಗೆ ದಶಕಗಳಲ್ಲಿ ಎದುರಾದ ಅತಿದೊಡ್ಡ ಹಿನ್ನಡೆ’ ಎಂದು ರಿಪಬ್ಲಿಕನ್ ಪಕ್ಷದ ಸಂಸದ ಬಿಲ್ ಕ್ಯಾಸಿಡಿ ಟೀಕಿಸಿದ್ದಾರೆ.



ಒಡಿಶಾದ ಪುರಿ ಸಮುದ್ರ ತೀರದಲ್ಲಿ ಕಲಾವಿದರೊಬ್ಬರು ಅಮೆರಿಕ–ಇರಾನ್ ಶಾಂತಿ ಒಪ್ಪಂದ ಬಗ್ಗೆ ಮರಳಿನಲ್ಲಿ ಕಲಾಕೃತಿ ರಚಿಸಿದರು–ಪಿಟಿಐ ಚಿತ್ರ

> **ಒಪ್ಪಂದದ ಅಡಿಯಲ್ಲಿ ಇರಾನ್ ತನ್ನ ಬದ್ಧತೆಗಳನ್ನು ಪೂರೈಸದಿದ್ದರೆ ಅಮೆರಿಕವು ಸೇನಾ ಕಾರ್ಯಾಚರಣೆ ಪುನರಾರಂಭಿಸಲಿದೆ ಹಾಗೂ ಮತ್ತೆ ದಿಗ್ಬಂಧನ ಹೇರಲಿದೆ**
> **ಪೀಟ್ ಹೆಗ್ಸೆತ್,** ಅಮೆರಿಕದ ರಕ್ಷಣಾ ಕಾರ್ಯದರ್ಶಿ

> **ಇರಾನ್‌ನ ಕ್ಷಿಪಣಿ ಯೋಜನೆಗಳು ಈಗಿನ ಶಾಂತಿ ಒಪ್ಪಂದದ ಭಾಗವಾಗಿಲ್ಲ ಹಾಗೂ ಅಮೆರಿಕದೊಂದಿಗೆ ಭವಿಷ್ಯದ ಮಾತುಕತೆಗಳ ಭಾಗವಾಗುವುದಿಲ್ಲ**
> **ಇಸ್ಮಾಯಿಲ್ ಬಘಾಯಿ,** ಇರಾನ್ ವಿದೇಶಾಂಗ ಸಚಿವಾಲಯದ ವಕ್ತಾರ

ಹೆಮ್ಮೆಯಾಗುತ್ತಿದೆ: ಷರೀಫ್

‘ಐತಿಹಾಸಿಕ ‘ಇಸ್ಲಾಮಾಬಾದ್ ಒಪ್ಪಂದ’ಕ್ಕೆ ಅಮೆರಿಕ ಮತ್ತು ಇರಾನ್ ಸಹಿ ಹಾಕಿವೆ ಎಂದು ಘೋಷಿಸಲು ನನಗೆ ಹೆಮ್ಮೆ ಎನಿಸುತ್ತದೆ’ ಎಂದು ಶಾಂತಿ ಮಾತುಕತೆಗೆ ಮಧ್ಯಸ್ಥಿಕೆ ವಹಿಸಿದ್ದ ಪಾಕಿಸ್ತಾನದ ಅಧ್ಯಕ್ಷ ಶೆಹಬಾಜ್ ಷರೀಫ್ ತಿಳಿಸಿದ್ದಾರೆ.

ಎರಡೂ ದೇಶಗಳು ಸಹಿ ಹಾಕಿರುವ ಒಪ್ಪಂದ ಪತ್ರಕ್ಕೆ ಶೆಹಬಾಜ್ ಷರೀಫ್ ಅವರು ಸಹಿ ಹಾಕುವ ಮೂಲಕ ಅನುಮೋದಿಸಿದ್ದಾರೆ.

‘ಒಪ್ಪಂದವು ತಕ್ಷಣದಿಂದಲೇ ಜಾರಿಗೆ ಬರಲಿದೆ. ಇದರ ಮೊದಲ ಹೆಜ್ಜೆಯಾಗಿ, ಹೊರ್ಮುಜ್ ಜಲಸಂಧಿಯನ್ನು ಇರಾನ್ ಹಡಗುಗಳ ಸಂಚಾರಕ್ಕೆ ಮುಕ್ತಗೊಳಿಸಲಿದೆ. ಇರಾನ್‌ನ ಬಂದರುಗಳ ಮೇಲೆ ಹೇರಿರುವ ದಿಗ್ಬಂಧನವನ್ನು ಅಮೆರಿಕ ತೆಗೆದು ಹಾಕಲಿದೆ’ ಎಂದು ಷರೀಫ್ ಹೇಳಿದ್ದಾರೆ.

ಔಪಚಾರಿಕ ಸಮಾರಂಭ– ಗೊಂದಲ: ಇರಾನ್‌ನ ಪ್ರಮುಖ ಸಂಧಾನಕಾರ ಮತ್ತು ಸಂಸತ್ತಿನ ಸ್ಪೀಕರ್ ಮೊಹಮ್ಮದ್ ಬಾಖಿರ್ ಖಾಲೀಬಾಫ್ ಹಾಗೂ ಅಮೆರಿಕದ ಉಪಾಧ್ಯಕ್ಷ ಜೆ.ಡಿ. ವ್ಯಾನ್ಸ್ ಅವರು ಸ್ವಿಟ್ಜರ್ಲೆಂಡ್‌ನಲ್ಲಿ ಶುಕ್ರವಾರ ಒಪ್ಪಂದಕ್ಕೆ ಸಹಿ ಹಾಕುವರು ಎಂದು ಭಾವಿಸಲಾಗಿತ್ತು. ಆದರೆ ಟ್ರಂಪ್ ಮತ್ತು ಪೆಜೆಶ್ಕಿಯಾನ್ ಈಗಾಗಲೇ ಸಹಿ ಹಾಕಿರುವುದರಿಂದ ಶುಕ್ರವಾರ ನಡೆಯುವ ಔಪಚಾರಿಕ ಸಮಾರಂಭದ ಬಗ್ಗೆ ಗೊಂದಲ ಮೂಡಿದೆ.

‘ಔಪಚಾರಿಕ ಸಮಾರಂಭದ ಅಗತ್ಯವಿಲ್ಲ’ ಎಂದು ಇಸ್ಮಾಯಿಲ್ ಬಘಾಯಿ ಹೇಳಿದ್ದಾರೆ. ಆದರೆ ಸ್ವಿಟ್ಜರ್ಲೆಂಡ್‌ನ ನಿಡ್ವಾಲ್ಡೆನ್‌ನಲ್ಲಿರುವ ಬರ್ಗನ್‌ಸ್ಟಾಕ್ ರೆಸಾರ್ಟ್‌ನಲ್ಲಿ ಶುಕ್ರವಾರ ಸಮಾರಂಭ ನಡೆಯಲಿದ್ದು, ಮುಂದಿನ ಹಂತದ ಮಾತುಕತೆ ಪ್ರಾರಂಭವಾಗಲಿದೆ ಎಂದು ಷರೀಫ್ ಹೇಳಿದ್ದಾರೆ.

ಪ್ರಮುಖ ಅಂಶಗಳು
- ಶಾಂತಿ ಒಪ್ಪಂದವು ಯುದ್ಧಕ್ಕಿಂತ ಮೊದಲಿನ ಸ್ಥಿತಿಯನ್ನು ಪುನಃಸ್ಥಾಪಿಸಲು ನೆರವಾಗಲಿದೆ
- ಅಮೆರಿಕ–ಇಸ್ರೇಲ್ ಮತ್ತು ಇರಾನ್ ನಡುವಿನ ಎಲ್ಲ ರೀತಿಯ ಸೇನಾ ಸಂಘರ್ಷಕ್ಕೆ ತೆರೆ ಬೀಳಲಿದೆ
- ಹೊರ್ಮುಜ್ ಜಲಸಂಧಿ ಮುಕ್ತಗೊಳ್ಳಲಿದ್ದು, ಇರಾನ್ ಬಂದರುಗಳ ಮೇಲಿನ ದಿಗ್ಬಂದನವನ್ನು ಅಮೆರಿಕವು ತೆರವುಗೊಳಿಸಲಿದೆ
- ಇರಾನ್ ಮೇಲಿನ ನಿರ್ಬಂಧಗಳನ್ನು ಅಮೆರಿಕವು ತೆರವುಗೊಳಿಸಲಿದೆ
- ಇರಾನ್‌ನ ಪರಮಾಣು ಯೋಜನೆಗಳಿಗೆ ಸಂಬಂಧಿಸಿದಂತೆ ಅಮೆರಿಕ–ಇರಾನ್ ನಡುವಿನ ಮಾತುಕತೆ ಪುನರಾರಂಭಗೊಳ್ಳಲಿದೆ
- ಮುಂದಿನ 60 ದಿನಗಳ ಒಳಗೆ ಅಂತಿಮ ಶಾಂತಿ ಒಪ್ಪಂದದ ರೂಪುರೇಷೆ ಪೂರ್ಣಗೊಳ್ಳಬೇಕು

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

ಉದ್ಯೋಗಾವಕಾಶ

General
ತಕ್ಷಣ ಬೇಕಾಗಿದ್ದಾರೆ. ಕರ್ನಾಟಕದಾದ್ಯಂತ ಕಂಪನಿಗಳಿಗೆ ಮನೆಯಿಂದಲೇ ಕೆಲಸಕ್ಕೆ ಮಹಿಳೆಯರು, ವಿದ್ಯಾರ್ಥಿಗಳಿಗೆ ಮೊದಲ ಆದ್ಯತೆ. 20,000 - 25,000 ಸಂಪಾದಿಸಿ. 8095222026

ಉದ್ಯೋಗಾವಕಾಶ @ TVS, ಟೊಯೋಟಾ, ವಿಡಿಯೋಕಾನ್, ಹಿಮಾಲಯ ಕಂಪನಿಗಳಲ್ಲಿ 7th, PUC, ITI, Degree. ಸಂಬಳ 16,000/- 86,000/- (ವಿದ್ಯಾರ್ಹತೆಯನ್ನುಸಾರವಾಗಿ) ವಸತಿಯೊಂದಿಗೆ. 7795874921

Drivers
ಡ್ರೈವರ್‌ಗಳು ಬೇಕಾಗಿದ್ದಾರೆ. ಸ್ಥಳ: ಎನ್.ಆರ್ ಕಾಲೋನಿ, ಬಸವನಗುಡಿ, ಬೆಂಗಳೂರು. ಸಂಬಳ: Rs 25,000/. ಸಂಪರ್ಕಿಸಿ: 8277193108

Receptionist/ Secretary
ರಾಜಾಜಿನಗರದಲ್ಲಿರುವ ನಮ್ಮ ಸಂಸ್ಥೆಗೆ ಕನ್ನಡ ಟೈಪಿಂಗ್ ಅನುಭವವುಳ್ಳ ಮಹಿಳಾ ಸ್ವಾಗತಕಾರರು ಬೇಕಾಗಿದ್ದಾರೆ. ನಿಮ್ಮ ರೆಸ್ಯೂಮ್ ಅನ್ನು WA ಸಂಖ್ಯೆ8310917454 ಗೆ ಕಳುಹಿಸಿ.

Security & Detectives
ಸೆಕ್ಯೂರಿಟಿ ಗಾರ್ಡ್‌ಗಳು ಬೇಕಾಗಿದ್ದಾರೆ. ಸ್ಥಳ: ಎನ್.ಆರ್ ಕಾಲೋನಿ, ಬಸವನಗುಡಿ, ಬೆಂಗಳೂರು. ಸಂಬಳ: Rs 20,000/. ಸಂಪರ್ಕಿಸಿ: 8277193108

ಪ್ರವಾಸ

Travel Agencies
11 ದಿನಗಳ ಸಿಂಗಾಪೂರ ಮಲೇಷಿಯಾ ಥೈಲ್ಯಾಂಡ್ ಪ್ರವಾಸ 22/6/26, 7 ದಿನಗಳ ಭೂತಾನ್ ಪ್ರವಾಸ 17/6/26 6 ದಿನಗಳ ಮಲೇಷಿಯಾ 4/8/26 ಸುಜಾಯಾತ್ರ 9019462508 9480843945

ವೈಯಕ್ತಿಕ

Change of Name
WE, P.NAVEEN kumar and Harshitha Raju, has changed our son's(born 06/04/2023) name from Rihaan N Pandith to Avyukth N Pragyan.

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವೆಂದು ನಂಬಿ ಪ್ರಕಟಿಸಲಾಗುತ್ತದೆ. ಆದರೆ, ಜಾಹೀರಾತುಗಳಲ್ಲಿ ನೀಡಲಾದ ವಸ್ತು, ಸೇವೆಗಳ ಗುಣಮಟ್ಟಕ್ಕೆ ಜಾಹೀರಾತುದಾರರೇ ಜವಾಬ್ದಾರರು. ಈ ಜಾಹೀರಾತುಗಳಿಗೆ ಸಂಸ್ಥೆಯು ಹೊಣೆಯಲ್ಲ. ಈ ಅಧಿಸೂಚನೆಯನ್ನು ಓದುಗರು ಗಮನಿಸಬೇಕೆಂದು ಕೋರಲಾಗಿದೆ.
ಪಬ್ಲಿಷರ್‌ ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ., ಬೆಂಗಳೂರು

ಎಐ ಯುಗ ಕೌಶಲಕ್ಕಿದೆ 'ಜಾಗ'

ನವದೆಹಲಿ: ಕಂಪನಿಯೊಂದರ ಆರಂಭಿಕ ಹಂತದ ಹುದ್ದೆಯೊಂದು ನಿರ್ವಹಿಸುವ ಕೆಲಸಗಳಲ್ಲಿ ಶೇ 37ರಷ್ಟು ಕೆಲಸವನ್ನು ಈಗ ಕೃತಕ ಬುದ್ಧಿಮತ್ತೆ (ಎಐ) ನಿರ್ವಹಿಸುತ್ತಿದೆ.

ಇದು ಭಾರತದ ಚಿತ್ರಣ. ಜಾಗತಿಕವಾಗಿ ಈ ಪ್ರಮಾಣ ಶೇ 33ರಷ್ಟೇ ಇದೆ. ಕಾಗ್ನಿಜೆಂಟ್ ಮತ್ತು ಪಿಯರ್‌ಸನ್ ಕಂಪನಿಗಳು ಸೇರಿ ಇತ್ತೀಚೆಗೆ ನಡೆಸಿದ ಸಮೀಕ್ಷೆಯಲ್ಲಿ ಈ ಮಾಹಿತಿ ತಿಳಿದು ಬಂದಿದೆ. ಈ ಸಮೀಕ್ಷೆಯು ಇನ್ನೂ ಹಲವು ಮಹತ್ವದ ವಿಚಾರಗಳತ್ತ ಗಮನ ಸೆಳೆದಿದೆ. 'ಕೃತಕ ಬುದ್ಧಿಮತ್ತೆಯು ಉದ್ಯೋಗ ಕಸಿಯುತ್ತಿದೆ' ಎನ್ನುವ ಚರ್ಚೆಯನ್ನು ಈ ಅಧ್ಯಯನವು ತುಸು ಹಿಂದಕ್ಕೆ ತಳ್ಳಿದೆ. ಬದಲಿಗೆ, ಈ ಕಾಲಘಟ್ಟದಲ್ಲಿ ಕೌಶಲವೇ ಪ್ರಾಮುಖ್ಯ ಎಂದು ಹೇಳಿದೆ. ಉದ್ಯೋಗದಲ್ಲಿನ ಸಾಂಪ್ರದಾಯಿಕ ಕಾರ್ಯವಿಧಾನವನ್ನು ಬದಲಿಸಿಕೊಳ್ಳಬೇಕು, ಜೊತೆಗೆ ಓದಿನ ಆಯ್ಕೆ (ಯಾವ ಪದವಿ) ಮತ್ತು ಹೆಚ್ಚು ಹೆಚ್ಚು ಕೌಶಲ ಪಡೆದುಕೊಳ್ಳುವುದೇ ಮುಖ್ಯ ಎಂದು ಅಧ್ಯಯನ ಹೇಳಿದೆ.

ಆರಂಭಿಕ ಹುದ್ದೆ: ಕಾರ್ಯವಿಧಾನ ಬದಲು



ಗ್ರಾಫಿಕ್ಸ್: ಹಳೇಮನಿ

96% ಕಂಪನಿಯ ಆರಂಭಿಕ ಹುದ್ದೆಗಳ ಕೆಲಸಗಳು ಮುಂದಿನ ಐದು ವರ್ಷಗಳಲ್ಲಿ ಬದಲಾಗಬೇಕು. ಈ ಹುದ್ದೆಗಳನ್ನು ನಿರ್ವಹಿಸುವ ಉದ್ಯೋಗಿಯು ಸಾಂಪ್ರದಾಯಿಕವಾದ ದತ್ತಾಂಶ ನಮೂದಿನಂಥ ಕೆಲಸಗಳ ಬದಲಿಗೆ ಎಐ ಔಟ್‌ಪುಟ್‌ಗಳನ್ನು ನಿರ್ವಹಿಸುವುದು, ವಿಚಾರಗಳನ್ನು ವಿಶ್ಲೇಷಿಸಿ ನಿರ್ಧಾರ ತೆಗೆದುಕೊಳ್ಳುವುದನ್ನು ಮಾಡಬೇಕು ಎಂದು ಬಯಸುತ್ತಿರುವ ಮಾನವ ಸಂಪನ್ಮೂಲ ಅಧಿಕಾರಿಗಳ ಪ್ರಮಾಣ

ನೇಮಕ: ಕಲಾ ಪದವಿಗೆ ಅಗ್ರ ತಾಂಬೂಲ

69% ಅಂತರಶಿಸ್ತೀಯ ಅಧ್ಯಯನಕ್ಕಿಂತ ಒಂದೇ ವಿಚಾರದಲ್ಲಿ ಆಳವಾದ ಜ್ಞಾನ ಇರಬೇಕು ಎಂದು ಬಯಸುವ ಎಚ್‌ಆರ್‌ಗಳ ಪ್ರಮಾಣ

67% ಸಮಾಜ ವಿಜ್ಞಾನ, ಮಾನವಿಕ ವಿಷಯಗಳನ್ನು ಕಲಿಸಿಕೊಡುವ ಕಲಾ ಪದವಿಗಳಿಗೆ ಹಿಂದೆಂಗಿಂತಲೂ ಎಐ ಯುಗದಲ್ಲಿಯೇ ಹೆಚ್ಚು ಮಹತ್ವ ಇದೆ ಎನ್ನುವ ಬ್ರಿಟನ್‌ನ ಎಚ್‌ಆರ್‌ಗಳ ಪ್ರಮಾಣ

97% ನಮ್ಮ ವರ್ತನೆ, ಮಾತುಗಾರಿಕೆ, ಸಂವಹನದಂಥ ಕಲೆಗಳಿಗೆ ಈಗ ಹೆಚ್ಚು ಬೇಡಿಕೆ. ತಾಂತ್ರಿಕ ಜ್ಞಾನ ಇಲ್ಲದವರೊಂದಿಗೂ ಸಂವಾದಿಸುವ, ಅರ್ಥ ಮಾಡಿಸುವ ಕೌಶಲ ಬೇಕು ಎನ್ನುವ ಎಚ್‌ಆರ್‌ಗಳ ಪ್ರಮಾಣ

ಎಐ ಕೌಶಲ ತರಬೇತಿಯಲ್ಲಿ ಅಂತರ



ತಮ್ಮ ಉದ್ಯೋಗಿಗಳಿಗೆ ಎಐ ತರಬೇತಿ ನೀಡುತ್ತಿರುವ ಕಂಪನಿಗಳ ಪ್ರಮಾಣ

ಎಐ ಯುಗಕ್ಕೆ ಹೊಂದಿಕೊಳ್ಳದೆ, ತರಬೇತಿ ನೀಡುವ ಬಗ್ಗೆ ವಿಮುಖವಾಗಿರುವ ಕಂಪನಿಗಳ ಪ್ರಮಾಣ

ಮ್ಯಾನೇಜರ್ ಹುದ್ದೆ: ಬೇಕು ಬದಲಾವಣೆ

97% ಎಐ ಯುಗದಲ್ಲಿ ಮ್ಯಾನೇಜರ್ ಹುದ್ದೆಯ ಕಾರ್ಯವಿಧಾನದಲ್ಲಿ ಬದಲಾವಣೆಗಳು ಬೇಕು ಎನ್ನುತ್ತಿರುವ ಕಂಪನಿಗಳ ಪ್ರಮಾಣ

ಸಾಂಪ್ರದಾಯಿಕವಾಗಿ ಮ್ಯಾನೇಜರ್ ಹುದ್ದೆ ನಿರ್ವಹಿಸುವ ಕಾರ್ಯಗಳನ್ನು ಎಐ ನಿರ್ವಹಿಸುತ್ತಿವೆ. ಆದರೆ, ನಾಯಕತ್ವ ಮತ್ತು ತಂಡವನ್ನು ಮುನ್ನಡೆಸುವ ದೃಷ್ಟಿಯಿಂದ ಮ್ಯಾನೇಜರ್ ಹುದ್ದೆ ಇರಬೇಕು ಎನ್ನುವುದು ಕಂಪನಿಗಳ ಅಭಿಪ್ರಾಯ. ಆದ್ದರಿಂದ, ಈ ಯುಗದಲ್ಲಿ ಈ ಹುದ್ದೆಯ ಕಾರ್ಯವಿಧಾನ ಬದಲಾಗಬೇಕು. ಇವರಿಗೂ ಎಐ ಜ್ಞಾನ ಇರಬೇಕು ಜೊತೆಗೆ, ಆಧುನಿಕ ತಂತ್ರಜ್ಞಾನದ ಸವಾಲುಗಳಿಗೆ ತಮ್ಮ ತಂಡಗಳನ್ನು ತಯಾರು ಮಾಡಬೇಕು ಎನ್ನುತ್ತದೆ ಕಂಪನಿಗಳು

ಸಮೀಕ್ಷಾ ಅವಧಿ: ಇದೇ ಮಾರ್ಚ್ 23ರಿಂದ ಏಪ್ರಿಲ್ 3
ಸಮೀಕ್ಷೆ ನಡೆದ ದೇಶಗಳು: ಬ್ರಿಟನ್, ಅಮೆರಿಕ ಮತ್ತು ಭಾರತ
ಮಾದರಿಗಳು: 750 ಎಚ್‌ಆರ್‌ಗಳು ಮತ್ತು 1,000ಕ್ಕೂ ಹೆಚ್ಚು

ಆಧಾರ: ಕಾಗ್ನಿಜೆಂಟ್ ಮತ್ತು ಪಿಯರ್‌ಸನ್ ಕಂಪನಿಗಳು ನಡೆಸಿದ ಸಮೀಕ್ಷಾ ವರದಿ

ಶಿಂದೆ ಬಣದತ್ತ ಭಿನ್ನಮತೀಯರು

ಶಿವಸೇನಾ (ಯುಬಿಟಿ) ಆರು ಸಂಸದರಿಗೆ ಶೋಕಾಸ್ ನೋಟಿಸ್ ಜಾರಿ

ನವದೆಹಲಿ (ಪಿಟಿಐ): ಗುರುವಾರ ಇಲ್ಲಿ ನಡೆದ ಸಂಸದೀಯ ಪಕ್ಷದ ಸಭೆಗೆ ಗೈರಾಗುವ ಮೂಲಕ ವಿಪ್ ಉಲ್ಲಂಘಿಸಿದ ಆರು ಬಂಡಾಯ ಸಂಸದರಿಗೆ ಶಿವಸೇನಾ (ಯುಬಿಟಿ) ಶೋಕಾಸ್ ನೋಟಿಸ್ ಜಾರಿಗೊಳಿಸಿದ್ದು, 'ಅನರ್ಹತೆ'ಗೊಳಿಸುವ ಕಠಿಣ ಎಚ್ಚರಿಕೆ ನೀಡಿದೆ.

ಲೋಕಸಭೆ ಸದಸ್ಯರಾದ ಅರವಿಂದ್ ಸಾವಂತ್, ಅನಿಲ್ ದೇಸಾಯಿ, ರಾಜಭಾವು ವಾಜೆ, ರಾಜ್ಯಸಭಾ ಸದಸ್ಯರಾದ ಸಂಜಯ್ ರಾವುತ್ ಸಭೆಯಲ್ಲಿ ಭಾಗವಹಿಸಿದರು. ಉಳಿದ ಆರು ಸಂಸದರಾದ ನಾಗೇಶ್ ಬಾಪುರಾವ್ ಪಾಟೀಲ್ ಅಷ್ಟೀಕರ್, ಸಂಜಯ್ ದೇಶ್‌ಮುಖ್, ಸಂಜಯ್ ಜಾಧವ್, ಸಂಜಯ್ ಡಿ. ಪಾಟೀಲ್, ಓಂಪ್ರಕಾಶ್ ರಾಜೆ ನಿಂಬಾಳ್ಕರ್, ಬಾಬಾಸಾಹೇಬ್ ವಾಗ್ಚುರೆ ಸಭೆಗೆ ಗೈರಾಗುವ ಮೂಲಕ ಶಿವಸೇನಾ ಯುಬಿಟಿಐ ಬಣದಿಂದ ಹೊರಬಂದು ಏಕನಾಥ ಶಿಂದೆ ನೇತೃತ್ವದ ಶಿವಸೇನಾದ ಜತೆ ವಿಲೀನಗೊಳ್ಳುವುದನ್ನು ಬಹುತೇಕ ದೃಢಪಡಿಸಿದರು.

ಶಿಂದೆ ಬಣದಲ್ಲಿ ಸೇರ್ಪಡೆಗೆ ಅನುಮತಿ ಕೋರಿ ಆರು ಬಂಡಾಯ ಸಂಸದರು ಗುರುವಾರ ಲೋಕಸಭಾ ಸ್ಪೀಕರ್ ಓಂ ಬಿರ್ಲಾ ಅವರಿಗೆ ಮನವಿ ಸಲ್ಲಿಸಿದ್ದಾರೆ ಎಂದು ಮೂಲಗಳು ಹೇಳಿವೆ.

'ಸಭೆಗೆ ಗೈರಾದ 6 ಸಂಸದರಿಗೆ ಶೋಕಾಸ್ ನೋಟಿಸ್ ಜಾರಿಗೊಳಿಸಿದ್ದೇವೆ. ಒಂದು ವಾರದೊಳಗೆ ಇದಕ್ಕೆ ಉತ್ತರ ನೀಡಿದಿದ್ದರೆ, ಅವರನ್ನು ಅನರ್ಹಗೊಳಿಸಲು ಲೋಕಸಭಾ ಸ್ಪೀಕರ್‌ಗೆ ಪತ್ರ ಬರೆಯಲಾಗುವುದು' ಎಂದು ಶಿವಸೇನಾ (ಯುಬಿಟಿ) ಸಂಸದ ಸಂಜಯ್ ರಾವುತ್ ಸಭೆಯ ಬಳಿಕ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

'ಕಾನೂನಿನ ಪ್ರಕಾರ, ಬಂಡಾಯ ಸಂಸದರು ಮೂರನೇ ಎರಡರಷ್ಟು ಬೆಂಬಲ ಹೊಂದಿದ್ದರೂ ಮತ್ತೊಂದು ಪಕ್ಷದೊಂದಿಗೆ ವಿಲೀನಗೊಳ್ಳಲು ಸಾಧ್ಯವಿಲ್ಲ. ಕೇವಲ ಮೂಲ ಪಕ್ಷ ಮಾತ್ರ ಮೂರನೇ ಎರಡರಷ್ಟು ಬೆಂಬಲದೊಂದಿಗೆ ವಿಲೀನಗೊಳ್ಳಬಹುದು' ಎಂದು ಸಂಸದ ಅನಿಲ್ ದೇಸಾಯಿ ಸುದ್ದಿಗಾರರ ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಶೀಘ್ರದಲ್ಲೇ 'ಆಪರೇಷನ್ ಟೈಗರ್' ಭಾಗ–2

ಮುಂಬೈ: ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾದ ಸಂಸದೀಯ ಪಕ್ಷದಲ್ಲಿ ವಿಭಜನೆ ಸೃಷ್ಟಿಸುವಲ್ಲಿ ಯಶಸ್ವಿಯಾಗಿರುವ ಏಕನಾಥ ಶಿಂದೆ ನೇತೃತ್ವದ ಬಣವು ಈಗ ಮಹಾರಾಷ್ಟ್ರ ರಾಜಕೀಯದತ್ತ ಗಮನ ಕೇಂದ್ರೀಕರಿಸಿದೆ. ರಾಜ್ಯ ವಿಧಾನಸಭೆಯ ಮುಂಬರುವ ಮಳೆಗಾಲದ ಅಧಿವೇಶನದ ಸಂದರ್ಭದಲ್ಲಿ 'ಆಪರೇಷನ್ ಟೈಗರ್' ಎರಡನೆಯ ಹಂತದ ಕಾರ್ಯಾಚರಣೆ ನಡೆಯುವ ಸಾಧ್ಯತೆಗಳಿವೆ ಎಂದು ಮೂಲಗಳು ಹೇಳಿವೆ.

ಜೂನ್ 22ರಿಂದ ಜುಲೈ 10ರವರೆಗೆ ಮಹಾರಾಷ್ಟ್ರ ವಿಧಾನಸಭೆಯ ಮಳೆಗಾಲದ ಅಧಿವೇಶನ ನಡೆಯಲಿದ್ದು, ಒಟ್ಟು 9 ಸಂಸದರಲ್ಲಿ 6 ಮಂದಿಯನ್ನು ಕಳೆದುಕೊಳ್ಳುವ ಭೀತಿ ಎದುರಿಸುತ್ತಿರುವ ಯುಬಿಟಿ ಬಣಕ್ಕೆ ನಿಜವಾದ ರಾಜಕೀಯ ಪರೀಕ್ಷೆ ಎದುರಾಗಿದೆ.

288 ಸದಸ್ಯ ಬಲದ ಮಹಾರಾಷ್ಟ್ರ ವಿಧಾನಸಭೆಯಲ್ಲಿ ಶಿವಸೇನಾ (ಯುಬಿಟಿ) 20 ಶಾಸಕರನ್ನು, ವಿಧಾನ ಪರಿಷತ್‌ನಲ್ಲಿ 6 ಸದಸ್ಯರನ್ನು ಹೊಂದಿದೆ. 2024ರ ವಿಧಾನಸಭಾ ಚುನಾವಣೆಯಲ್ಲಿನ ಹಿನ್ನಡೆ ಹೊರತಾಗಿಯೂ ಯುಬಿಟಿ ಬಣ ಅತಿ ದೊಡ್ಡ ವಿರೋಧ ಪಕ್ಷವಾಗಿ ಉಳಿದಿದೆ. ಮಹಾವಿಕಾಸ್‌ಆಘಾಡಿ' ಮಿತ್ರಪಕ್ಷಗಳಾದ ಕಾಂಗ್ರೆಸ್ 16 ಶಾಸಕರನ್ನು, ಎನ್‌ಸಿಪಿ (ಎಸ್‌ಪಿ) 10 ಶಾಸಕರನ್ನು ಹೊಂದಿದೆ.

ಇದೇ ವೇಳೆ, ಉಪ ಮುಖ್ಯಮಂತ್ರಿ ಏಕನಾಥ್ ಶಿಂಧೆ ನೇತೃತ್ವದ ಶಿವಸೇನೆಯು 57 ಶಾಸಕರು ಮತ್ತು 8 ವಿಧಾನಪರಿಷತ್ ಸದಸ್ಯ ಬಲದೊಂದಿಗೆ ಆಡಳಿತಾರೂಢ ಬಿಜೆಪಿ ನೇತೃತ್ವದ 'ಮಹಾಯುತಿ' ಸರ್ಕಾರದ ಪ್ರಮುಖ ಆಧಾರಸ್ತಂಭವಾಗಿ ಹೊರಹೊಮ್ಮಿದೆ.

ಠಾಕ್ರೆ ಪಾಳೆಯದ 16 ಶಾಸಕರು ಶಿಂದೆ ಪಕ್ಷದ ಜತೆಗೆ ನಿರಂತರ ಸಂಪರ್ಕದಲ್ಲಿ ಇದ್ದಾರೆ ಎಂದು ಶಿವಸೇನಾ ವಿಧಾನಪರಿಷತ್ ಸದಸ್ಯ ಕೃಪಾಲ್ ತುಮಾನೆ ಇತ್ತೀಚೆಗೆ ಹೇಳಿದ್ದರು.

ವಿಭಜನೆ ಇಲ್ಲ: ಪಾಂಡೆ

ಲಖನೌ: ಸಮಾಜವಾದಿ ಪಕ್ಷದ ಸಂಸದ ಸನಾತನ್ ಪಾಂಡೆ ನೇತೃತ್ವದಲ್ಲಿ ಪಕ್ಷವು ವಿಭಜನೆಯಾಗಲಿದೆ ಎಂದು ಉತ್ತರ ಪ್ರದೇಶದ ಸಚಿವ ಓಂ ಪ್ರಕಾಶ್ ರಾಜ್‌ಭರ್ ಹೇಳಿಕೆಯನ್ನು ಖುದ್ದು ಪಾಂಡೇ ಅವರೇ ನಿರಾಕರಿಸಿದ್ದಾರೆ.

'ರಾಜ್‌ಭರ್ ಹೇಳಿಕೆಯು ಹಾಸ್ಯಸ್ಪದವಾಗಿದೆ. ಅವರು ನನ್ನ ಹೆಸರನ್ನು ಇಡೀ ದೇಶದಲ್ಲಿ ಪ್ರಸಿದ್ದಿಗೊಳಿಸಿದ್ದಕ್ಕೆ ಧನ್ಯವಾದ ಸಲ್ಲಿಸುತ್ತೇನೆ' ಎಂದು ಪಾಂಡೆ ತಿರುಗೇಟು ನೀಡಿದ್ದಾರೆ.

'ನಾನು ಯಾವುದೇ ಕಾರಣಕ್ಕೂ ಸಮಾಜವಾದಿ ಪಕ್ಷ ತೊರೆಯುವುದಿಲ್ಲ. ಹಾಗೊಮ್ಮೆ ತೊರೆದರೂ ಕೂಡ ಸಕ್ರಿಯ ರಾಜಕಾರಣದಿಂದಲೇ ನಿವೃತ್ತಿ ಪಡೆಯುತ್ತೇನೆ' ಎಂದಿದ್ದಾರೆ.

ಸಮಾಜವಾದಿ ಪಕ್ಷದ ಅಧ್ಯಕ್ಷ ಅಖಿಲೇಶ್ ಸಿಂಗ್ ಯಾದವ್ ಕೂಡ ರಾಜ್‌ಭರ್ ಹೇಳಿಕೆಯನ್ನು ತಳ್ಳಿ ಹಾಕಿದ್ದಾರೆ.

'ದೇಶದ್ರೋಹಿಗಳಿಗೆ ಎಚ್ಚರ'

ಬಂಡಾಯ ಸಂಸದರ ವಿರುದ್ಧ ತೀವ್ರ ವಾಗ್ದಾಳಿ ನಡೆಸಿರುವ ಸಂಸದ ಸಂಜಯ್ ರಾವುತ್, ಶಿವಸೇನಾ ಸೈನಿಕರ ಕೋಪದಿಂದ ಈ 'ದೇಶದ್ರೋಹಿ'ಗಳು ತಮ್ಮನ್ನು ತಾವು ರಕ್ಷಿಸಿಕೊಂಡು ಮನೆಗೆ ಅಥವಾ ತಮ್ಮ ಕ್ಷೇತ್ರಗಳಿಗೆ ಮರಳಬೇಕಾದರೆ ಭಾರತೀಯ ವಾಯುಪಡೆಯ ನೆರವು ಪಡೆದುಕೊಳ್ಳಬೇಕಾಗುತ್ತದೆ' ಎಂದು ಎಚ್ಚರಿಕೆ ನೀಡಿದ್ದಾರೆ.

'ದೇಶದ ಸದ್ಯದ ರಾಜಕೀಯ ಪರಿಸ್ಥಿತಿಗೆ ಸುಪ್ರೀಂಕೋರ್ಟ್ ಮತ್ತು ಚುನಾವಣಾ ಆಯೋಗ ಕಾರಣ' ಎಂದಿರುವ ರಾವುತ್, 'ಭಿನ್ನಮತೀಯ ಸಂಸದರ ವಿರುದ್ಧ ಪಕ್ಷವು 'ಆಪರೇಷನ್ ತುಡುವಾ' (ಧ್ವಂಸ) ಕಾರ್ಯಾಚರಣೆ ನಡೆಸಲಿದೆ ಎಂದಿದ್ದಾರೆ.

ಶಿವಸೇನಾ (ಯುಬಿಟಿ) ಸಂಸದ ಸಂಜಯ್ ರಾವುತ್ (ಎಡ) ಮತ್ತು ಅರವಿಂದ್ ಸಾವಂತ್ ಅವರು ಗುರುವಾರ ನವದೆಹಲಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು – ಪಿಟಿಐ ಚಿತ್ರ

ವೈ–ಪ್ಲಸ್ ಭದ್ರತೆ

ಶಿವಸೇನಾ (ಯುಬಿಟಿ) ತೊರೆಯಲು ನಿರ್ಧರಿಸಿರುವ ಆರು ಮಂದಿ ಬಂಡಾಯ ಸಂಸದರಿಗೆ ಮಹಾರಾಷ್ಟ್ರ ಪೊಲೀಸರು ವೈ–ಪ್ಲಸ್ ಭದ್ರತೆ ಒದಗಿಸಿದ್ದಾರೆ. ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಿಂದ ಭಾರಿ ಬೆದರಿಕೆ ಇರುವುದರಿಂದ, ಹೆಚ್ಚುವರಿ ಭದ್ರತೆ ಕಲ್ಪಿಸಲಾಗಿದೆ ಎಂದು ಮೂಲಗಳು ಹೇಳಿವೆ. ವೈ–ಪ್ಲಸ್ ಭದ್ರತೆಯು 11 ಮಂದಿ ಸಿಬ್ಬಂದಿಯನ್ನು ಒಳಗೊಂಡಿದೆ.

ವಿಭಜನೆಗೆ ರಾವುತ್ ಕಾರಣ: ಮಹಾಜನ್

'ಬೃಹನ್ ಮುಂಬೈ ಮಹಾನಗರ ಪಾಲಿಕೆಯ (ಬಿಎಂಸಿ) ಕಾರ್ಪೊರೇಟರ್‌ಗಳು ಕೂಡ ಶೀಘ್ರದಲ್ಲೇ ಪಕ್ಷ ತೊರೆಯಲಿದ್ದಾರೆ ಎಂದು ಬಿಜೆಪಿ ಸಚಿವ ಗಿರೀಶ್ ಮಹಾಜನ್ ಹೇಳಿದ್ದು, ಉದ್ಧವ್ ಠಾಕ್ರೆ ನೇತೃತ್ವದ ಪಕ್ಷದ ವಿಭಜನೆ ಮತ್ತು ಸಂಸದರ ನಿರ್ಗಮನಕ್ಕೆ, ಶಿವಸೇನಾ (ಯುಬಿಟಿ) ಸಂಸದ ಸಂಜಯ್ ರಾವುತ್ ಅವರೇ ಕಾರಣ' ಎಂದು ಆರೋಪಿಸಿದ್ದಾರೆ.

ಅನಿವಾಸಿ ಕನ್ನಡಿಗರ ಸಚಿವಾಲಯಕ್ಕೆ ರೂಪುರೇಷೆ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಕೌಶಲಾಭಿವೃದ್ಧಿ, ವಲಸೆ ಕಾರ್ಮಿಕರ ಕಲ್ಯಾಣ, ನರ್ಸಿಂಗ್ ಶಿಕ್ಷಣ, ವಿದೇಶಿ ಬಂಡವಾಳ ಹೂಡಿಕೆಯ ಮೇಲ್ವಿಚಾರಣೆ ಸೇರಿದಂತೆ ವಿವಿಧ ವಿಷಯಗಳನ್ನು ನಿರ್ವಹಿಸಲು ಕರ್ನಾಟಕ ಸರ್ಕಾರದಲ್ಲಿ, ಅನಿವಾಸಿ ಕನ್ನಡಿಗರ ಹೊಸ ಸಚಿವಾಲಯ ರೂಪುಗೊಳ್ಳುತ್ತಿದೆ.

ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದ ನಂತರ ನಡೆಸಿದ ಮೊದಲ ಸಂಪುಟ ಸಭೆಯಲ್ಲಿ ಅನಿವಾಸಿ ಕನ್ನಡಿಗರಿಗೆ ಪ್ರತ್ಯೇಕ ಸಚಿವಾಲಯ ಸ್ಥಾಪಿಸುವುದಾಗಿ ಡಿ.ಕೆ.ಶಿವಕುಮಾರ್ ಅವರು ಘೋಷಿಸಿದ್ದರು. ಅದು ಈಗ ಸಾಕಾರಗೊಳ್ಳುತ್ತಿದೆ.

ಅಮೆರಿಕ, ಬ್ರಿಟನ್, ಯೂರೋಪ್, ಕೆನಡಾ, ಆಫ್ರಿಕಾ, ಸಿಂಗಪುರ, ಮಲೇಷ್ಯಾ, ಸಂಯುಕ್ತ ಅರಬ್ ಸಂಸ್ಥಾನ (ಯುಎಇ), ಸೌದಿ ಅರೇಬಿಯಾ ಮತ್ತಿತರ ಗಲ್ಫ್ ರಾಷ್ಟ್ರಗಳಲೂ ಸೇರಿದಂತೆ ವಿದೇಶಗಳಲ್ಲಿ ಕನ್ನಡಿಗರು ನೆಲಸಿದ್ದಾರೆ. ಉದ್ಯಮಿಗಳು, ವೈದ್ಯರು, ಎಂಜಿನಿಯರ್‌ಗಳು ಸೇರಿದಂತೆ ಉತ್ತಮ ಸ್ಥಾನಮಾನ ಪಡೆದ ಒಂದು ವರ್ಗ, ಚಾಲಕರು, ಮನೆ ಕೆಲಸದವರು, ಕೂಲಿ ಕಾರ್ಮಿಕರು, ಶುಶ್ರೂಷಕರು ಸೇರಿದಂತೆ ವಿವಿಧ ವೃತ್ತಿಯ ಮತ್ತೊಂದು ಶ್ರಮಿಕ ವರ್ಗ ವಿದೇಶಗಳಲ್ಲಿ ಬದುಕು ಕಟ್ಟಿಕೊಂಡಿವೆ.

> ವಿದೇಶದಲ್ಲಿ ಉದ್ಯೋಗ ಹುಡುಕುವವರಿಗೆ ತರಬೇತಿ, ಮಧ್ಯವರ್ತಿಗಳ ನಿಯಂತ್ರಣ, ವಿದೇಶಗಳಲ್ಲಿ ಸಂಕಷ್ಟಕ್ಕೆ ಸಿಲುಕಿದಾಗ ರಕ್ಷಣೆ ನೀಡಲಾಗುವುದು
> **ಆರತಿ ಕೃಷ್ಣ, ಸದಸ್ಯ ಕಾರ್ಯದರ್ಶಿ,** ಕರ್ನಾಟಕದ ಅನಿವಾಸಿ ಭಾರತೀಯ ವೇದಿಕೆ

ಹೊಸ ಸಚಿವಾಲಯವು ಮೊದಲ ವರ್ಗದ ಸಹಕಾರ ಪಡೆದು ಆಯಾ ದೇಶಗಳ ಕಂಪನಿಗಳು, ಉದ್ಯಮಿಗಳಿಂದ ಕರ್ನಾಟಕಕ್ಕೆ ಅಗತ್ಯವಿರುವ ಬಂಡವಾಳ ಸೆಳೆಯುವುದು, ಹೂಡಿಕೆಗೆ ಮನವೊಲಿಸುವ ಕಾರ್ಯ ಮಾಡಲಿದೆ.

ಶ್ರಮಿಕ ವರ್ಗದ ಹಿತಾಸಕ್ತಿಯೇ ಪ್ರಧಾನ: ರಾಜ್ಯ ಸರ್ಕಾರ ಸಿದ್ಧಪಡಿಸುತ್ತಿರುವ ಅನಿವಾಸಿ ಕನ್ನಡಿಗರ ಸಚಿವಾಲಯದ ರೂಪುರೇಷೆಯಲ್ಲಿ ವಿದೇಶಗಳಲ್ಲಿ ನೆಲಸಿರುವ ಶ್ರಮಿಕ ವರ್ಗದ ಹಿತಾಸಕ್ತಿ ಸಂರಕ್ಷಣೆಗೆ ವಿಶೇಷ ಆದ್ಯತೆ ನೀಡಲಾಗುತ್ತಿದೆ. ಆಯಾ ದೇಶಗಳ ಆಂತರಿಕ ಸಂಘರ್ಷ, ಆರ್ಥಿಕ ಏರಿಳಿತ, ಕೋವಿಡ್‌ನಂತಹ ಆರೋಗ್ಯ ಸಮಸ್ಯೆಗಳು, ರಾಜಕೀಯ ಬದಲಾವಣೆಗಳು, ಯುದ್ಧದಂತಹ ಸನ್ನಿವೇಶದಲ್ಲಿ ಕೆಲಸ ಕಳೆದುಕೊಂಡು ತೀವ್ರ ಸಂಕಷ್ಟಕ್ಕೆ ಸಿಲುಕುತ್ತಿವೆ. ಸಂಕಷ್ಟದ ಸಮಯಗಳಲ್ಲಿ ಕರ್ನಾಟಕಕ್ಕೆ ಮರಳುವ ಕಾರ್ಮಿಕರ ಬದುಕಿಗೆ ನೆರವಾಗಲಿದೆ.

ಕೇರಳಂ ಮಾದರಿ

ಅನಿವಾಸಿ ಕನ್ನಡಿಗರ ಸಚಿವಾಲಯಕ್ಕೆ ಮೊದಲ ವರ್ಷ ₹400ರಿಂದ ₹500 ಕೋಟಿ ಅನುದಾನ ಒದಗಿಸುವ ಕುರಿತು ಚರ್ಚೆ ನಡೆದಿದೆ. ಕೇರಳಂ ಮಾದರಿಯಲ್ಲಿ ನಿರ್ವಹಣೆ ಮಾಡುವ ಬಗ್ಗೆ ಯೋಜನೆ ರೂಪಿಸಲಾಗುತ್ತಿದೆ.

ಕೇರಳಂ ಸರ್ಕಾರ ಪ್ರತಿ ವರ್ಷ ₹200 ಕೋಟಿ ಅನುದಾನ ನೀಡುತ್ತಿದ್ದು, ಖಾಸಗಿ ಸಹಕಾರವನ್ನು ಬಳಸಿಕೊಳ್ಳುತ್ತಿದೆ. ತಮಿಳುನಾಡು ಸಹ ಇಂತಹದ್ದೇ ನೀತಿಯನ್ನು ಅಳವಡಿಸಿಕೊಂಡಿದ್ದು, ಕರ್ನಾಟಕವೂ ಅದೇ ಮಾದರಿಯತ್ತ ಚಿತ್ತ ಹರಿಸಿದೆ.

ಆರತಿಗೆ ಹೊಣೆ: ಸಿ.ಎಂಗೆ ಮನವಿ

ಅನಿವಾಸಿ ಕನ್ನಡಿಗರ ಸಚಿವಾಲಯದ ಸಚಿವರನ್ನಾಗಿ ಕರ್ನಾಟಕ ಸರ್ಕಾರದ ಅನಿವಾಸಿ ಭಾರತೀಯ ವೇದಿಕೆ ಸದಸ್ಯ ಕಾರ್ಯದರ್ಶಿಯೂ ಆಗಿರುವ ವಿಧಾನ ಪರಿಷತ್ ಸದಸ್ಯೆ ಆರತಿ ಕೃಷ್ಣ ಅವರನ್ನು ನೇಮಕ ಮಾಡಬೇಕು ಎಂದು 30 ದೇಶಗಳ 43 ಅನಿವಾಸಿ ಕನ್ನಡಿಗರ ಸಂಘಟನೆಗಳ ನಿಯೋಗ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ಮನವಿ ಮಾಡಿದೆ.

'ಅಮೆರಿಕದ ಭಾರತೀಯ ರಾಯಭಾರ ಕಚೇರಿಯಲ್ಲಿ ಭಾರತೀಯ ಸಮುದಾಯ ಅಭಿವೃದ್ಧಿ ಅಧಿಕಾರಿಯಾಗಿ ಕೆಲಸ ಮಾಡಿದ್ದಾರೆ. ಯುಪಿಎ ಅವಧಿಯಲ್ಲಿ ಭಾರತೀಯ ಸಾಗರೋತ್ತರ ಸಚಿವಾಲಯದ ಪ್ರಮುಖ ಹುದ್ದೆಯಲ್ಲಿ ಉತ್ತಮ ಕೆಲಸ ಮಾಡಿದ್ದಾರೆ. ಅನಿವಾಸಿಗಳ ನಾಡಿಮಿಡಿತ ಅರಿತಿರುವ, ವಿದೇಶಗಳಲ್ಲಿ ನೆಲೆಸಿರುವ ಕನ್ನಡಿಗರ ಕಷ್ಟಕ್ಕೆ ಸದಾ ಸ್ಪಂದಿಸುವ, ಅವರನ್ನು ಹೊಸ ಜವಾಬ್ದಾರಿಗೆ ಪರಿಗಣಿಸಬೇಕು. ಇದರಿಂದ ಕರ್ನಾಟಕಕ್ಕೆ ಸಾಕಷ್ಟು ನೆರವು ಸಿಗಲಿದೆ. ಸಚಿವಾಲಯ ಸ್ಥಾಪನೆಯ ಉದ್ದೇಶವೂ ಈಡೇರಲಿದೆ' ಎಂದು ಅನಿವಾಸಿ ಕನ್ನಡಿಗರಾದ ರೊನಾಲ್ಡ್ ಕೊಲಾಸೊ, ಜೋಕಟ್ಟೆ ಪ್ರವೀಣ್ ಶೆಟ್ಟಿ ಮತ್ತಿತರರು ಮನವಿ ಮಾಡಿದ್ದಾರೆ.

ಅಮರನಾಥ ಯಾತ್ರೆ

ವಾರ್ಷಿಕ ಅಮರನಾಥ ಯಾತ್ರೆ ಅಂಗವಾಗಿ ಗುರುವಾರ ಜಮ್ಮು ರೈಲು ನಿಲ್ದಾಣದಲ್ಲಿ ಭದ್ರತಾ ಸಿಬ್ಬಂದಿ ಪ್ರಯಾಣಿಕರ ಚೀಲಗಳನ್ನು ಅಣಕು ಕಾರ್ಯಾಚರಣೆ ಮೂಲಕ ತಪಾಸಣೆಗೆ ಒಳಪಡಿಸಿದರು – ಪಿಟಿಐ ಚಿತ್ರ

ಟೆಲಿಗ್ರಾಮ್ ಮೇಲಿನ ನಿರ್ಬಂಧ ಪ್ರಶ್ನಿಸಿದ ದೆಹಲಿ ಹೈಕೋರ್ಟ್; ತೀರ್ಪು ಕಾಯ್ದಿರಿಸಿದ ಪೀಠ

'ಜನರ ಹಕ್ಕು ಹೇಗೆ ಮೊಟಕುಗೊಳಿಸುವಿರಿ?'

ನವದೆಹಲಿ (ಪಿಟಿಐ): ಜೂನ್ 21ರಂದು ನಡೆಯಲಿರುವ ನೀಟ್–ಯುಜಿ ಮರುಪರೀಕ್ಷೆಗೆ ಮುನ್ನ ಟೆಲಿಗ್ರಾಮ್ ಆ್ಯಪ್ ಬಳಕೆಯನ್ನು ತಾತ್ಕಾಲಿಕವಾಗಿ ನಿರ್ಬಂಧಿಸಿರುವ ಕೇಂದ್ರ ಸರ್ಕಾರದ ನಿರ್ಧಾರವನ್ನು ದೆಹಲಿ ಹೈಕೋರ್ಟ್ ಗುರುವಾರ ಪ್ರಶ್ನಿಸಿದೆ.

'ಕೆಲವರು ಪರೀಕ್ಷೆಯನ್ನು ತೆಗೆದುಕೊಳ್ಳುತ್ತಿದ್ದಾರೆ ಎಂಬ ಕಾರಣಕ್ಕಾಗಿ, ಮೆಸೇಜಿಂಗ್ ಆ್ಯಪ್‌ನ 15 ಕೋಟಿ ಬಳಕೆದಾರರ ಹಕ್ಕುಗಳನ್ನು ಹೇಗೆ ಮೊಟಕುಗೊಳಿಸಬಹುದು' ಎಂದೂ ಪ್ರಶ್ನಿಸಿದೆ.

ನೀಟ್–ಯುಜಿ ಮರುಪರೀಕ್ಷೆಗೂ ಮುನ್ನ ಆ್ಯಪ್ ಅನ್ನು ದುರುಪಯೋಗ ಪಡಿಸಿಕೊಳ್ಳುವ ಸಾಧ್ಯತೆ ಇದೆ ಎಂಬ ಕಾರಣಕ್ಕೆ ಜೂನ್ 22ರವರೆಗೆ ಟೆಲಿಗ್ರಾಮ್ ಆ್ಯಪ್ ಬಳಕೆಯನ್ನು ನಿರ್ಬಂಧಿಸಿರುವ ಕೇಂದ್ರ ಸರ್ಕಾರದ ವಿರುದ್ಧ ಟೆಲಿಗ್ರಾಮ್ ಸಲ್ಲಿಸಿದ್ದ ಅರ್ಜಿಯ ತೀರ್ಪನ್ನು ಕಾಯ್ದಿರಿಸುವ ಮೊದಲು ನ್ಯಾಯಮೂರ್ತಿ ತೇಜಸ್ ಕಾರಿಯಾ ಅವರಿದ್ದ ರಜಾ ಪೀಠವು ಈ ಅಭಿಪ್ರಾಯ ವ್ಯಕ್ತಪಡಿಸಿದೆ.

ಕೇಂದ್ರ ಸರ್ಕಾರವನ್ನು ಪ್ರತಿನಿಧಿಸಿದ್ದ ಅಟಾರ್ನಿ ಜನರಲ್ ಆರ್. ವೆಂಕಟರಮಣಿ ಮತ್ತು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಹಾಗೂ ಟೆಲಿಗ್ರಾಮ್ ಪರ ಹಾಜರಿದ್ದ ಹಿರಿಯ ವಕೀಲ ಧ್ರುವ ಮೆಹ್ತಾ ಅವರ ವಾದಗಳನ್ನು ಪೀಠವು ಆಲಿಸಿತು.

ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರು, 'ಟೆಲಿಗ್ರಾಮ್ ಅಪ್ಲಿಕೇಷನ್ ಮಾಹಿತಿಯನ್ನು ವ್ಯಾಪಕವಾಗಿ ಹಂಚಿಕೊಳ್ಳಲು ಬಳಸಬಹುದಾದ ಬಾಟ್ ಸೌಲಭ್ಯವನ್ನು ಒದಗಿಸುತ್ತದೆ. ಒಂದು ಬಾಟ್ ಅನ್ನು ತೆಗೆದುಹಾಕಿದರೆ, ಇತರ ಬಾಟ್‌ಗಳನ್ನು ವಿಭಿನ್ನ ಹೆಸರುಗಳಿಂದ ರಚಿಸಬಹುದು. ಆದ್ದರಿಂದ, ಬಾಟ್‌ಗಳ ವಿರುದ್ಧದ ಕ್ರಮಗಳು ತಾತ್ಕಾಲಿಕ ಪರಿಹಾರವನ್ನು ಮಾತ್ರ ನೀಡುತ್ತವೆ' ಎಂದು ವಾದಿಸಿದ್ದಾರೆ.

> ಸಂಭಾವ್ಯ ಹಾನಿಯನ್ನು ತಪ್ಪಿಸುವ ಉದ್ದೇಶದಿಂದ ಟೆಲಿಗ್ರಾಮ್ ಆ್ಯಪ್ ಅನ್ನು ನಿರ್ಬಂಧಿಸಲಾಗಿದೆ. ಈ ಹಂತದಲ್ಲಿ ನ್ಯಾಯಾಲಯವು ಮಧ್ಯಪ್ರವೇಶಿಸಲು ಸಾಧ್ಯವಿಲ್ಲ
> **ತುಷಾರ್ ಮೆಹ್ತಾ,** ಸಾಲಿಸಿಟರ್ ಜನರಲ್



'ಫೇಸ್‌ಬುಕ್ ಅಥವಾ ವಾಟ್ಸ್‌ಆ್ಯಪ್‌ನಲ್ಲಿ ಈ ಸಮಸ್ಯೆ ಇಲ್ಲ. ಆದರೆ, ಟೆಲಿಗ್ರಾಮ್ ಅಪ್ಲಿಕೇಷನ್ ಕ್ಲೌಡ್ ಮೂಲಕ ಕಾರ್ಯನಿರ್ವಹಿಸುತ್ತದೆ. ಅವರು ಇದನ್ನು ನಿರ್ಬಂಧಿಸಿದರೂ ಮತ್ತು ಯಾರಾದರೂ ತಪ್ಪು ಕೆಲಸ ಮಾಡಿದರೂ, ಕಾನೂನು ಜಾರಿ ಸಂಸ್ಥೆಗಳಿಗೆ ನಿಜವಾದ ಬಳಕೆದಾರನನ್ನು ಪತ್ತೆಹಚ್ಚಲು ಸಾಧ್ಯವಾಗುವುದಿಲ್ಲ' ಎಂದು ತಿಳಿಸಿದ್ದಾರೆ.

'ಟೆಲಿಗ್ರಾಮ್ ಅನ್ನು ಆಗಾಗ್ಗೆ ಭಯೋತ್ಪಾದಕ ಚಟುವಟಿಕೆಗಳಿಗಾಗಿ ಬಳಸಲಾಗುತ್ತದೆ. ಇದರ ವಿನ್ಯಾಸದ ಕಾರಣದಿಂದಾಗಿ ವಿವಿಧ ನ್ಯಾಯಾಂಗ ವ್ಯಾಪ್ತಿಯಲ್ಲಿ ಕಾನೂನು ಜಾರಿ ಸಂಸ್ಥೆಗಳು ಅನೇಕ ಸವಾಲುಗಳನ್ನು ಎದುರಿಸುತ್ತಿವೆ' ಎಂದು ತುಷಾರ್ ಮೆಹ್ತಾ ಅವರು ಕೋರ್ಟ್ ಗಮನಕ್ಕೆ ತಂದಿದ್ದಾರೆ.

'ನೀಟ್–ಯುಜಿ ಪರೀಕ್ಷೆಯ ಪ್ರಶ್ನೆಪತ್ರಿಕೆ ಸೋರಿಕೆಯಿಂದ ಅನೇಕ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ. ಆದರೆ, ಇದೇ ಕಾರಣಕ್ಕೆ ನೀವು ಇಡೀ ಆ್ಯಪ್ ಅನ್ನು ನಿಷೇಧಿಸಬಹುದೇ? ಬೇರೊಬ್ಬರನ್ನು ರಕ್ಷಿಸುವ ಹಕ್ಕನ್ನು ನೀವು ನಿರ್ಬಂಧಿಸಬಹುದೇ' ಎಂದು ಪೀಠ ಪ್ರಶ್ನಿಸಿದೆ.

'ಮರುಪರೀಕ್ಷೆ: ಲೋಪವಾಗದಂತೆ ಎಚ್ಚರ ವಹಿಸಿ'

'ನೀಟ್–ಯುಜಿ ಮರುಪರೀಕ್ಷೆಯನ್ನು ಮುಕ್ತ, ನ್ಯಾಯಸಮ್ಮತ ಹಾಗೂ ಪಾರದರ್ಶಕತೆಯಿಂದ ನಡೆಸಬೇಕು. ಯಾವುದೇ ಲೋಪಗಳು ಆಗದಂತೆ ಅಧಿಕಾರಿಗಳು ಎಚ್ಚರಿಕೆ ವಹಿಸಬೇಕು' ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಸೂಚಿಸಿದ್ದಾರೆ. ನೀಟ್–ಯುಜಿ ಮರು ಪರೀಕ್ಷೆಗೆ ಕೈಗೊಂಡಿರುವ ಸಿದ್ಧತಾ ಕ್ರಮಗಳ ಕುರಿತು ಗುರುವಾರ ನಡೆದ ಉನ್ನತ ಮಟ್ಟದ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, 'ಸಚಿವಾಲಯವು ನೇಮಿಸಿರುವ ಅಧಿಕಾರಿಗಳು ಮರುಪರೀಕ್ಷಾ ಪ್ರಕ್ರಿಯೆಗೆ ಸಂಬಂಧಿಸಿದ ಚಟುವಟಿಕೆಗಳ ಮೇಲ್ವಿಚಾರಣೆ ನಡೆಸಲು ಎಲ್ಲ ರಾಜ್ಯಗಳಿಗೆ ಭೇಟಿ ನೀಡಲಿದ್ದಾರೆ. ಎನ್‌ಟಿಎ ಮಹಾನಿರ್ದೇಶಕರ ನೇತೃತ್ವದ ಕಮಾಂಡ್ ಸೆಂಟರ್‌ಗೆ ವರದಿ ಮಾಡಲಿದ್ದಾರೆ' ಎಂದು ತಿಳಿಸಿದ್ದಾರೆ.

'ವದಂತಿಗೆ ಕಿವಿಗೊಡಬೇಡಿ'

ನೀಟ್–ಯುಜಿ ಅಭ್ಯರ್ಥಿಗಳು ಆತಂಕಗೊಳ್ಳದೆ ಶಾಂತ ಮನಸ್ಥಿತಿಯಿಂದ ಪರೀಕ್ಷೆಯ ಸಿದ್ಧತೆಗೆ ಗಮನಹರಿಸಬೇಕು. ಪರೀಕ್ಷೆಗಳನ್ನು ಸುಗಮವಾಗಿ ನಡೆಸಲು ಅಗತ್ಯವಿರುವ ಎಲ್ಲ ವ್ಯವಸ್ಥೆಗಳನ್ನು ಮಾಡಲಾಗಿದೆ ಎಂದು ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ಗುರುವಾರ ಹೇಳಿದೆ.

'ಪರೀಕ್ಷೆ ಮುಂದೂಡಿಕೆಯ ವದಂತಿಗಳು ಹಾಗೂ ಸಾಮಾಜಿಕ ಮಾಧ್ಯಮಗಳಲ್ಲಿ ಬರುವ ಸುಳ್ಳು ಸುದ್ದಿಗಳಿಂದ ಪ್ರಭಾವಿತರಾಗಬಾರದು. ಅವುಗಳನ್ನು ಸಾಮಾಜಿಕ ಮಾಧ್ಯಮಗಳಲ್ಲಿ ಹಂಚಿಕೊಳ್ಳಬಾರದು. ಸಂಸ್ಥೆಯ ಅಧಿಕೃತ ವೆಬ್‌ಸೈಟ್‌ನಲ್ಲಿ ಬರುವ ಸೂಚನೆಗಳನ್ನು ಮಾತ್ರ ಪರಿಗಣಿಸಬೇಕು' ಎಂದು ಎನ್‌ಟಿಎ 'ಎಕ್ಸ್' ಖಾತೆಯಲ್ಲಿ ಸಲಹೆ ನೀಡಿದೆ.

ನೀಟ್ ಅಭ್ಯರ್ಥಿ ಆತ್ಮಹತ್ಯೆ

ಅಹಮದಾಬಾದ್ (ಪಿಟಿಐ): ನೀಟ್–ಯುಜಿ ಮರುಪರೀಕ್ಷೆ ಬರೆಯಬೇಕಿದ್ದ 17 ವರ್ಷದ ಅಭ್ಯರ್ಥಿಯೊಬ್ಬ ಆರನೇ ಮಹಡಿಯ ಫ್ಲಾಟ್‌ನಿಂದ ಜಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದಾನೆ.

'ಗುರುವಾರ ಮುಂಜಾನೆ 2.55ರ ಸುಮಾರಿಗೆ ಈ ಘಟನೆ ನಡೆದಿದೆ. ಅಹಮದಾಬಾದ್‌ನ ಟ್ರಾಗಡ್ ಪ್ರದೇಶದ ಅರಿಸ್ಟೊ ಆನಂದಮ್ ಅಪಾರ್ಟ್‌ಮೆಂಟ್‌ನ 'ಬಿ' ಬ್ಲಾಕ್‌ನಲ್ಲಿ ತನ್ನ ಫ್ಲಾಟ್ ಇರುವ ಆರನೇ ಮಹಡಿಯ ಬಾಲ್ಕನಿಯಿಂದ ಹಾರಿದ್ದಾನೆ. ಕೂಡಲೇ, ಅಭ್ಯರ್ಥಿಯನ್ನು ಆಸ್ಪತ್ರೆಗೆ ಕರೆದೊಯ್ಯಲಾಗಿದೆ. ಆದರೆ, ಆ ವೇಳೆಗಾಗಲೇ ಮೃತಪಟ್ಟಿರುವುದಾಗಿ ವೈದ್ಯರು ಘೋಷಿಸಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ತಾಯಿ ಮತ್ತು ತಮ್ಮನೊಂದಿಗೆ ಅಭ್ಯರ್ಥಿ ವಾಸಿಸುತ್ತಿದ್ದ. ಆತನ ತಂದೆಯು ತಾಯಿಯಿಂದ ಬೇರ್ಪಟ್ಟಿದ್ದು, ಸೂರತ್‌ನಲ್ಲಿ ವಾಸಿಸುತ್ತಿದ್ದಾರೆ. ಅಭ್ಯರ್ಥಿಯು ಮಾನಸಿಕ ಒತ್ತಡದಿಂದ ಬಳಲುತ್ತಿರಲಿಲ್ಲ ಎಂದು ಕುಟುಂಬದವರು ತಿಳಿಸಿದ್ದಾರೆ. ಘಟನಾ ಸ್ಥಳದಲ್ಲಿ ಯಾವುದೇ ಮರಣ ಪತ್ರ ಪತ್ತೆಯಾಗಿಲ್ಲ' ಎಂದು ಮಾಹಿತಿ ನೀಡಿದ್ದಾರೆ.

ಆರ್‌ಎಸ್‌ಎಸ್ ಕಚೇರಿ ಮೇಲೆ ದಾಳಿ; ಮೂವರ ಬಂಧನ

ರಾಂಚಿ/ಜೆಮ್‌ಶೆಡ್‌ಪುರ (ಪಿಟಿಐ): ರಾಂಚಿಯಲ್ಲಿರುವ ಆರ್‌ಎಸ್‌ಎಸ್ ಕಚೇರಿಯ ಮೇಲೆ ಪೆಟ್ರೋಲ್ ಬಾಂಬ್ ದಾಳಿ ನಡೆಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ, ಪಾಕಿಸ್ತಾನದ ಭಯೋತ್ಪಾದಕರ ಜೊತೆ ಸಂಪರ್ಕ ಹೊಂದಿರುವ ಮೂವರು ಆರೋಪಿಗಳನ್ನು ಬಂಧಿಸಲಾಗಿದೆ.

ಪೊಲೀಸರ ವಶದಲ್ಲಿದ್ದ ಮತ್ತೊಬ್ಬ ಆರೋಪಿಯು ತಪ್ಪಿಸಿಕೊಳ್ಳಲು ಯತ್ನಿಸಿದ ವೇಳೆ ಗುಂಡಿನ ಚಕಮಕಿ ನಡೆದಿದೆ. ಈ ವೇಳೆ ಮತ್ತೊಬ್ಬ ಆರೋಪಿಯು ಗಾಯಗೊಂಡಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ. ಬುಧವಾರ ತಡರಾತ್ರಿ ಲೋಹರ್ದಾಗ ಜಿಲ್ಲೆಯಲ್ಲಿ ಆರೋಪಿಗಳು ತಪ್ಪಿಸಿಕೊಳ್ಳಲು ಯತ್ನಿಸುತ್ತಿದ್ದ ವೇಳೆ ಇಬ್ಬರು ಆರೋಪಿಗಳನ್ನು ಕಾರು ಸಮೇತ ಬಂಧಿಸಲಾಗಿದೆ. ಮತ್ತೊಬ್ಬ ಆರೋಪಿಯನ್ನು ಜೂನ್ 18ರಂದೇ ಬಂಧಿಸಲಾಗಿದೆ. ಗಾಯಗೊಳಗಾದ ಆರೋಪಿಯನ್ನು ಸೈಫ್ ಅನ್ಸಾರಿ ಅಲಿಯಾಸ್ ರೋಹಿತ್ ಎಂದು ಗುರುತಿಸಲಾಗಿದೆ.

ಹೊಸ 19 ಶಿಗೆಲ್ಲಾ ಪ್ರಕರಣಗಳು ದೃಢ

ತಿರುವನಂತಪುರ (ಪಿಟಿಐ): ಕೇರಳಂನಲ್ಲಿ ಶಿಗೆಲ್ಲಾ ಪ್ರಕರಣಗಳು ನಿರಂತರ ಹೆಚ್ಚಾಗುತ್ತಿದ್ದು, ಗುರುವಾರ 19 ಹೊಸ ಪ್ರಕರಣಗಳು ಪತ್ತೆಯಾಗಿವೆ. ಆ ಮೂಲಕ ರಾಜ್ಯದಲ್ಲಿ ಜೂನ್ ತಿಂಗಳಿನಲ್ಲೇ ಒಟ್ಟು 110 ಪ್ರಕರಣಗಳು ದಾಖಲಾಗಿವೆ ಎಂದು ಆರೋಗ್ಯ ಸಚಿವಾಲಯ ತಿಳಿಸಿದೆ.

ಕೋಯಿಕ್ಕೋಡ್‌ನಲ್ಲಿ ಒಂಬತ್ತು, ತ್ರಿಶ್ಶೂರ್‌ನಲ್ಲಿ ಮೂರು, ತಿರುವನಂತಪುರ ಮತ್ತು ಕಣ್ಣೂರಿನಲ್ಲಿ ತಲಾ ಎರಡು, ಎರ್ನಾಕುಲಂ, ಕೊಲ್ಲಂ ಮತ್ತು ಮಲಪ್ಪುರದಲ್ಲಿ ತಲಾ ಒಬ್ಬರಲ್ಲಿ ಶಿಗೆಲ್ಲಾ ಸೋಂಕು ಪತ್ತೆಯಾಗಿದೆ.

ಐಎಂಡಿ ಮುನ್ನೋಟ; ಬೆಳೆಗಳಿಗೆ ತೊಂದರೆಯಾಗದಂತೆ ಪರ್ಯಾಯ ಕಾರ್ಯತಂತ್ರ

ಮುಂಗಾರು: ಶೇ 41ರಷ್ಟು ಮಳೆ ಕೊರತೆ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಈ ಬಾರಿ ನೈರುತ್ಯ ಮುಂಗಾರು ದಕ್ಷಿಣ ಮಹಾರಾಷ್ಟ್ರದಲ್ಲಿ ಸ್ಥಗಿತಗೊಂಡ ಪರಿಣಾಮ ಮತ್ತು ಎಲ್ ನಿನೊ ಪ್ರಭಾವದಿಂದ ಜೂನ್ 4ರಿಂದ ಜೂನ್ 18ರವರೆಗೆ ದೇಶದಾದ್ಯಂತ ವಾಡಿಕೆಗಿಂತಲೂ ಶೇ 41ರಷ್ಟು ಕಡಿಮೆ ಮಳೆ ಆಗಿದೆ ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಹೇಳಿದೆ.

ಈ ಅವಧಿಯಲ್ಲಿ 72.2 ಮಿ.ಮೀಯಷ್ಟು ಮಳೆ ಸುರಿಯಬೇಕಿತ್ತು. ಆದರೆ, ಕೇವಲ 42.6 ಮಿ.ಮೀಯಷ್ಟು ಮಾತ್ರ ಮಳೆ ಲಭಿಸಿದೆ. ದೇಶದ ಪೂರ್ವ, ಮಧ್ಯ ಮತ್ತು ವಾಯವ್ಯ ಭಾಗಗಳಲ್ಲಿ ಮಳೆ ಕೊರತೆ ಎದುರಾಗಿದ್ದು, ಮುಂಗಾರು ಹಂಗಾಮಿನ ಬೆಳೆಗಳ ಮೇಲೂ ಪರಿಣಾಮ ಬೀರುವ ಸಾಧ್ಯತೆಗಳಿವೆ.

> ಮಳೆ ಕೊರತೆ ಸಾಧ್ಯತೆ ಇರುವ ಜಿಲ್ಲೆಗಳನ್ನು ಗುರುತಿಸಿ ಪರ್ಯಾಯ ಬೆಳೆ ಮಾದರಿ, ಜಲಸಂರಕ್ಷಣೆ, ತೇವಾಂಶ ನಿರ್ವಹಣೆ, ಅಂತರ್‌ಬೆಳೆಗಳಿಗೆ ವಿಶೇಷ ಗಮನ ಹರಿಸಬೇಕು
> **ಶಿವರಾಜ್ ಸಿಂಗ್ ಚೌಹಾಣ್,** ಕೇಂದ್ರ ಕೃಷಿ ಸಚಿವ

ಪ್ರಸ್ತುತ ನೈರುತ್ಯ ಮುಂಗಾರು ಮಾರುತ ಅರೇಬಿಯನ್ ಸಮುದ್ರದಲ್ಲಿ ದುರ್ಬಲಗೊಂಡಿದೆ. ಇದರಿಂದಾಗಿ ಗಾಳಿಯಲ್ಲಿ ತೇವಾಂಶ ಕಡಿಮೆಯಾಗಿದ್ದು, ಭಾರತದ ಹಲವು ಭಾಗಗಳಲ್ಲಿ ಮುಂಗಾರಿನ ಮುನ್ನಡೆ ಸಂಪೂರ್ಣವಾಗಿ ಸ್ಥಗಿತಗೊಂಡಿದೆ. 'ಅನುಕೂಲಕರವಲ್ಲದ ಹವಾಮಾನ ಪರಿಸ್ಥಿತಿ'ಯಿಂದಾಗಿ ನೈರುತ್ಯ ಮಾರುತಗಳು ನಿರೀಕ್ಷಿತ ಪ್ರಮಾಣದಲ್ಲಿ ಮಳೆಯನ್ನು ಸುರಿಸಿಲ್ಲ' ಎಂದಿದೆ.

ಅರೇಬಿಯನ್ ಸಮುದ್ರದ ಮೇಲ್ಮೈಯಲ್ಲಿ ಬೀಸಬೇಕಾದ ನೈರುತ್ಯ ದಿಕ್ಕಿನ ಗಾಳಿ ಮತ್ತು ನೈರುತ್ಯ ಮುಂಗಾರಿಗೆ ತೇವಾಂಶದ ಮೂಲವಾಗಿ ಕಾರ್ಯನಿರ್ವಹಿಸುವ ಮಾರುತ ದುರ್ಬಲಗೊಂಡಿರುವುದು, ಗಾಳಿ, ಮೋಡ, ಮಳೆ ಮೇಲೆ ಪ್ರಭಾವ ಬೀರುವ ಮ್ಯಾಡೆನ್-ಜೂಲಿಯನ್ ಅನಿಶ್ಚಿತತೆ (ಎಂಜೆಒ), ಎಲ್ ನಿನೊ ಪ್ರಭಾವ ಸೇರಿ ಪ್ರಮುಖವಾಗಿ ಐದು ಅಂಶಗಳು ನೈರುತ್ಯ ಮುಂಗಾರಿಗೆ ಅಡ್ಡಿಯಾಗಿದೆ ಎಂದು ವಿಶ್ಲೇಷಿಸಿದೆ.

ಜೂನ್ 24ರಿಂದ ಜುಲೈ 1ರ ಅವಧಿಯಲ್ಲಿ ಮುಂಗಾರು ಸುಧಾರಿಸಬಹುದು ಎಂದು ಹವಾಮಾನ ಇಲಾಖೆ ಅಂದಾಜು ಮಾಡಿದೆ. ಆದರೆ, ತಜ್ಞರು ಈ ಬಗ್ಗೆ ಹೆಚ್ಚಿನ ಭರವಸೆ ವ್ಯಕ್ತಪಡಿಸಿಲ್ಲ. ಮುಂದಿನ ಎರಡು–ಮೂರು ವಾರಗಳವರೆಗೆ ಒಣ ಹವೆ ಮುಂದುವರಿಯಬಹುದು, ಉತ್ತರ ರಾಜ್ಯಗಳಲ್ಲಿ ಬಿತ್ತನೆಯ ಮೇಲೂ ಇದು ಪರಿಣಾಮ ಬೀರಬಹುದು ಎಂದು ಹವಾಮಾನ ಮುನ್ಸೂಚಕ ರಾಜೀವನ್ ಹೇಳಿದ್ದಾರೆ.

ರಾಜ್ಯಸಭೆ: ಜಾರ್ಖಂಡ್‌ನಲ್ಲಿ 'ಕೈ' ಸೋಲು

ಪ್ರಜಾವಾಣಿ ವಾರ್ತೆ

ನವದೆಹಲಿ: ಜಾರ್ಖಂಡ್‌ನಲ್ಲಿ ಗುರುವಾರ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಅಡ್ಡ ಮತದಾನದಿಂದಾಗಿ ಕಾಂಗ್ರೆಸ್ ಒಂದು ಸ್ಥಾನ ಕಳೆದುಕೊಂಡಿತು. ಎನ್‌ಡಿಎ ಬೆಂಬಲಿತ ಸ್ವತಂತ್ರ ಅಭ್ಯರ್ಥಿ ಪರಿಮಳ್ ನಾಥ್ವಾನಿ ಅವರ ಗೆಲುವು ಸಾಧಿಸಿದರು. ಇದರಿಂದಾಗಿ, ಮೈತ್ರಿಕೂಟವು ಮೇಲ್ಮನೆಯಲ್ಲಿ ತನ್ನ ಸಂಖ್ಯಾಬಲವನ್ನು 149 ರಿಂದ 152ಕ್ಕೆ ಹೆಚ್ಚಿಸಿಕೊಂಡಿತು.

ಕಾಂಗ್ರೆಸ್ ಅಭ್ಯರ್ಥಿ ಪ್ರಣವ್ ಝಾ ಅವರಿಗೆ ಮತ ಹಾಕದೆ ಮಿತ್ರ ಪಕ್ಷಗಳಾದ ಆರ್‌ಜೆಡಿ ಹಾಗೂ ಸಿಪಿಎಂ ದ್ರೋಹ ಎಸಗಿವೆ ಎಂದು ಕಾಂಗ್ರೆಸ್ ಆರೋಪ ಹೊರಿಸಿತು. ಈ ಆರೋಪವನ್ನು ಸಿಪಿಎಂ ತಳ್ಳಿ ಹಾಕಿದೆ.

ಮಿಜೋರಾಂನಲ್ಲಿ ಏಕೈಕ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಆಡಳಿತಾರೂಢ ಜೋರಮ್ ಪೀಪಲ್ಸ್ ಮೂವ್‌ಮೆಂಟ್ (ಝಡ್‌ಪಿಎಂ) ಗೆಲುವು ಸಾಧಿಸಿತು. ಪಕ್ಷದ ಅಭ್ಯರ್ಥಿ ಕೆ. ಲಾಲ್ಲುಲ್ಲವಾಂಗ್ಕಿಮಾ 26-10 ಅಂತರದಲ್ಲಿ ಗೆದ್ದರು.

ಇದರೊಂದಿಗೆ, ಬಿಜೆಪಿ ನೇತೃತ್ವದ ಎನ್‌ಡಿಎ 243 ಸ್ಥಾನಗಳ ಸದನದಲ್ಲಿ ಮೂರನೇ ಎರಡರಷ್ಟು ಬಹುಮತದತ್ತ (163ರತ್ತ) ಸಾಗುತ್ತಿದೆ. ಪಶ್ಚಿಮ ಬಂಗಾಳದಲ್ಲಿ 3 ಸ್ಥಾನಗಳಿಗೆ ಉಪಚುನಾವಣೆ ನಡೆದಾಗ ಮೈತ್ರಿಕೂಟದ ಸಂಖ್ಯೆ 155ಕ್ಕೆ ಹೆಚ್ಚಾಗಬಹುದು. ಆದರೆ, ವಿರೋಧ ಪಕ್ಷಗಳ ಒಕ್ಕೂಟದಿಂದ ಡಿಎಂಕೆ ಹೊರಬಂದ ಕಾರಣ 'ಇಂಡಿಯಾ' ಬಣದ ಸಂಖ್ಯೆ 64 ಕ್ಕೆ ಇಳಿದಿದೆ. ಇತರ ಪಕ್ಷಗಳು 26 ಸಂಸದರನ್ನು ಹೊಂದಿವೆ.

ಇದಕ್ಕೂ ಮೊದಲು, ಬಿಜೆಪಿ ಮತ್ತು ಮಿತ್ರಪಕ್ಷಗಳು 19 ಸ್ಥಾನಗಳನ್ನು ಅವಿರೋಧವಾಗಿ ಗೆದ್ದವು. 'ಇಂಡಿಯಾ' ಬಣದ 5 ಅಭ್ಯರ್ಥಿಗಳು ಅವಿರೋಧವಾಗಿ ಆಯ್ಕೆಯಾಗಿದ್ದರು. ಕಾಂಗ್ರೆಸ್‌ನ ಮೀನಾಕ್ಷಿ ನಟರಾಜನ್ ಅವರ ನಾಮಪತ್ರ ತಿರಸ್ಕೃತಗೊಂಡಿದ್ದರಿಂದಾಗಿ ಬಿಜೆಪಿಯು ಮಧ್ಯಪ್ರದೇಶದಿಂದ ಹೆಚ್ಚುವರಿ ಸ್ಥಾನವನ್ನು ಗೆಲ್ಲುವಲ್ಲಿ ಯಶಸ್ವಿಯಾಗಿತ್ತು.

ಜಾರ್ಖಂಡ್‌ನಲ್ಲಿ 'ಇಂಡಿಯಾ' ಬಣವು ತನ್ನ ಇಬ್ಬರು ಅಭ್ಯರ್ಥಿಗಳ ಗೆಲುವನ್ನು ಖಚಿತಪಡಿಸಿಕೊಳ್ಳಲು ಅಗತ್ಯವಿರುವ 56 ಮತಗಳನ್ನು ಹೊಂದಿತ್ತು. ಆದರೆ, ಕನಿಷ್ಠ ಐದು ಇಂಡಿಯಾ ಬಣದ ಶಾಸಕರು ಅಡ್ಡ ಮತದಾನ ಮಾಡಿದರು.

ಇಂಗ್ಲೆಂಡ್ ಗೆಲುವಿನಲ್ಲಿ ಮಿಂಚಿದ ಕೇನ್

ವಿರಾಮದ ನಂತರ ಪಾರಮ್ಯ ಮೆರೆದ ಆಂಗ್ಲರ ಪಡೆ • ಅವಳಿ ಗೋಲು ಹೊಡೆದ ಹ್ಯಾರಿ • ಎಲ್ ಗುಂಪಿನಲ್ಲಿ ಕ್ರೊವೇಷ್ಯಾ ವಿರುದ್ಧ ಜಯ

ಅರ್ಲಿಂಗ್ಟನ್ (ಎಎಫ್‌ಪಿ/ ಎಪಿ): ಖ್ಯಾತ ಆಟಗಾರ ಹ್ಯಾರಿ ಕೇನ್ ಅವರು ವಿರಾಮಕ್ಕೆ ಮೊದಲೇ ಎರಡು ಗೋಲು ಗಳಿಸಿ ಮಿಂಚಿದರು. ಅವರ ನೇತೃತ್ವದ ಇಂಗ್ಲೆಂಡ್ ತಂಡ ಟೆಕ್ಸಾಸ್‌ನಲ್ಲಿ ಬುಧವಾರ ನಡೆದ ವಿಶ್ವಕಪ್ ಎಲ್ ಗುಂಪಿನ ಪಂದ್ಯದಲ್ಲಿ ಕ್ರೊವೇಷ್ಯಾ ತಂಡವನ್ನು 4–2 ಗೋಲುಗಳಿಂದ ಸೋಲಿಸಿ ತನ್ನ ಅಭಿಯಾನವನ್ನು ಅಮೋಘವಾಗಿ ಆರಂಭಿಸಿತು.

ಸುಮಾರು 70,000 ಪ್ರೇಕ್ಷಕರೆದುರು ನಡೆದ ಪಂದ್ಯದಲ್ಲಿ 2018ರ ರನ್ನರ್ ಅಪ್ ಕ್ರೊವೇಷ್ಯಾ ಒಂದು ಹಂತದಲ್ಲಿ ಹಿನ್ನಡೆಯಿಂದ ಚೇತರಿಸಿಕೊಂಡು ವಿರಾಮದ ವೇಳೆಗೆ 2–2 ಸಮಮಾಡಿಕೊಂಡಿತ್ತು. ಹೀಗಾಗಿ ಉತ್ತರಾರ್ಧದ ಆಟದಲ್ಲಿ ಹೆಚ್ಚು ಗೋಲುಗಳು ದಾಖಲಾಗಬಹುದೆಂಬ ನಿರೀಕ್ಷೆ ಮೂಡಿತ್ತು. ಜೂಡ್ ಬೆಲಿಂಗಮ್ ಎರಡನೇ ನಿಮಿಷವೇ ಇಂಗ್ಲೆಂಡ್‌ಗೆ ಮುನ್ನಡೆ ಒದಗಿಸಿದರು. ಇಂಗ್ಲೆಂಡ್ ತಂಡಕ್ಕೇ ಹೆಚ್ಚಿನ ಗೋಲು ಗಳಿಸುವ ಅವಕಾಶಗಳು ಒದಗಿದವು. ಆದರೆ ಪಂದ್ಯ ಮುಗಿಯಲು ಐದು ನಿಮಿಷಗಳಿರುವಾಗ ಬದಲಿ ಆಟಗಾರ ಮಾರ್ಕಸ್ ರಶ್‌ಫೋರ್ಡ್ ಮೂಲಕ ಇಂಗ್ಲೆಂಡ್ ತನ್ನ ಮುನ್ನಡೆಯನ್ನು ಇನ್ನಷ್ಟು ಹಿಗ್ಗಿಸಿತು.

‘ಮೊದಲಾರ್ಧದಲ್ಲಿ ನಮ್ಮ ಆಟ ಕಳಪೆಯಾಗಿರಲಿಲ್ಲ. ಆದರೆ ಎರಡು ಗೋಲು ಬಿಟ್ಟುಕೊಟ್ಟ ರೀತಿ ನಿರಾಶೆ ಮೂಡಿಸಿತು. ಆದರೆ ಗೆಲುವಿನ ಶ್ರೇಯ ಕೋಚ್‌ಗೆ ಸಲ್ಲಬೇಕು. ಅವರು ವಿರಾಮದ ವೇಳೆ ಕಿವಿಮಾತು ಹೇಳಿದರು. ಸೋತರೆ ನಮ್ಮ ನಿರ್ಗಮನದ ಹಾದಿಯೂ ತೆರೆದುಕೊಳ್ಳಲಿದೆ ಎಂದು ಎಚ್ಚರಿಸಿದರು. ಇದರ ಫಲ ಉತ್ತರಾರ್ಧದ ಆಟದಲ್ಲಿ ಕಂಡಿತು. ಅವರು (ಎದುರಾಳಿ ತಂಡ) ನಮ್ಮ ಆಟಕ್ಕೆ ಸಿದ್ಧರಾದಂತಿರಲಿಲ್ಲ’ ಎಂದು ಕೇನ್ ಹೇಳಿದರು. ಜರ್ಮನಿಯ ಥಾಮಸ್ ತುಚೆಲ್ ಅವರು ಕೇನ್ ಅವರ ‘ತ್ರೀ ಲಯನ್ಸ್’ಗೆ ಕೋಚ್ ಆಗಿದ್ದಾರೆ.

ಈ ಪಂದ್ಯ 2018ರ ವಿಶ್ವಕಪ್ ಸೆಮಿಫೈನಲ್ ನೆನಪಿಸಿತು. ಆ ಸಲ ಕ್ರೊವೇಷ್ಯಾ ಹೆಚ್ಚುವರಿ ಅವಧಿಯ ಗೋಲಿನಿಂದ ಇಂಗ್ಲೆಂಡ್ ತಂಡಕ್ಕೆ ಆಘಾತ ನೀಡಿತ್ತು. ಇಂಗ್ಲೆಂಡ್ ಒಮ್ಮೆ ಮಾತ್ರ (1966ರಲ್ಲಿ) ವಿಶ್ವ ಚಾಂಪಿಯನ್ ಆಗಿದೆ.

ಪಂದ್ಯದಲ್ಲಿ ಇತ್ತಂಡಗಳು ಹೊಂದಿಕೊಳ್ಳಲು ಸಮಯ ತೆಗೆದುಕೊಂಡವು. ಕೇನ್ (12ನೇ ನಿಮಿಷ) ಎರಡನೇ ಯತ್ನದಲ್ಲಿ ‘ಪೆನಾಲ್ಟಿ’ ಮೂಲಕ ಮುನ್ನಡೆ ಒದಗಿಸಿದರು. ಮೊದಲ ಯತ್ನ ತೆಗೆದುಕೊಂಡಾಗ ಕ್ರೊವೇಷ್ಯಾ ಕೀಪರ್ ಡೊಮಿನಿಕ್ ಲಿವಕೋವಿಚ್ ಗೋಲುಗೆರೆಯಿಂದ ಮುಂದೆಬಂದಿದ್ದು ಖಚಿತವಾಗಿದ್ದು, ರೆಫರಿ ಎರಡನೇ ಯತ್ನ ನೀಡಿದಾಗ ಕೇನ್ ಎಡವಲಿಲ್ಲ.

ಕ್ರೊವೇಷ್ಯಾ ತಂಡವು 36ನೆ ನಿಮಿಷ ಮಾರ್ಟಿನ್ ಬಟುರಿನ ಮೂಲಕ ಸ್ಕೋರ್ ಸಮ ಮಾಡಿಕೊಂಡಿತು. ಆದರೆ 36ನೇ ನಿಮಿಷದಲ್ಲಿ ಮಿಂಚಿನ ಹೆಡರ್ ಮೂಲಕ ಕೇನ್ ಎದುರಾಳಿ ಗೋಲ್‌ಕೀಪರ್ ಲಿವಕೋವಿಚ್ ಅವರನ್ನು ವಂಚಿಸಿ ಎರಡನೇ ಗೋಲು ದಾಖಲಿಸಿದರು.

ಇಂಗ್ಲೆಂಡ್ ತಂಡದ ರಕ್ಷಣಾ ವೈಫಲ್ಯ ಕ್ರೊವೇಷ್ಯಾ ಸಮಮಾಡಿಕೊಳ್ಳಲು ಕಾರಣವಾಯಿತು. ಪೂರ್ವಾರ್ಧ ಮುಗಿಯಲು ಕೆಲವೇ ಕ್ಷಣಗಳಿರುವಂತೆ (45 + 5ನೇ) ಪೀಟರ್ ಮೂಸಾ ಗೋಲು ಗಳಿಸಿದರು. ಆದರೆ ವಿರಾಮದ ನಂತರ ಇಂಗ್ಲೆಂಡ್ ಮೇಲುಗೈ ಎದ್ದುಕಂಡಿತು. ಇಬ್ಬರು ರಕ್ಷಣೆ ಆಟಗಾರರನ್ನು ತಪ್ಪಿಸಿ ಬೆಲಿಂಗಮ್ ಗಳಿಸಿದ ಗೋಲು ಆಕರ್ಷಕವಾಗಿತ್ತು.

ದಾಖಲೆ ಸರಿಗಟ್ಟಿದ ಕೇನ್

ನಾಯಕ ಹ್ಯಾರಿ ಕೇನ್ ಅವರು ಬುಧವಾರ ಗಳಿಸಿದ ಎರಡು ಗೋಲುಗಳ ಮೂಲಕ ಇಂಗ್ಲೆಂಡ್ ಪರ ಅತಿ ಹೆಚ್ಚು ಗೋಲು ಗಳಿಸಿದ ಗ್ಯಾರಿ ಲಿನೇಕರ್ ಅವರ ದಾಖಲೆ ಸರಿಗಟ್ಟಿದರು. ಲಿನೇಕರ್ 1986ರ ಮೆಕ್ಸಿಕೊ ಮತ್ತು 1990ರ ಇಟಲಿ ವಿಶ್ವಕಪ್‌ನಲ್ಲಿ ಆಡಿ 10 ಗೋಲು ಗಳಿಸಿದ್ದರು.

ಇಂಗ್ಲೆಂಡ್	ಕ್ರೊವೇಷ್ಯಾ
4	2

ಪಂದ್ಯಗಳು

ಅಮೆರಿಕ	V/s	ಆಸ್ಟ್ರೇಲಿಯಾ
ಶುಕ್ರವಾರ ರಾತ್ರಿ 12 .30		
ಸ್ಕಾಟ್ಲೆಂಡ್	V/s	ಮೊರಾಕ್ಕೊ
ಶನಿವಾರ ನಸುಕಿನ ಜಾವ 3.30		
ಬ್ರೆಜಿಲ್	V/s	ಅಮೆರಿಕ
ಶನಿವಾರ ಬೆಳಿಗ್ಗೆ 6		

ಲೈವ್: ಯುನೈಟ್‌8 ಸ್ಪೋರ್ಟ್ಸ್, ಜೀ5 ಆ್ಯಪ್

ಗೋಲು ದಾಖಲಿಸುವ ಯತ್ನದಲ್ಲಿ ಇಂಗ್ಲೆಂಡ್ ತಂಡದ ಆಟಗಾರ ಹ್ಯಾರಿ ಕೇನ್ ಎಎಫ್‌ಪಿ ಚಿತ್ರ

ಪನಾಮಾ ವಿರುದ್ಧ ಘಾನಾ ತಂಡಕ್ಕೆ ರೋಚಕ ಜಯ

ಟೊರಾಂಟೊ (ಎಪಿ): ಇನ್ನೇನು ಪಂದ್ಯ ಮುಗಿಯಿತು ಎನ್ನುವಷ್ಟರಲ್ಲಿ ಕೆಲೆಬ್ ಇರೆಂಕಿ ಗಳಿಸಿದ ಗೋಲಿನಿಂದ ಘಾನಾ ತಂಡವು ಬುಧವಾರ ನಡೆದ ಎಲ್ ಗುಂಪಿನ ಎರಡನೇ ಪಂದ್ಯದಲ್ಲಿ ಪನಾಮಾ ತಂಡವನ್ನು 1–0 ಗೋಲಿನಿಂದ ಸೋಲಿಸಿತು.

ಎರಡೂ ತಂಡಗಳು ಅವಕಾಶಗಳನ್ನು ವ್ಯರ್ಥಪಡಿಸಿದ್ದು, ಪಂದ್ಯ ಡ್ರಾ ಹಾದಿಯಲ್ಲಿ ಸಾಗಿತ್ತು. ಇಂಜುರಿ ಅವಧಿಯಲ್ಲಿ (90 + 5) ಪನಾಮಾ ಗೋಲ್‌ನ ಎಡಗಡೆಯಿಂದ ಥಾಮಸ್ ಅಸಾಂಟೆ ಅವರ ಅತ್ಯುತ್ತಮ ಕ್ರಾಸ್‌ನಲ್ಲಿ ಗೋಲಿನೆದುರು ಹೊಂಚುಹಾಕುತ್ತಿದ್ದ ಇರೆಂಕಿ ಚೆಂಡನ್ನು ಗೋಲಿನೊಳಕ್ಕೆ ನಿರ್ದೇಶಿಸಿದಾಗ ಘಾನಾದ ಆಟಗಾರರ ಸಂಭ್ರಮಕ್ಕೆ ಪಾರವಿರಲಿಲ್ಲ.

ಘಾನಾ	ಪನಾಮಾ
1	0

ವಿಶ್ವಕಪ್‌ನಲ್ಲಿ ಮೊದಲ ಪಾಯಿಂಟ್ ಪಡೆಯುವ ಪನಾಮಾ ಆಸೆ ಸ್ವಲ್ಪದರಲ್ಲೇ ತಪ್ಪಿತು. ನಿರ್ಣಾಯಕ ಗೋಲಿನ ಎರಡು ನಿಮಿಷ ಮೊದಲು ಪನಾಮಾ ಫಾರ್ವರ್ಡ್ ಸೆಸಿಲಿಯೊ ವಾಟರ್‌ಮನ್ ಅವರು ಅಮಿರ್ ಮುರಿಲ್ಲೊ ಕ್ರಾಸ್‌ನಲ್ಲಿ ಒದ್ದ ಚೆಂಡು ಚೆಂಡು ಗೋಲಿನೊಳಕ್ಕೆ ಹೋಗುವ ಹಂತದಲ್ಲೇ ಬಲಗಡೆಗೆ ಡೈವ್ ಮಾಡಿದ ಘಾನಾ ಗೋಲ್‌ಕೀಪರ್ ಲಾರೆನ್ಸ್ ಅಟಿ ಝಿಗಿ ಚೆಂಡನ್ನು ಆಚೆಗೆ ಸಾಗಹಾಕಿದರು.

ಘಾನಾ ತಂಡವು ಮಿಡ್‌ಫೀಲ್ಡರ್ ಥಾಮಸ್ ಪಾರ್ಟೆವ್ ಅವರಿಲ್ಲದೇ ಆಡಬೇಕಾಯಿತು. ಇಂಗ್ಲೆಂಡ್‌ನಲ್ಲಿ ಪಾರ್ಟೆವ್ ವಿರುದ್ಧ ಅತ್ಯಾಚಾರ ಆರೋಪದ ವಿಚಾರಣೆ ಬಾಕಿಯಿರುವ ಕಾರಣ ಕೆನಡಾ ಅವರಿಗೆ ವೀಸಾ ನಿರಾಕರಿಸಿದೆ.

ಅಲ್ಜೀರಿಯಾ ವಿರುದ್ಧ ಮೆಸ್ಸಿ ಹ್ಯಾಟ್ರಿಕ್ ಗೋಲು ಸಾಧಿಸುವ ಮೂಲಕ, ವಿಶ್ವ ಕಪ್‌ಗಳಲ್ಲಿ ಜಂಟಿಯಾಗಿ ಅತ್ಯಧಿಕ ಗೋಲ್ ಗಳಿಸಿದ ಆಟಗಾರ ಎನಿಸಿದರು!

ಕೊಲಂಬಿಯಾಕ್ಕೆ ಸುಲಭ ಗೆಲುವು

ಕೊಲಂಬಿಯಾ	ಉಜ್ಬೇಕಿಸ್ತಾನ
3	1

ಮೆಕ್ಸಿಕೊ ಸಿಟಿ (ಎಪಿ): ಕೊಲಂಬಿಯಾ ತಂಡ ಅಜ್ಟೆಕಾ ಕ್ರೀಡಾಂಗಣದಲ್ಲಿ ನಡೆದ ‘ಕೆ’ ಗುಂಪಿನ ಪಂದ್ಯದಲ್ಲಿ ಬುಧವಾರ ರಾತ್ರಿ ಉಜ್ಬೇಕಿಸ್ತಾನ ತಂಡವನ್ನು 3–1 ಗೋಲುಗಳಿಂದ ಸೋಲಿಸಿತು. ವಿಶ್ವಕಪ್‌ಗೆ ಪದಾರ್ಪಣೆ ಮಾಡಿರುವ ಲೂಯಿಸ್ ದಿಯಾಝ್ ಸುಮಾರು 81,000 ಪ್ರೇಕ್ಷಕರು ಸೇರಿದ್ದ ಈ ಪಂದ್ಯದಲ್ಲಿ ಮಿಂಚಿದರು.

ಅವರು ಒಂದು ಗೋಲು ಗಳಿಸಿದರಲ್ಲದೇ, ಮತ್ತೊಂದು ಗೋಲಿಗೆ ನೆರವಾಗಿ ಗಮನ ಸೆಳೆದರು. ಲೂಯಿಸ್ ಅವರಂತೆ ಮೊದಲ ವಿಶ್ವಕಪ್ ಆಡುತ್ತಿರುವ ಡೇನಿಯಲ್ ಮುನೋಝ್, ದಿಯಾಝ್ ನೀಡಿದ ಪಾಸ್‌ನಲ್ಲಿ ಕೊಲಂಬಿಯಾಕ್ಕೆ 40ನೇ ನಿಮಿಷ ಮುನ್ನಡೆ ಒದಗಿಸಿದರು. ದಿಯಾಝ್ 65ನೇ ನಿಮಿಷ ಮುನ್ನಡೆ ಹೆಚ್ಚಿಸಿದರು.

ಫಯಾಜುಲ್ಲೇವ್ ಅಬ್ಬಾಸ್‌ಬೆಕ್ ಅವರು 60ನೇ ನಿಮಿಷ ಉಜ್ಬೇಕಿಸ್ತಾನದ ಏಕೈಕ ಗೋಲು ಗಳಿಸಿದರು.

ಜೆಮಿನ್ಸನ್ ಕ್ಯಾಂಪಾಝ್ ಇಂಜುರಿ ಅವಧಿಯಲ್ಲಿ (90 + 9) ಕೊಲಂಬಿಯಾದ ಮುನ್ನಡೆಯನ್ನು ಮತ್ತಷ್ಟು ಹೆಚ್ಚಿಸಿದರು.

ಡ್ರಾ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ–ಜೆಕ್

ದಕ್ಷಿಣ ಆಫ್ರಿಕಾ	ಜೆಕ್ ರಿಪಬ್ಲಿಕ್
1	1

ಅಟ್ಲಾಂಟಾ (ಎಪಿ): ಟೆಬೊಹೊ ಮೊಕೊಯೆನಾ ಅವರು ಅಂತಿಮ ಹಂತದಲ್ಲಿ ಗಳಿಸಿದ ಗೋಲಿನ ನೆರವಿನಿಂದ ದಕ್ಷಿಣ ಆಫ್ರಿಕಾ ತಂಡವು ಗುರುವಾರ ಫಿಫಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ 1–1ರಿಂದ ಜೆಕ್ ರಿಪಬ್ಲಿಕ್ ವಿರುದ್ಧ ಡ್ರಾ ಸಾಧಿಸಿತು.

ಎ ಗುಂಪಿನಲ್ಲಿರುವ ಉಭಯ ತಂಡಗಳು ತಮ್ಮ ಮೊದಲ ಪಂದ್ಯವನ್ನು ಸೋತಿದ್ದವು. ಗೆಲುವಿನ ಖಾತೆ ತೆರೆಯುವ ಉತ್ಸಾಹದಲ್ಲಿ ಕಣಕ್ಕೆ ಇಳಿದಿದ್ದವು. ಪಂದ್ಯದ ಆರನೇ ನಿಮಿಷದಲ್ಲಿ ಮಿಚಲ್ ಸ್ಯಾಡಿಲೆಕ್ ಕಾಲ್ಚಳಕ ಮೆರೆದು ಜೆಕ್ ತಂಡಕ್ಕೆ ಮುನ್ನಡೆ ಒದಗಿಸಿದ್ದರು. ಇದರಿಂದ ದಕ್ಷಿಣ ಆಫ್ರಿಕಾ ಆರಂಭದಲ್ಲೇ ಒತ್ತಡಕ್ಕೆ ಒಳಗಾಯಿತು. 83ನೇ ನಿಮಿಷದಲ್ಲಿ ಮೊಕೊಯೆನಾ, ಪೆನಾಲ್ಟಿ ಅವಕಾಶವನ್ನು ಗೋಲಾಗಿ ಪರಿವರ್ತಿಸಿದ್ದರಿಂದ ತಂಡಗಳ ಸ್ಕೋರ್ ಸಮನಾಯಿತು.

ಯುವ ಆಟಗಾರನಿಗೆ ಮಣೆ ಹಾಕಿದ ಫ್ರ್ಯಾಂಚೈಸಿ; ಮನ್ವಂತ್ ಉಪನಾಯಕ

ಹುಬ್ಬಳ್ಳಿ ಟೈಗರ್ಸ್‌ಗೆ ಅನೀಶ್ವರ್ ನಾಯಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಾರಾಜ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಆಡುವ ಬಹುತೇಕ ತಂಡಗಳು ಅನುಭವಿ ಆಟಗಾರರಿಗೆ ನಾಯಕತ್ವ ನೀಡಿದೆ. ಆದರೆ ಹುಬ್ಬಳ್ಳಿ ಟೈಗರ್ಸ್ ತಂಡವು ಅಚ್ಚರಿಯ ನಿರ್ಧಾರ ಪ್ರಕಟಿಸಿದೆ. 23 ವರ್ಷದ ಅನೀಶ್ವರ್ ಗೌತಮ್ ಅವರಿಗೆ ನಾಯಕನನ್ನಾಗಿ ನೇಮಕ ಮಾಡಿದೆ. ಎಲ್.ಎ. ಮನ್ವಂತ್ ಕುಮಾರ್ ಉಪನಾಯಕರಾಗಿದ್ದಾರೆ.

ಭಾರತ ತಂಡದಲ್ಲಿ ಆಡಿರುವ ಅನುಭವಿ ಮಯಂಕ್ ಅಗರವಾಲ್, ಸ್ಫೋಟಕ ಶೈಲಿಯ ಬ್ಯಾಟರ್ ಅಭಿನವ್ ಮನೋಹರ್, ಮೊಹಮ್ಮದ್ ತಾಹ ಅವರು ಇರುವ ತಂಡವನ್ನು ಅನೀಶ್ವರ್ ಮುನ್ನಡೆಸಲಿದ್ದಾರೆ. ಇದೇ 20ರಿಂದ ಟೂರ್ನಿಯು ಆರಂಭವಾಗಲಿದೆ. ಒಟ್ಟು ಆರು ತಂಡಗಳು ಕಣಕ್ಕಿಳಿಯಲಿವೆ.

ಉಳಿದ ಐದು ತಂಡಗಳೂ ಉನ್ನತ ಹಂತದ ಟೂರ್ನಿಗಳಲ್ಲಿ ಆಡಿರುವ ಅನುಭವಿ ಆಟಗಾರರಿಗೆ ನಾಯಕತ್ವ ನೀಡಿವೆ. ಕರುಣ್ ನಾಯರ್ (ಕೋಸ್ಟಲ್ ಕಿಂಗ್ಸ್ ಮಂಗಳೂರು), ವೈಶಾಖ ವಿಜಯ ಕುಮಾರ್ (ಮೈಸೂರು ವಾರಿಯರ್ಸ್), ಮನೀಷ್ ಪಾಂಡೆ (ಗುಲ್ಬರ್ಗ ಮಿಸ್ಟಿಕ್ಸ್), ಶುಭಾಂಗ್ ಹೆಗ್ಡೆ (ಬೆಂಗಳೂರು ಬ್ಲಾಸ್ಟರ್ಸ್) ಹಾಗೂ ಆರ್.ಸ್ಮರಣ್ (ಶಿವಮೊಗ್ಗ ಯೋಧಾಸ್) ಅವರೆಲ್ಲರೂ ರಣಜಿ ಟ್ರೋಫಿ ಸೇರಿದಂತೆ ಪ್ರಮುಖ ಟೂರ್ನಿಗಳಲ್ಲಿ ಆಡಿರುವ ಅನುಭವಿಗಳಾಗಿದ್ದಾರೆ. ಅವರೆಲ್ಲರ ಸವಾಲನ್ನು ಅನೀಶ್ವರ್ ಎದುರಿಸಿ ನಿಲ್ಲಬೇಕಿದೆ.

ಅನೀಶ್ವರ್ ಗೌತಮ್

‘ತಂಡದಲ್ಲಿ ಅನುಭವಿಗಳಾದ ಮಯಂಕ್, ಮೊಹಮ್ಮದ್ ಹಾಗೂ ಅಭಿನವ್ ಅವರಿದ್ದಾರೆ. ಆದರೆ ಯುವ ಆಟಗಾರರನ್ನು ನಾಯಕತ್ವದಲ್ಲಿ ತೊಡಗಿಸುವ ಉದ್ದೇಶದಿಂದ ತಂಡದ ಮಾಲೀಕರು ಮತ್ತು ಎಲ್ಲರೂ ಈ ನಿರ್ಧಾರ ಮಾಡಿದ್ದೇವೆ. ಇದಕ್ಕೆ ತಂಡದ ಸೀನಿಯರ್ ಆಟಗಾರರ ಬೆಂಬಲವೂ ಇದೆ. ಮಯಂಕ್ ಅವರು ಕರ್ನಾಟಕ ತಂಡದ ನಾಯಕರಾಗಿದ್ದವರು. ಅವರು ಕೂಡ ಅನೀಶ್ವರ್ ಅವರಂತಹ ಯುವ ಆಟಗಾರರನ್ನು ಮುಂಚೂಣಿಗೆ ತರಬೇಕೆಂದು ಹೇಳಿದ್ದಾರೆ. ನಾನು ಐಪಿಎಲ್ ಟೂರ್ನಿಗಾಗಿ ಪ್ರತಿಭಾಶೋಧ ಮಾಡುವಾಗಲೂ ಅನೀಶ್ವರ್ ಅವರನ್ನು ಗಮನಿಸಿದ್ದೆ. ಆಟದ ಜೊತೆಗೆ ನಾಯಕತ್ವದ ಗುಣಗಳು ಅವರಲ್ಲಿವೆ. ಹುಬ್ಬಳ್ಳಿ ತಂಡವನ್ನು ಸಮರ್ಥವಾಗಿ ಮುನ್ನಡೆಸಬಲ್ಲರು’ ಎಂದು ಮುಖ್ಯ ಕೋಚ್ ಆರ್. ವಿನಯಕುಮಾರ್ ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

ಗುರುವಾರ ಸಂಜೆ ನಡೆದ ಫ್ರ್ಯಾಂಚೈಸಿಯ ಕಾರ್ಯಕ್ರಮದಲ್ಲಿ ನಾಯಕ ಮತ್ತು ಉಪನಾಯಕರ ಹೆಸರು ಪ್ರಕಟಿಸಲಾಯಿತು. ಇದೇ ಸಂದರ್ಭದಲ್ಲಿ ಆಟಗಾರರ ಪೋಷಾಕು ಮತ್ತು ಧ್ಯೇಯ ಗೀತೆಯನ್ನು ಬಿಡುಗಡೆ ಮಾಡಲಾಯಿತು.

ಎಡಗೈ ಆಲ್‌ರೌಂಡರ್ ಅನೀಶ್ವರ್ ಅವರು 2022ರಲ್ಲಿ 19 ವರ್ಷದೊಳಗಿನವರ ವಿಶ್ವಕಪ್ ಟೂರ್ನಿಯಲ್ಲಿ ಆಡಿದ್ದ ಭಾರತ ತಂಡದಲ್ಲಿದ್ದರು. ಐಪಿಎಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದಲ್ಲಿಯೂ ಅವರಿದ್ದರು.

ಕಾರ್ಯಕ್ರಮದಲ್ಲಿ ಕೆಎಸ್‌ಸಿಎ ಉಪಾಧ್ಯಕ್ಷ ಸುಜೀತ್ ಸೋಮಸುಂದರ್, ಖಜಾಂಚಿ ಬಿ.ಎನ್. ಮಧುಕರ್, ಮಹಾರಾಜ ಟ್ರೋಫಿ ಸಂಘಟನಾ ಸಮಿತಿ ಮುಖ್ಯಸ್ಥ ಎಂ.ಎಸ್. ಕೇಶವ್, ಫ್ರ್ಯಾಂಚೈಸಿ ಮಾಲೀಕರಾದ ಸುಶೀಲಕುಮಾರ್ ಜಿಂದಾಲ್, ಅಭಿಷೇಕ್ ಜಿಂದಾಲ್ ಮತ್ತು ಶಿವಿಕ್ ಜಿಂದಾಲ್ ಹಾಜರಿದ್ದರು.

ವಾರಿಯರ್ಸ್ ತಂಡಕ್ಕೆ ವೈಶಾಖ ಸಾರಥ್ಯ

ವೈಶಾಖ

ಮೈಸೂರು: ಇಲ್ಲಿನ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಶನಿವಾರ ಆರಂಭವಾಗಲಿರುವ ‘ಮಹಾರಾಜ ಟ್ರೋಫಿ’ ಟಿ-20 ಕ್ರಿಕೆಟ್ ಟೂರ್ನಿಯಲ್ಲಿ ‘ಮೈಸೂರು ವಾರಿಯರ್ಸ್’ ತಂಡವನ್ನು ಅನುಭವಿ ವೇಗಿ ವೈಶಾಖ ವಿಜಯ್‌ಕುಮಾರ್ ಮುನ್ನಡೆಸಲಿದ್ದಾರೆ.

ದೇವದತ್ತ ಪಡಿಕ್ಕಲ್, ಮನೋಜ್ ಭಾಂಡಗೆ, ಎಸ್.ಯು. ಕಾರ್ತಿಕ್, ಮೋನಿಷ್ ರೆಡ್ಡಿ, ಎಲ್.ಆರ್. ಚೇತನ್, ರಿತೀಶ್ ಭಟ್ಕಳ ಸೇರಿದಂತೆ 20 ಅನುಭವಿ ಹಾಗೂ ಯುವ ಪ್ರತಿಭಾನ್ವಿತ ಆಟಗಾರರು ಈ ತಂಡದಲ್ಲಿದ್ದಾರೆ. ಎನ್.ಆರ್ ಗ್ರೂಪ್ ಒಡೆತನದ ಮೈಸೂರು ವಾರಿಯರ್ಸ್ ತಂಡವನ್ನು ಗುರುವಾರ ಸುದ್ದಿಗೋಷ್ಠಿಯಲ್ಲಿ ಪರಿಚಯಿಸಲಾಯಿತು. ಇದೇ ವೇಳೆ ಮಾಜಿ ಕ್ರಿಕೆಟಿಗ ಜಾವಗಲ್ ಶ್ರೀನಾಥ್ ತಂಡದ ಗೀತೆ ಬಿಡುಗಡೆ ಮಾಡಿದರು.

‘ಈ ಬಾರಿಯ ಮಹಾರಾಜ ಟ್ರೋಫಿಯಲ್ಲಿ ಐಪಿಎಲ್ ಮಾದರಿ ಯಲ್ಲಿ ತಂತ್ರಜ್ಞಾನ ಪರಿಚಯಿಸಲಾಗುತ್ತಿದೆ. ಇದರಿಂದ ನಿಖರ ತೀರ್ಪು ಹಾಗೂ ಫಲಿತಾಂಶ ಸಾಧ್ಯವಾಗಲಿದೆ’ ಎಂದು ಶ್ರೀನಾಥ್ ತಿಳಿಸಿದರು.

ಆರ್‌ಎಕ್ಸ್ ಮುರಳೀಧರ್ ಕೋಚ್ ಆಗಿದ್ದಾರೆ. ಕೆಎಸ್‌ಸಿಎ ಗೌರವ ಕಾರ್ಯದರ್ಶಿ ಸಂತೋಷ್ ಮೆನನ್, ಮೈಸೂರು ವಲಯ ಸಂಚಾಲಕ ಶ್ರೀನಿವಾಸ ಪ್ರಸಾದ್, ತಂಡದ ಮಾಲೀಕ ಅರ್ಜುನ್ ರಂಗ ಇದ್ದರು.

ಮೊದಲ ಲೆಗ್‌ನ ಪಂದ್ಯಗಳು ಜೂನ್ 20ರಿಂದ 25ರವರೆಗೆ ಇಲ್ಲಿನ ಎಸ್‌ಡಿ-ಎನ್‌ಆರ್‌ಡಬ್ಲ್ಯು ಕ್ರೀಡಾಂಗಣದಲ್ಲಿ ನಡೆಯಲಿವೆ. ಗುರುವಾರ ಸಂಜೆ ಮೈಸೂರು ಹಾಗೂ ಶಿವಮೊಗ್ಗ ಯೋಧಾಸ್ ತಂಡಗಳು ಅಭ್ಯಾಸ ನಡೆಸಿದವು.

ನೇಷನ್ಸ್ ಕಪ್ ಭಾರತ ತಂಡಕ್ಕೆ ಸತತ 3ನೇ ಜಯ

ಆಕ್ಲೆಂಡ್ (ಪಿಟಿಐ): ಗೋಲು ಹಿನ್ನಡೆಯಿಂದ ಚೇತರಿಸಿಕೊಂಡ ಭಾರತ ತಂಡವು, ಎಫ್‌ಐಎಚ್ ನೇಷನ್ಸ್ ಕಪ್ ಮಹಿಳಾ ಹಾಕಿ ಟೂರ್ನಿಯ ಲೀಗ್ ಪಂದ್ಯದಲ್ಲಿ ಗುರುವಾರ 3–2 ರಿಂದ ಉರುಗ್ವೆ ತಂಡವನ್ನು ಸೋಲಿಸಿತು. ಸತತ ಮೂರನೇ ಗೆಲುವಿನಿಂದ ಎ ಗುಂಪಿನಲ್ಲಿ ಅಗ್ರಸ್ಥಾನ ಗಳಿಸಿತು.

ದೀಪಿಕಾ ಎರಡು ಗೋಲುಗಳನ್ನು ಗಳಿಸಿದರೆ, ದೀಪಿಕಾ ಸೊರೆಂಗ್ ಅವರು ಅವರು ಮತ್ತೊಂದು ಗೋಲನ್ನು ಗಳಿಸಿದರು. ಭಾರತವು ಇದಕ್ಕೆ ಮೊದಲು ತನ್ನ ಗುಂಪಿನಲ್ಲಿ ಅಮೆರಿಕ ಮತ್ತು ಜಪಾನ್ ತಂಡಗಳನ್ನು ಸೋಲಿಸಿತ್ತು.

ಅಮೆರಿಕ ‘ಎ’ ಗುಂಪಿನಿಂದ ಎರಡನೇ ತಂಡವಾಗಿ ಸೆಮಿಫೈನಲ್ ಪ್ರವೇಶಿಸಿತು. ಭಾರತ ಜೂನ್ 20ರಂದು ನಡೆಯಲಿರುವ ಸೆಮಿಫೈನಲ್‌ನಲ್ಲಿ ಚಿಲಿ ತಂಡವನ್ನು ಎದುರಿಸಲಿದೆ. ಅಮೆರಿಕ ಅದೇ ದಿನ ನಡೆಯುವ ಇನ್ನೊಂದು ಸೆಮಿಫೈನಲ್ ಪಂದ್ಯದಲ್ಲಿ ನ್ಯೂಜಿಲೆಂಡ್ ತಂಡವನ್ನು ಎದುರಿಸಲಿದೆ.

13ನೇ ನಿಮಿಷ ಚಿಯಾರಾ ಅಪ್ಪೆನಿನೊ ಅವರು ಪೆನಾಲ್ಟಿ ಕಾರ್ನರ್ ಪರಿವರ್ತಿಸಿ ಉರುಗ್ವೆ ತಂಡಕ್ಕೆ ಮುನ್ನಡೆ ಒದಗಿಸಿದರು. 24ನೇ ನಿಮಿಷ ಡ್ರ್ಯಾಗ್ ಫ್ಲಿಕರ್ ದೀಪಿಕಾ ಅವರೂ ಪೆನಾಲ್ಟಿ ಕಾರ್ನರ್ ಪರಿವರ್ತಿಸಿ ಸ್ಕೋರ್ ಸಮ ಮಾಡಿದರು. ದೀಪಿಕಾ ಸೊರೆಂಗ್ ಅವರು ವಿರಾಮದ ನಂತರ (43ನೇ ನಿಮಿಷ) ಫೀಲ್ಡ್ ಗೋಲಿನ ಮೂಲಕ ಭಾರತಕ್ಕೆ ಮುನ್ನಡೆ ಒದಗಿಸಿದರು.

ಆದರೆ ಮಾನ್ಯುಯೆಲಾ ವಿಲಾರ್ 55ನೇ ನಿಮಿಷ ಗಳಿಸಿದ ಗೋಲಿನಿಂದ ಸ್ಕೋರ್ ಮತ್ತೆ ಸಮನಾಯಿತು. ಮರು ನಿಮಿಷವೇ ದೀಪಿಕಾ ತಮ್ಮ ಎರಡನೇ ಗೋಲು ಗಳಿಸಿ ಭಾರತದ ಗೆಲುವಿನಲ್ಲಿ ನಿರ್ಣಾಯಕ ಪಾತ್ರ ವಹಿಸಿದರು. ಸೋತ ತಂಡದಲ್ಲಿದ್ದರೂ ಉತ್ತಮ ಆಟಕ್ಕಾಗಿ ವಿಲಾರ್ ಪಂದ್ಯದ ಆಟಗಾರ್ತಿ ಎನಿಸಿದರು.

ಭಾರತದ ಅನುಭವಿ ಆಟಗಾರ್ತಿ ನೇಹಾ ಅವರಿಗೆ ಇದು 200ನೇ ಪಂದ್ಯವಾಗಿತ್ತು.

ಪಂದ್ಯಗಳ ಹೆಚ್ಚಳ ಇಲ್ಲ: ಬಿಸಿಸಿಐ ಕಾರ್ಯದರ್ಶಿ ಹೇಳಿಕೆ

ಮಾ.10ರಿಂದ ಐಪಿಎಲ್ ಆಯೋಜನೆ

ದೇವಜೀತ್ ಸೈಕಿಯಾ

ನವದೆಹಲಿ (ಪಿಟಿಐ): ಮುಂದಿನ ವರ್ಷದ ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯನ್ನು ಮಾರ್ಚ್ 10ರಿಂದ ಮೇ 15ರವರೆಗೆ ಆಯೋಜಿಸಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಯೋಜಿಸುತ್ತಿದೆ.

‘ಈ ವರ್ಷ ಮಾರ್ಚ್ 29ರಂದು ಐಪಿಎಲ್ ಶುರುವಾಗಿತ್ತು. ಆದರೆ ಮೇ 15ರ ನಂತರದ ದಿನಗಳಲ್ಲಿ ಮಳೆ ಬರುವ ಸಾಧ್ಯತೆಗಳು ಹೆಚ್ಚು. ಅದರಿಂದಾಗಿ ಪಂದ್ಯಗಳ ಆಯೋಜನೆಗೆ ಅಡಚಣೆಯಾಗುತ್ತದೆ. ಇನ್ನೊಂದೆಡೆ ಕೆಲವು ಪ್ರದೇಶಗಳಲ್ಲಿ ಉಷ್ಣತೆ ಹೆಚ್ಚುತ್ತದೆ. ಆದ್ದರಿಂದ ಪ್ಲೇ ಆಫ್ ಹಂತದ ಪಂದ್ಯಗಳಿಗೆ ತೊಂದರೆಯಾಗುತ್ತದೆ. ಸ್ವಲ್ಪ ಮುಂಚಿತವಾಗಿ ಆರಂಭಿಸುವುದು ನಮ್ಮ ಉದ್ದೇಶ’ ಎಂದು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿ (ಬಿಸಿಸಿಐ) ಕಾರ್ಯದರ್ಶಿ ದೇವಜೀತ್ ಸೈಕಿಯಾ ಅವರು ಪಿಟಿಐ ಸುದ್ದಿಸಂಸ್ಥೆಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

‘ಐಪಿಎಲ್ ಆಡಳಿತ ಸಮಿತಿಯಲ್ಲಿ ಈ ಕುರಿತು ಚರ್ಚೆ ನಡೆಯುತ್ತಿದೆ. ಮಾರ್ಚ್ ಅಂತ್ಯದ ಬದಲು ಇನ್ನೂ ಮುಂಚಿತವಾಗಿ ಟೂರ್ನಿ ಆರಂಭಿಸಲು ಸಾಧ್ಯವೇ ಎಂಬುದನ್ನು ಪರಿಶೀಲಿಸಲಾಗುತ್ತಿದೆ’ ಎಂದರು.

‘ಮುಂದಿನ ವರ್ಷದಿಂದ ಬದಲಾವಣೆಯ ಬಗ್ಗೆ ಯೋಚಿಸುತ್ತಿದ್ದೇವೆ. ನಮ್ಮ ಪ್ರಧಾನ ವ್ಯವಸ್ಥಾಪಕರು (ಗೇಮ್ಸ್ ಅಭಿವೃದ್ಧಿ ವಿಭಾಗ- ಅಬೇ ಕುರುವಿಲ್ಲಾ) ಅವರಿಗೆ ತಿಳಿಸಿರುವೆ. ಮಾರ್ಚ್ 10ರಿಂದ ಮೇ 15ರವರೆಗೆ ಆಯೋಜಿಸುವುದರ ಸಾಧಕ–ಬಾಧಕಗಳನ್ನು ಪರಿಶೀಲಿಸಲೂ ಸೂಚಿಸಲಾಗಿದೆ’ ಎಂದೂ ಹೇಳಿದರು.

‘ಸದ್ಯದ ಪರಿಸ್ಥಿತಿಯಲ್ಲಿ 74ಕ್ಕಿಂತ ಹೆಚ್ಚು ಪಂದ್ಯಗಳನ್ನು ಆಯೋಜಿಸುವುದು ಸಮಂಜಸವಲ್ಲ. ಬೇರೆ ಬೇರೆ ಆಟಗಾರರು ಪ್ರತಿನಿಧಿಸುವ ತಂಡಗಳ ವೇಳಾಪಟ್ಟಿಯನ್ನು ಹೊಂದಿಸುವುದು ಬಹಳ ಕಷ್ಟ. ವರ್ಷದಲ್ಲಿ ಎರಡು ತಿಂಗಳ ಅವಧಿಯನ್ನು ಕಷ್ಟಪಟ್ಟು ವ್ಯವಸ್ಥೆ ಮಾಡುತ್ತಿದ್ದೇವೆ. ಇದಕ್ಕಿಂತ ಹೆಚ್ಚು ಅವಧಿಯ ಟೂರ್ನಿ ನಡೆದರೆ ವಿದೇಶಗಳ ಆಟಗಾರರನ್ನು ಉಳಿಸಿಕೊಳ್ಳುವುದು ಕಷ್ಟವಾಗಲಿದೆ. ಏಕೆಂದರೆ ದ್ವಿಪಕ್ಷೀಯ ಸರಣಿಗಳಲ್ಲಿ ಆಡಲು ಅವರಿಗೆ ಒತ್ತಡ ಇರುತ್ತದೆ. ಅಂತರರಾಷ್ಟ್ರೀಯ ಕ್ರಿಕೆಟ್ ವೇಳಾಪಟ್ಟಿಯನ್ನು ನೋಡಿಕೊಂಡೇ ನಾವು ಐಪಿಎಲ್ ಆಯೋಜನೆ ಮಾಡಬೇಕಿದೆ’ ಎಂದು ಸ್ಪಷ್ಟಪಡಿಸಿದರು.

ಕಿವೀಸ್‌ಗೆ ಇಂದು ನಿರ್ಣಾಯಕ ಪಂದ್ಯ

ಇಂದಿನ ಪಂದ್ಯ

ನ್ಯೂಜಿಲೆಂಡ್	V/s	ಐರ್ಲೆಂಡ್
ತಾಣ: ಸೌತಾಂಪ್ಟನ್, ಪಂದ್ಯ ಆರಂಭ: ರಾತ್ರಿ 11 ರಿಂದ		

ಲೈವ್: ಸ್ಟಾರ್ ಸ್ಪೋರ್ಟ್ಸ್, ಜಿಯೊ ಹಾಟ್‌ಸ್ಟಾರ್ ಆ್ಯಪ್

ಸೌತಾಂಪ್ಟನ್: ಮೊದಲ ಗೆಲುವಿನ ನಿರೀಕ್ಷೆಯಲ್ಲಿರುವ ನ್ಯೂಜಿಲೆಂಡ್ ಮತ್ತು ಐರ್ಲೆಂಡ್ ತಂಡಗಳು ಶುಕ್ರವಾರ ನಡೆಯಲಿರುವ ಮಹಿಳೆಯರ ಟಿ20 ವಿಶ್ವಕಪ್ ಪಂದ್ಯದಲ್ಲಿ ಮುಖಾಮುಖಿಯಾಗಲಿವೆ. ಸೋಲುವ ತಂಡಕ್ಕೆ ಸೆಮಿಫೈನಲ್ ಹಾದಿ ಮುಚ್ಚುವುದು ಖಚಿತ

ಹಾಲಿ ಚಾಂಪಿಯನ್ ನ್ಯೂಜಿಲೆಂಡ್ ಮತ್ತು ಐರ್ಲೆಂಡ್ ಈ ಮಾದರಿಯಲ್ಲಿ ನಾಲ್ಕು ಸಲ ಎದುರಾಗಿವೆ. ನಾಲ್ಕೂ ಬಾರಿ ನ್ಯೂಜಿಲೆಂಡ್ ಜಯಗಳಿಸಿದೆ. ಕೊನೆಯ ಬಾರಿ 2018ರ ಟಿ20 ವಿಶ್ವಕಪ್‌ನಲ್ಲಿ ಮುಖಾಮುಖಿಯಾದಾಗ ಸೋಫಿ ಡಿವೈನ್ 21 ಎಸೆತಗಳಲ್ಲಿ ಅರ್ಧ ಶತಕ ಸಿಡಿಸಿದ್ದರು. ಮೇಲ್ನೋಟಕ್ಕೆ ನ್ಯೂಜಿಲೆಂಡ್ ಪಂದ್ಯ ಗೆಲ್ಲುವ ನೆಚ್ಚಿನ ತಂಡವಾಗಿದೆ.

ಚುಟುಕು ಮಾದರಿ ವಿಶ್ವಕಪ್‌ನಲ್ಲಿ 19 ಪಂದ್ಯಗಳನ್ನು ಆಡಿರುವ ಐರ್ಲೆಂಡ್ ಒಮ್ಮೆಯೂ ಜಯಗಳಿಸಿಲ್ಲ. ಈಗ ಉತ್ತಮ ಹೋರಾಟ ನೀಡುವ ತವಕದಲ್ಲಿದೆ. ಕಿವೀಸ್ ತಂಡದ ಕ್ಷೇತ್ರರಕ್ಷಣೆ ಕಳಪೆಯಾಗಿದ್ದು, ಸೋಲಿಗೆ ಕಾಣಿಕೆ ನೀಡಿದೆ. ವೆಸ್ಟ್ ಇಂಡೀಸ್ ವಿರುದ್ಧ ಏಳು ಕ್ಯಾಚ್‌ಗಳನ್ನು ಬಿಟ್ಟಿತ್ತು. ಲಂಕಾ ವಿರುದ್ಧ ಮೂರು ಕ್ಯಾಚ್‌ಗಳನ್ನು ನೆಲಕ್ಕೆ ಹಾಕಿತ್ತು.

ಅನುಭವಿ ಆಲ್‌ರೌಂಡರ್ ಸೂಝಿ ಬೇಟ್ಸ್ ಅವರಿಗೆ ನ್ಯೂಜಿಲೆಂಡ್ ತಂಡ ಈ ನಿರ್ಣಾಯಕ ಪಂದ್ಯಕ್ಕೆ ಅವಕಾಶ ನೀಡುವ ಸಾಧ್ಯತೆಯಿದೆ. ಐರ್ಲೆಂಡ್ ತಂಡವು, ಪಕ್ಕೆಲುಬಿನ ಮೂಳೆಮುರಿತಕ್ಕೆ ಒಳಗಾಗಿರುವ ಲೂಯಿಸ್ ಲಿಟ್ಲ್ ಬದಲು ಅವಾ ಕ್ಯಾನಿಂಗ್ ಅವರಿಗೆ ಅವಕಾಶ ನೀಡುವುದು ಬಹುತೇಕ ಖಚಿತ.

ನ್ಯೂಜಿಲೆಂಡ್ ತಂಡವು ಸೋಫಿ ಡಿವೈನ್ ಅವರಿಂದ ಉತ್ತಮ ಕೊಡುಗೆ ನಿರೀಕ್ಷಿಸುತ್ತಿದೆ. ಈ ವರ್ಷ ಉತ್ತಮ ಲಯದಲ್ಲಿರುವ ಅವರು 154.34 ಸ್ಟ್ರೈಕ್ ರೇಟ್‌ನಲ್ಲಿ 355 ರನ್ ಕಲೆಹಾಕಿದ್ದು, ಗರಿಷ್ಠ ರನ್ ಗಳಿಸಿದವರ ಪಟ್ಟಿಯಲ್ಲಿ ಎರಡನೇ ಸ್ಥಾನದಲ್ಲಿದ್ದಾರೆ. ಬ್ಯಾಟ್ ಮತ್ತು ಚೆಂಡಿನಿಂದ ಸೋಫಿ ಅವರ ಅನುಭವವನ್ನು ತಂಡ ಎದುರುನೋಡುತ್ತಿದೆ. ನ್ಯೂಜಿಲೆಂಡ್ ತಂಡಕ್ಕೆ ಮೂಗುದಾರ ಹಾಕಲು ಐರ್ಲೆಂಡ್ ತಂಡವು 19 ವರ್ಷದ ಎಡಗೈ ಸ್ಪಿನ್ನರ್ ಐಮೀ ಮಗಿರೆ ಅವರ ಮೇಲೆ ವಿಶ್ವಾಸ ವಿಟ್ಟಿದೆ. 2023ರಲ್ಲಿ ಪದಾರ್ಪಣೆ ಮಾಡಿರುವ ಅವರು ಗಳಿಸಿರುವ 21 ವಿಕೆಟ್‌ಗಳಲ್ಲಿ 9 ಈ ವರ್ಷ ಬಂದಿವೆ.

ಏಷ್ಯನ್ ಕ್ರೀಡಾಕೂಟ: ಮಣಿಕಾಗೆ ಕೊಕ್

ನವದೆಹಲಿ (ಪಿಟಿಐ): ಟೇಬಲ್ ಟೆನಿಸ್ ತಾರೆ ಮಣಿಕಾ ಬಾತ್ರಾ ಅವರನ್ನು ಏಷ್ಯನ್ ಕ್ರೀಡಾಕೂಟದಲ್ಲಿ ಸ್ಪರ್ಧಿಸುವ ಭಾರತ ತಂಡಕ್ಕೆ ಆಯ್ಕೆ ಮಾಡಿಲ್ಲ.

ಭಾರತ ಟೇಬಲ್ ಟೆನಿಸ್ ಫೆಡರೇಷನ್ (ಟಿಟಿಎಫ್‌ಐ) ರೂಪಿಸಿರುವ ನಿಯಮಾವಳಿಯ ಪ್ರಕಾರ ಎಲ್ಲ ಆಟಗಾರರೂ ರ್‍ಯಾಂಕಿಂಗ್ ನೀಡುವ ದೇಶಿ ಟೂರ್ನಿಗಳಲ್ಲಿ ಆಡುವುದು ಕಡ್ಡಾಯ. ಆದರೆ ಅವರು ಈ ಟೂರ್ನಿಗಳಲ್ಲಿ ಗೈರುಹಾಜರಿದ್ದಾರೆ. ಆದ್ದರಿಂದ ಅವರನ್ನು ಆಯ್ಕೆಗೆ ಪರಿಗಣಿಸಿಲ್ಲ.

20ನೇ ಏಷ್ಯನ್ ಕ್ರೀಡಾಕೂಟವು ಸೆಪ್ಟೆಂಬರ್ 10ರಿಂದ ಅಕ್ಟೋಬರ್ 4ರವರೆಗೆ ಜಪಾನ್ ದೇಶದ ಐಚಿ ನಗೊಯಾದಲ್ಲಿ ಆಯೋಜನೆಯಾಗಲಿದೆ.

ಮಣಿಕಾ ಅವರು ಕಾಮನ್‌ವೆಲ್ತ್ ಕ್ರೀಡಾಕೂಟಗಳಲ್ಲಿ ಪದಕ ಜಯಿಸಿದ್ದಾರೆ. 2018ರ ಏಷ್ಯನ್ ಕ್ರೀಡಾಕೂಟದಲ್ಲಿ ಮಿಶ್ರ ಡಬಲ್ಸ್ ಕಂಚು ಗಳಿಸಿದ್ದರು. ಪ್ರಸ್ತುತ ಅವರು ಅಂತರರಾಷ್ಟ್ರೀಯ ಟೇಬಲ್ ಟೆನಿಸ್ ಫೆಡರೇಷನ್ ರ್‍ಯಾಂಕಿಂಗ್‌ನಲ್ಲಿ 51ನೇ ಸ್ಥಾನದಲ್ಲಿದ್ದಾರೆ. ಈ ಪಟ್ಟಿಯಲ್ಲಿರುವ ಭಾರತದ ಎರಡನೇ ಆಟಗಾರ್ತಿ ಅವರಾಗಿದ್ದಾರೆ. 45ನೇ ಸ್ಥಾನದಲ್ಲಿ ಶ್ರೀಜಾ ಅಕುಲಾ ಭಾರತದ ಇನ್ನೊಬ್ಬ ಆಟಗಾರ್ತಿಯಾಗಿದ್ದಾರೆ.

ಮಣಿಕಾ ಬಾತ್ರಾ

‘ಏಷ್ಯಾ ಖಂಡದ ಬಹುಶಿಸ್ತೀಯ ಕ್ರೀಡಾಕೂಟದಲ್ಲಿ ಭಾರತದ ಅತ್ಯಧಿಕ ರ್‍ಯಾಂಕ್ ಹೊಂದಿರುವ ಮತ್ತು ನಿರಂತರವಾಗಿ ಉತ್ತಮವಾಗಿ ಆಡುತ್ತಿರುವ ಆಟಗಾರರು ತಂಡದಲ್ಲಿ ಸ್ಥಾನ ಪಡೆದಿದ್ದಾರೆ’ ಎಂದು ಟಿಟಿಎಫ್‌ಐ ಪ್ರಕಟಣೆಯಲ್ಲಿ ತಿಳಿಸಿದೆ.

2023ರಲ್ಲಿ ರೂಪಿಸಿರುವ ನಿಯಮಾವಳಿಯ ಪ್ರಕಾರ ರಾಷ್ಟ್ರೀಯ ರ್‍ಯಾಂಕಿಂಗ್ ಹೊಂದಿರುವವರಿಗೆ ಶೇ 50ರಷ್ಟು, ವಿಶ್ವ ರ್‍ಯಾಂಕಿಂಗ್ ಪಾಯಿಂಟ್‌ಗಳಿಗೆ ಶೇ 40ರಷ್ಟು ಮತ್ತು ಶೇ 10ರಷ್ಟು ಆಯ್ಕೆ ಸಮಿತಿಯ ವಿವೇಚನಾ ಕೋಟಾದಲ್ಲಿ ಆದ್ಯತೆ ನೀಡಲಾಗುತ್ತದೆ.

ಪ್ರಸ್ತುತ ಮಣಿಕಾ ಅವರ ಗೈರುಹಾಜರಿಯಲ್ಲಿ ತಂಡವನ್ನು ಶ್ರೀಜಾ ಮುನ್ನಡೆಸುವರು. ಕರ್ನಾಟಕದ ಯಶಸ್ವಿನಿ ಘೋರ್ಪಡೆ, ದಿಯಾ ಚಿತಳೆ, ಸುತೀರ್ಥ ಮುಖರ್ಜಿ ಮತ್ತು ಸಿಂಡ್ರೆಲಾ ದಾಸ್ ತಂಡದಲ್ಲಿದ್ದಾರೆ.

ಪುರುಷರ ತಂಡದಲ್ಲಿ ಅನುಭವಿಗಳಾದ ಜಿ. ಸತ್ಯನ್, ಹರ್ಮೀತ್ ದೇಸಾಯಿ, ಮಾನವ್ ವಿಕಾಶ್ ಠಕ್ಕರ್ ಮತ್ತು ಮಾನುಷ್ ಶಾ, ಯುವ ಆಟಗಾರ ಪಯಸ್ ಜೈನ್ ಅವರು ಇದ್ದಾರೆ.

ಮಣಿಕಾ ಆಕ್ಷೇಪ: ತಂಡದ ಆಯ್ಕೆ ಮಾನದಂಡದ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿರುವ ಮಣಿಕಾ, ‘ಏಷ್ಯನ್ ಗೇಮ್ಸ್ ತಂಡದಿಂದ ನನ್ನನ್ನು ಕೈಬಿಟ್ಟಿರುವುದು ತೀವ್ರ ಬೇಸರವಾಗಿದೆ. ಯಾವುದೇ ನಿರ್ದಿಷ್ಟ ಕಾರಣವನ್ನೂ ತಿಳಿಸಿಲ್ಲ’ ಎಂದು ಹೇಳಿದ್ದಾರೆ.

ಬಾಕ್ಸಿಂಗ್ ವಿಶ್ವಕಪ್: ಕ್ವಾರ್ಟರ್‌ಗೆ ಮೀನಾಕ್ಷಿ

ಗಿಯಾಂಗ್ (ಚೀನಾ), (ಪಿಟಿಐ): ಭಾರತದ ಮೀನಾಕ್ಷಿ ಅವರು ಇಲ್ಲಿ ನಡೆಯುತ್ತಿರುವ ವಿಶ್ವ ಕಪ್ (ಸ್ಟೇಜ್ 2) ಬಾಕ್ಸಿಂಗ್ ಟೂರ್ನಿಯಲ್ಲಿ ಮಹಿಳೆಯರ 51 ಕೆ.ಜಿ. ವಿಭಾಗದಲ್ಲಿ ಗುರುವಾರ ಕ್ವಾರ್ಟರ್‌ಫೈನಲ್‌ಗೆ ಮುನ್ನಡೆದರು.

48 ಕೆ.ಜಿ. ವಿಭಾಗದಲ್ಲಿ ಹಾಲಿ ವಿಶ್ವ ಚಾಂಪಿಯನ್ ಹಾಗೂ ಅಗ್ರ ಕ್ರಮಾಂಕ ಪಡೆದಿರುವ ಮೀನಾಕ್ಷಿ, ಒಲಿಂಪಿಕ್ಸ್‌ನಲ್ಲಿ 51 ಕೆ.ಜಿ. ವಿಭಾಗದಲ್ಲಿ ಪಾಲ್ಗೊಳ್ಳಲು ನಿರ್ಧರಿಸಿದ್ದಾರೆ. ಒಲಿಂಪಿಕ್ಸ್‌ನಲ್ಲಿ 51 ಕೆ.ಜಿ.ಯಿದ ತೂಕ ವಿಭಾಗ ಆರಂಭವಾಗುತ್ತದೆ.

ಮೀನಾಕ್ಷಿ ಗುರುವಾರ ನಡೆದ ಸೆಣಸಾಟದಲ್ಲಿ ಪೋಲೆಂಡ್‌ನ ನತಾಲಿಯಾ ಕುಸ್ಜೆವಾಸ್ಕಾ ಅವರನ್ನು 5–0 ಸರ್ವಾನುಮತ ತೀರ್ಪಿನಲ್ಲಿ ಸೋಲಿಸಿದರು. ನಾಲ್ಕನೇ ದಿನ ಸ್ಪರ್ಧೆಯಲ್ಲಿ ಭಾರತದ ಅಭಿನಾಶ್ ಜಮವಾಲ್ ಅವರು 65 ಕೆ.ಜಿ. ವಿಭಾಗದಲ್ಲಿ ಕಿರ್ಗಿಸ್ತಾನದ ಮಿರ್ಜೋಖಿದ್ ಇಮಾಂನಝರೋವ್ ಅವರಿಗೆ 0–5ರಲ್ಲಿ ಸೋತರು.

ಈ ಟೂರ್ನಿಯಲ್ಲಿ ನಿಖಿಲ್ (55 ಕೆ.ಜಿ), ದೀಪಕ್ (70 ಕೆ.ಜಿ), ಮೀನಾಕ್ಷಿ (51 ಕೆ.ಜಿ), ಪ್ರಾಚಿ (57 ಕೆ.ಜಿ) ಮತ್ತು ಸನೇಶ್ (65 ಕೆ.ಜಿ) ಅವರು ವಿವಿಧ ತೂಕ ವಿಭಾಗಗಳಲ್ಲಿ ಸೆಮಿಫೈನಲ್ ತಲುಪಿದ್ದಾರೆ. ಜ್ಯೋತಿ (48 ಕೆ.ಜಿ) ಮತ್ತು ಜುಗ್ನೂ (85 ಕೆ.ಜಿ) ಅವರು ಸೆಮಿಫೈನಲ್ ತಲುಪಿದ್ದಾರೆ.

ಬ್ಯಾಡ್ಮಿಂಟನ್: ಎಂಟರ ಘಟ್ಟಕ್ಕೆ ಅನ್ಮೋಲ್, ಅಸ್ಮಿತಾ

ಮಕಾವು (ಪಿಟಿಐ): ಉದಯೋನ್ಮುಖ ಆಟಗಾರ್ತಿಯರಾದ ಅನ್ಮೋಲ್ ಖರ್ಬ್ ಮತ್ತು ಅಸ್ಮಿತಾ ಚಾಲಿಹಾ ಅವರು ಮಕಾವ್ ಓಪನ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು. ಆದರೆ, ಇತರ ವಿಭಾಗಗಳಲ್ಲಿ ಭಾರತದ ಸವಾಲು ಅಂತ್ಯಗೊಂಡಿತು.

ಅಸ್ಮಿತಾ ಪ್ರಿ ಕ್ವಾರ್ಟರ್ ಫೈನಲ್‌ನಲ್ಲಿ 22-20, 21-15ರಿಂದ ಅಮೆರಿಕದ ಇಶಿಕಾ ಜೈಸ್ವಾಲ್ ಅವರನ್ನು ಕೇವಲ 32 ನಿಮಿಷಗಳಲ್ಲಿ ಹಿಮ್ಮೆಟ್ಟಿಸಿದರು.

ಎಂಟನೇ ಶ್ರೇಯಾಂಕದ ಅನ್ಮೋಲ್ ಹೆಚ್ಚಿನ ಶ್ರಮವಿಲ್ಲದೆ ಮುಂದಿನ ಸುತ್ತು ಪ್ರವೇಶಿಸಿದರು. ಅವರು 12–4 ಮುನ್ನಡೆಯಲ್ಲಿದ್ದಾಗ ಮಲೇಷ್ಯಾದ ಗೋ ಜಿನ್ ವೀ ಸ್ಪರ್ಧೆಯಿಂದ ಹಿಂದೆ ಸರಿದರು. ಮಹಿಳಾ ಸಿಂಗಲ್ಸ್‌ನಲ್ಲಿ ಸ್ಪರ್ಧೆಯಲ್ಲಿದ್ದ ರಕ್ಷಿತಾಶ್ರೀ ಸಂತೋಷ್ ರಾಮರಾಜ್, ಶ್ರೇಯಾಂಶಿ ವಾಲಿಶೆಟ್ಟಿ ಮತ್ತು ಇಶಾರಾನಿ ಬರುವಾ ಅವರು ಎರಡನೇ ಸುತ್ತಿನಲ್ಲೇ ಅಭಿಯಾನ ಮುಗಿಸಿದರು.

ತರುಣ್ ಮನ್ನೆಪಲ್ಲಿ ಮತ್ತು ರೌನಕ್ ಚೌಹಾಣ್ ಅವರ ನಿರ್ಗಮನದೊಂದಿಗೆ ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಅಭಿಯಾನಕ್ಕೆ ತೆರೆಬಿತ್ತು.

ಸೀನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ಗೆ ತೆರೆ: ದಿನಿಧಿ ರಾಷ್ಟ್ರೀಯ ದಾಖಲೆ

ಕರ್ನಾಟಕ ತಂಡಕ್ಕೆ ಸಮಗ್ರ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರ್ನಾಟಕ ತಂಡವು ಅಹಮದಾಬಾದ್‌ನಲ್ಲಿ ಗುರುವಾರ ಮುಕ್ತಾಯಗೊಂಡ 79ನೇ ಸೀನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿತು.

ಈಜಿನಲ್ಲಿ ‘ಶಕ್ತಿ ಕೇಂದ್ರ’ ಆಗಿರುವ ಕರ್ನಾಟಕದ ಬಾಲಕರ ತಂಡವು ನಾಲ್ಕು ಚಿನ್ನ, ಮೂರು ಬೆಳ್ಳಿ ಮತ್ತು ಎರಡು ಕಂಚಿನ ಪದಕ ಗೆದ್ದರೆ, ಬಾಲಕಿಯರ ತಂಡವು ಐದು ಸ್ವರ್ಣ, ಮೂರು ರಜತ ಮತ್ತು ನಾಲ್ಕು ಕಂಚಿನ ಪದಕಗಳನ್ನು ಗೆದ್ದುಕೊಂಡಿತು.

ದಿನಿಧಿ ದಾಖಲೆ: ಒಲಿಂಪಿಯನ್ ಈಜುತಾರೆ ದಿನಿಧಿ ದೇಸಿಂಗು ಅವರು ಮಹಿಳೆಯರ 100 ಮೀಟರ್ ಫ್ರೀಸ್ಟೈಲ್‌ನಲ್ಲಿ ರಾಷ್ಟ್ರೀಯ ದಾಖಲೆಯೊಂದಿಗೆ ಚಿನ್ನದ ಸಾಧನೆ ಮಾಡಿದರು. ಅವರು ಫೈನಲ್ ಸ್ಪರ್ಧೆಯಲ್ಲಿ 56.57 ಸೆಕೆಂಡ್‌ಗಳಲ್ಲಿ ಗುರಿ ತಲುಪಿದರು. ಇದರೊಂದಿಗೆ 2025ರಲ್ಲಿ ತಾವೇ ನಿರ್ಮಿಸಿದ್ದ ದಾಖಲೆಯನ್ನು ಉತ್ತಮಪಡಿಸಿಕೊಂಡರು. ಜಹ್ನಾಬಿ ಕಶ್ಯಪ್ (ಅಸ್ಸಾಂ) ಮತ್ತು ರುಜುಲಾ ಎಸ್. (ಕರ್ನಾಟಕ) ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಗೆದ್ದರು.

ಶೋನ್ ಗಂಗೂಲಿ

ದಿನಿಧಿ ದೇಸಿಂಗು

ಪುರುಷರ 400 ಮೀಟರ್ ಮೆಡ್ಲೆ ಸ್ಪರ್ಧೆಯಲ್ಲಿ ರಾಜ್ಯದ ಶೋನ್ ಗಂಗೂಲಿ (4ನಿ.24.80ಸೆ) ಚಿನ್ನದ ಪದಕ ಗೆದ್ದರು. ಮಧ್ಯಪ್ರದೇಶದ ಅದ್ವೈತ್ ಪಿ. ರಜತ ಗೆದ್ದರೆ, ಕರ್ನಾಟಕದ ಶಿವಾಂಕ್ ವಿಶ್ವನಾಥ್ ಕಂಚಿನ ಪದಕ ಗೆದ್ದರು.

ಪುರುಷರ 1500 ಮೀ. ಫ್ರೀಸ್ಟೈಲ್‌ನಲ್ಲಿ ಗುಜರಾತ್‌ನ ಆರ್ಯನ್ ನೆಹ್ರಾ (15ನಿ.14.88ಸೆ) ಅವರು ತಮ್ಮದೇ ರಾಷ್ಟ್ರೀಯ ದಾಖಲೆಯನ್ನು ಉತ್ತಮಪಡಿಸಿ ಕಾಮನ್‌ವೆಲ್ತ್ ಗೇಮ್ಸ್‌ಗೆ ಅರ್ಹತೆ ಪಡೆದರು. ಕರ್ನಾಟಕದ ದರ್ಶನ್ ಎಸ್. (15:38.00) ಬೆಳ್ಳಿ ಪದಕ ಗೆದ್ದರು.

ಮಹಿಳೆಯರ 400 ಮೀ. ಫ್ರೀಸ್ಟೈಲ್‌ನಲ್ಲಿ ದಿನಿಧಿ (4:25.76) ಬೆಳ್ಳಿ ಪದಕಕ್ಕೆ ಕೊರಳೊಡ್ಡಿದರು. 200 ಮೀ. ಬ್ಯಾಕ್‌ಸ್ಟ್ರೋಕ್‌ನಲ್ಲಿ ನೈಶಾ (2:21.64) ರಜತ ಪದಕ ಗೆದ್ದರು. 4x100 ಮೆಡ್ಲೆ ರಿಲೇ ಸ್ಪರ್ಧೆಯಲ್ಲಿ ಕರ್ನಾಟಕ ತಂಡವು ಕಂಚು ಗೆದ್ದಿತು. ಆ ತಂಡದಲ್ಲಿ ಆಕಾಶ್ ಮಣಿ, ಸೂರ್ಯ ಜೋಯಪ್ಪ, ಚಿಂತನ್ ಎಸ್. ಶೆಟ್ಟಿ ಮತ್ತು ಮನೀಶ್ ಪಿ.ವಿ. ಇದ್ದರು.